ಶನಿವಾರ, ಏಪ್ರಿಲ್ 15, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಹೈದರಾಬಾದ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಚಿತ್ರನಟಿ ನಿತ್ಯಾ ನರೇಶ್ ಪಾಲ್ಗೊಂಡಿದ್ದರು

ಶುದ್ಧವಾದ ನೈಸರ್ಗಿಕವನ್ನು ಅನುಭವಿಸಿ

ORGANIC HARVEST™

ಮೊಟ್ಟ ಮೊದಲ ಬಾರಿಗೆ#

100% ಅಮೆರಿಕನ್ ಸರ್ಟಿಫೈಡ್ ಆರ್ಗ್ಯಾನಿಕ್*

ನಿಮ್ಮ ನೈಸರ್ಗಿಕ ಕ್ರೀಮ್ ಎಷ್ಟು ನೈಸರ್ಗಿಕವಾಗಿದೆ?

ನಿಮಗಿದು ಗೊತ್ತೇ? ನೀವು ಯಾವುದು ನೈಸರ್ಗಿಕವಾಗಿದೆ ಎಂದು ತಿಳಿದಿರುವಿರೋ, ಅದು ವಾಸ್ತವದಲ್ಲಿ ನೈಸರ್ಗಿಕವಾಗಿಲ್ಲದಿರಬಹುದು?

"ನೈಸರ್ಗಿಕ ಉತ್ಪನ್ನಗಳಿಗೆ" ಯಾವುದೇ ಪ್ರಮಾಣಿತ ಮಾರ್ಗಸೂಚಿಗಳು ಅಥವಾ ಆದೇಶಗಳು ಇಲ್ಲದಿದ್ದಾಗ, ಅವುಗಳಲ್ಲಿ ವಾಸ್ತವವಾಗಿ ನೈಸರ್ಗಿಕ ವಸ್ತುಗಳ ಸಣ್ಣ ಪ್ರಮಾಣವಿರಬಹುದು, ಆದರೆ ಉಳಿದ ಫಾರ್ಮುಲಾದಲ್ಲಿ ನೀವು ಚಿಂತಿಸುವ ಕೆಮಿಕಲ್ಸ್ ಇರಬಹುದು.

ಆರ್ಗ್ಯಾನಿಕ್ ಹಾರ್ವೆಸ್ಟ್ ನಲ್ಲಿ, ನಮ್ಮ ಉತ್ಪನ್ನಗಳನ್ನು ನಿಖರತೆಯೊಂದಿಗೆ ಪರಿಪೂರ್ಣವಾಗಿ ವಿನ್ಯಾಸಗೊಳಿಸಲಾಗಿದೆ.

ಎಲ್ಲಾ ಇತರ ಉತ್ಪನ್ನಗಳು ಜಾಗತಿಕವಾಗಿ ವಿಶ್ವಾಸಾರ್ಹವಾಗಿರುವ, ಸ್ವತಂತ್ರ ಮಾನದಂಡವಾಗಿರುವ **USDA** ಯಿಂದ **100%** ಸಾವಯವ ಎಂದು ಪ್ರಮಾಣೀಕೃತವಾಗಿವೆ, ಅಂದರೆ ನಮ್ಮ ಪದಾರ್ಥಗಳು ನೈಸರ್ಗಿಕ ಅಥವಾ ಸಾವಯವ ಮೂಲಗಳಿಂದ ಬಂದಿರುವಂತಹವು ಎಂದರ್ಥ.

*USDA ಯಿಂದ ಪ್ರಮಾಣಿಕೃತಾಗಿದೆ. #ಆರ್ಗ್ಯಾನಿಕ್ ಹಾರ್ವೆಸ್ಟ್ ನಿಂದ ^ನಿಯಮ ಮತ್ತು ಷರತ್ತು ಅನ್ವಯ

ನಿಮ್ಮ ಉಚಿತ ಟ್ರಯಲ್ ಕಿಟ್^ ಅನ್ನು ಕ್ಲೇಮ್ ಮಾಡಲು ನಿಮ್ಮ ಆ್ಯಪ್ ಅಥವಾ ವೆಬ್‌ಸೈಟ್‌ನಲ್ಲಿ OHFCFREE ಕೋಡ್ ಅನ್ನು ಬಳಸಿ

ಡೌನ್‌ಲೋಡ್ ಮಾಡಿ
Organic Harvest App

ಇಲ್ಲಿ ಸಹ ಲಭ್ಯವಿದೆ

amazon | NYKAA.com | Flipkart | Myntra

ನಿಮ್ಮ ಹತ್ತಿರದ ಎಲ್ಲಾ ಪ್ರಮುಖ ಅಂಗಡಿಗಳಲ್ಲಿ ಸಹ ಲಭ್ಯವಿದೆ

ಶನಿವಾರ, ಏಪ್ರಿಲ್ 15, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 104 | ಪುಟ 24

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಶಿಕ್ಷಣ, ಉದ್ಯೋಗವೆಂದು ಮನೆಯಿಂದ ದೂರವಿರುವ ಮಕ್ಕಳು ಹಾಗೂ ಪೋಷಕರ ನಡುವಿನ ತಲ್ಲಣಗಳ ಕಥನ ಇಲ್ಲಿದೆ...

ಆಳ-ಅಗಲ ಉಳಿವಿಗಾಗಿ ಹಿಮನಾಡಿನ ಜನರ ಹೋರಾಟ

ಚಿನ್ನ: 10 ಗ್ರಾಂಗೆ ₹480 ಹೆಚ್ಚಳ 12

'ವಿಳಂಬದ ಅನುಕೂಲವನ್ನು ಅಪರಾಧಿ ಪಡೆಯುವಂತಾಗಬಾರದು'

ಬಿಜೆಪಿ ವಿರುದ್ಧ 'ಲಕ್ಷ್ಮಣ ಬಾಣ' ಪ್ರಯೋಗ 6

ಕ್ಷಮಾ ಅರ್ಜಿ: ತ್ವರಿತ ನಿರ್ಧಾರಕ್ಕೆ 'ಸುಪ್ರೀಂ' ನಿರ್ದೇಶನ 10

1. ಲಕ್ಷ್ಮಣ ಸವದಿ, ಎಂ.ಪಿ. ಕುಮಾರಸ್ವಾಮಿ, ವೈ.ಎಸ್.ವಿ.ದತ್ತ ಪಕ್ಷಾಂತರ ಮಾಡಿದ ಪ್ರಮುಖರು
2. ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ಬೆಳಗಾವಿಯಿಂದ ವಿಶೇಷ ವಿಮಾನದಲ್ಲಿ ಬಂದ ಲಕ್ಷ್ಮಣ ಸವದಿ
3. ಭುಗಿಲೆದ್ದ ಭಿನ್ನಮತ ಶಮನಕ್ಕೆ ಕಮಲ ಪಾಳಯದಲ್ಲಿ ಇಡೀ ದಿನ ಸಂಧಾನ
4. ಬಾಕಿ ಉಳಿದ 12 ಕ್ಷೇತ್ರಗಳಿಗೆ ಟಿಕೆಟ್ ಅಂತಿಮಗೊಳಿಸಲು ಬಿಜೆಪಿ ತಿಣುಕಾಟ
5. ಮತ್ತೆ 50 ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಿದ ಜೆಡಿಎಸ್; ಹಾಸನದಲ್ಲಿ ಭವಾನಿ ಸ್ಪರ್ಧೆ ಇಲ್ಲ
6. 58 ಕ್ಷೇತ್ರಗಳಿಗೆ ಇನ್ನೂ ಅಂತಿಮಗೊಳ್ಳದ ಕಾಂಗ್ರೆಸ್ ಹುರಿಯಾಳುಗಳು
7. ನಾಮಪತ್ರ ಸಲ್ಲಿಕೆಗೆ ಇನ್ನು ಆರು ದಿನಗಳಷ್ಟೇ ಬಾಕಿ

ಅಸ್ತಿತ್ವಕ್ಕೆ ಪಕ್ಷಾಂತರ: ಅಧಿಕಾರಕ್ಕೆ ಚಮತ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ, ಮೀಸಲಾತಿ ಹೆಚ್ಚಳ, ಭ್ರಷ್ಟಾಚಾರ, ಶೇ 40 ಲಂಚ, ರೀಡೂ, ಹಿಂದುತ್ವ, ಹಿಜಾಬ್ ಮುಂತಾದ ವಿಷಯಗಳನ್ನು ಮುಂದಿಟ್ಟುಕೊಂಡು ಮತ ಬುಟ್ಟಿಗೆ ಕೈಹಾಕಲು ಪರಸ್ಪರ ಕೆಸರೆರಚಾಟ ನಡೆಸುತ್ತಿದ್ದ ಮೂರೂ ರಾಜಕೀಯ ಪಕ್ಷಗಳು ಈಗ ಆ ಎಲ್ಲ ಮಹತ್ವದ ವಿಷಯಗಳನ್ನು ಬದಿಗೆ ಸರಿಸಿ, 'ಗೆಲ್ಲುವ ಕುದುರೆ'ಗಳಿಗೆ ಶಾಲು, ಹಾರ ಹಾಕಿ ಸ್ವಾಗತಿಸಲು ತುದಿಗಾಲಿನಲ್ಲಿ ಕಾದು ಕುಳಿತಿವೆ.

ಪರಸ್ಪರ ಟೀಕಿಸಿಕೊಂಡವರೂ ಈಗ ಒಂದಾಗುತ್ತಿದ್ದಾರೆ. ಹಳೆಯದೆಲ್ಲವನ್ನೂ ಮರೆತು ಪಕ್ಷಗಳಿಗೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದಾರೆ.

ಹಿಂದೆ ಬಿಜೆಪಿಯಲ್ಲಿ ಸಚಿವರಾಗಿದ್ದಾಗ ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರ ನೋಡಿದರು ಎಂಬ ಕಾರಣಕ್ಕೆ ಸಚಿವ ಸ್ಥಾನ ಕಳೆದುಕೊಂಡಿದ್ದ ಲಕ್ಷ್ಮಣ ಸವದಿ ಅವರು 'ಬ್ಲೂಬಾಯ್ಸ್' ಎಂದು ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಂದ ಕರೆಸಿಕೊಂಡಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಸವದಿಯವರೂ ಕಾಂಗ್ರೆಸ್ ನಾಯಕರನ್ನು ಹೀನಾಯವಾಗಿ ಟೀಕಿಸಿದ್ದರು. ಇದೀಗ ಕಾಂಗ್ರೆಸ್ ಸೇರಿದ್ದಾರೆ.

ಮತ್ತೊಂದು ಕಡೆ ವೈ.ಎಸ್.ವಿ. ದತ್ತ ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರುವ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ಜೆಡಿಎಸ್ ಹೆಚ್ಚು ತೀವ್ರವಾಗಿ ಹೋರಾಟ ಮಾಡುತ್ತಿಲ್ಲ. ಪಕ್ಷದ ಜಾತ್ಯತೀತ ನಿಲುವು ಶಿಥಿಲವಾಗುತ್ತಿದೆ. ಪಕ್ಷದ ನಿಲುವು ಪದೇ ಪದೇ ಬದಲಾಗಬಾರದು. ನಾನು ಜೆಡಿಎಸ್‌ನಲ್ಲಿ ದೀರ್ಘ ಕಾಲದಿಂದ ಇದ್ದೇನೆ. ಈಗ ನಿಲುವಿನಲ್ಲಿ ರಾಜಿ ಮಾಡಿಕೊಳ್ಳಲಾಗುತ್ತಿದೆ. ಮಾಜಿ ಪ್ರಧಾನಿ ಎಚ್ .ಡಿ.ದೇವೇಗೌಡ ಅವರ ವಿಚಾರ ಇಂದಿಗೂ ಸ್ಪಷ್ಟವಾಗಿಯೇ ಇದೆ. ಅವರ ನಿಲುವುಗಳ ಬಗ್ಗೆ ಯಾವುದೇ ಅನುಮಾನವಿಲ್ಲ ಎಂದು ಹೇಳುವ ಮೂಲಕ ಕುಮಾರಸ್ವಾಮಿ ವಿರುದ್ಧ ಹರಿಹಾಯ್ದಿದ್ದರು. ಅದಕ್ಕೆ ಪ್ರತಿಯಾಗಿ ಎಚ್.ಡಿ.ಕುಮಾರಸ್ವಾಮಿ, 'ನಮ್ಮದು ಸಣ್ಣ ಪಕ್ಷ ಅವರು ಇಂಟರ್‌ನ್ಯಾಷನಲ್ ಪಕ್ಷದ ಜತೆ ಹೋಗಿದ್ದಾರೆ' ಎಂದು ವ್ಯಂಗ್ಯವಾಡಿದ್ದರು. ಆದರೆ, ಕಾಂಗ್ರೆಸ್ ಟಿಕೆಟ್ ನೀಡದ ಕಾರಣ, ಮರಳಿ ಜೆಡಿಎಸ್‌ಗೆ ಬಂದು ಕಡೂರು ಕ್ಷೇತ್ರಕ್ಕೆ ಟಿಕೆಟ್ ಪಡೆದುಕೊಂಡಿದ್ದಾರೆ.

6ನೇ ಪುಟ ನೋಡಿ

ರ‍್ಯಾಂಬೊ ಸರ್ಕಸ್ ಕಲಾವಿದರು ಶುಕ್ರವಾರ ಬೆಂಗಳೂರಿನಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

'ನನ್ನ ಹೆಣವೂ ಬಿಜೆಪಿ ಕಚೇರಿ ಕಡೆ ಹೋಗೋದು ಬೇಡ'

'ನನ್ನ ಹೆಣವೂ ಬಿಜೆಪಿ ಕಚೇರಿ ಕಡೆ ಹೋಗೋದು ಬೇಡ. ನಾನು ಸತ್ತ ಮೇಲೆ ನನ್ನ ಹೆಣವನ್ನೂ ಬಿಜೆಪಿ ಕಚೇರಿ ಮುಂಭಾಗ ತೆಗೆದುಕೊಂಡು ಹೋಗದಂತೆ ಮನೆಯವರಿಗೆ ಹೇಳುತ್ತೇನೆ' ಎಂದು ಲಕ್ಷ್ಮಣ ಸವದಿ ಶಪಥ ಮಾಡಿದರು.

'ನನ್ನ ರಾಜೀನಾಮೆ ಅಂಗೀಕಾರವಾಗಿದೆ. ಇನ್ನು ನನಗೂ ಬಿಜೆಪಿಗೂ ಸಂಬಂಧ ಇಲ್ಲ. ಯಡಿಯೂರಪ್ಪ ನೇತೃತ್ವದಲ್ಲಿ ಸರ್ಕಾರ ರಚನೆಗೆ ಪ್ರಯತ್ನ ಮಾಡಿದೆ. ಒಂದು ಪಕ್ಷದಲ್ಲಿದ್ದಾಗ ಕೆಲಸವನ್ನು ನಿಷ್ಠೆಯಿಂದ ಮಾಡಬೇಕಾಗುತ್ತದೆ. ಅದನ್ನು ಮಾಡಿದ್ದೇನೆ' ಎಂದು ಹೇಳಿದರು.

'ಬಿಜೆಪಿ ಎಲ್ಲ ಮಾನದಂಡಗಳನ್ನೂ ಗಾಳಿಗೆ ತೂರಿ ಈ ಬಾರಿ ಟಿಕೆಟ್ ಹಂಚಿಕೆ ಮಾಡಿದ್ದು ಅಭ್ಯರ್ಥಿ ಆಯ್ಕೆ ಮಾಡುವ ಸಮಿತಿ ಸದಸ್ಯನಾಗಿದ್ದ ನನಗೆ ಅತೀವ ಬೇಸರ ತರಿಸಿತು. ಇತ್ತೀಚೆಗೆ ನಡೆದ ಬೆಳವಣಿಗೆಗಳು ಸಾಕಷ್ಟು ನೋವು ತಂದಿದೆ. ಹಿಂದೆ ಚರ್ಚೆ ಮಾಡಿದಂತೆ ಟಿಕೆಟ್ ನೀಡಲಿಲ್ಲ. ಹಾಗಾಗಿ, ಕ್ಷೇತ್ರದ ಜನರ ಸಲಹೆಯಂತೆ ಕಾಂಗ್ರೆಸ್ ಸೇರುತ್ತಿದ್ದೇನೆ' ಎಂದರು.

ಬಂಡಾಯದ ಸುಳಿವು ಕೊಟ್ಟ ಶೆಟ್ಟರ್

ಹುಬ್ಬಳ್ಳಿ: ಪಕ್ಷದ ವರಿಷ್ಠರು ತಮಗೆ ಟಿಕೆಟ್ ಘೋಷಣೆ ಮಾಡಲು ವಿಳಂಬ ಮಾಡುತ್ತಿರುವುದರಿಂದ ತೀವ್ರ ಅಸಮಾಧಾನ ಗೊಂಡಿರುವ ಶಾಸಕ ಜಗದೀಶ ಶೆಟ್ಟರ್, ತಮ್ಮ ಮುಂದಿನ ನಡೆ ಕುರಿತು ಚರ್ಚಿಸಲು ಶನಿವಾರ ಬೆಂಬಲಿಗರ ಸಭೆ ಕರೆದಿದ್ದಾರೆ.



ಈ ಕುರಿತು ಶುಕ್ರವಾರ ರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿದ ಶೆಟ್ಟರ್, 'ಪಕ್ಷದ ವರಿಷ್ಠರು ಆದಷ್ಟು ಬೇಗ ಟಿಕೆಟ್ ಘೋಷಿಸಬೇಕು. ಟಿಕೆಟ್‌ಗಾಗಿ ನಾನು ಇದುವರೆಗೆ ಯಾರ ಮನೆ ಬಾಗಿಲಿಗೂ ಹೋಗಿ ಕೈಮುಗಿದು ಬೇಡಿದವನಲ್ಲ. ಮೊನ್ನೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಕರೆ ಮಾಡಿದ್ದಕ್ಕೆ ಗೌರವ ಕೊಟ್ಟು, ಅವರನ್ನು ಭೇಟಿ ಮಾಡಿ ಬಂದೆ. ಅವರ ಮಾತಿನಂತೆ ನಾಳೆಯವರೆಗೆ ಕಾಯುವೆ ' ಎಂದು ಹೇಳಿದರು.

ಬಂಡೆದ್ದವರಿಗೆ ಜೆಡಿಎಸ್ ಮಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ತಿಂಗಳ ಹಿಂದೆಯೇ 93 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದ ಜೆಡಿಎಸ್, ಚುನಾವಣೆ ಘೋಷಣೆಯಾದ ಬಳಿಕ ಅಳೆದೂ-ತೂಗಿ 50 ಕ್ಷೇತ್ರಗಳ ಉಮೇದುವಾರರನ್ನು ಶುಕ್ರವಾರ ಪ್ರಕಟಿಸಿದೆ. ಟಿಕೆಟ್ ಕೈತಪ್ಪಿದ ಕಾರಣಕ್ಕೆ ಅನ್ಯ ಪಕ್ಷಗಳಿಂದ ಜಿಗಿದುಬಂದ ಹಲವರಿಗೆ ಮಣೆಹಾಕಲಾಗಿದೆ.

ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳಿಂದ ಬಂದವರನ್ನು ಪಕ್ಷದ ಪ್ರಧಾನ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಬರಮಾಡಿಕೊಂಡರು. ನಂತರ ಕಚೇರಿ ಸೇರಿದ ಅವರು ಕೆಲವು ಗಂಟೆಗಳ ಕಾಲ ಪಕ್ಷದ ಮುಖಂಡರ ಜತೆ ಸಮಾಲೋಚನೆ ನಡೆಸಿದರು. ಕೊನೆಯ ಹಂತದಲ್ಲಿ ಸಹೋದರ ಎಚ್.ಡಿ. ರೇವಣ್ಣ ಕೂಡ ಸಭೆಗೆ ಬಂದರು. ಚರ್ಚೆ ಬಳಿಕ ಅಭ್ಯರ್ಥಿಗಳ ಪಟ್ಟಿ ಅಖೈರುಗೊಳಿಸಿ, ಪ್ರಕಟಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮತ್ತು ರೇವಣ್ಣ ಜತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಕುಮಾರಸ್ವಾಮಿ, ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದರು. 49 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಅವರೇ ಪ್ರಕಟಿಸಿದರು. ಹಾಸನ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಮಾತ್ರ ರೇವಣ್ಣ ಘೋಷಿಸಿದರು. ಜೆಡಿಎಸ್ ಕಚೇರಿಯಲ್ಲೇ ಹಲವು ಅಭ್ಯರ್ಥಿಗಳಿಗೆ ಬಿ– ಫಾರ್ಮ್ ವಿತರಿಸಲಾಯಿತು.

ಕಾಂಗ್ರೆಸ್ ಬಿಟ್ಟು ಬಂದಿದ್ದ ಮಾಜಿ ಸಚಿವ ಮನೋಹರ ತಹಸೀಲ್ದಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀಕಾಂತ್ ಎಲ್. ಘೋಟ್ನೇಕರ್, ಬಿಜೆಪಿ ತೊರೆದಿದ್ದ ಎ. ಮಂಜು, ರಾಜ್ಯ ಸಮಾಜ ಕಲ್ಯಾಣ ಮಂಡಳಿ ಮಾಜಿ ಅಧ್ಯಕ್ಷೆ ಪುತ್ತೂರಿನ ದಿವ್ಯಪ್ರಭಾ, ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚೈತ್ರಾ ಕೊಠಾರ್ಕರ್ ಅವರಿಗೆ ಜೆಡಿಎಸ್ ಟಿಕೆಟ್ ಸಿಕ್ಕಿದೆ. ಸವದತ್ತಿ– ಯಲ್ಲಮ್ಮ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದ ಸೌರಭ್ ಆನಂದ್ ಚೋಪ್ರಾ ಅವರಿಗೆ ಅದೇ ಕ್ಷೇತ್ರದಿಂದ ಕಣಕ್ಕಿಳಿಯಲು ಜೆಡಿಎಸ್ ಅವಕಾಶ ಕಲ್ಪಿಸಿದೆ.

ಹಾಸನದಲ್ಲಿ ಕೊನೆಗೂ ಕಾರ್ಯಕರ್ತನಿಗೆ ಟಿಕೆಟ್

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದಿನ ಘೋಷಣೆಯಂತೆ ಪಕ್ಷದ ಕಾರ್ಯಕರ್ತ, ಮಾಜಿ ಶಾಸಕ ಎಸ್. ಪ್ರಕಾಶ್ ಅವರ ಮಗ ಸ್ವರೂಪ್ ಪ್ರಕಾಶ್ ಅವರಿಗೇ ಜೆಡಿಎಸ್ ಟಿಕೆಟ್ ನೀಡಲಾಗಿದೆ.

ಎಚ್.ಡಿ. ರೇವಣ್ಣ ಅವರ ಪತ್ನಿ ಭವಾನಿ ಅವರು ಹಾಸನ ಕ್ಷೇತ್ರದ ಟಿಕೆಟ್‌ಗೆ ಪಟ್ಟು ಹಿಡಿದಿದ್ದರಿಂದ ಜೆಡಿಎಸ್‌ನಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಟಿಕೆಟ್ ವಿಚಾರದಲ್ಲಿ ಕುಟುಂಬದೊಳಗೇ ಭಿನ್ನಮತ ಸೃಷ್ಟಿಯಾಗಿತ್ತು. ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸ್ವರೂಪ್‌ಗೆ ಟಿಕೆಟ್ ಪ್ರಕಟಿಸಲಾಯಿತು.

ಜೆಡಿಎಸ್‌ನಿಂದ ಟಿಕೆಟ್ ಪಡೆದ ವಲಸಿಗರು	
ಮನೋಹರ ತಹಸೀಲ್ದಾರ್	ಕಾಂಗ್ರೆಸ್
ಎ. ಮಂಜು	ಬಿಜೆಪಿ
ಶ್ರೀಕಾಂತ್ ಎಲ್. ಘೋಟ್ನೇಕರ್	ಕಾಂಗ್ರೆಸ್
ವೈ.ಎಸ್.ವಿ.ದತ್ತ	ಕಾಂಗ್ರೆಸ್
ದೊಡ್ಡಪ್ಪಗೌಡ ನರಿಬೋಳ	ಬಿಜೆಪಿ
ಗುರುಲಿಂಗಪ್ಪಗೌಡ	ಬಿಜೆಪಿ

ಬಿಜೆಪಿ ತೊರೆದು ಜೆಡಿಎಸ್ ಸೇರಿರುವ ಮಾಜಿ ಶಾಸಕರಾದ ದೊಡ್ಡಪ್ಪಗೌಡ ನರಿಬೋಳ (ಜೇವರ್ಗಿ), ಗುರುಲಿಂಗಪ್ಪ ಗೌಡ (ಗುರು ಪಾಟೀಲ ಶಿರವಾಳ– ಶಹಾಪುರ), ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ– ಧಾರವಾಡ ಪೂರ್ವ) ಅವರಿಗೂ ಟಿಕೆಟ್ ಘೋಷಿಸಲಾಗಿದೆ.

ಹಾಸನ ಜಿಲ್ಲೆಯ ನಾಲ್ವರು ಹಾಲಿ ಶಾಸಕರಿಗೆ ಎರಡನೇ ಪಟ್ಟಿಯಲ್ಲಿ ಜೆಡಿಎಸ್ ಟಿಕೆಟ್ ಖಾತರಿಯಾಗಿದೆ.

6ನೇ ಪುಟ ನೋಡಿ

ಅಬಕಾರಿ ನೀತಿ ಹಗರಣ: ಕೇಜ್ರಿವಾಲ್‌ಗೆ ಸಿಬಿಐ ಸಮನ್ಸ್

ನವದೆಹಲಿ: ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಏ.16ರಂದು ಬೆಳಿಗ್ಗೆ 11 ಗಂಟೆಗೆ ಸಿಬಿಐ ಕೇಂದ್ರ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. 11

ಧಾರವಾಡ, ಬೆಳಗಾವಿಯಲ್ಲಿ ಉತ್ತಮ ಮಳೆ

ಧಾರವಾಡ/ಸಾಗರ: ರಾಜ್ಯದಲ್ಲಿ ಶುಕ್ರವಾರ ಧಾರವಾಡ, ಬೆಳಗಾವಿ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ. ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಆಲಿಕಲ್ಲು ಸಹಿತ ಜೋರಾಗಿ ಮಳೆ ಸುರಿಯಿತು. 10

ಪ್ರಜಾ ಮತ
ಜನತಂತ್ರದ ಹಬ್ಬ

ತಂಟೆಗಷ್ಟೇ ನೆಲ -ಜಲ ಇತ್ಯರ್ಥಕ್ಕೆ ಇಲ್ಲ ಛಲ 7

ಬೇಕಿರುವುದು ರಾಮ ಮಂದಿರವಲ್ಲ, 'ರಾಮ ರಾಜ್ಯ' 6

ಚಿನಕುರಳಿ
ಪ್ರಕಾಶ್ ಶೆಟ್ಟಿ

ಪ್ರತ್ಯೇಕ ಅವಘಡ: 15 ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ/ತುಮಕೂರು/ಬೆಳಗಾವಿ: ರಾಜ್ಯದಲ್ಲಿ ಶುಕ್ರವಾರ ಸಂಭವಿಸಿದ ಮೂರು ಪ್ರತ್ಯೇಕ ಅವಘಡಗಳಲ್ಲಿ ಐವರು ಮಕ್ಕಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಮಡಿಕೇರಿ ಮತ್ತು ತುಮಕೂರಿನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 11 ಜನ ಮೃತಪಟ್ಟಿದ್ದರೆ, ಬೆಳಗಾವಿ ಜಿಲ್ಲೆಯ ಗೋಕಾಕ ಬಳಿ ಧುಪದಾಳ ಜಲಾಶಯದ ಹತ್ತಿರ ಈಜಲು ತೆರಳಿದ್ದ ನಾಲ್ವರು ಯುವಕರು ಕೆಸರಿನಲ್ಲಿ ಸಿಕ್ಕಿ ಅಸುನೀಗಿದ್ದಾರೆ.

ಮಡಿಕೇರಿ ವರದಿ: ಕೊಡಗಿನ ಗಡಿಭಾಗ ಸಂಪಾಜೆಯ ಪೆಟ್ರೋಲ್ ಬಂಕ್ ಸಮೀಪ ಕಾರು ಮತ್ತು ಕೆಎಸ್ಆರ್‌ಟಿಸಿ ಬಸ್ ನಡುವೆ ಅಪಘಾತ ಸಂಭವಿಸಿ ಇಬ್ಬರು ಮಹಿಳೆಯರು, ಮೂವರು ಮಕ್ಕಳು ಸೇರಿ 6 ಮಂದಿ ಮೃತಪಟ್ಟರು.

ಮಳವಳ್ಳಿ ತಾಲ್ಲೂಕಿನ ಕುಮಾರ್, ಶಿಲ್ಪಾ, ಪ್ರಿಯಾಂಕಾ ಹಾಗೂ ಮಕ್ಕಳಾದ ಎಸ್.ಎಸ್.ಗೌಡ, ಮನುಶ್ರೀ ಹಾಗೂ ನಿಶಿಕಾ ಮೃತರು. ಮಂಡ್ಯದ ಗಾಂಧಿನಗರದ ನಿವಾಸಿ ಮಂಜುನಾಥ ಹಾಗೂ 6 ವರ್ಷದ ಮಗು ಬಿಯಾನ್ ಗೌಡ ಗಾಯಗೊಂಡಿದ್ದು, ಸ್ಥಿತಿ ಗಂಭೀರವಾಗಿದೆ. 'ಬೆಂಗಳೂರಿನಲ್ಲಿ ವಾಸವಿದ್ದ ಇವರು ರಜೆ ಇದ್ದುದರಿಂದ ಮಂಗಳೂರಿನತ್ತ ಪ್ರವಾಸ ತೆರಳಿದ್ದರು. ಕಾರು ಮತ್ತು ಬಸ್ ನಡುವೆ ಮುಖಾಮುಖಿ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರು ಪೂರ್ಣ ನಜ್ಜುಗುಜ್ಜಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ತುಮಕೂರು ವರದಿ: ರಾಷ್ಟ್ರೀಯ ಹೆದ್ದಾರಿ 48ರ ನಂದಿಹಳ್ಳಿ ಸಮೀಪ ಇನ್ನೋವಾ ಕಾರು ಮತ್ತು ಖಾಸಗಿ ಬಸ್ ನಡುವೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೆಂಗಳೂರು ವಿಜಯನಗರ ದಾಸರಹಳ್ಳಿ ನಿವಾಸಿ ಕೆಎಸ್‌ಸಿಸಿಎಫ್ ಸಂಸ್ಥೆ ವ್ಯವಸ್ಥಾಪಕ ಗೋವಿಂದ ನಾಯಕ್ (58), ಪತ್ನಿ ತಿಪ್ಪಮ್ಮ (52), ಸಂಬಂಧಿಕರ ಮಕ್ಕಳಾದ ದಿನೇಶ್ (12), ಪಿಂಕಿ (15)(ಇಬ್ಬರೂ ಚಿತ್ರದುರ್ಗ ಜಿಲ್ಲೆ, ಜಾಜೂರು ಗ್ರಾಮದವರು), ಕಾರು ಚಾಲಕ ಕುಣಿಗಲ್‌ನ ರಾಜೇಶ್ (40) ಮೃತಪಟ್ಟವರು.

ಈಜಲು ಹೋದವರು ನೀರು ಪಾಲು

ಬೆಳಗಾವಿ: ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭಾ ಬಳಿ ಧುಪದಾಳ ಜಲಾಶಯ ಹತ್ತಿರ ಶುಕ್ರವಾರ ನೀರಿಗೆ ಇಳಿದ ನಾಲ್ವರು ಯುವಕರು ಮೃತಪಟ್ಟಿದ್ದಾರೆ. ಒಬ್ಬನ ಸ್ಥಿತಿ ಗಂಭೀರವಾಗಿದೆ. ಮತ್ತೊಬ್ಬ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಶಿರಗೇರಿ ಗ್ರಾಮದ ಸಂತೋಷ ಈಡಿಗ (19), ಅಜಯ ಜೋರೆ (19), ಕೃಷ್ಣ ಜೋರೆ (19), ಆನಂದ ಕೋಕಡೆ (20) ಮೃತರು. ರಜೆ ಇದ್ದ ಕಾರಣ ಇವರು ಪ್ರವಾಸಕ್ಕೆ ಹೋಗಿದ್ದರು.

'ಎಲ್ಲರಿಗೂ ಈಜು ಬರುತ್ತಿದ್ದ ಕಾರಣ ಜಲಾಶಯಕ್ಕೆ ಇಳಿದರು. ಆದರೆ ಈಜುವಾಗಲೇ ಕೆಸರಿನಲ್ಲಿ ಸಿಲುಕಿ ಮೃತಪಟ್ಟರು' ಎಂದು ಸ್ಥಳದಲ್ಲಿದ್ದವರು ಮಾಹಿತಿ ನೀಡಿದ್ದಾರೆ. ಮೃತರು ಬಾರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು.

ಬಂಡೀಪುರ: ವಸ್ತುಸ್ಥಿತಿ ವರದಿ ನೀಡುವಂತೆ ಎನ್‌ಟಿಸಿಎ ಸೂಚನೆ

ಸೂಕ್ಷ್ಮವಲಯದಲ್ಲಿ ಅಕ್ರಮ ಕಟ್ಟಡ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸೂಕ್ಷ್ಮವಲಯ ಮತ್ತು ಬಫರ್ ವಲಯದಲ್ಲಿರುವ ಅಕ್ರಮ ಕಟ್ಟಡಗಳಿಗೆ ಸಂಬಂಧಿಸಿ ವಸ್ತುಸ್ಥಿತಿ ವರದಿ ನೀಡುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಅರಣ್ಯ ಇಲಾಖೆಗೆ ಸೂಚಿಸಿದೆ.

'ವಲಯದಲ್ಲಿ ವಸತಿ ಉದ್ದೇಶಗಳಿಗೆ ಕಟ್ಟಡ ನಿರ್ಮಿಸಿ ಹೋಂ ಸ್ಟೇ, ರೆಸಾರ್ಟ್ ನಂತಹ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು, ಕ್ರಮ ಕೈಗೊಳ್ಳಬೇಕು' ಎಂದು ಎಂದು ಪರಿಸರ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅವರು ನೀಡಿದ ದೂರಿನ ಮೇರೆಗೆ ಪ್ರಾಧಿಕಾರದ ಪ್ರಾದೇಶಿಕ ಕಚೇರಿಯು ರಾಜ್ಯದ ಮುಖ್ಯ ವನ್ಯಜೀವಿ ವಾರ್ಡನ್‌ಗೆ ಈ ಕುರಿತು ಪತ್ರ ಬರೆದಿದೆ.

ಸಂರಕ್ಷಿತ ಪ್ರದೇಶದ ಸುತ್ತ 7.7 ಕಿ.ಮೀ ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಿ 2012ರ ಅ.4ರಂದು ಅಧಿಸೂಚನೆ ಹೊರಡಿಸಲಾಗಿದೆ. ಗುಂಡ್ಲುಪೇಟೆ, ನಂಜನಗೂಡುಮತ್ತುಎಚ್.ಡಿ.ಕೋಟೆತಾಲ್ಲೂಕುಗಳ 123 ಗ್ರಾಮಗಳು ಈ ವಲಯದಲ್ಲಿವೆ. ಅಲ್ಲಿ ಕಣಿಯನಪುರ ಆನೆ, ಹುಲಿ ಕಾರಿಡಾರ್ ಕೂಡಾ ಇವೆ. ಅಲ್ಲಿ ಮನೆ, ಕೃಷಿ ಕಾರ್ಯಕ್ಕೆ ಕೊಟ್ಟಿಗೆಗಳ ನಿರ್ಮಾಣಕ್ಕಾಗಿ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿಯ ಅನುಮತಿ ಪಡೆಯಬೇಕು.

ಪ್ರಜಾವಾಣಿ ವಿಶೇಷ

ಆದರೆ, ಬಂಡೀಪುರ ಬಳಿಯ ಮೇಲುಕಾಮನಹಳ್ಳಿ, ಮಂಗಲ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮನೆ, ಕೃಷಿ ಉದ್ದೇಶದ ಕಟ್ಟಡಗಳ ನೆಪದಲ್ಲಿ ದೊಡ್ಡ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಅದನ್ನು ಅರಣ್ಯಾಧಿಕಾರಿಗಳೇ ಮೂರು ವರ್ಷಗಳ ಹಿಂದೆ ಜಿಲ್ಲಾಧಿಕಾರಿ ಗಮನಕ್ಕೂ ತಂದಿದ್ದರು.

ಅಂದಿನ ಹುಲಿ ಯೋಜನೆ ನಿರ್ದೇಶಕ ಬಾಲಚಂದ್ರ ಅವರು 2020ರಲ್ಲಿ, ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸಬೇಕು ಎಂದು ಆಗ ಜಿಲ್ಲಾಧಿಕಾರಿಗಳಾಗಿದ್ದ ಡಾ.ಎಂ. ಆರ್.ರವಿ ಅವರಿಗೆ ಪತ್ರ ಬರೆದಿದ್ದರು. ಮಂಗಲ, ಎಲಚೆಟ್ಟಿ, ಹಂಗಳ ಹೊಸಹಳ್ಳಿ, ಮೇಲುಕಾಮನಹಳ್ಳಿ, ಮಗುವಿನಹಳ್ಳಿ ವ್ಯಾಪ್ತಿಯ ಸರ್ವೆ ನಂಬರ್‌ಗಳಲ್ಲಿ ತಲೆಎತ್ತಿದ್ದ ಕಟ್ಟಡಗಳ ವಿವರಗಳನ್ನು ಉಲ್ಲೇಖಿಸಿದ್ದರು.

ಜಿಲ್ಲಾಧಿಕಾರಿ ಸೂಚನೆ ಅನ್ವಯ ಗುಂಡ್ಲುಪೇಟೆ ತಹಶೀಲ್ದಾರ್ ನೀಡಿದ ವರದಿ ಆಧರಿಸಿ, ಕಟ್ಟಡ ತೆರವುಗೊಳಿಸುವಂತೆ ಎಂಟು ಮಂದಿಗೆ ನೋಟಿಸ್ ನೀಡಲಾಗಿತ್ತು. ಮೂರು ಪ್ರಕರಣಗಳಲ್ಲಿ ಅನ್ಯಕ್ರಾಂತ ಮಾಡಿದ್ದ ಆದೇಶ ರದ್ದುಗೊಳಿಸಲೂ ನಿರ್ಧರಿಸಲಾಗಿತ್ತು.

ಪ್ರವಾಸೋದ್ಯಮ ಇಲಾಖೆ ಪ್ರಕಾರ, ಬಂಡೀಪುರ ವ್ಯಾಪ್ತಿಯಲ್ಲಿ ನಾಲ್ಕು ಹೋಂ ಸ್ಟೇಗಳು, ಏಳು ರೆಸಾರ್ಟ್‌ಗಳಿವೆ. ಮಳೆ ಕೊರತೆ ಹಾಗೂ ವನ್ಯಜೀವಿಗಳ ಹಾವಳಿಯ ಕಾರಣಕ್ಕೆ ರೈತರು ಬೀಳು ಬಿಟ್ಟಿದ್ದ ಜಮೀನುಗಳನ್ನು ಬೆಂಗಳೂರು ಸೇರಿದಂತೆ ವಿವಿಧ ನಗರಗಳ ಸಿರಿವಂತರು ಖರೀದಿಸಿ, ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆ.

ಅಕ್ರಮ -ಸಕ್ರಮ: 'ಸೂಕ್ಷ್ಮ ವಲಯ ಮೇಲ್ವಿಚರಣಾ ಸಮಿತಿ ಅನುಮತಿ ಇಲ್ಲದೆ ಕಟ್ಟಡಗಳನ್ನು ಕಟ್ಟಿರುವವರ ವಿರುದ್ಧ 1986ರ ಪರಿಸರ ಸಂರಕ್ಷಣಾ ಕಾಯ್ದೆಯ ಸೆಕ್ಷನ್–19ರ ಅನ್ವಯ ದೂರು ದಾಖಲಿಸುವ ಕೆಲಸವಾಗುತ್ತಿಲ್ಲ' ಎಂದು ಗಿರಿಧರ ಕುಲಕರ್ಣಿ ಹೇಳಿದರು.

ಬಂಡೀಪುರ ವ್ಯಾಪ್ತಿಯಲ್ಲಿ ಅಕ್ರಮ ನಿರ್ಮಾಣಗಳನ್ನು ನೆಲಸಮಗೊಳಿಸಬೇಕೆಂದು 2020ರಲ್ಲಿ ಜಿಲ್ಲಾಧಿಕಾರಿ ನೀಡಿದ್ದ ನೋಟಿಸ್ ಜಾರಿಗೊಳಿಸುವ ಬದಲು, ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದಿಲ್ಲವೆಂಬ ಮುಚ್ಚಳಿಕೆ ಬರೆಸಿಕೊಂಡು ಸಕ್ರಮಗೊಳಿಸಲಾಗಿದೆ. ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿಗೆ ಆ ಅಧಿಕಾರವಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

> ಸೂಕ್ಷ್ಮ ಪರಿಸರ ವಲಯದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಕೊಡಲೇಬಾರದು. ಕಟ್ಟಡಗಳನ್ನು ತೆರವುಗೊಳಿಸಲು ಕ್ರಮ ವಹಿಸಬೇಕು
> **ಗಿರಿಧರ ಕುಲಕರ್ಣಿ**, ಪರಿಸರ ಸಂರಕ್ಷಣಾವಾದಿ

> 2012ರಲ್ಲಿ ಸೂಕ್ಷ್ಮ ವಲಯ ಅಧಿಸೂಚನೆ ಹೊರಡಿಸುವ ಮುನ್ನ ಇಲ್ಲಿ ಏನೇನು ಇದ್ದವೋ, ಅಷ್ಟನ್ನು ಉಳಿಸಿಕೊಂಡು, ಉಳಿದೆಲ್ಲ ಕಟ್ಟಡಗಳನ್ನೂ ನೆಲಸಮಗೊಳಿಸಬೇಕು
> **ಜಿ.ಮಲ್ಲೇಶಪ್ಪ**, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ, ಬಿಳಿಗಿರಿರಂಗನಬೆಟ್ಟ

> ಆ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಇಲ್ಲ. ನಿರ್ದಿಷ್ಟ ಪ್ರಕರಣಗಳ ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು
> **ಡಿ.ಎಸ್.ರಮೇಶ್**, ಜಿಲ್ಲಾಧಿಕಾರಿ

ಶನಿವಾರದ ಉಷ್ಣಾಂಶ 36° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಕಾಶ, ಬಿರು ಬಿಸಿಲು ಇರಲಿದೆ

ಮುನ್ಸೂಚನೆ: ಭಾನುವಾರ 36° 21° | ಸೋಮವಾರ 37° 21° | ಮಂಗಳವಾರ 36° 21°

ಕೇರಳದಲ್ಲಿ ‘ನಂದಿನಿ’ ಕಾಲಿಡಲು ‘ಮಿಲ್ಮಾ’ ಆಕ್ಷೇಪ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಗುಜರಾತ್‌ನ ‘ಅಮುಲ್’ ಉತ್ಪನ್ನಗಳ ಮಾರಾಟ– ಪ್ರಚಾರಕ್ಕೆ ಕರ್ನಾಟಕದಲ್ಲಿ ತೀವ್ರ ಪ್ರತಿರೋಧ ಎದುರಾಗಿರುವ ನಡುವೆ, ನಂದಿನಿ ಬ್ರ್ಯಾಂಡ್ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಕೇರಳದಲ್ಲಿ ಮಳಿಗೆಗಳನ್ನು ತೆರೆಯುತ್ತಿರುವ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ (ಕೆಎಂಎಫ್) ನಿರ್ಧಾರಕ್ಕೆ ಮಿಲ್ಮಾ ಬ್ರ್ಯಾಂಡ್ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ತಯಾರಿಸುವ ಕೇರಳ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಮಿಲ್ಮಾ ಅಧ್ಯಕ್ಷ ಕೆ.ಎಸ್. ಮಣಿ ಅವರು, ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟದ ಅಮುಲ್ ಉತ್ಪನ್ನಗಳು ಕರ್ನಾಟಕ ಪ್ರವೇಶಿಸುವುದಕ್ಕೆ ಆಕ್ಷೇಪಿಸುವ ಕೆಎಂಎಫ್, ಇದೇ ಸಮಯದಲ್ಲಿ ಕೇರಳದಲ್ಲಿ ನಂದಿನಿ ಮಳಿಗೆಗಳನ್ನು ತೆರೆಯುತ್ತಿರುವ ನಿಲುವನ್ನು ಪ್ರಶ್ನಿಸಿದ್ದಾರೆ.

ಕಳೆದ ಕೆಲವು ತಿಂಗಳಿಂದ ಕೇರಳದ ಮಲಪ್ಪುರಂನ ಮಂಜೇರಿಯಲ್ಲಿ ಮತ್ತು ಕೊಚ್ಚಿಯ ವೈಟ್ಟಿಲ್ಲಾದಲ್ಲಿ ನಂದಿನಿಯ ಎರಡು ಮಳಿಗೆಗಳನ್ನು ತೆರೆಯಲಾಗಿದೆ. ಅಲ್ಲದೇ ಕೇರಳದಲ್ಲಿ ಸುಮಾರು 100 ಫ್ರಾಂಚೈಸಿಗಳಿಗಾಗಿ ಕೆಎಂಎಫ್ ಅರ್ಜಿಗಳನ್ನು ಆಹ್ವಾನಿಸಿದೆ.

ಕೇರಳದಲ್ಲಿ ನಂದಿನಿ ಉತ್ಪನ್ನಗಳ ಮಳಿಗೆಗಳನ್ನು ತೆರೆಯುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ, ಈಗಾಗಲೇ ಕೆಎಂಎಫ್ ಅಧ್ಯಕ್ಷರಿಗೆ ಪತ್ರ ಬರೆಯಲಾಗಿದೆ. `ಆದರೆ, ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ‘ಕೇರಳದಲ್ಲಿ ಹೆಚ್ಚುವರಿ ಹಾಲು ಇದ್ದಾಗಲೂ ಇತರ ರಾಜ್ಯಗಳಿಗೆ ಮಿಲ್ಮಾ ಕಾಲಿಡಲಿಲ್ಲ‘ ಎಂದು ಮಣಿ ತಿಳಿಸಿದರು.`

ಬೆಟ್ಟಿಂಗ್ ದಂಧೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಗಳ ಮಾಹಿತಿಯನ್ನು ಆ್ಯಪ್ ಮೂಲಕ ರವಾನಿಸಿ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಜಾಲವನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಭೇದಿಸಿದ್ದಾರೆ.

‘ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ನಡೆಯುವ ವೇಳೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳುತ್ತಿದ್ದ ಆರೋಪಿಗಳು, ಪ್ರತಿ ಬಾಲ್ ಮಾಹಿತಿಯನ್ನು ಆ್ಯಪ್‌ನಲ್ಲಿ ನಮೂದಿಸುತ್ತಿದ್ದರು. ಜಾಲದ ಮತ್ತಷ್ಟು ಸದಸ್ಯರು, ಅದೇ ಮಾಹಿತಿ ಬಳಸಿಕೊಂಡು ಜನರಿಂದ ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಪಂದ್ಯ ನಡೆಯುವ ವೇಳೆ ಅಕ್ರಮ ತಡೆಯಲು ಮಫ್ತಿಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವ ಪ್ರೇಕ್ಷಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಇತ್ತೀಚೆಗೆ ನಡೆದ ಪಂದ್ಯದ ವೇಳೆ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಬೆಟ್ಟಿಂಗ್ ವಿಷಯ ಗೊತ್ತಾಗಿದೆ’ ಎಂದು ತಿಳಿಸಿದರು.

‘ವಿಶಾಂತ್, ಅಮರ್ ಜಿತ್ ಸಿಂಗ್, ಮೋಹಿತ್ ಬಾತ್ರಾ ಹಾಗೂ ದುಶ್ಯಂತ್ ಕುಮಾರ್ ಸೋನಿ ಎಂಬುವವರನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

ಸಮಯ ವ್ಯತ್ಯಾಸದಿಂದ ಲಾಭ: ‘ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯಕ್ಕೂ ಟಿ.ವಿ.ಯಲ್ಲಿ ಪ್ರಸಾರವಾಗುವ ಪಂದ್ಯಕ್ಕೂ ಸಮಯದ ವ್ಯತ್ಯಾಸವಿರುತ್ತದೆ. ಇದನ್ನು ತಿಳಿದಿದ್ದ ಆರೋಪಿಗಳು, ಟಿಕೆಟ್ ಕಾಯ್ದಿರಿಸಿ ಕ್ರೀಡಾಂಗಣಕ್ಕೆ ಹೋಗುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಪಂದ್ಯದ ಪ್ರತಿ ಬಾಲ್ ಹಾಗೂ ಬ್ಯಾಟಿಂಗ್ ಮಾಹಿತಿಯನ್ನು ಆ್ಯಪ್ ಮೂಲಕ ರವಾನಿಸುತ್ತಿದ್ದರು. ಹೀಗೆ ಜನರಿಂದ ಬೆಟ್ಟಿಂಗ್ ಕಟ್ಟಿಸಿಕೊಂಡು ವಂಚಿಸುತ್ತಿದ್ದರು’ ಎಂದು ಹೇಳಿದರು.

ಅಪರಾಧ ಸುದ್ದಿಗಳು

ಬೈಕ್‌ಗೆ ಕಾರು ಡಿಕ್ಕಿ: ಟೆಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸವನಹಳ್ಳಿ ಮುಖ್ಯರಸ್ತೆಯಲ್ಲಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸಾಫ್ಟ್‌ವೇರ್ ಎಂಜಿನಿಯರ್ ಅಮಿತ್ ಭಾರ್ಗವ್ (46) ಮೃತಪಟ್ಟಿದ್ದಾರೆ.

‘ಹರಿಯಾಣದ ಅಮಿತ್ ಭಾರ್ಗವ್, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕಸವನಹಳ್ಳಿ ಮುಖ್ಯರಸ್ತೆ ಬಳಿ ವಾಸವಿದ್ದರು. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಬೆಳ್ಳಂದೂರು ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಅಮಿತ್ ಅವರು ಗುರುವಾರ ರಾತ್ರಿ 12.30 ಗಂಟೆ ಸುಮಾರಿಗೆ ಕಸವನಹಳ್ಳಿ ಮುಖ್ಯರಸ್ತೆಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದರು. ಇದೇ ಮಾರ್ಗದಲ್ಲಿ ಹೊರಟಿದ್ದ ಕಾರು, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ರಸ್ತೆಗೆ ಬಿದ್ದಿದ್ದ ಅಮಿತ್, ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ’ ಎಂದು ಅವರು ಹೇಳಿದರು.

‘ಅಪಘಾತದ ಬಳಿಕ ಕಾರು ಸಮೇತ ಚಾಲಕ ಪರಾರಿಯಾಗಿದ್ದಾನೆ. ಅತೀ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

ಬೈಕ್ ನಿಲುಗಡೆ ವಿಚಾರಕ್ಕೆ ಕೊಲೆ: ಬಂಧನ

ಬೆಂಗಳೂರು: ಬೈಕ್ ನಿಲುಗಡೆ ವಿಚಾರವಾಗಿ ನಡೆದಿದ್ದ ಗಲಾಟೆ ವೇಳೆ ಜನಾರ್ದನ್ ಭಟ್ಟ (29) ಎಂಬುವವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ ಅಬು ಸುಲೈಮಾನ್ ಮಂಡಲ್ (24) ಹಾಗೂ ರಿಜ್ವಾನ್ ರೆಹಮಾನ್ ಲಸ್ಕರ್ (26) ಬಂಧಿತರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಇವರಿಬ್ಬರು, ಜನಾರ್ದನ್ ಜೊತೆ ಒಂದೇ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಮಾರ್ಚ್ 29 ರಂದು ತಡರಾತ್ರಿ ಜನಾರ್ದನ್ ಅವರನ್ನು ಕೊಲೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಉಡುಪಿಯ ಜನಾರ್ದನ್, ಟಿ.ವಿ ದುರಸ್ತಿ ಕೆಲಸ ಮಾಡುತ್ತಿದ್ದರು. ಒಂದೂವರೆ ವರ್ಷದಿಂದ ಯಲಹಂಕದಲ್ಲಿ ವಾಸವಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯದ ನಿಗದಿತ ಜಾಗದಲ್ಲಿ ಬೈಕ್ ನಿಲ್ಲಿಸುತ್ತಿದ್ದರು. ಇದೇ ವಿಚಾರವಾಗಿ ಜನಾರ್ದನ್ ಹಾಗೂ ಆರೋಪಿಗಳ ನಡುವೆ ಗಲಾಟೆ ಶುರುವಾಗಿತ್ತು.’

‘ಜನಾರ್ದನ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಕೈ– ಕಾಲುಗಳನ್ನು ಕಟ್ಟಿ ಹಾಕಿ ಬಾಯಿಗೆ ಬಟ್ಟೆ ತುರುಕಿ, ಉಸಿರುಗಟ್ಟಿಸಿ ಕೊಂದಿದ್ದರು. ನಂತರ, ತಮ್ಮೂರಿಗೆ ಪರಾರಿಯಾಗಿದ್ದರು. ಸೂಕ್ತ ಪುರಾವೆಗಳ ಮೂಲಕ ವಿಳಾಸ ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು.

ಐಪಿಎಲ್: ಕ್ರೀಡಾಂಗಣ ಸುತ್ತಮುತ್ತ ನಿಲುಗಡೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 15ರಂದು ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯ ನಡೆಯಲಿದ್ದು, ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಕ್ರೀಡಾಂಗಣ ಸುತ್ತಮುತ್ತ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ನಡುವೆ ಪಂದ್ಯ ನಡೆಯಲಿದೆ.

‘ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ವಿಲ್ಲ. ಕ್ವೀನ್ಸ್ ರಸ್ತೆಯಲ್ಲಿ ಗೂಡ್ಸ್ ವಾಹನ ಸಂಚಾರ ನಿರ್ಬಂಧಿಸ ವಿಧಿಸಲಾಗಿದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದ್ದಾರೆ.

‘ಕಿಂಗ್ಸ್ ರಸ್ತೆ, ಬಿಆರ್‌ವಿ ಮೈದಾನ, ಕಂಠೀರವ ಕ್ರೀಡಾಂಗಣ, ಯು.ಬಿಸಿಟಿ ಹಾಗೂ ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ಸಾರ್ವಜನಿಕರು ವಾಹನ ನಿಲ್ಲಿಸಬಹುದು’ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ

8147623791 080 45557204

readerservicecell@deccanherald.co.in

ಸಂಪರ್ಕಿಸಲು ಇಲ್ಲಿ ಸ್ಕ್ಯಾನ್ ಮಾಡಿ
https://forms.gle/gfccR25fCPYVkTR46

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: ECN-TRD-07-2023
ದಿನಾಂಕ: 01.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕುಡಚಿ ಯಾರ್ಡ್‌ನಲ್ಲಿ ಪ್ರಸ್ತಾವನೆಯ ರಸ್ತೆ–1 ಮತ್ತು ಪ್ರಸ್ತಾವನೆಯ ರಸ್ತೆ–1ರ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ ಓಎಚ್‌ಇಯು ಉಲ್ಲಂಘನೆಯನ್ನು ತೆಗೆದುಹಾಕುವುದು.	ರೂ. 1,15,40,199.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.04.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ, ಬೆಂಗಳೂರು ದಂಡು

PUB/25/AAD/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: CMGR_HADI_URU_THIM
ದಿನಾಂಕ: 03.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಉರಕೆರೆ – ತಿಮ್ಮರಾಜನಹಳ್ಳಿ ವಿಭಾಗದಲ್ಲಿ ಹೊಸ ಬಿಜಿ ಲೈನ್‌ನ ಮೇಲೆ ದೂರಸಂಪರ್ಕ ವ್ಯವಸ್ಥೆಯೊಂದಿಗೆ ಸಂಪೂರ್ಣವಾದ ಬ್ಲಾಕ್ ವರ್ಕಿಂಗ್ ವ್ಯವಸ್ಥೆಯ ಪೂರೈಕೆಯೊಂದಿಗೆ ಮೈಸೂರು ವಿಭಾಗದ ಚಿಕ್ಕಮಗಳೂರು–ಬೇಲೂರು ವಿಭಾಗದ ನಡುವಿನ ಚಿಕ್ಕಮಗಳೂರು & ಹಾದಿಹಳ್ಳಿ ನಿಲ್ದಾಣಗಳಲ್ಲಿ ಹಾಗೂ ತುಮಕೂರು–ದಾವಣಗೆರೆ ವಿಭಾಗದ ನಡುವೆ ಉರಕೆರೆ & ತಿಮ್ಮರಾಜನಹಳ್ಳಿ ನಿಲ್ದಾಣಗಳಲ್ಲಿ ಹೊರಾಂಗಣ ಸಿಗ್ನಲಿಂಗ್ ವ್ಯವಸ್ಥೆಯೊಂದಿಗೆ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯನ್ನು ಪೂರೈಕೆ ಮಾಡುವುದು.	ರೂ. 17,24,11,692.78

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.04.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್, ನಿರ್ಮಾಣ, ಬೆಂಗಳೂರು ದಂಡು

PUB/27/AAD/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಅರ್ಜಿ ಅಧಿಸೂಚನೆ ಸಂ. 565/STBA/04/2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ, ಕಮೀಷನ್ ಆಧಾರದ ಮೇರೆಗೆ ಮೂರು (03) ವರ್ಷಗಳ ಅವಧಿಯವರೆಗೆ ಸ್ಟೇಷನ್ ಟಿಕೇಟು ಬುಕ್ಕಿಂಗ್ ಏಜೆಂಟುಗಳು (ಎಸ್‌ಟಿಬಿಎ) ಅನ್‌ರಿಸರ್ವ್‌ಡ್ ಟಿಕೇಟು ವ್ಯವಸ್ಥೆಯ (ಯುಟಿಎಸ್) ಮೂಲಕ ಕಾಯ್ದಿರಿಸದ / ಸಾಮಾನ್ಯ ಟಿಕೇಟುಗಳನ್ನು ವಿತರಿಸುವ ಸಲುವಾಗಿ ಈ ಕೆಳಗಿನ ರೈಲು ನಿಲ್ದಾಣಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಲುವಾಗಿ ಮೊಹರು ಬಂದ ಮಾಡಲಾದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ನಿಲ್ದಾಣದ ಹೆಸರು	ಸ್ಟೇಷನ್ ಕೋಡ್	ಸ್ಟೇಷನ್ ವರ್ಗ
1	ಮಾರಿಕುಪ್ಪಂ	ಎಂಕೆಎಂ	ಎನ್‌ಎಸ್‌ಜಿ–6
2	ತೊಂಡೇಬಾವಿ	ಟಿಡಿವಿ	
3	ಆನೇಕಲ್ ರೋಡ್	ಎಇಕೆ	
4	ದೇವನಗೊಂದಿ	ಡಿಕೆಎನ್	

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ ಮತ್ತು ಸಮಯ: 17.05.2023 ರಂದು 10:00 ಗಂಟೆಯಿಂದ 15:00 ಗಂಟೆಯವರೆಗೆ.

For details log on: www.swr.indianrailways.gov.in

PUB/24/AAD/PRB/SWR/2023-24 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಬೆಂಗಳೂರು

S.W.Railways sw_rly SWRRLY southwesternrailway SWRRLY

ನಿಧನ

K. V. ಬಾಬು ರೆಡ್ಡಿ

ಜನನ 16.4.1961 ಮರಣ 14.4.2023

ಇವರ ಅಂತ್ಯಕ್ರಿಯೆಯನ್ನು ಕೂಡ್ಲು ರುದ್ರಭೂಮಿಯಲ್ಲಿ 11.00 ಗಂಟೆಗೆ ನಡೆಸಲಾಗುವುದು

ದುಃಖತಪ್ತರು : ಶ್ರೀಮತಿ ಅನಿತಾ ಮತ್ತು ಕುಟುಂಬದವರು

ನಕಲಿ ಬಣ್ಣ ತಯಾರಿಕೆ: ಗೋದಾಮು ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಬಣ್ಣ ತಯಾರಿಸುತ್ತಿದ್ದ ಗೋದಾಮು ಮೇಲೆ ವಿ.ವಿ. ಪುರ ಠಾಣೆ ಪೊಲೀಸರು ದಾಳಿ ಮಾಡಿದ್ದು, ₹ 20 ಲಕ್ಷ ಮೌಲ್ಯದ ಸಾಮಗ್ರಿಗಳನ್ನು ಜಪ್ತಿ ಮಾಡಿದ್ದಾರೆ.

‘ದೇಶದ ವಿವಿಧ ಕಂಪನಿಗಳ ಹೆಸರಿನಲ್ಲಿ ನಕಲಿ ಬಣ್ಣ ಮಾರುತ್ತಿದ್ದ ಆರೋಪದಡಿ ಎನ್‌.ಟಿ. ಪೇಟೆಯ ವ್ಯಾಪಾರಿ ಚುನ್ನಿಲಾಲ್ ಎಂಬಾತನನ್ನು ಬಂಧಿಸಲಾಗಿತ್ತು. ಆತ ನೀಡಿದ್ದ ಮಾಹಿತಿ ಆಧರಿಸಿ ಹೆಸರುಘಟ್ಟ ಮುಖ್ಯರಸ್ತೆಯ ಶಿವಕೋಟೆ ಬಳಿಯ ಗೋದಾಮು ಮೇಲೆ ದಾಳಿ ಮಾಡಲಾಯಿತು’ ಎಂದು ಪೊಲೀಸರು ಹೇಳಿದರು.

‘ಗೋದಾಮಿನಲ್ಲಿ ಯಂತ್ರಗಳನ್ನು ಅಳವಡಿಸಿದ್ದ ಆರೋಪಿಗಳು, ಅವುಗಳ ಮೂಲಕ ನಕಲಿ ಬಣ್ಣ ಸಿದ್ಧಪಡಿಸುತ್ತಿದ್ದರು. ಕಂಪನಿಗಳ ಡಬ್ಬದಲ್ಲಿ ಬಣ್ಣ ತುಂಬಿ, ಬೆಂಗಳೂರಿನ ಹಲವು ಮಳಿಗೆಗಳಿಗೆ ಕಳುಹಿಸುತ್ತಿದ್ದರು. ಅಸಲಿ ಕಂಪನಿ ಬಣ್ಣವೆಂದು ನಂಬಿ ಜನರು ಖರೀದಿಸುತ್ತಿದ್ದರು’ ಎಂದು ತಿಳಿಸಿದರು.

‘ಹಲವು ತಿಂಗಳಿನಿಂದ ಆರೋಪಿಗಳು ನಕಲಿ ಬಣ್ಣ ತಯಾರಿಸುತ್ತಿದ್ದ ಸಂಗತಿ ಗೊತ್ತಾಗಿದೆ. ಕೆಲ ಕಾರ್ಮಿಕರನ್ನು ವಿಚಾರಣೆ ನಡೆಸಲಾಗಿದೆ. ಗೋದಾಮು ಯಾರಿಗೆ ಸೇರಿದ್ದು ? ಪ್ರಮುಖ ಆರೋಪಿ ಯಾರು ? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದರು.

ಜಾತಿ ತಾರತಮ್ಯ ತಡೆಗೆ ಯುಜಿಸಿ ಮಾರ್ಗಸೂಚಿ ಪ್ರಕಟ

ನವದೆಹಲಿ: ವಿಶ್ವವಿದ್ಯಾಲಯಗಳ ಅನುದಾನ ಆಯೋಗ (ಯುಜಿಸಿ) ವಿದ್ಯಾರ್ಥಿಗಳ ಕುಂದುಕೊರತೆ ಪರಿಹಾರ ನಿಯಮಾವಳಿಯನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ್ದು, ಕಾಲೇಜುಗಳ ಆವರಣದಲ್ಲಿ ಜಾತಿ ಆಧಾರಿತ ತಾರತಮ್ಯಕ್ಕೆ ಕಡಿವಾಣ ಹಾಕುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಹೊಸ ನಿಯಮಾವಳಿ ಅನ್ವಯ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಕುಂದುಕೊರತೆ ಆಲಿಸಿ 15 ದಿನಗಳೊಳಗೆ ಬಗೆಹರಿಸಲು ಸಮಿತಿ ರಚಿಸಬೇಕು. ಇದಕ್ಕೆ ಒಂಬುಡ್ಸ್‌ಮನ್ ನೇಮಿಸಬೇಕು ಎಂದು ಸೂಚಿಸಿದೆ.

ಸಮಿತಿಯಲ್ಲಿ ಐವರು ಪ್ರಾಧ್ಯಾಪಕರು ಇರಬೇಕು ಅಥವಾ ಹಿರಿಯ ಬೋಧಕರು ಇರಬೇಕು. ಇವರ ಪೈಕಿ ಒಬ್ಬರನ್ನು ಮುಖ್ಯಸ್ಥರನ್ನಾಗಿ ನೇಮಿಸಬೇಕು. ವಿದ್ಯಾರ್ಥಿಗಳ ವಿಭಾಗದಿಂದ ಪ್ರತಿನಿಧಿಸುವವರು ಸಹಪಠ್ಯ ಚಟುವಟಿಕೆಯಲ್ಲಿ ಉತ್ತಮ ಸಾಮರ್ಥ್ಯ ತೋರಿರಬೇಕು ಅಥವಾ ಶೈಕ್ಷಣಿಕ ಮಟ್ಟದಲ್ಲಿ ಉನ್ನತ ಸಾಧನೆ ಮಾಡಿದವರನ್ನು ನಾಮ ನಿರ್ದೇಶನ ಮಾಡಬೇಕು.

ಸದಸ್ಯರ ಪೈಕಿ ಒಬ್ಬರು ಮಹಿಳೆ ಇರಬೇಕು. ಎಸ್‌ಸಿ ಎಸ್‌ಟಿ, ಹಿಂದುಳಿದ ವರ್ಗದ ಪ್ರತಿನಿಧಿಸುವವರನ್ನು ಸದಸ್ಯರನ್ನಾಗಿ ನೇಮಿಸಬೇಕು ಎಂದು ಸೂಚಿಸಿದೆ.

ವಿಶ್ರಾಂತ ಕುಲಪತಿ ಅಥವಾ ನಿವೃತ್ತ ಪ್ರಾಧ್ಯಾಪಕರನ್ನೇ ಕಮಿಟಿಯ ಮುಖ್ಯಸ್ಥರನ್ನಾಗಿ ನೇಮಿಸಬೇಕು. ದಶಕಗಳ ಕಾಲ ಬೋಧನೆಯ ಅನುಭವ ಹೊಂದಿದವರಿಗೆ ಪ್ರಥಮ ಆದ್ಯತೆ ನೀಡಬೇಕು ಎಂದು ತಿಳಿಸಿದೆ.

‘ಜಾತಿ ಆಧಾರಿತ ತಾರತಮ್ಯ ನಿರ್ಮೂಲನೆಯೇ ಯುಜಿಸಿಯ ಗುರಿ. ಉನ್ನತ ಶಿಕ್ಷಣದ ಹಂತದಲ್ಲಿ ಈ ಅನಿಷ್ಟ ಪದ್ಧತಿಯ ನಿರ್ಮೂಲನೆ ಸಂಬಂಧ ನಿಯಮಿತವಾಗಿ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಲಾಗುತ್ತಿದೆ. ಈ ಬಗ್ಗೆ ನಿಗಾ ಕೂಡ ವಹಿಸಲಿದೆ’ ಎಂದು ಯುಜಿಸಿ ಮುಖ್ಯಸ್ಥ ಎಂ. ಜಗದೀಶ್ ಕುಮಾರ್ ಅವರು ಮಾಹಿತಿ ನೀಡಿದ್ದಾರೆ.

ನಗರದ ಗಾಂಧಿ ವೃದ್ಧಾಶ್ರಮದಲ್ಲಿ ‘ನೆಸ್ಟ್ ಸೋಶಿಯಲ್ ರೀಫಾರ್ಮ್ಸ್ ಫಾರ್ ಓಲ್ಡ್ ಏಜ್ ಪೇರೆಂಟ್ಸ್’ ಸಂಸ್ಥೆ ಆಯೋಜಿಸಿದ್ದ ‘ಭಾರತದಲ್ಲಿ ಬದಲಾಗುತ್ತಿರುವ ವೃದ್ಧಾಪ್ಯ ಪೋಷಕರ ಅಗತ್ಯತೆಗಳು’ ಕುರಿತ ವಿಚಾರಸಂಕಿರಣದಲ್ಲಿ ಐಎಎಸ್ ನಿವೃತ್ತ ಅಧಿಕಾರಿ ಮೀನಾಕ್ಷಿಸುಂದರಂ, ಆದಿತ್ಯ ಖಂಡೇಲ್‌ವಾಲಾ, ಅನಿಲ್ ಕುಮಾರ್, ಸುಭದರ್ಶಿನಿ ದಾಸ್, ಇಶಿತಾ ಗುರ್ಜಲ್ವಾರ್, ಸತ್ಯಪ್ರಕಾಶ ಮಿಶ್ರಾ, ಆಯುಷಿ ಪುಟಾನೆ, ಸೌಮಿ ಪಾತ್ರಾ, ಏಕನಾಥ್ ಸಾಹು, ಶ್ರೀಧರ್ ವಿ. ನಾಯಕ್, ಪಂಖ್, ಅನಿಲ್ ಕುಮಾರ್ ಭಾಗವಹಿಸಿದ್ದರು.

ಬನ್ನೇರುಘಟ್ಟ: ಜೀಬ್ರಾ ಮರಿ ಜನನ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಕಾವೇರಿ ಹೆಸರಿನ ಜೀಬ್ರಾ ಶುಕ್ರವಾರ ಮರಿಯೊಂದಕ್ಕೆ ಜನ್ಮನೀಡಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದ್ದಾರೆ.

ಕಾವೇರಿ ಮತ್ತು ಭರತ್ ಎಂಬ ಜೋಡಿ ಜೀಬ್ರಾಗಳಿಗೆ ಮರಿ ಜನಿಸಿದೆ. ಈಗ ಜೀಬ್ರಾಗಳ ಸಂಖ್ಯೆ ಆರಕ್ಕೇರಿದೆ. ತಾಯಿ ಮತ್ತು ಮರಿ ಆರೋಗ್ಯವಾಗಿದ್ದು, ವೈದ್ಯ ಡಾ. ಉಮಾಶಂಕರ್ ನೇತೃತ್ವದ ತಂಡ ಮತ್ತು ಪ್ರಾಣಿ ಪಾಲಕರು ಆರೈಕೆ ಮಾಡುತ್ತಿದ್ದಾರೆ. ಮರಿಯು ಕಂದು ಬಣ್ಣದ ಪಟ್ಟೆಗಳನ್ನು ಹೊಂದಿದ್ದು, ಅಂತಿಮವಾಗಿ ಕಪ್ಪುಬಣ್ಣಕ್ಕೆ ತಿರುಗುತ್ತವೆ ಎಂದು ವೈದ್ಯರು ತಿಳಿಸಿದ್ದಾರೆ.

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳನ್ನು ("**ಷೆಡ್ಯೂಲ್ ಸ್ವತ್ತುಗಳು**") ಅದರ ಮಾಲೀಕರಿಂದ ("**ಮಾಲೀಕರು**") ಖರೀದಿಸಲು ಉದ್ದೇಶಿಸಿದ್ದಾರೆ. ಸದರಿ ಮಾಲೀಕರು ಈ ಕೆಳಗೆ ಅವರ ಹೆಸರುಗಳ ಮುಂದೆ ತಿಳಿಸಿರುವ ಷೆಡ್ಯೂಲ್ ಸ್ವತ್ತಿಗೆ ತಾವೇ ಮಾಲೀಕರೆಂದು ಪ್ರತಿನಿಧಿಸಿದ್ದಾರೆ ಹಾಗೂ ಈ ಷೆಡ್ಯೂಲ್ ಸ್ವತ್ತುಗಳ ಮುಂದೆ ನಮೂದಿಸಿರುವ ಕರಾರುದಾರರನ್ನು ಹೊರತುಪಡಿಸಿ, ಬೇರೆ ಯಾವುದೇ ವ್ಯಕ್ತಿ/ಗಳು / ವ್ಯವಹಾರ / ಸಂಸ್ಥೆ / ಅಸ್ತಿತ್ವ (ಕಾರ್ಪೊರೇಟ್ ಅಥವಾ ಇತರೆ) ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಆಸಕ್ತಿಯನ್ನು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತುಗಳ ಸಂಬಂಧವಾಗಿ ಯಾವುದೇ ವ್ಯಕ್ತಿ/ಗಳು/ ವ್ಯವಹಾರ / ಸಂಸ್ಥೆ / ಅಸ್ತಿತ್ವ (ಕಾರ್ಪೊರೇಟ್ ಅಥವಾ ಇತರೆ) ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು, ಯಾವುದೇ ಸ್ವಭಾವದ ಬೇಡಿಕೆಯನ್ನು ಅಥವಾ ಅದರ ಯಾವುದೇ ಭಾಗ, ಆಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಮೇಲಿನ ವ್ಯವಹಾರದ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆ/ಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಹದಿನೈದು (15) ದಿನಗಳ** ಒಳಗೆ ಲಿಖಿತ ವಿವರಗಳೊಂದಿಗೆ ಬೆಂಬಲಾರ್ಥ ದಾಖಲೆಗಳೊಡನೆ ಈ ಕೆಳಕಂಡ ಸಹಿದಾರರಿಗೆ ಅವುಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಅದರ ಮಾಲೀಕರು ಮತ್ತು ಕರಾರುದಾರರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ/ಗಳು / ವ್ಯವಹಾರ / ಸಂಸ್ಥೆ / ಅಸ್ತಿತ್ವ (ಕಾರ್ಪೊರೇಟ್ ಅಥವಾ ಇತರೆ) ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು, ಯಾವುದೇ ಸ್ವಭಾವದ ಬೇಡಿಕೆಯನ್ನು ಅಥವಾ ಅದರ ಯಾವುದೇ ಭಾಗ, ಆಸಕ್ತಿಯನ್ನು ಯಾವುದೇ ವ್ಯಕ್ತಿಗಳು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಯಾವುದೇ ಕ್ಲೇಮು/ಗಳು ಇದ್ದಲ್ಲಿ ಅವುಗಳನ್ನು ಉಪೇಕ್ಷಿಸಿರುತ್ತಾರೆ ಎಂದು ಪರಿಗಣಿಸಲಾಗುವುದು. ಈ ಸಮಯದ ನಂತರ ಯಾವುದೇ ಕ್ಲೇಮುಗಳು ಬಂದಲ್ಲಿ, ನಮ್ಮ ಕಕ್ಷಿದಾರರು ಅದನ್ನು ಪರಿಗಣಿಸಲು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಟಿ. ಬೇಗೂರು ಗ್ರಾಮದ ಈ ಕೆಳಕಂಡ ಸರ್ವೆ ನಂಬರುಗಳ ಜಮೀನುಗಳಿಗೆ ಚಕ್ಕುಬಂದಿ :

ಮಾಲೀಕರು	ಕರಾರುದಾರರ ಹೆಸರು	ಸರ್ವೆ ನಂ.	ವಿಸ್ತೀರ್ಣ		ಚಕ್ಕುಬಂದಿ			
			ಎಕರೆ	ಗುಂಟ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ಶ್ರೀ. ಮಲ್ಲಯ್ಯ, ಶ್ರೀಮತಿ. ವನಜಾಕ್ಷಿ, (ಕೊಂ ಶ್ರೀ. ಮಲ್ಲಯ್ಯ) ಶ್ರೀ. ಎಂ. ಗಿರೀಶ್ ಮತ್ತು ಶ್ರೀ. ಎಂ ಹರೀಶ್	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	205/6	0	20	205/8	205/1	206/5	202 and 205/3
ಶ್ರೀ. ಕೆಂಪಯ್ಯ (ಬಿನ್ ದಿ. ಶ್ರೀ. ದೊಡ್ಡ ಗುಡಿಯಪ್ಪ) ಶ್ರೀಮತಿ. ಲಕ್ಷ್ಮಮ್ಮ (ಕೊಂ ಶ್ರೀ. ಕೆಂಪಯ್ಯ), ಶ್ರೀಮತಿ. ಮಲ್ಲಮ್ಮ @ ಮಂಜುಳ ಮತ್ತು ಶ್ರೀ. ಯೋಗೇಶ್ ಬಿ.ಕೆ (ಬಿನ್ ಶ್ರೀ. ಕೆಂಪಯ್ಯ)	-	205/7	0	9 ½	215/1	205/8	206/5	205/3
ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	-	205/8	0	9 ½	205/7	205/6	206/5	205/3
ಶ್ರೀ. ಟಿ.ಕೆ.ಎಂ ರಾಜು ಮತ್ತು ಶ್ರೀ. ರವಿಕುಮಾರ್ ಟಿ.ಕೆ (ಬಿನ್ ಶ್ರೀಮತಿ. ಕೆಂಪಮ್ಮ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು	-	206/1	1	5	215/1	208	213/3	206/6
(i) ಶ್ರೀಮತಿ. ಜಿನ್ನಮ್ಮ (ಕೊಂ ದಿ. ಶ್ರೀ. ತಿಮ್ಮರಾಯಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು), ಶ್ರೀಮತಿ. ನಂಜಲಕ್ಷ್ಮಮ್ಮ (ಕೊಂ ದಿ. ಶ್ರೀ. ಟಿ. ಗಂಗಾಧರಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು ಮತ್ತು ದಿ. ವೆಂಕಟರಾಮಯ್ಯ ರವರ ಎಲ್ಲಾ ಮಕ್ಕಳು (ii) ಶ್ರೀ. ಚಿಕ್ಕರಂಗೈಯ್ಯ, (ಬಿನ್ ದಿ. ಶ್ರೀ. ಕರೇ ಗಂಗಯ್ಯ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು; (iii) ಶ್ರೀಮತಿ. ಲಕ್ಷ್ಮಮ್ಮ @ ಶ್ರೀಮತಿ. ಲಕ್ಕಮ್ಮ @ ಶ್ರೀಮತಿ. ಲಕ್ಷ್ಮಿ (ಬಿನ್ ಶ್ರೀ. ಕೆಂಪನರಸಯ್ಯ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	206/2	0	6	215/1	206/7	206/6	206/5
(i) ಶ್ರೀಮತಿ. ಜಿನ್ನಮ್ಮ (ಕೊಂ ದಿ. ಶ್ರೀ. ತಿಮ್ಮರಾಯಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು), ಶ್ರೀಮತಿ. ನಂಜಲಕ್ಷ್ಮಮ್ಮ (ಕೊಂ ದಿ. ಶ್ರೀ. ಟಿ. ಗಂಗಾಧರಪ್ಪ), ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು, ಮತ್ತು ಬಿನ್ ದಿ. ವೆಂಕಟರಾಮಯ್ಯ ರವರ ಎಲ್ಲಾ ಮಕ್ಕಳು (ii) ಶ್ರೀ. ದೊಡ್ಡ ಹುಳುರಯ್ಯ ಮತ್ತು ಶ್ರೀ ದೊಡ್ಡ ರಂಗಯ್ಯ (ಬಿನ್ ದಿ. ಶ್ರೀ. ನರಸಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	206/7	0	6	206/2	206/3	206/6	206/5
ಶ್ರೀಮತಿ. ಜಿನ್ನಮ್ಮ (ಕೊಂ ದಿ. ಶ್ರೀ. ತಿಮ್ಮರಾಯಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು, ಶ್ರೀಮತಿ. ನಂಜಲಕ್ಷ್ಮಮ್ಮ (ದಿ. ಶ್ರೀ. ಟಿ. ಗಂಗಾಧರಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು, ಮತ್ತು ಬಿನ್ ದಿ. ಶ್ರೀ. ವೆಂಕಟರಾಮಯ್ಯ ರವರ ಎಲ್ಲಾ ಮಕ್ಕಳು	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	206/3	0	12	206/7	206/4	206/6	206/5
ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	-	206/4	0	29	206/3	207	206/6	206/5
	-	206/5	1	9	215/1	207	206/4, 206/3, 206/7 & 206/2	205/1, 205/6, 205/8 & 205/7
	-	206/6	1	5	215/1	208	206/1	206/4, 206/3, 206/7 & 206/2
ಶ್ರೀಮತಿ. ಸುನೀತಾ (ಬಿನ್ ಶ್ರೀಮತಿ. ನಾಗರತ್ನಮ್ಮ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	210/4A	0	26	239/4	210/4B & 211/3	210/1	211/1, 215/6, 216/1 & 216/6
ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	-	211/1	0	20	215/6	211/2	211/3 & 210/4A	212/2, 212/1 & 214/1
		212/1	0	21	214/1	212/2	211/1	213/1
		212/2	1	31	212/1	210/7	211/2 & 211/1	213/1
(i) ಶ್ರೀ. ರಾಮಯ್ಯ (ಬಿನ್ ದಿ. ಶ್ರೀ. ಚಿಕ್ಕಣ್ಣ), ಶ್ರೀಮತಿ. ಲಕ್ಕಮ್ಮ (ಕೊಂ ಶ್ರೀ. ರಾಮಯ್ಯ), ಶ್ರೀಮತಿ. ನಾಗರತ್ನ @ ರತ್ನಮ್ಮ, ಶ್ರೀ. ಮಂಜುನಾಥ ಮತ್ತು ಶ್ರೀಮತಿ. ನಳಿನ (ಬಿನ್ ಶ್ರೀ. ರಾಮಯ್ಯ) (ii) ಶ್ರೀ. ಸಿದ್ಧಗಂಗಯ್ಯ @ ಸಿದ್ದಪ್ಪ, ಶ್ರೀಮತಿ. ಲೀಲಾವತಿ (ಕೊಂ ಶ್ರೀ. ಸಿದ್ಧಗಂಗಯ್ಯ), ಶ್ರೀಮತಿ. ಯಶೋಧಾ ಮತ್ತು ಶ್ರೀ. ಹೇಮಂತ ಕುಮಾರ (ಬಿನ್ ಶ್ರೀ. ಸಿದ್ಧಗಂಗಯ್ಯ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	213/1	02	07	214/1 & 214/2	208	210/7, 212/2 & 212/1	213/3 & 213/2
ಶ್ರೀಮತಿ. ಕೆಂಪಮ್ಮ (ಬಿನ್ ದಿ. ಶ್ರೀ. ಗಂಗಯ್ಯ); ಶ್ರೀಮತಿ. ಶಾರದಮ್ಮ (ಕೊಂ ದಿ. ಶ್ರೀ. ತಿಮ್ಮರಾಯಪ್ಪ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು; ಶ್ರೀಮತಿ. ಲಕ್ಷ್ಮಮ್ಮ (ಕೊಂ ದಿ. ಶ್ರೀ. ಕೆಂಪಯ್ಯ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು; ಶ್ರೀಮತಿ. ಲಕ್ಕಮ್ಮ (ಕೊಂ ದಿ. ಶ್ರೀ ಹನುಮಯ್ಯ) ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು);	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	213/2	0	20	214/2	213/3	213/1	215/1
ಶ್ರೀಮತಿ. ಲಕ್ಕಮ್ಮ (ಕೊಂ ದಿ. ಶ್ರೀ ಹನುಮಯ್ಯ)ಮತ್ತು ಅವರ ಕಾನೂನು ಉತ್ತರಾಧಿಕಾರಿಗಳು);	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	213/3	1	25	213/2	208	213/1	206/1
ಶ್ರೀಮತಿ. ಸಿದ್ದಗಂಗಮ್ಮ, (ಕೊಂ ದಿ. ಶ್ರೀ. ಹನುಮಂತಯ್ಯ) ಶ್ರೀಮತಿ. ಗೀತಾ ಮತ್ತು ಶ್ರೀ. ಚಂದ್ರಶೇಖರ (ಬಿನ್ ಶ್ರೀಮತಿ. ಸಿದ್ದಗಂಗಮ್ಮ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	214/1	0	18	215/6	212/1 & 213/1	211/1	214/2
ಶ್ರೀ. ಗರುಡಯ್ಯ (ಬಿನ್ ದಿ. ಶ್ರೀ. ಗಂಗಯೆಲ್ಲಯ್ಯ) ಶ್ರೀಮತಿ. ಸೌಭಾಗ್ಯ, ಶ್ರೀ. ಜಿ. ಮಂಜುನಾಥ, ಶ್ರೀ. ಜಿ. ಚಂದ್ರಶೇಖರ (ಬಿನ್ ಶ್ರೀ. ಗರುಡಯ್ಯ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್‌ಚಂದ್ ಜೈನ್)	214/2	0	18	215/6	213/1, 213/2 & 215/1	214/1	215/6
ಶ್ರೀ. ಜಶ್ವಂತ್‌ರಾಜ ಮಾಣಿಕ್‌ಚಂದ್ ಮೆಹ್ತಾ (ಬಿನ್ ದಿ. ಶ್ರೀ. ಮಾಣಿಕ್‌ಚಂದ್ ಮೆಹ್ತಾ)	-	215/1	2	08	214/2, 215/6, 215/9, 215/10, 215/11, 215/12 & 215/3	206/1,206/6, 206/2,206/5, 205/7 & 205/3	213/3 & 213/2	204

ಎನ್.ಕ್.ದಿಲೀಪ್ / ಎಸ್. ರಘುನಂದನ
ತತ್ವಾ ಲೀಗಲ್ ಬೆಂಗಳೂರು, ವಕೀಲರು
ಫಿನಿಕ್ಸ್ ಪಿನಾಕಲ್
ನಂ.46, ಹಲಸೂರು ರಸ್ತೆ, ಬೆಂಗಳೂರು – 560042

ದಿನಾಂಕ : 14.04.2023

ನಗರದಲ್ಲಿ ಇಂದು

ಪದವಿ ಪತ್ರ ವಿತರಣಾ ಸಮಾರಂಭ: ಮುಖ್ಯ ಅತಿಥಿ: ಟಿ.ಎನ್. ಶ್ರೀನಿವಾಸ್, ಗೌರವ ಅತಿಥಿ: ನಾಗನಗೌಡ ಎಸ್.ಜೆ., ಅಧ್ಯಕ್ಷತೆ: ರಾಜಗೋಪಾಲ ನಾಯ್ಡು, ಉಪಸ್ಥಿತಿ: ಆರ್. ಲೀಲಾ ಶಂಕರ್ ರಾವ್, ಟಿ. ನೀರಜಾಕ್ಷುಲು ನಾಯ್ಡು, ಆಯೋಜನೆ ಹಾಗೂ ಸ್ಥಳ: ಕೆ.ಎಸ್. ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್, ಮಲ್ಲಸಂದ್ರ, ಬೆಳಿಗ್ಗೆ 10

ಇಂಗ್ಲಿಷ್ ಅನುವಾದಿತ ‘ಮಂಕುತಿಮ್ಮನ ಕಗ್ಗ’ ಕೃತಿ ಬಿಡುಗಡೆ: ಅತಿಥಿಗಳು: ಪ್ರೊ.ಪ್ರಮೋದ್ ಮುತಾಲಿಕ್, ಪ್ರೊ. ಮನು ಎನ್. ಚಕ್ರವರ್ತಿ, ಆಯೋಜನೆ: ಓಂಕಾರ ಪ್ರಕಾಶನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ, ಬಸವನಗುಡಿ, ಬೆಳಿಗ್ಗೆ 10.30

ದತ್ತಿ ಉಪನ್ಯಾಸ: ‘ಇಂಗ್ಲಿಷ್‌ನಲ್ಲಿ ಸಾಹಿತ್ಯ ಕೃಷಿ ಮಾಡಿದ ಕನ್ನಡ ಕವಿಗಳು’, ಉಪನ್ಯಾಸಕರು: ಉದಯರವಿ ಶಾಸ್ತ್ರಿ, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸಿಂಫೋನಿ ಡಾ. ರಾಜ್ ಉತ್ಸವ: ಉದ್ಘಾಟನೆ: ರಾಘವೇಂದ್ರ ರಾಜ್‌ಕುಮಾರ್, ಅತಿಥಿಗಳು: ಸಾ.ರಾ. ಗೋವಿಂದು, ಶಿವರಾಮೇಗೌಡ, ಮುರಳೀಧರ್, ಮಂಜುನಾಥ ಆರಾಧ್ಯ, ಶಂಕರ, ನೀಲಕಂಠ, ಆಯೋಜನೆ: ಸಿಂಫೋನಿ ಸ್ವರ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30



ಡಾ. ರಾಜ್‌ಕುಮಾರ್

ಎಚ್‌.ಡಿ. ದೇವೇಗೌಡ ಅವರ ಬದುಕು ಮತ್ತು ದುಡಿಮೆ ಕುರಿತ ‘ನೇಗಿಲ ಗೆರೆಗಳು’ ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ಎಸ್.ಎಸ್. ಮೀನಾಕ್ಷಿಸುಂದರಂ, ಚಿರಂಜೀವಿ ಸಿಂಗ್, ಎ.ಆರ್. ಶ್ರೀನಿವಾಸಮೂರ್ತಿ, ಡಾ.ಸಿ.ಎನ್. ಮಂಜುನಾಥ್, ಮೂಲ ಲೇಖಕರು: ಸುಗತ ಶ್ರೀನಿವಾಸರಾಜು, ಕನ್ನಡಕ್ಕೆ ಅನುವಾದ: ರೋಸಿ ಡಿಸೋಜಾ, ಆಯೋಜನೆ: ಪಾರದರ್ಶಕ ಮಾಧ್ಯಮ ಸಂಸ್ಥೆ, ಬುಕ್‌ವರ್ಮ್ ಪುಸ್ತಕ ಮಳಿಗೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 6

ನೃತ್ಯೋತ್ಸವ: ಪೂರ್ವಧನಶ್ರೀ, ಅನುಪಮಾ ಕೈಲಾಶ್, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂ.ಇ.ಎಸ್. ಸಭಾಂಗಣ, ಮಲ್ಲೇಶ್ವರ, ಸಂಜೆ 6.15

ತೊ.ನಂಜುಂಡಸ್ವಾಮಿ ನೆನಪಿನ ಪ್ರಶಸ್ತಿ ಪ್ರದಾನ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಜಿ.ಟಿ. ಸುಭಾಷ್, ಪ್ರಶಸ್ತಿ ಸ್ವೀಕರಿಸುವವರು: ಚಂದ್ರಕುಮಾರ್ ಸಿಂಗ್, ಆಯೋಜನೆ: ತೊ. ನಂಜುಂಡಸ್ವಾಮಿ ಗೆಳೆಯರ ಬಳಗ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30

ನಾಟಕ ಪ್ರದರ್ಶನ: ‘ಹಿಂಗ್ ಮಾಡಿದ್ರೆ ಹೆಂಗೆ’, ರಚನೆ: ನಾಗವೇಣಿ ರಂಗನ್, ನಿರ್ದೇಶನ: ಬಾಶ್ ರಾಘವೇಂದ್ರ, ಸಂಗೀತ: ಮೇಘನಾ ಹಳಿಯಾಳ, ಆಯೋಜನೆ: ಅಂತರಂಗ ಬಹಿರಂಗ ತಂಡ, ಸ್ಥಳ: ಡಾ.ಸಿ.ಎನ್. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 7.30

ರಾಮೋತ್ಸವ ವಿಶೇಷ

ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ಅನಂತಕೃಷ್ಣ, ಬಿ.ಸಿ. ಮಂಜುನಾಥ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಪಾಲ್‌ಘಾಟ್ ರಾಮಪ್ರಸಾದ್, ಪಿಟೀಲು: ತಿರುವಂಡ್ರಮ್ ಸಂಪತ್, ಮೃದಂಗ: ಜೆ. ವೈದ್ಯನಾಥನ್, ಮೋರ್ಸಿಂಗ್: ರಾಜಶೇಖರ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಕೊಳಲು: ಹೇರಂಬ, ಹೇಮಂತ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಅಕ್ಷಯ್ ಆನಂದ್, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಇ–ಮೇಲ್: nagaradalli_indu@prajavani.co.in

‘ಬಡವರ ಮೇಲೆ ತೆರಿಗೆ ಭಾರ’

ಯಲಹಂಕ: ‘ಶ್ರೀಮಂತರು ಮತ್ತು ಬಡವರ ನಡುವಿನ ಆಸ್ತಿ ಮತ್ತು ಆದಾಯದ ಅಂತರ ಕಡಿಮೆಯಾಗಬೇಕೆಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಆದರೆ, ಇಂದು ಶ್ರೀಮಂತರ ಮೇಲೆ ತೆರಿಗೆ ಕಡಿಮೆ ಮಾಡಿ ಅದನ್ನೆಲ್ಲಾ ಬಡವರ ಮೇಲೆ ವಿಧಿಸುವ ಮೂಲಕ ಅಂಬೇಡ್ಕರ್ ಅವರ ತತ್ವಗಳ ವಿರುದ್ಧ ದಿಕ್ಕಿನಲ್ಲಿ ದೇಶ ಕೊಂಡೊಯ್ಯುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣಬೈರೇಗೌಡ ಹೇಳಿದರು.

ಜಕ್ಕೂರು ಗ್ರಾಮದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಅಗತ್ಯವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ಬಡತನದಂತಹ ಸಮಸ್ಯೆಗಳು ಹೆಚ್ಚಾಗಿವೆ’ ಎಂದರು.

ದ.ಸಂ.ಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್‌ನ ಅಧ್ಯಕ್ಷ ರವಿಕುಮಾರ್, ಮಾಜಿ ಸಚಿವ ಎಂ.ಆರ್.ಸೀತಾರಾಂ, ಪಾಲಿಕೆ ಮಾಜಿ ಸದಸ್ಯರಾದ ಪಿ.ವಿ.ಮಂಜುನಾಥ ಬಾಬು, ಆನಂದ್, ವಕೀಲ ಎಸ್.ವಿ. ರಾಮಚಂದ್ರಪ್ಪ ಇದ್ದರು.

ಸಾಮಾಜಿಕ ನ್ಯಾಯ ದೊರೆತರೆ ಪ್ರಜಾಪ್ರಭುತ್ವ ಉಳಿಯಲಿದೆ: ವಿ.ಗೋಪಾಲಗೌಡ

ಶೋಷಿತರ ಧ್ವನಿ ಅಂಬೇಡ್ಕರ್ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೋಷಿತರು, ಬಡವರ ಧ್ವನಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ನಗರದಲ್ಲಿ ಶುಕ್ರವಾರ ಆಚರಿಸಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿ, ‘ದುರ್ಬಲರಿಗೆ, ದೀನ ದಲಿತರಿಗೆ, ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ದೊರೆತರೆ ಪ್ರಜಾಪ್ರಭುತ್ವ ಉಳಿಯುತ್ತದೆ’ ಎಂದರು.

ಗೊಲ್ಲಹಳ್ಳಿ ಶಿವಪ್ರಸಾದ್ ಅವರು, ‘ಜಾತಿ, ವರ್ಗ, ವರ್ಣ ಮೀರಿದ ವ್ಯಕ್ತಿಯನ್ನು ಜಾತಿಗೆ ಸೀಮಿತ ಮಾಡುತ್ತಿದ್ದಾರೆ’ ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ಎಂ.ಜಯಕರ್, ಕುಲಸಚಿವ ಎನ್. ಮಹೇಶ್ ಬಾಬು, ಸಿಂಡಿಕೇಟ್ ಸದಸ್ಯ ಡಾ.ಕೆ.ಸುಧಾಕರ್, ಎಂ.ಉದಯ ಕುಮಾರ್ ಇದ್ದರು.

ಯಶವಂತಪುರದಲ್ಲಿ ಅಂಬೇಡ್ಕರ್ ಪ್ರತಿಮೆಗೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹಾಗೂ ಸಚಿವ ಸಿ.ಎನ್. ಅಶ್ವತ್ಥ್ ನಾರಾಯಣ ಮಾಲಾರ್ಪಣೆ ಮಾಡಿದರು.

‘ರಾಜ್ಯ ಬಿಜೆಪಿ ಸರ್ಕಾರವು ದಲಿತರ ಏಳ್ಗೆಯ ಗುರಿಯೊಂದಿಗೆ ಮೀಸಲಾತಿ ಹೆಚ್ಚಿಸಿದೆ. ಒಳಮೀಸಲಾತಿಯನ್ನು ಜಾರಿಗೆ ತಂದಿದೆ’ ಎಂದು ಅಶ್ವತ್ಥ ನಾರಾಯಣ ಹೇಳಿದರು.

‘ಬಿಜೆಪಿ ಸರ್ಕಾರ ಪೌರಕಾರ್ಮಿಕರ ಉದ್ಯೋಗ ಕಾಯಂಗೊಳಿಸಿದೆ. ಅವರಿಗೆ ಘನತೆ ತಂದುಕೊಡುವ ಆಶಯದಿಂದ ವಿಧಾನಸೌಧದ ಸಮೀಪದಲ್ಲೇ ‘ಶ್ರಮಿಕರ ಭವನ’ ನಿರ್ಮಿಸಲಾಗುತ್ತಿದೆ. ಅಲ್ಲದೇ, ದಲಿತರ ಪರವಾಗಿ ಪಿಟಿಸಿಎಲ್ ಮತ್ತು ದೌರ್ಜನ್ಯ ತಡೆ ಕಾಯ್ದೆಗಳನ್ನು ಶಕ್ತಿಯುತಗೊಳಿಸಲಾಗಿದೆ. ಯಶವಂತಪುರ ಮತ್ತು ಮತ್ತೀಕೆರೆಗಳಲ್ಲಿ ದಲಿತ ಸಮುದಾಯದ ಬಂಧುಗಳಿಗೆ ಸಮರ್ಪಕ ಸೌಲಭ್ಯಗಳನ್ನು ಒದಗಿಸಲಾಗಿದೆ’ ಎಂದು ಹೇಳಿದರು. ಮುಖಂಡರಾದ ಸುರೇಶ್ ಗೌಡ, ಜೈಪಾಲ್, ಕಾವೇರಿ ಕೇದಾರನಾಥ ಉಪಸ್ಥಿತರಿದ್ದರು.

ಬನಶಂಕರಿಯಲ್ಲಿ ರಾಜ್ಯ ದಲಿತ ಸೇನೆಯಿಂದ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಕಲಾವಿದ ಡಾ.ಎ.ಆರ್. ಗೋವಿಂದಸ್ವಾಮಿ ನಾಯಕ್, ಸೇನೆಯ ಅಧ್ಯಕ್ಷ ಬನಶಂಕರಿ ನಾಗು, ಆಸೀಫ್ ಇದ್ದರು.

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ ನಡೆದ ಜಯಂತಿಯಲ್ಲಿ ಬಿಜೆಪಿ ಮುಖಂಡ ಡಾ.ಅರುಣ್ ಸೋಮಣ್ಣ ಮಾತನಾಡಿ, ‘ಎಲ್ಲ ಧರ್ಮ ಮತ್ತು ವರ್ಗದವರು ಸರಿಸಮಾನವಾಗಿ ಬಾಳಲು ಹಾಗೂ ಸಹೋದರತ್ವದಲ್ಲಿ ಬದುಕಲು ಸಂವಿಧಾನದಲ್ಲಿ ಅವಕಾಶವಿದೆ’ ಎಂದು ಅವರು ಹೇಳಿದರು.

‘ರಾಜಕಾರಣ ನಿಂತ ನೀರಲ್ಲ. ಜನಸೇವೆ ಮಾಡಲು ರಾಜಕೀಯ ಕ್ಷೇತ್ರ ಉತ್ತಮ ವೇದಿಕೆ’ ಎಂದು ಅವರು ನುಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನಸೌಧದ ಮುಂಭಾಗದ ಅಂಬೇಡ್ಕರ್ ಪ್ರತಿಮೆವರೆಗೆ ಬೆಂಗಳೂರು ಸಿಟಿ ಕಾರ್ಪೊರೇಷನ್ ವರ್ಕರ್ಸ್ ಫೆಡರೇಷನ್ ವತಿಯಿಂದ ನಡೆದ ಚಂಡೆ ವಾದನ ಗಮನ ಸೆಳೆಯಿತು. (ಎಡಚಿತ್ರ) ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಪೌರ ಕಾರ್ಮಿಕರಿಗೆ ಸಿಹಿ ವಿತರಿಸಿದರು

‘ಅಂಬೇಡ್ಕರ್ ಆರ್ಥಿಕ ಚಿಂತನೆಗಳು ಪ್ರಸ್ತುತ’

‘ದೇಶದ ಪ್ರತಿಯೊಬ್ಬ ಪ್ರಜೆಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಯ ಗುರಿ ಪೂರ್ಣಗೊಂಡಾಗ ಮಾತ್ರ ಪ್ರಜಾಪ್ರಭುತ್ವ ಅರ್ಥಪೂರ್ಣ ಆಗಲಿದೆಯೆಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು’ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ, ‘ಸ್ತ್ರೀ ಸಮಾನತೆಗೆ ವಿಶೇಷ ಒತ್ತು ನೀಡಿದ್ದ ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳು ಇಂದಿಗೂ ಅತ್ಯಂತ ಪ್ರಸ್ತುತ’ ಎಂದರು.

ಜುಪಿಟರ್ ನ ಐಸಿ ಮೂನ್ ಎಕ್ಸ್ ಪ್ಲೋರರ್ (ಜ್ಯೂಸ್) ಮಿಷನ್ ಬಿಡುಗಡೆ ಮಾಡುತ್ತಿದೆ...

‘ದೇಶದ ಉತ್ತರ, ಪಶ್ಚಿಮ ಗಡಿಗಳು ಸುರಕ್ಷಿತವಾಗಿಲ್ಲ’



ಮೋಹನ್ ಭಾಗವತ್

ಅಹಮದಾಬಾದ್ (ಪಿಟಿಐ): ಭಾರತವು ಆರ್ಥಿಕವಾಗಿ ಪ್ರಗತಿ ಸಾಧಿಸುತ್ತಿದೆ. ಆದರೆ, ಜನರು ನೆಮ್ಮದಿಯಿಂದ ನಿದ್ದೆ ಮಾಡುವಷ್ಟರ ಮಟ್ಟಿಗೆ ದೇಶದ ಉತ್ತರ ಹಾಗೂ ಪಶ್ಚಿಮ ಗಡಿಗಳು ಸುರಕ್ಷಿತವಾಗಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಶುಕ್ರವಾರ ಹೇಳಿದರು.

ಆರ್‌ಎಸ್‌ಎಸ್ ವತಿಯಿಂದ ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಪರೋಕ್ಷವಾಗಿ ಪಾಕಿಸ್ತಾನ ಹಾಗೂ ಚೀನಾ ಕುರಿತು ಈ ಮಾತುಗಳನ್ನಾಡಿದರು.

‘ಗಡಿಗಳಲ್ಲಿರುವ ನಮ್ಮ ಸೈನಿಕರು ಮಾತ್ರವಲ್ಲ, ಪ್ರಜೆಗಳು ಕೂಡ ಎಚ್ಚರದಿಂದ ಇರಬೇಕು’ ಎಂದು ಹೇಳಿದರು.

‘ಒಂದೆಡೆ ದೇಶವು ಅಭಿವೃದ್ಧಿ ಹೊಂದುತ್ತಿದ್ದರೆ, ಮತ್ತೊಂದೆಡೆ ಪಟ್ಟಭದ್ರಹಿತಾಸಕ್ತಿಗಳು ಭಾರತದ ಬಗ್ಗೆ ಸುಳ್ಳು ಹಬ್ಬಿಸುತ್ತಿವೆ. ಇಂಥ ಶಕ್ತಿಗಳ ವಿರುದ್ಧ ‘ಬೌದ್ಧಿಕ ಹೋರಾಟ’ ನಡೆಸುವುದು ಇಂದಿನ ತುರ್ತು’ ಎಂದರು.

‘ಜಿ–20 ಗುಂಪಿನ ಅಧ್ಯಕ್ಷ ಸ್ಥಾನ ಭಾರತಕ್ಕೆ ಸಿಕ್ಕಿರುವುದು ಜನರಲ್ಲಿ ದೇಶಭಕ್ತಿ ಹೆಚ್ಚುತ್ತಿರುವುದಕ್ಕೆ ಸಾಕ್ಷಿ. ಇಷ್ಟಾದರೂ ದೇಶದ ಮುಂದೆ ಹಲವಾರು ಸವಾಲುಗಳು ಇವೆ’ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನಸೌಧದ ಮುಂಭಾಗದ ಅಂಬೇಡ್ಕರ್ ಪ್ರತಿಮೆವರೆಗೆ ದಲಿತ ಸಂಘರ್ಷ ಸಮಿತಿ ಸದಸ್ಯರು ಶುಕ್ರವಾರ ಕಾಲ್ನಡಿಗೆ ಜಾಥಾ ನಡೆಸಿದರು

– ಪ್ರಜಾವಾಣಿ ಚಿತ್ರ

‘ಸಮಾನ ಅವಕಾಶ ಕಲ್ಪಿಸಿದ ಸಂವಿಧಾನ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ವಿಶ್ವದಾದ್ಯಂತ ದೇವರ ಮೂರ್ತಿಗಳಿಗಿಂತ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳು ಹೆಚ್ಚಿವೆ. ತುಳಿತಕ್ಕೊಳಗಾದವರಿಗೆ ಸಮಾನ ಅವಕಾಶ ಹಾಗೂ ಹಕ್ಕುಗಳನ್ನು ಸಂವಿಧಾನ ಕಲ್ಪಿಸಿಕೊಟ್ಟಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಸಂವಿಧಾನ ತಿದ್ದುಪಡಿ ಬಗ್ಗೆ ಭಾಷಣ ಮಾಡುವ ಬಿಜೆಪಿಯವರು ಸಂವಿಧಾನ ವಿರೋಧಿಗಳು. ಸಂವಿಧಾನಕ್ಕೆ ವಿರುದ್ಧವಾಗಿ ಆಡಳಿತ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಸಂವಿಧಾನದ ಮೂಲಕ ಅಂಬೇಡ್ಕರ್ ಅವರು ದೇಶಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಅವರು ಹೇಳಿದರು.

ಮುಖಂಡರಾದ ಎಂ.ವೀರಪ್ಪ ಮೊಯಿಲಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಸದಸ್ಯ ರವಿ, ಮಾಜಿ ಸದಸ್ಯ ಬಿಎಂಎಲ್ ಕಾಂತರಾಜು, ಎಚ್.ಆಂಜನೇಯ, ಕೆ.ಎಚ್.ಮುನಿಯಪ್ಪ, ಎಚ್. ಎಂ.ರೇವಣ್ಣ, ಮೋಟಮ್ಮ ಇದ್ದರು.

ಅಂಬೇಡ್ಕರ್ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ಅಭ್ಯರ್ಥಿ ಎನ್.ಶ್ರೀನಿವಾಸ್, ಡಿ.ಕೆ.ಶಿವಕುಮಾರ್ ಇದ್ದರು

ಪಿಂಚಣಿ ಸುಧಾರಣೆಗೆ ಫ್ರಾನ್ಸ್ ಕೋರ್ಟ್ ಅಸ್ತು

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಅವರು ವ್ಯಾಪಕ ವಿರೋಧದ ನಡುವೆಯೂ ಜಾರಿಗೆ ತಂದ ನೂತನ ಪಿಂಚಣಿ ಯೋಜನೆಗೆ ದೇಶದ ಸಾಂವಿಧಾನಿಕ ನ್ಯಾಯಾಲಯ ಶುಕ್ರವಾರ ಅನುಮೋದನೆ ನೀಡಿದೆ.

ಒಂಬತ್ತು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ನ್ಯಾಯಾಲಯವು, ಮ್ಯಾಕ್ರನ್ ಅವರ ಪಿಂಚಣಿ ಸುಧಾರಣೆಯ ಪ್ರಮುಖ ಅಂಶಗಳನ್ನು ಅನುಮೋದಿಸಿತು. ನೌಕರರ ನಿವೃತ್ತಿ ವಯಸ್ಸನ್ನು 62ರಿಂದ 64ಕ್ಕೆ ಏರಿಸುವುದು ಸೇರಿ ಹಲವು ಶಿಫಾರಸುಗಳ ಜಾರಿಗೆ ಇದು ದಾರಿ ಮಾಡಿಕೊಡಲಿದೆ. ನೂತನ ಪಿಂಚಣಿ ಯೋಜನೆ ವಿರೋಧಿಸಿ ದೇಶದಾದ್ಯಂತ ತಿಂಗಳುಗಟ್ಟಲೆ ಪ್ರತಿಭಟನೆಗಳು ನಡೆದಿದ್ದವು.

First Time in BINNY MILL GROUND Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru -23
AQUA TUNNEL SHOW

VISIT TODAY | Daily : 4pm - 9pm | Call : 8904727123

‘ಶೇ 75ಕ್ಕೆ ಹೆಚ್ಚಿಸಿದರೆ ಸಮಸ್ಯೆಗೆ ಪರಿಹಾರ’

ಮೀಸಲಾತಿ ಪ್ರಮಾಣ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ಪ್ರಮಾಣವನ್ನು ಕನಿಷ್ಠ ಶೇಕಡ 75ಕ್ಕೆ ಹೆಚ್ಚಿಸಿ, ಪ್ರತಿಯೊಂದು ಜಾತಿಗಳಿಗೆ ಅವುಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಿದರೆ ಈಗಿನ ಮೀಸಲಾತಿ ವಿವಾದಕ್ಕೆ ಶಾಶ್ವತ ಪರಿಹಾರ ಸಿಗಲಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

‘ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬಂದರೆ ಒಟ್ಟು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುತ್ತೇವೆ. ಎಲ್ಲ ಜಾತಿ ಜನರಿಗೆ ಅವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ಕಲ್ಪಿಸುತ್ತೇವೆ. ಯಾರ ಮೀಸಲಾತಿಯನ್ನೂ ರದ್ದುಗೊಳಿಸುವುದಿಲ್ಲ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಕೇಂದ್ರ ಸರ್ಕಾರವು ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡಿ ಶೇ 50ರ ಮಿತಿಯನ್ನು ಉಲ್ಲಂಘಿಸಿದೆ. ಕೇಂದ್ರವು ಒಟ್ಟು ಮೀಸಲಾತಿ ಪ್ರಮಾಣ ಹೆಚ್ಚಿಸಲು ಅನುಕೂಲ ಆಗುವಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕು’ ಎಂದು ಆಗ್ರಹಿಸಿದ್ದಾರೆ.

‘ಮೀಸಲಾತಿಗೆ ಶೇ 50ರ ಮಿತಿ ಎನ್ನುವುದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶದ ಭಾಗವೇ ಹೊರತು, ಅದು ಸಾಂವಿಧಾನಿಕವಾದುದು ಅಲ್ಲ. ವಿಶೇಷ ಪ್ರಕರಣದಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬಹುದೆಂದು ಅದೇ ಆದೇಶದಲ್ಲಿ ಹೇಳಲಾಗಿದೆ’ ಎಂದು ಹೇಳಿದ್ದಾರೆ.

‘ಮುಸ್ಲಿಂ ಮೀಸಲಾತಿ ರದ್ದು ಪಡಿಸಿರುವುದಕ್ಕೆ ಚುನಾವಣಾ ಲಾಭದ ದುರುದ್ದೇಶ ಬಿಟ್ಟರೆ ಬೇರೆ ಕಾರಣಗಳು ಇರಲಿಲ್ಲ. ಮುಸ್ಲಿಂ ಮೀಸಲಾತಿ ರದ್ದತಿ ಆದೇಶವು ರದ್ದಾದರೆ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಕ್ಕೆ ನೀಡಿರುವ ಹೆಚ್ಚುವರಿ ಮೀಸಲಾತಿಯೂ ರದ್ದಾಗುತ್ತದೆ. ಅರ್ಹ ಜಾತಿಗಳಿಗೆ ಮೀಸಲಾತಿ ನೀಡುವುದಕ್ಕೆ ಕಾಂಗ್ರೆಸ್‌ನ ವಿರೋಧ ಇಲ್ಲ. ಆದರೆ, ಕಲ್ಪಿತ ಸುಳ್ಳುಗಳ ಮೂಲಕ ಬಿಜೆಪಿ ಕನ್ನಡಿಯೊಳಗಿನ ಗಂಟು ತೋರಿಸಿ ಜನರನ್ನು ತಪ್ಪು ದಾರಿಗೆಳೆಯಲು ಹೊರಟಿದೆ’ ಎಂದಿದ್ದಾರೆ.

‘ಕಾಂತರಾಜ್ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗವು ಮನೆಮನೆಗೆ ತೆರಳಿ ವೈಜ್ಞಾನಿಕವಾಗಿ ನಡೆಸಿದ್ದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ರಾಜ್ಯ ಸರ್ಕಾರದ ಕೈಯಲ್ಲಿದೆ. ಆ ವರದಿ ಆಧಾರದಲ್ಲಿ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯ ಕೂಡಾ ಮಾನ್ಯತೆ ನೀಡಲಿದೆ’ ಎಂದು ಹೇಳಿದ್ದಾರೆ.

ಮೀಸಲಾತಿ ಹೆಸರಲ್ಲಿ ಮಾಡಿದ ದ್ರೋಹ ಬಯಲಾಗಿದೆ: ಸುರ್ಜೇವಾಲಾ

ಬೆಂಗಳೂರು: ಮೀಸಲಾತಿ ಹೆಚ್ಚಿಸುವ ಹೆಸರಿನಲ್ಲಿ ಲಿಂಗಾಯತರು, ಒಕ್ಕಲಿಗರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ರಾಜ್ಯದ ಬಿಜೆಪಿ ಸರ್ಕಾರ ಮಾಡಿರುವ ದ್ರೋಹವು ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ ಬಯಲಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೀಸಲಾತಿ ಹೆಸರಿನಲ್ಲಿ ನಕಲಿ ತೀರ್ಮಾನ ಮಾಡುವ ಮೂಲಕ ಬಿಜೆಪಿಯು ಡಾ.ಬಿ. ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ರಾಜ್ಯದ ಜನರಿಗೆ ಕ್ಷಮಿಸಲಾಗದ ದ್ರೋಹ ಮಾಡಿದೆ’ ಎಂದು ಆರೋಪಿಸಿದರು.

22ರಿಂದ ‘ಎಡ್ಯುವರ್ಸ್’ ಶಿಕ್ಷಣ ಮೇಳ

ಪ್ರಜಾವಾಣಿ ವಾರ್ತೆ

ಎಡ್ಯುವರ್ಸ್

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್: ಜ್ಞಾನ ದೇಗುಲ–2023’ ಇದೇ ತಿಂಗಳು ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ನಡೆಯಲಿದೆ.

22 ಮತ್ತು 23ರಂದು ಇಲ್ಲಿನ ಅರಮನೆ ಮೈದಾನದ ತ್ರಿಪುರ ವಾಸಿನಿ ಆವರಣದಲ್ಲಿ ಮೇಳ ಆಯೋಜಿಸಲಾಗಿದೆ. 29 ಮತ್ತು 30ರಂದು ಹುಬ್ಬಳ್ಳಿಯ ರಾಯ್ಕರ್ ಪ್ರದರ್ಶನ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಹಾಗೂ ಅಂತಃಶಕ್ತಿಯ ಬಲವರ್ಧನೆಗಾಗಿ ಉತ್ತಮ ಮಾರ್ಗದರ್ಶನ ಒದಗಿಸುವುದು ಈ ಶೈಕ್ಷಣಿಕ ಮೇಳದ ಉದ್ದೇಶ. 50ಕ್ಕೂ ಹೆಚ್ಚು ಅಗ್ರಗಣ್ಯ ಶೈಕ್ಷಣಿಕ ಸಂಸ್ಥೆಗಳು ಈ ಮೇಳದಲ್ಲಿ ಭಾಗಿಯಾಗಲಿದ್ದು, ಪಿಯುಸಿ ಬಳಿಕ ಲಭ್ಯವಿರುವ ಕೋರ್ಸ್‌ಗಳು, ಅವಕಾಶಗಳ ಬಗ್ಗೆ ಮಾಹಿತಿ ಸಿಗಲಿದೆ. ಸಿಇಟಿ, ನೀಟ್, ಕಾಮೆಡ್–ಕೆ ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ನೇರ ಸಂವಹನದ ಅವಕಾಶ ದೊರೆಯಲಿದೆ.

ವೈದ್ಯಕೀಯ, ದಂತ, ನೀಟ್ ಮತ್ತು ಕಾಮೆಡ್–ಕೆ ಕುರಿತು ವೃತ್ತಿ ಮಾರ್ಗದರ್ಶನ ದೊರೆಯಲಿದೆ. ಶಿಕ್ಷಣ ತಜ್ಞರ ಸಾರಥ್ಯದಲ್ಲಿ ನಡೆಯಲಿರುವ ಈ ಬೃಹತ್ ಮೇಳದಲ್ಲಿ, ಶೈಕ್ಷಣಿಕ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಸಿಗಲಿದೆ.

ಶಿಕ್ಷಣ ಸಾಲ ಯೋಜನೆಯ ಜತೆಗೆ ವಿಶೇಷ ಕೋರ್ಸ್‌ಗಳ ಮಾಹಿತಿಯೂ ದೊರೆಯಲಿದೆ. ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ಕಾಲೇಜುಗಳ ಮಳಿಗೆಗಳು ಮೇಳದಲ್ಲಿ ಇರಲಿವೆ. ಕಾಲೇಜಿನಲ್ಲಿನ ಕೋರ್ಸ್‌ಗಳ ಮಾಹಿತಿ, ಶುಲ್ಕ ವಿವರ, ಕೋರ್ಸ್ ಅಧ್ಯಯನದಿಂದ ಭವಿಷ್ಯದಲ್ಲಿ ಸಿಗುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ದೊರೆಯುತ್ತದೆ.

ನಗರದ ಜರಗನಹಳ್ಳಿಯ ಸೀತಾರಾಮ ಲಕ್ಷ್ಮಣ ಹನುಮಂತ ದೇವಸ್ಥಾನದ ಬ್ರಹ್ಮೋತ್ಸವ ಶುಕ್ರವಾರ ವೈಭವದಿಂದ ನಡೆಯಿತು

ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಏಳು ರೋಗಿಗಳಿಗೆ ನೆರವಾದ ಬಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಾಂಗ ದಾನದ ಮೂಲಕ ಇಲ್ಲಿನ 15 ವರ್ಷದ ಬಾಲಕನೊಬ್ಬ ಏಳು ರೋಗಿಗಳಿಗೆ ನೆರವಾಗಿದ್ದಾನೆ.

ಮಾರ್ಚ್ 31ರ ರಾತ್ರಿ 8.30ರ ವೇಳೆ ನಗರದ ಬಿಎಚ್‌ಇಎಲ್ ಬಡಾವಣೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡ ಬಾಲಕನಿಗೆ, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಗೆ ಕರೆದೊಯ್ದು, ಪರೀಕ್ಷಿಸಲಾಯಿತು. ಏ.3ರಂದು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ಘೋಷಿಸಿದರು.

ಕುಟುಂಬದ ಸಮ್ಮತಿ ಮೇರೆಗೆ ಅಂಗಾಂಗ ದಾನ ಪ್ರಕ್ರಿಯೆ ನಡೆಸಲಾಯಿತು. ಎರಡು ಮೂತ್ರಪಿಂಡಗಳು, ಶ್ವಾಸಕೋಶ, ಹೃದಯದ ಕವಾಟಗಳು, ಯಕೃತ್ತು, ಕಣ್ಣು ಹಾಗೂ ಸಣ್ಣ ಕರುಳನ್ನು ಬೆಂಗಳೂರು ಹಾಗೂ ಚೆನ್ನೈನ ಆಸ್ಪತ್ರೆಗಳಿಗೆ ರವಾನಿಸಲಾಯಿತು. ಬಾಲಕನ ಸಣ್ಣ ಕರುಳನ್ನು ಸ್ಪರ್ಶ್ ಆಸ್ಪತ್ರೆಯಿಂದ ಹೆಲಿಕಾಪ್ಟರ್ ಮೂಲಕ ಚೆನ್ನೈಗೆ ಕಳುಹಿಸಲಾಯಿತು. ಕೇವಲ 129 ನಿಮಿಷಗಳಲ್ಲಿ ಅಂಗಾಂಗ ಸಾಗಾಟ ನಡೆಯಿತು ಎಂದು ಆಸ್ಪತ್ರೆ ತಿಳಿಸಿದೆ.

ಸಹಜ್,ಸುಖದ್,ಸುಗಮೂರ್‌ಸುರಕ್ಷಿತ್
ಚಾರ್ ದಾಮ್ ಯಾತ್ರೆ
Uttarakhand Simply Heaven!

ಮಾಡಬೇಕಾದವುಗಳು
- ನಿಮ್ಮೊಂದಿಗೆ ಸಾಕಷ್ಟು ಉಣ್ಣೆಯ ಉಡುಪುಗಳನ್ನು (ವುಲನ್ ಗಾರ್ಮೆಂಟ್‌ಗಳನ್ನು) ಒಯ್ಯಿರಿ
- ಮಳೆಯಿಂದ ರಕ್ಷಣೆ ನೀಡುವ ಸಾಧನಗಳಾದಂತಹ -ಛತ್ರಿ ,ರೇನ್‌ಕೋಟ್‌ಗಳು ಮುಂತಾದವುಗಳನ್ನು ಒಯ್ಯಿರಿ
- ನಿಮ್ಮ ಔಷಧಗಳು,ಯಾವುದಾದರು ಇದ್ದರೆ , ದಯವಿಟ್ಟು ನಿಮ್ಮೊಂದಿಗೆ ಅವುಗಳನ್ನು ಒಯ್ಯಿರಿ .
- ದಯವಿಟ್ಟು ದೇಗುಲದಲ್ಲಿ ರಾಜ್ಯದ ಪ್ರಾಧಿಕಾರಗಳ ಸೂಚನೆಗಳನ್ನು ಅನುಸರಿಸಿ
- ನೀವು ವಾಹನದಲ್ಲಿ ಪ್ರಯಾಣಿಸುತ್ತಿದ್ದರೆ, ಉತ್ತರಖಾಂಡದ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನಿಂದ ಟ್ರಿಪ್ ಕಾರ್ಡ್ ಅನ್ನು ನೀಡಲಾಗಿದೆಯೇ ಎಂದು ದಯವಿಟ್ಟು ಖಚಿತಪಡಿಸಿಕೊಳ್ಳಿ.

ಮಾಡಬಾರದವುಗಳು
- ನೀವು ಯಾತ್ರೆಗಾಗಿ ನೋಂದಾಯಿಸದಿದ್ದರೆ ಪ್ರಯಾಣಿಸಬೇಡಿ.
- ನಿಮ್ಮ ಆರೋಗ್ಯ ಸರಿ ಇಲ್ಲದಿದ್ದರೆ ಪ್ರಯಾಣಿಸಬೇಡಿ
- ದೇಗುಲದಲ್ಲಿ ದರ್ಶನವನ್ನು ಮಾಡಿಸುವುದಾಗಿ ಹೇಳಿಕೊಂಡು ತಿರುಗುವ ಅನಧಿಕೃತ ವ್ಯಕ್ತಿಗಳ ಬಲೆಗೆ ಬೀಳಬೇಡಿ.

ನೋಂದಣಿಯ ವಿಧಾನಗಳು
registrationandtouristcare.uk.gov.in
+91-8394833833 (Type ‘yatra’ on WhatsApp)
ಶುಲ್ಕರಹಿತ (ಟೋಲ್ ಫ್ರೀ) ನಂಬರ್ 0135 1364
touristcareuttarakhand ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ
Google play | Download on the App Store

ಪ್ರಮುಖ ಮಾಹಿತಿ
ಧಾಮಗಳಲ್ಲಿ ದರ್ಶನಕ್ಕಾಗಿ ಎಲ್ಲಾ ಯಾತ್ರಾರ್ಥಿಗಳಿಗೆ ನೋಂದಣಿಯು ಕಡ್ಡಾಯವಾಗಿರುತ್ತದೆ
ದಯವಿಟ್ಟು ನೋಂದಣಿಯ ಸಮಯದಲ್ಲಿ ಸರಿಯಾದ ಮೊಬೈಲ್ ನಂಬರ್‌ಗಳನ್ನು ನೀಡಿ
ಎಲ್ಲಾ ಯಾತ್ರಾರ್ಥಿಗಳು ಯಾತ್ರೆಯನ್ನು ಪ್ರಾರಂಭಿಸುವ ಮೊದಲು ವೈದ್ಯಕೀಯ ಪರೀಕ್ಷೆಗೆ ಒಳಗಾಗಲು ವಿನಂತಿಸಲಾಗುತ್ತದೆ
ಭೂಪ್ರದೇಶ ಹಾಗೂ ಹವಾಮಾನಕ್ಕೆ ಒಗ್ಗಿಕೊಳ್ಳಲು ನಿಮ್ಮ ಪ್ರಯಾಣವನ್ನು ಯೋಜಿಸಿ
ನಿಮ್ಮ ವಾಹನದ ನೋಂದಣಿಯನ್ನು ಇಲ್ಲಿ ಮಾಡಿ greencard.uk.gov.in

ಎಲ್ಲಾ ಧಾಮಗಳಿಗಾಗಿ ಆನ್‌ಲೈನ್ ನೋಂದಣಿಯು ಈಗ ತೆರೆದಿದೆ

ಉತ್ತರಖಾಂಡ ಟೂರಿಸಮ್ ಡೆವಲಪಮೆಂಟ್ ಬೋರ್ಡ್
ಪಂ. ದೀನದಯಾಳ್‌ಉಪಾಧ್ಯಾಯಪರ್ಯಟನಭವನ,ಓಎನ್‌ಜಿಸಿ ಹೆಲಿಪ್ಯಾಡ್ ಸಮೀಪ,ಗರ್ಹಿಕಾಟ್,ಡೆಹ್ರಾಡೂನ್.
uttarakhandtourism.gov.in /UttarakhandTourismOfficialPage /UTDBofficial /uttarakhand_tourismofficial

ಬಿಟ್ಟಿರಲಾರೆ... ಜೊತೆಗಿರಿಸಲಾರೆ

ಕೂಡಿ ಓದುವುದು ಯಶಸ್ಸಿನ ರಹದಾರಿ

ರಶ್ಮಿ ಎಸ್

> ಶಿಕ್ಷಣ, ಹಾಸ್ಟೆಲ್ ಅಂತ ಮನೆಯಿಂದ ದೂರವಿರುವ ಮಕ್ಕಳ ದುಗುಡ ಒಂದು ಕಡೆಯಾದರೆ, ಅವರನ್ನು ಬಿಟ್ಟು ಮನೆಯಲ್ಲಿರುವ ಪೋಷಕರ ತಲ್ಲಣಗಳು ಬೇರೆಯದೇ ಆಗಿರುತ್ತವೆ. ಪರಸ್ಪರ ಪ್ರೀತಿ, ವಿಶ್ವಾಸ, ನಂಬುಗೆ ಇವೇ ಈ ಎರಡು ಕವಲುಗಳನ್ನು ಬೆಸೆಯುವ ಬೆಸುಗೆ. ಇದರ ಸುತ್ತ ಹೆಣೆದಿರುವ ಒಳನೋಟವೊಂದು ಇಲ್ಲಿದೆ.

'ಹೆಂಗಿರೂದು... ಹುಟ್ಟಿದಾಗಿಂದ ಒಮ್ಮೆನೂ ಬಿಟ್ಟಿಲ್ಲ... ರಿಸಲ್ಟ್ ಬಂದಾಗ, ಎಂಟ್ರೆನ್ಸ್ ಬರಿಯೂ ಮುಂದ ಏನೂ ಅನಿಸ್ತಿರಲಿಲ್ಲ. ಕೋರ್ಸು, ಕಾಲೇಜು ಆಯ್ಕೆ ಮಾಡು ಮುಂದನೂ ಏನೂ ಅನಿಸಿರಲಿಲ್ಲ... ಆದ್ರ ದೂರದ ಕಾಲೇಜಿಗೆ ಬಿಡಬೇಕಾದಾಗ... ಎದಿ ಧಡಧಡ ಅಂತದ...ಎದಿಗೂಡಿನಾಗೊಂದು ನೆನಪುಗಳ ಮಾಲ್ ಗಾಡಿ ಓಡಿದ್ಹಂಗ ರೈಲಿನ ಸದ್ದು ಬರ್ತದ'

ಹೇಳುತ್ತ ಹೇಳುತ್ತಲೇ ಕಣ್ಣೀರಾಗುತ್ತಿದ್ದರು ಶಿವಗೀತಾ.. ಮತ್ತೆ ಕಂಗಳಲ್ಲಿ ಮಿಂಚೂ ಬರ್ತಿತ್ತು.

'ಕಳ್ಳುಬಳ್ಳಿ ಆಸ್ಪತ್ರೆಯೊಳಗ ಕತ್ತರಿಸಿದ್ದು ಗೊತ್ತಾಗೂದಿಲ್ಲ. ಮನಿಬಿಟ್ಟು ಸಾಲೀಗೆ ಹೋಗುಮುಂದ, ಊರುಬಿಟ್ಟು ಕಾಲೇಜಿಗೆ ಬ್ಯಾರೆ ಊರಿಗೆ ಹೋಗೂಮುಂದ ಕರಳುಬಳ್ಳಿ ಕತ್ತರಿಸಿದಂಗ ಆಗ್ತದ...'

ಬೀದರ್‌ನಲ್ಲಿರುವ ಶೀಲಾ ಹೇಳುತ್ತಿದ್ದರು. ಮಗಳೂ ಮೊದಲ ಸಲ ಡೆಂಟಲ್ ಕೋರ್ಸಿಗೆಂದು ಬೆಂಗಳೂರಿನ ಬಸ್ ಹತ್ತಿದ್ದಳು. ಅಮ್ಮ ನೋಡದ ಊರದು. ಆತಂಕದ ಕಾರ್ಮೋಡ ಸದಾ ಅವರ ಕಣ್ರೆಪ್ಪೆ ಮೇಲೆ ಮನೆ ಮಾಡಿತ್ತು.

****

ಓದು, ಶಿಕ್ಷಣ, ಸ್ವಾವಲಂಬನೆ, ಶಿಸ್ತು, ಭದ್ರ ಭವಿಷ್ಯ, ಹದಿಹರೆಯದಲ್ಲಿ ಗುರುಗಳ ಮಾರ್ಗದರ್ಶನ ಇರಲಿ, ಅವರ ನಿಗರಾಣಿಯಲ್ಲಿ ಬೆಳೆಯಲಿ... ಹೀಗೆ ಹತ್ತು ಹಲವು ಕನಸು, ಅಪೇಕ್ಷೆ ಮತ್ತು ನಿರೀಕ್ಷೆಗಳಿಂದಲೇ ಮಕ್ಕಳನ್ನು ತಮ್ಮ ಗೂಡಿನಿಂದಾಚೆ ತಳ್ಳಲು ಹೆತ್ತವರು ಸಿದ್ಧರಾಗುತ್ತಾರೆ. ಆಕ್ಷೇಪಗಳಿದ್ದರೂ ಸ್ವಾತಂತ್ರ್ಯದ ಕನಸಿನೊಂದಿಗೆ ಅಪ್ಪನ ಸೆಕ್ಯುರ್ಡ್ ಮಾತುಗಳಾಚೆ, ಅಮ್ಮನ ಕಣ್ಗಾವಲಿನಿಂದಾಚೆ ಹೋಗಲು ಹಾತೊರೆಯುವ ಮಕ್ಕಳು ಮುಂಗಾರು ಮಳೆಯೊಂದಿಗೆ ಹೊರಟೇ ಬಿಡುತ್ತಾರೆ.

ಮೊದಲೆರಡು ದಿನ, ಹಾಸ್ಟೆಲ್ ರೂಮು ಹೊಂದಿಸಿಕೊಂಡ ಬಗೆ, ರೂಮ್‌ಮೇಟ್, ಅವರ ಉಡುಗೆ, ಆಹಾರ, ಅವರ ಹೆತ್ತವರ ಬಗ್ಗೆ ಮಾತಾಡುವವರು, ನಾಲ್ಕಾರು ದಿನಗಳ ನಂತರ ದೂರುಪಟ್ಟಿ ಸಿದ್ಧವಾಗಿರುತ್ತದೆ.

'ನಂಗ ಬ್ಯಾಡಂದ್ರೂ ಉಪ್ಪಿಟ್ಟೇ ಮಾಡ್ತಾರ ಇಲ್ಲಿ, ಬೆಳಿಗ್ಗೆ ಅವಲಕ್ಕಿ ತಿನ್ನಾಕ ಒಲ್ಲೆಯಾಗಿತ್ತು. ಮಧ್ಯಾಹ್ನನೂ ಬದನಿಕಾಯಿ ಮಾಡಿದ್ರು, ಎರಡೂ ನಾನು ತಿನ್ನೂವು ಅಲ್ಲವೇ ಅಲ್ಲ..' ಮಗಳ ದೂರು. 'ಮತ್ತ ಉಪಾಸಿದ್ದಿ' – ಅಮ್ಮನ ಆತಂಕ. 'ಇಲ್ಲಾ.. ರಸ ಸವರಿಕೊಂಡು ತಿಂದೆ..' ಹೊಂದಾಣಿಕೆಯ ಮೊದಲ ಪಾಠಗಳು ಆರಂಭವಾಗುವುದೇ ಹೀಗೆ.

'ಅಮ್ಮಾ.. ಟವಲ್ ವಾಸನಿ ಬರಾತಿತ್ತು... ಇವೊತ್ತು ತಿಳೀತು.. ನೀ ಯಾಕ ಟವಲ್ ಒಣಗಿ ಹಾಕಾಕ ಬೈತಿದ್ದಿ ಅಂತ.. ಸೋಪು ಮುಟ್ಟಾಕ ಆಗಲಾರದಷ್ಟು ಒದ್ದಿಮುದ್ದಿ ಆಗಿತ್ತಮ್ಮ.. ಬಚ್ಚಲು ಮನಿಗೆ ಹೋದಾಗಲೆಲ್ಲ ಸಿಡುಕಿ, ಸೋಪಿನ ಡಬ್ಬಿ ಕಟ್ಟಿಯಿಂದ ತಗದಿಡ್ತಿದ್ದಿ ನೀನು.. ತಟ್ಟಿಯೊಳಗ ಮುಸರಿ ಬಿಡಬ್ಯಾಡಂತ ಯಾಕ ಹೇಳ್ತಿದ್ದಿ ಅನ್ನೂದು ಈಗ ತೊಳಿಯೂ ಮುಂದ ಗೊತ್ತಾಯ್ತು.. ' – ಒಂದೊಂದೇ ಪ್ರಶ್ನೆಗಳೂ ಅವರನ್ನ ಸ್ವಾವಲಂಬಿಯಾಗುವುದರಲ್ಲಿ ಅಂಬೆಗಾಲಿಡುವುದರಿಂದ ನಿಲ್ಲುವಂತೆ ಮಾಡುತ್ತಿರುತ್ತದೆ.

ಎಲ್ಲವಕ್ಕೂ ಕಿವಿಯಾಗಿ..ಅಷ್ಟೇ

ಓದು ಅಥವಾ ಉದ್ಯೋಗಕ್ಕಾಗಿ ಮಕ್ಕಳನ್ನು ಮನೆಯಿಂದ ಹೊರಗೆ ಕಳಿಸುವ ಎಲ್ಲ ಪೋಷಕರು ಇಂಥ ಸಂದರ್ಭವನ್ನು ಎದುರಿಸುತ್ತಾರೆ. ಆದರೆ, ಇಂಥ ಸಂದರ್ಭದಲ್ಲಿ ಪೋಷಕರು ಆತಂಕ ಪಡುವ ಅಗತ್ಯವಿಲ್ಲ. ಸುಮ್ನೆ, ಅವರು ಹೇಳಿದ್ದನ್ನೆಲ್ಲ ಕೇಳಿಸಿಕೊಂಡರೆ ಸಾಕು. ಇಂಥ ಸನ್ನಿವೇಶಗಳಿಂದ ಪ್ರತಿಸಲವೂ ಮಕ್ಕಳು ಒಂದೊಂದು ಪಾಠವನ್ನು ಕಲೀತಿರ್ತಾರೆ.

ಮಕ್ಕಳ ಜವಾಬ್ದಾರಿ ಹೊತ್ತ ಶಿಕ್ಷಣ ಸಂಸ್ಥೆಗಳೂ ತಮ್ಮ ಪ್ರತಿಷ್ಠೆಗೆ ಕುಂದಾಗದಂತೆ ಅವರ ಕಾಳಜಿ ತೊಗೊಳ್ತಾರೆ ಎನ್ನುವ ನಂಬಿಕೆ ಇರಬೇಕು. ಆ ವಿಶ್ವಾಸ ಬೆಳೆಯಲು ಆಗಾಗ ಮಕ್ಕಳ ಉಪನ್ಯಾಸ ಕರೊಂದಿಗೆ ಮಾತನಾಡಬೇಕು. ದೂರ ಇರುವ ಮಕ್ಕಳಿಗೆ ದೂರದೆಯೇ ಅವರ ಪ್ರಯತ್ನಗಳನ್ನು ಶ್ಲಾಘಿಸಬೇಕು.

ಮನೆಯ ವಾತಾವರಣದಿಂದ ಆಚೆ ಹೋದ ಮಕ್ಕಳಿಗೆ ಅವರನ್ನು ಕೇಳಿಸಿ ಕೊಳ್ಳುವ ಕಿವಿಗಳಿವೆ ಎಂಬ ನಂಬಿಕೆ ಹುಟ್ಟುವಂತಾ ಗಬೇಕು ಆಗ ಮಕ್ಕಳಿಗೆ ರೆಕ್ಕೆ ಬಂದಿದ್ದರೂ ಕಾಲು ಮನೆಯೊಳಗೇ ನೆಲೆ ಊರಿರುತ್ತವೆ.

ಪರಸ್ಪರ ಪ್ರೀತಿ–ನಂಬಿಕೆ ಇರಲಿ

ಹಾಸ್ಟೆಲ್‌ನಲ್ಲಿ ಪ್ರವೇಶ ಸಿಗದಿದ್ದಲ್ಲಿ..? ಸಂಬಂಧಿಕರ ಮನೆಗೆ ಬಿಡಬೇಕೆ? ಅವರಿಗೆ ಅದು ಹೊರೆಯಾಗದೆ? ಮಗು ಅವರ ಮನೆಯಲ್ಲಿ ಹೊರಗಿನವಳು ಅಂತನಿಸದಂತೆ ನೋಡಿಕೊಳ್ಳುವರೆ? ಮಗುವಿಗೆ ಸ್ವಾತಂತ್ರ್ಯ ಇರುತ್ತದೆಯೇ? ಮಗುವಿನ ಓರೆಕೋರೆಗಳನ್ನು ತಿದ್ದದೆ ಸಂಬಂಧಿಕರಲ್ಲಿ ಆಡಿಕೊಂಡರೆ... ಮಗುವನ್ನು ಹೀಯಾಳಿಸಿದರೆ, ಜರೆದರೆ, ಹೀಗಳೆದರೆ.. ಹೀಗೆ ಹಲವಾರು 'ರೆ' ಗಳು ಆತಂಕದ ಬೀಜವನ್ನೇ ಬಿತ್ತಿರುತ್ತವೆ. ಆದರೂ ಪರಸ್ಪರ ಪ್ರೀತಿ ನಂಬಿಕೆಯ ಆಧಾರದ ಮೇಲೆ ಈ ಮಹತ್ತರ ನಿರ್ಧಾರ ಕೈಗೊಳ್ಳಬೇಕಾಗುತ್ತದೆ.

ಪ್ರತ್ಯೇಕ ರೂಮು ಮಾಡುವುದಾದರೆ ಅಡುಗೆ ಮನೆ ಇರಬೇಕೆ? ಮೆಸ್‌ಗೆ ಹೋಗಬೇಕೆ? ಬಿಸಿಲಿದ್ದರೆ, ಮಳೆಯಿದ್ದರೆ ಹೋಗಿ ಬರಲು ಆಗದಿದ್ದರೆ ಡಬ್ಬಿವಾಲಾಗಳಿಗೆ ಹೇಳಬೇಕೆ? ಯಾರಾದರೂ ಅಡುಗೆಯವರಿಗೆ ಇಡಬೇಕೆಂದರೆ ಮನೆಯಲ್ಲಿ ಪಾಲು ಹಾಕಬೇಕು. ಎರಡು ಅಡುಗೆ ಮನೆಗೆ ಬೇಕಾಗುವಷ್ಟು ಸಾಮಗ್ರಿ ಬೇಕು. ದಿನಸಿ ತರಬೇಕು. ಇವನ್ನೆಲ್ಲ ನಿಭಾಯಿಸೋರು ಯಾರು? ಇಂಥ ಹಲವಾರು ಆತಂಕಗಳ ನಡುವೆ ಒಂದು ತೀರ್ಮಾನ ಕೈಗೊಂಡರೂ, ಅದಾಗಿದ್ದರೆ.. ಇದಾಗಿದ್ದರೆ ಎಂಬ 'ರೆ'ಗಳ ಅನುಮಾನಗಳು, ಆತಂಕಗಳೂ ಕೊನೆಯಿಲ್ಲದಂತೆ ಕಾಡುತ್ತವೆ.

ಕರೆ ಮಾಡಿ.. ಮಾತಾಡಿ..

ಮಕ್ಕಳನ್ನು ಓದಲೆಂದು ಮನೆಯಿಂದಾಚೆ ಕಳುಹಿಸಿದ ನಂತರ ಒಂದಷ್ಟು ದಿನ ಮನೆಯಿಡೀ ಖಾಲಿಖಾಲಿ. ಉಣ್ಣಲು, ತಿನ್ನಲು ಮನಸ್ಸಿರುವುದಿಲ್ಲ. ಅವರಿಗಿಷ್ಟದ ಊಟ ತಿಂಡಿಯನ್ನಂತೂ ಮಾಡಲು ಹೋಗುವುದೇ ಇಲ್ಲ. ಆಕಸ್ಮಿಕವಾಗಿ ಮಾಡಿದರೂ ಕೆನ್ನೆಯಿಂದ ನಾಕಾರು ಹನಿ ಕಣ್ಣೀರಿಳಿದ ನಂತರ, ಊಟವೇ ಸೇರದು. ಮಕ್ಕಳು ಕಾಲ್ ಮಾಡಿದಾಗಲೇ ಸಮಾಧಾನ.

ಈ ಮೊದಲ ದಿನಗಳು ಪಾಲಕರಿಗೂ, ಮಕ್ಕಳಿಗೂ ಒತ್ತಡದ ದಿನಗಳು. ಪ್ರತಿ ದಿನವೂ ಕಾಲ್ ಮಾಡುವುದರಿಂದ, ಕನೆಕ್ಟ್ ಆಗಿರುವುದರಿಂದ ಈ ಒತ್ತಡವನ್ನು ನಿರ್ವಹಿಸಬಹುದು. ಹೀಗೆ ಹೊರಗೆ ಕಳುಹಿಸಿದ್ದು ಅವರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಎಂಬುದು ಮಕ್ಕಳಿಗೆ ಮನವರಿಕೆ ಆಗಿರಬೇಕು.

ಇನ್ನೈದು ವರ್ಷಗಳ ನಂತರ ಮಕ್ಕಳ ಸಾಫಲ್ಯದ ಕನಸು ಕಾಣಬೇಕು. ಅವು ನಮ್ಮಲ್ಲಿ ಒಂದು ವಿಶ್ವಾಸವನ್ನು ಮೂಡಿಸುತ್ತವೆ. ಮಾಸದ ನಗೆ ಮುಖದ ಮೇಲೆ ಮೂಡುತ್ತದೆ. ಇದೇ ಶಾಂತ ಮನಸು, ಮನಸ್ಥಿತಿ ಮಕ್ಕಳಿಗೂ ಸಕಾರಾತ್ಮಕ ಭಾವನೆಗಳನ್ನೇ ದಾಟಿಸುತ್ತದೆ.

ಬದುಕಿನಲ್ಲಿ ಯಾವುದೇ ಪ್ರಾಯಶ್ಚಿತ್ತವಿಲ್ಲದಂಥ ನಿರ್ಧಾರ ಇದಾಗಿತ್ತು ಎಂಬ ಹೆಮ್ಮೆ ಪಾಲಕರದ್ದಾದರೆ, ಬದುಕಿನಲ್ಲಿ ಸದಾ ನೆನೆಯುವಂಥ ನೆನಪುಗಳನ್ನೇ ಬುತ್ತಿಕಟ್ಟಿಕೊಂಡ ಗರಿಮೆ ಮಕ್ಕಳದ್ದಾಗಿರುತ್ತದೆ. ❖

ವಸತಿ ನಿಲಯಗಳಲ್ಲಿ ಬಹುತ್ವದ ಪರಿಚಯ, ಸೌಹಾರ್ದದ ಸಾಂಗತ್ಯ

ಸಾಂದರ್ಭಿಕ ಚಿತ್ರಗಳು

ಪೋಷಕರು ಮಾಡಬೇಕಾದದ್ದು..

- ಪಾಲಕರು ಮನೆಯಿಂದ ದೂರಿವಿರುವ ಮಕ್ಕಳ ಪ್ರತಿ ಬೆಳವಣಿಗೆಯನ್ನು ಶ್ಲಾಘಿಸುತ್ತಿರಿ. ಬೆಳಿಗ್ಗೆ ಬೇಗನೆ ಏಳದ ಮಗು, ಬೇಗ ಎದ್ದ ಬಗ್ಗೆ ಹೇಳಿದಾಗ ಹೊಗಳಬೇಕು. ಬೆಳಿಗ್ಗೆ ಏಳುವುದರ ಉಪಯೋಗಗಳನ್ನು ತಿಳಿಹೇಳಬೇಕು. ಅದನ್ನು ಬಿಟ್ಟು, ಒಳ್ಳೆದಾಯ್ತು, ಈಗ ಏಳಬೇಕಾಯ್ತಲ್ಲ, ತಿಳೀತಾ... ಅಂತೆಲ್ಲ ಕುಹಕವಾಡಿದರೆ ಮಕ್ಕಳ ಮನಸಿನಲ್ಲಿ ಹೊರಗಿದ್ದು ಓದುವುದು ದ್ವೇಷದ, ಪ್ರತೀಕಾರದ ಕೆಲಸ ಎಂಬಂಥ ಭಾವ ಮೊಳೆಯುವುದು. ಅಂಥ ಸುಧಾರಣೆಗಳ ಬಗ್ಗೆಯೇ ಅಸಡ್ಡೆ ಮೂಡಬಹುದು.
- ಬಹುತೇಕ ಪಾಲಕರು, ಮಕ್ಕಳನ್ನು ಬಿಟ್ಟು ಬರುವಾಗ ದುಃಖದ ಮೂಟೆಯೊಂದನ್ನು ಹೊತ್ತು, ಹೊರಲಾರದ ಭಾರ ಹೊತ್ತಂತೆ ಅಳುತ್ತ ಮರಳುತ್ತಾರೆ. ಭಾವೋದ್ವೇಗವನ್ನು ಸಂಯಮದಿಂದ ತಡೆಯಬೇಕು. ಇಲ್ಲದಿದ್ದಲ್ಲಿ ಮಕ್ಕಳೂ ದುಗುಡದಲ್ಲಿ ಸಮಯ ಕಳೆಯುತ್ತಾರೆ.
- 'ಇಲ್ಲಿ ಏನೇನೂ ಸರಿ ಇಲ್ಲ. ನೀ ಬರದಿದ್ದರೆ ನಾನೇ ಓಡಿ ಬರ್ತೀನಿ...'– ಇಂಥ ಕರೆಗಳಿಗೆ ಸಮಾಧಾನದಿಂದ ಉತ್ತರಿಸಿ. ಅಷ್ಟೇ ಸಮಾಧಾನದಿಂದ ಸಮಸ್ಯೆ ಅರ್ಥ ಮಾಡಿಕೊಳ್ಳಿ. ಮಕ್ಕಳಿಗೆ ತಾವೇ ಪರಿಹಾರ ಕಂಡುಕೊಳ್ಳುವಂತೆ ಪ್ರೇರೇಪಿಸಿ.

ಮಕ್ಕಳು ಮಾಡಬೇಕಿರುವುದು..

- ಅಪ್ಪ ಅಮ್ಮನಿಗೆ ದೂರವಾಣಿ ಕರೆ ಮಾಡಿ ದೂರುವ ಮೊದಲು ಶಿಕ್ಷಕರೊಂದಿಗೆ ಸಮಾಲೋಚಿಸಿ.
- ಕೆಲವೊಮ್ಮೆ ಮಾತನಾಡುವುದರಿಂದಲೇ ಪರಿಹಾರ ಸರಳವಾಗಿ, ಸುಲಭವಾಗಿ ಸಿಗುತ್ತವೆ.
- ಕೆಲವು ಸಮಸ್ಯೆಗಳೇ ಆಗಿರುವುದಿಲ್ಲ. ನಮ್ಮ ಅಸಮಾಧಾನ, ನಮ್ಮ ಅಹಂಕಾರದಿಂದಲೂ ಸಮಸ್ಯೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ.
- ಹೊತ್ತು ಕಳೆಯುವುದು ಕಷ್ಟವಾದಾಗಲೆಲ್ಲ ಪುಸ್ತಕ ಮತ್ತು ಸಂಗೀತದ ಮೊರೆ ಹೋಗಿ
- ಹೊತ್ತು ಸಿಗದಷ್ಟು ಓದುವ, ಬರೆಯುವ ಕೆಲಸಗಳಿದ್ದಲ್ಲಿ ಸಂಗೀತ ಕೇಳುತ್ತ ಅಭ್ಯಾಸ ಮಾಡಿ
- ಓದುವುದು ಹೆಚ್ಚಾಯಿತೆಂದು ಹೆಚ್ಚು ಮಲಗಬೇಡಿ. ಬೆಳಗಿನ ಹೊತ್ತು ಕಡ್ಡಾಯವಾಗಿ ಲಘುವ್ಯಾಯಾಮ ಅಭ್ಯಾಸ ಮಾಡಿಕೊಳ್ಳಿ. ಇದು ಬೇಸರ ಮತ್ತು ಒತ್ತಡ ಸೃಷ್ಟಿಸದಂಥ ಚಿಕಿತ್ಸಕ ಕೆಲಸಗಳಾಗಿವೆ.
- ಬದುಕು ಶಿಸ್ತಿಗೆ ಒಳಪಡಲಿ ಎಂದೇ ನೀವು ಈ ವ್ಯವಸ್ಥೆಯ ಭಾಗವಾಗಿರುತ್ತೀರಿ. ಇಲ್ಲಿಯೂ ಮನೆಯಂತೆಯೇ ಸೋಮಾರಿಗಳಾಗಲು ಬಯಸಿದರೆ, ಹಟಮಾರಿಗಳಾಗಲು ಬಯಸಿದರೆ ಎಲ್ಲಿಯೂ ಸಲ್ಲದವರಾಗುವ ಸಾಧ್ಯತೆ ಇರುತ್ತದೆ. ಈ ಸಮಯದಲ್ಲಿ ಕಷ್ಟಪಟ್ಟಷ್ಟೂ ಬದುಕನ್ನು ಆನಂದಿಸುವುದು ಕಲಿಯಬಹುದು ಎಂಬುದು ನೆನಪಿರಲಿ.

ನಿರಂತರ ಕಾಡುವ ಯೋಚನೆ ಆತಂಕದ ಸೂಚನೆ ಮಾತ್ರ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• 21ರ ಯುವಕ. ನನಗೆ ತಲೆಯಲ್ಲಿ ಪದೇಪದೇ ಅಶ್ಲೀಲ ಆಲೋಚನೆಗಳು ಬರುತ್ತವೆ. ಯಾರಾದರೂ ಮಹಿಳೆ ಹಾಗೂ ಪುರುಷರ ಜೊತೆ ಮಾತನಾಡುವಾಗ ಅಥವಾ ಕಂಡಾಗ ಅವರ ಬಗೆಗೆ ಕೂಡ ಅಶ್ಲೀಲ ಆಲೋಚನೆಗಳು ಬರುತ್ತದೆ. ಯಾವುದೋ ಒಂದು ವಿಚಾರದ ಬಗ್ಗೆ ಆಲೋಚಿಸುವಾಗ ಕೂಡ ಲೈಂಗಿಕ ಆಲೋಚನೆಗಳು ಬಂದು ನನ್ನ ಸಕಾರಾತ್ಮಕ ಆಲೋಚನೆಗಳು ಕುಸಿಯುವಂತೆ ಮಾಡುತ್ತದೆ. ಇದರಿಂದ ಮನಸ್ಸಿನಲ್ಲಿ ಗೊಂದಲ ಉಂಟಾಗುತ್ತದೆ. ಇದಕ್ಕೆ ಪರಿಹಾರ ಮಾರ್ಗವಾಗಿ ನಾನು ಧ್ಯಾನ ಮಾಡಲು ಪ್ರಾರಂಭಿಸಿದೆ. ಅಲ್ಲಿಯೂ ಕೂಡ ಗೊಂದಲ ಮನಸ್ಥಿತಿ ನನ್ನನ್ನು ಕಾಡುವುದು ಬಿಡಲಿಲ್ಲ. ಇದರಿಂದಾಗಿ ನನಗೆ ನಿತ್ಯದ ಕಾರ್ಯಗಳಿಗೆ ಅಡ್ಡಿ ಉಂಟಾಗುತ್ತಿದೆ. ದಯವಿಟ್ಟು ಪರಿಹಾರವನ್ನು ತಿಳಿಸಿ.

ಹೆಸರು ಊರು ತಿಳಿಸಿಲ್ಲ.

ಪತ್ರದ ಧಾಟಿಯನ್ನು ನೋಡಿದರೆ ನೀವು ತೀವ್ರವಾದ ಆತಂಕದಲ್ಲಿರುವಂತೆ ಕಾಣಿಸುತ್ತದೆ. ನಿರಂತರವಾಗಿ ಕಾಡುವ ಲೈಂಗಿಕ ಯೋಚನೆಗಳು ಅಥವಾ ಇನ್ನಾವುದೇ ಯೋಚನೆಗಳು ಆತಂಕದ ಸೂಚನೆ ಮಾತ್ರ. ನಿಮ್ಮ ಆತಂಕದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೆ ಕೇವಲ ಸೂಚನೆಯನ್ನು ಮಾತ್ರ ಬದಲಾಯಿಸುವ ಪ್ರಯತ್ನದಲ್ಲಿ ಮತ್ತೆಮತ್ತೆ ವಿಫಲರಾಗಿ ಹೆಚ್ಚಿನ ಆತಂಕವನ್ನು ತುಂಬಿಕೊಳ್ಳುತ್ತಿದ್ದೀರಲ್ಲವೇ?

ಲೈಂಗಿಕತೆ ವಯೋಸಹಜ ಆಕರ್ಷಣೆ. ಇಂತಹ ಆಕರ್ಷಣೆಯನ್ನು ಮೂಡಿಸುವುದರಲ್ಲಿ ಹಾರ್ಮೋನ್‌ಗಳ ಪಾತ್ರವೂ ಇರುವುದರಿಂದ ಆಲೋಚನೆಗಳನ್ನು ಸಂಪೂರ್ಣ ಹಿಡಿತದಲ್ಲಿಡುವುದು ಸಾಧ್ಯವಿಲ್ಲ. ಆದರೆ ನಿಮ್ಮ ವರ್ತನೆಯನ್ನು ಹಿಡಿತದಲ್ಲಿಡಲು ಸಾಧ್ಯವಿದೆ. ಲೈಂಗಿಕ ಆಲೋಚನೆಗಳು ಬರುವುದೇ ದೊಡ್ಡ ಅಪರಾಧ ಅಥವಾ ಮಾನಸಿಕ ತೊಂದರೆ ಎಂದು ನೀವು ತಿಳಿದುಕೊಂಡಂತೆ ಕಾಣಿಸುತ್ತಿದೆ. ಹಾಗಾಗಿ ಅಂತಹ ಆಲೋಚನೆಗಳನ್ನು ಬರದಂತೆ ತಡೆಯುವ ಮತ್ತು ಬಂದ ಕೂಡಲೇ ಹೊರಹಾಕುವ ಪ್ರಯತ್ನದಲ್ಲಿರುತ್ತೀರಿ. ಇದು ನಿಮ್ಮೊಳಗೆ ಅಗಾಧವಾದ ಒತ್ತಡವನ್ನು ಸೃಷ್ಟಿಸುತ್ತಿದೆ.

ನಮ್ಮ ಮಿದುಳು ಒಂದು ಸಾಮಾನ್ಯ ಯಂತ್ರ. ಸುಮಾರಾಗಿ ಒಂದು ಹಿಟ್ಟಿನ ಗಿರಣಿಯಂತೆ ಎಂದುಕೊಳ್ಳಿ. ಹಿಟ್ಟಿನ ಗಿರಣಿಗೆ ಅಕ್ಕಿ, ಗೋಧಿ, ಮೆಣಸಿನಕಾಯಿ, ಮಸಾಲೆ ಎಲ್ಲವನ್ನೂ ಅರೆದು ಪುಡಿ ಮಾಡುವುದು ಮಾತ್ರ ಗೊತ್ತು. ಮೆಣಸಿನಕಾಯಿ ಖಾರವೆಂದು ಅದು ತಿರಸ್ಕರಿಸುವುದಿಲ್ಲ. ನಮ್ಮ ಮಿದುಳಿನಲ್ಲಿಯೂ ಬೇಡವೆಂದುಕೊಳ್ಳುವ ಆಲೋಚನೆಗಳನ್ನು ತಿರಸ್ಕರಿಸುವ ವ್ಯವಸ್ಥೆಯಿಲ್ಲ. ಆದರೆ ನಿಮ್ಮ ದೇಹ ಮನಸ್ಸುಗಳನ್ನು ಶಾಂತಗೊಳಿಸಿ ನಿಮ್ಮ ಆಲೋಚನೆಯನ್ನು ಬೇಕಾದ ದಿಕ್ಕಿಗೆ ಹರಿಸುವ ಶಕ್ತಿ ಕೂಡ ನಿಮ್ಮೊಳಗೇ ಇದೆ. ಅದನ್ನು ವಿವೇಕ ಎನ್ನುತ್ತಾರೆ.

ಜನ್ಮಜಾತವಾಗಿ ಬಂದಿರುವ ವಿವೇಕವನ್ನು ಎಚ್ಚರಗೊಳಿಸಿ ಬಳಸುವುದನ್ನು ಕಲಿಯಬೇಕು. ದಿನಕ್ಕೆ ಹದಿನೈದು ನಿಮಿಷದ ಏಕಾಂತವನ್ನು ಹುಡುಕಿಕೊಂಡು ಬೆನ್ನುಮೂಳೆಯನ್ನು ನೇರವಾಗಿ ಇಟ್ಟು ಕುಳಿತುಕೊಳ್ಳಿ. ದೀರ್ಘವಾಗಿ ಉಸಿರಾಡುತ್ತಾ ಲೈಂಗಿಕ ಆಲೋಚನೆಗಳಿಗೆ ಅವಕಾಶ ನೀಡಿ. ನಿಮ್ಮ ದೇಹದ ವಿವಿಧ ಅಂಗಾಗಗಳು ಬಿಗಿಯಾಗುವುದನ್ನು ಗಮನಿಸಿ. ಆಗ ಉಸಿರಾಟದ ಕಡೆ ಗಮನ ಹರಿಸಿ ದೇಹದ ಅಂಗಾಂಗಳನ್ನು ಸಡಿಲಬಿಡಿ. ಮತ್ತೆ ಲೈಂಗಿಕ ಆಲೋಚನೆಗಳನ್ನು ಆಹ್ವಾನಿಸಿ, ಹಾಗೆಯೇ ದೇಹವನ್ನು ಸಡಿಲಬಿಡಿ. ಇದೇ ಅಭ್ಯಾಸವನ್ನು ಹದಿನೈದು ನಿಮಿಷ ಮುಂದುವರೆಸಿ.

ಜೊತೆಗೆ ನಿಮ್ಮನ್ನು ಸಂತೈಸಿಕೊಳ್ಳಲು 'ಲೈಂಗಿಕ ಆಲೋಚನೆಗಳು ಕಾಡುವುದು ಕಾಯಿಲೆಯಲ್ಲ. ಆದರೆ ನಾನು ಯಾವುದೋ ಆತಂಕದಿಂದ ಸಮಾಧಾನ ಪಡೆಯಲು ಇಂತಹ ಆಲೋಚನೆಗಳನ್ನು ಬಳಸುತ್ತಿದ್ದೇನೆ. ನನ್ನೊಳಗಿನ ಆತಂಕದ ಬೇರುಗಳನ್ನು ಹುಡುಕಿ ಪರಿಹಾರಗಳನ್ನು ಕಂಡುಕೊಳ್ಳಬೇಕು' ಎಂದು ಮನಸ್ಸಿನಲ್ಲಿ ಹೇಳಿಕೊಳ್ಳಿ.

ಮುಂದಿನ ಹಂತದಲ್ಲಿ ನಿಮ್ಮ ಬದುಕಿನ ಪರಿಸ್ಥಿತಿಗಳ ಕುರಿತು ನೋಡಿ. ನಿಮ್ಮ ಕುರಿತು ನಿಮ್ಮೊಳಗಿರುವ ಹಿಂಜರಿಕೆ ಬೇಸರ ಕೀಳರಿಮೆಗಳೇನಿರಬಹುದು ಎಂದು ಹುಡುಕಾಡಿ. ಇಂತಹ ಮನಸ್ಥಿತಿಗೆ ಕಾರಣವಾಗಿರುವ ನನ್ನ ಜೀವನದ ಅನುಭವಗಳೇನಿರಬಹುದು ಎಂದು ಯೋಚಿಸಿ. ಅಂತಹ ಹಳೆಯ ಅನುಭವಗಳು ನಿಮ್ಮ ಇವತ್ತಿನ ಪ್ರತಿಕ್ಷಣದ ಬದುಕಿನ ಮೇಲೆ ಹೇಗೆ ಪ್ರಭಾವ ಬೀರುತ್ತಿರಬಹುದು ಎಂದು ವಿಶ್ಲೇಷಿಸಲು ಪ್ರಯತ್ನಿಸಿ. ಇದು ಕಷ್ಟ ಅನ್ನಿಸಿದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ. ನಿಮಗೆ ಯಾವುದೇ ರೀತಿಯ ಔಷಧಗಳ ಅಗತ್ಯವಿಲ್ಲ. ನಾನೊಬ್ಬ ಮನೋರೋಗಿ ಎನ್ನುವ ಮನಸ್ಥಿತಿಯಿಂದ ಹೊರಬಂದು ನಿಮ್ಮನ್ನು ಸಂತೈಸಿಕೊಳ್ಳುವುದನ್ನು ಕಲಿಯಿರಿ. ಆತಂಕದಿಂದ ಬಿಡುಗಡೆ ಹೊಂದಲು ದೈಹಿಕ ವ್ಯಾಯಾಮದ ಮತ್ತು ಸ್ನೇಹಿತರ ಸಹಾಯವನ್ನು ಪಡೆಯಬಹುದು.

ಸಾಂದರ್ಭಿಕ ಚಿತ್ರ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಚಿಕನ್ ಖಾದ್ಯ ವೈವಿಧ್ಯ

ನಾನ್‌ವೆಜ್ ಪ್ರಿಯರಿಗೆ ಇಷ್ಟವಾಗುವಂತಹ, ಮನೆಯಲ್ಲೇ ಸುಲಭ, ಸರಳ ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ವಿಶಿಷ್ಟ ಚಿಕನ್ ಖಾದ್ಯಗಳ ಬಗ್ಗೆ ವಿವರಿಸಿದ್ದಾರೆ **ದೀಪಕ್ ಗೌಡ.**

ನಳಪಾಕ



'ಜಿಂಜರ್ ಚಿಕನ್'

ಬೇಕಾಗುವ ಸಾಮಗ್ರಿಗಳು: ಬೋನ್ ಲೆಸ್ ಚಿಕನ್ – ಅರ್ಧ ಕೆಜಿ, ಮೆಣಸಿನ ಪುಡಿ –ಒಂದು ಚಮಚ, ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಕಾರ್ನ್‌ಫ್ಲವರ್ –ಒಂದು ಚಮಚ, ಮೈದಾ ಹಿಟ್ಟು –ಎರಡು ಚಮಚ, ಈರುಳ್ಳಿ-2, ಹಸಿ ಮೆಣಸಿನಕಾಯಿ-4, ಬೆಳ್ಳುಳ್ಳಿ, ಶುಂಠಿ, ಒಂದು ಮೊಟ್ಟೆ, ಸೋಯಾ ಸಾಸ್ –ಒಂದು ಕಪ್, ವೆನಿಗರ್ –ಒಂದು ಕಪ್, ಟೊಮೊಟೊ ಸಾಸ್ –ಒಂದು ಕಪ್, ಸಿಜ್ವನ್ ಸಾಸ್ -ಒಂದು ಕಪ್, ಖಾರದಪುಡಿ –ಅರ್ಧ ಚಮಚ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಒಂದು ಪಾತ್ರೆಗೆ ಅರ್ಧ ಕೆ.ಜಿ ಚಿಕನ್, ಮೆಣಸಿನ ಪುಡಿ, ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಒಂದು ಚಮಚ ಕಾರ್ನ್‌ಫ್ಲವರ್, ಮೈದಾ ಹಿಟ್ಟು -ಎರಡು ಚಮಚ, ಒಂದು ಮೊಟ್ಟೆಯನ್ನು ಬೆರೆಸಿ 15 ನಿಮಿಷಗಳ ಕಾಲ ನೆನೆಸಿಡಬೇಕು. ಬಳಿಕ ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ನೆನೆಸಿಟ್ಟಿದ್ದ ಚಿಕನ್ ಅನ್ನು ಹಾಕಿ ಫ್ರೈ ಮಾಡಿಕೊಳ್ಳಬೇಕು. ನಂತರ ಒಂದು ಅಗಲವಾದ ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ, ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಹಸಿ ಮೆಣಸಿನಕಾಯಿ ಹಾಕಿ. ಈರುಳ್ಳಿ ಬೆಂದು ಕೆಂಪಾದ ಮೇಲೆ ಸೋಯಾ ಸಾಸ್, ವೆನಿಗರ್, ಟೊಮೊಟೊ ಸಾಸ್, ಸಿಜ್ವನ್ ಸಾಸ್, ಖಾರದಪುಡಿ ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಅರಿಸಿನ -ಕಾಲು ಚಮಚ, 2 ಚಮಚದಷ್ಟು ಉಪ್ಪು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಫ್ರೈ ಮಾಡಿಕೊಂಡಿರುವ ಚಿಕನ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ, 10ರಿಂದ 15 ನಿಮಿಷ ಬೇಯಲು ಬಿಡಿ. ಕೊನೆಯಲ್ಲಿ ಹೆಚ್ಚಿದ ಶುಂಠಿ, ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಈಗ ನೋಡು ನೋಡುತ್ತಿದ್ದಂತೆ ಬಿಸಿ ಬಿಸಿಯಾದ ಜಿಂಜರ್ ಚಿಕನ್ ರೆಡಿಯಾಗಿದೆ.

ಚಿಕನ್ ದೋ ಪ್ಯೆಜಾ

ಬೇಕಾಗುವ ಸಾಮಗ್ರಿಗಳು: ಚಿಕನ್- 1 ಕೆ.ಜಿ, ಈರುಳ್ಳಿ- 7, ಟೊಮೆಟೊ- 2, ಹಸಿ ಮೆಣಸಿನಕಾಯಿ -2, ರುಚಿಗೆ ತಕ್ಕಷ್ಟು ಉಪ್ಪು, ಒಂದು ಕಪ್ ಅಡುಗೆ ಎಣ್ಣೆ, ಸಾಸಿವೆ –ಒಂದು ಚಮಚ, ಅರಿಶಿನ ಪುಡಿ –ಒಂದು ಚಮಚ, ಖಾರದಪುಡಿ –ಒಂದು ಚಮಚ, ದನಿಯಾ ಪುಡಿ –ಒಂದು ಚಮಚ, ಗರಂ ಮಸಾಲ –ಒಂದು ಚಮಚ, ಕಸ್ತೂರಿ ಮೇಥಿ –ಒಂದು ಚಮಚ, ಮೊಸರು –ಅರ್ಧ ಕಪ್, ತುಪ್ಪ –ಎರಡು ಚಮಚ, ಗೋಡಂಬಿ –8, ಎಲಕ್ಕಿ –4, ಪಲಾವ್ ಎಲೆ –4, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ ಸೊಪ್ಪು.

ತಯಾರಿಸುವ ವಿಧಾನ: ಒಂದು ಅಗಲವಾದ ಪಾತ್ರೆಗೆ 1 ಕೆ.ಜಿ ಚಿಕನ್, 3 ಕಪ್ ನೀರು ಅದಕ್ಕೆ ಸ್ವಲ್ಪ ಉಪ್ಪು ಮತ್ತು ಅರಿಸಿನ ಪುಡಿ ಹಾಕಿ ಬೇಯಿಸಿ ಇಟ್ಟುಕೊಳ್ಳಿ. ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಈರುಳ್ಳಿ ಹಾಕಿ, ಟೊಮೊಟೊ, ಗೋಡಂಬಿ ಸೇರಿಸಿ ಬಣ್ಣ ಬದಲಾಗುವವರೆಗೂ ಹುರಿದು ನಂತರ ರುಬ್ಬಿಕೊಳ್ಳಬೇಕು. ಚಿಕನ್ ಅನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಹೋಳುಗಳಿಗೆ ಮಸಾಲೆ ಹಿಡಿಯುವವರೆಗೆ ಕೈಯಾಡಿಸಿ. ನಂತರ ಒಂದು ಕಪ್ ನೀರು ಹಾಕಿ ಮತ್ತೆ ಎಲ್ಲವನ್ನೂ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಚಿಕನ್ ಬೇಯುವವರೆಗೆ ಬೇಯಿಸಿ. ಚೆನ್ನಾಗಿ ಕುದ್ದು, ಮಾಂಸ ಬೆಂದು ಮಂದ ಆಗುವವರೆಗೂ ಕುದಿಸಿ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಈಗ ಚಿಕನ್ ದೋ ಪೇಜಾ ಸವಿಯಲು ರೆಡಿ.

ಕ್ಯಾಪ್ಸಿಕಂ ಚಿಕನ್ ಫ್ರೈ

ಬೇಕಾಗುವ ಸಾಮಗ್ರಿಗಳು: ಚಿಕನ್ -ಅರ್ಧ ಕೆಜಿ, ಕ್ಯಾಪ್ಸಿಕಂ -2, ಈರುಳ್ಳಿ -2 ಟೊಮೆಟೊ -2, ಶುಂಠಿ - ಬೆಳ್ಳುಳ್ಳಿ ಪೇಸ್ಟ್, ಅರಿಶಿನ ಪುಡಿ -ಒಂದು ಚಮಚ, ಖಾರದಪುಡಿ– ಒಂದು ಚಮಚ, ಕರಿ ಮೆಣಸಿನ ಪುಡಿ –ಒಂದು ಚಮಚ, ಗರಂ ಮಸಾಲ –ಒಂದು ಚಮಚ, ನಿಂಬೆ ಹಣ್ಣಿನ ರಸ -ಒಂದು ಚಮಚ, ಪುದೀನ -ಒಂದು ಕಪ್, ಕೊತ್ತಂಬರಿ ಸೊಪ್ಪು -ಒಂದು ಕಪ್ ಹಾಗೂ ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಒಂದು ಪಾತ್ರೆಗೆ ಚಿಕನ್ ಹಾಕಿಕೊಂಡು ನೀರು, ಅರಿಸಿನ ಪುಡಿ, ಸ್ವಲ್ಪ ಉಪ್ಪನ್ನು ಬೆರೆಸಿ ಮುಕ್ಕಾಲು ಭಾಗ ಬೇಯಿಸಿಕೊಳ್ಳಿ. ಪಕ್ಕದಲ್ಲಿ ಮತ್ತೊಂದು ಪಾತ್ರೆಗೆ ಐದು ಚಮಚ ಎಣ್ಣೆ ಹಾಕಿ, ಹೆಚ್ಚಿದ ಈರುಳ್ಳಿ, ಟೊಮೊಟೊ, ಶುಂಠಿ– ಬೆಳ್ಳುಳ್ಳಿ ಪೇಸ್ಟ್ ಹಾಗೂ ಸ್ವಲ್ಪ ಉಪ್ಪು ಹಾಕಿಕೊಂಡು ಚೆನ್ನಾಗಿ ಫ್ರೈ ಮಾಡಿಕೊಳ್ಳಬೇಕು. ಇದಕ್ಕೆ ಬೇಯಿಸಿ ಇಟ್ಟುಕೊಂಡಿದ್ದ ಚಿಕನ್ ಅನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ಜತೆಗೆ ಕರಿ ಮೆಣಸಿನ ಪುಡಿ, ಗರಂ ಮಸಾಲ ಹೆಚ್ಚಿದ ಪುದಿನ, ನಿಂಬೆ ಹಣ್ಣಿನ ರಸವನ್ನು ಹಾಕಿ ಬೆರೆಸಿಕೊಡಬೇಕು. ಕೊನೆಯಲ್ಲಿ ಕೊತ್ತಂಬರಿ ಸೊಪ್ಪನ್ನು ಉದುರಿಸಿ.

ಡ್ರೈ ಫ್ರೈ ಆಗಿರುವ ಕ್ಯಾಪ್ಸಿಕಂ ಚಿಕನ್ ಅನ್ನು ಚಿಕನ್ ಸಾಂಬಾರ್, ಬೆಳೆ ಸಾಂಬಾರ್, ರಸಂ, ಚಪಾತಿ ಜತೆಗೂ ತಿನ್ನಬಹುದು.

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮಲ್ಲೇಶ್ವರ

ನಗರದ ಮೂಲ ಪ್ರದೇಶಗಳನ್ನು ಒಳಗೊಂಡಿರುವ ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದಲ್ಲಿ ಬೃಹತ್ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಬೇಕು. ಸ್ಥಳೀಯ ನಿವಾಸಿಗಳ ಬೇಡಿಕೆಯಂತೆ ಪರಿಸರ ರಕ್ಷಣೆಯ ಕೆಲಸವನ್ನು ಶಾಸಕರು ಮಾಡಬೇಕು ಎಂಬುದು ಜನರ ಆಶಯ.

ಪರಿಸರ ಮಾರಕ ಯೋಜನೆ ಬೇಡ

ರಾಜಕಾರಣದಲ್ಲಿ ಭ್ರಷ್ಟಾಚಾರ ಸಹಜ ಎಂಬುವಷ್ಟರ ಮಟ್ಟಿಗೆ ವ್ಯವಸ್ಥೆ ಬಂದಿದೆ. ಆದರೆ, ಮಲ್ಲೇಶ್ವರದಂತಹ 'ಬುದ್ಧಿವಂತರ ಕ್ಷೇತ್ರದಲ್ಲಿ' ಇದಕ್ಕೆ ಅವಕಾಶ ಇರುವುದಿಲ್ಲ ಎಂಬುದೇ ವಾದ. ಅದಕ್ಕೆ ಅನುಗುಣವಾಗಿ ಭವಿಷ್ಯದ ಶಾಸಕರು ಕಾರ್ಯನಿರ್ವಹಿಸಬೇಕು. ರೋಟರಿ ಆಸ್ಪತ್ರೆಯಲ್ಲಿ ಎಲ್ಲ ವರ್ಗದ ಜನತೆಗೆ ಸರಿ ಸಮನಾಗಿ ಸೌಲಭ್ಯ ಸಿಗುವಂತೆ ಆಗಬೇಕು. ಸ್ಯಾಂಕಿ ಕೆರೆ ಉಳಿಸಿ ಎಂಬ ಕೂಗಿಗೆ ಶಾಸಕರು ಬೆನ್ನೆಲುಬಾಗಬೇಕು. ಮೇಲ್ಸೇತುವೆಯ ಕಾಮಗಾರಿಗೆ ತಿಲಾಂಜಲಿ ಇಡಬೇಕು. ಪರಿಸರಕ್ಕೆ ಮಾರಕವಾಗುವ ಯೋಜನೆಗಳು ಮಲ್ಲೇಶ್ವರದಲ್ಲಿ ಬೇಡ.

ಎಸ್. ಪುಟ್ಟಸ್ವಾಮಿ, ಮಲ್ಲೇಶ್ವರ

ಯೋಜನೆ ವ್ಯವಸ್ಥಿತ ಅನುಷ್ಠಾನ ಅಗತ್ಯ

ಮಲ್ಲೇಶ್ವರದಲ್ಲಿ ಒಂದು ವರ್ಷದಿಂದ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಪರ್ಯಾಯ ರಸ್ತೆಗಳನ್ನು ಸಂಚಾರಕ್ಕೆ ಗುರುತಿಸಿ, ಅವುಗಳನ್ನು ಸದೃಢಗೊಳಿಸಿದ ನಂತರವೇ ಇಂತಹ ವರ್ಷಾನುಗಟ್ಟಲೇ ನಡೆಯುವ ಕಾಮಗಾರಿಗಳನ್ನು ಆರಂಭಿಸಬೇಕು. ವ್ಯವಸ್ಥಿತ ಯೋಜನೆಗಳಿಗೆ ಜನಪ್ರತಿನಿಧಿಗಳು ಮೊದಲೇ ಹೋಂವರ್ಕ್ ಮಾಡಬೇಕು. ಗೀತಾಂಜಲಿ ಚಿತ್ರಮಂದಿರ ಬಳಿ ಇರುವ ಚಿಕ್ಕ ಚಿಕ್ಕ ರಸ್ತೆಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ವ್ಯಾಪಾರಿ ಪ್ರದೇಶದ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು.

ಸುಧೀಂದ್ರ ಎ.ಬಿ., ಮಲ್ಲೇಶ್ವರ

ಪಾದಚಾರಿಗಳನ್ನು ಮರೆಯುವುದು ಬೇಡ

ಮಲ್ಲೇಶ್ವರ 6ನೇ ಅಡ್ಡರಸ್ತೆಯಿಂದ 14ನೇ ಅಡ್ಡರಸ್ತೆವರೆಗೆ ಪಾದಚಾರಿ ಮಾರ್ಗವೇ ಇಲ್ಲ. ಬೀದಿವ್ಯಾಪಾರಿಗಳೇ ಫುಟ್‌ಪಾತ್ ಬಳಸಿಕೊಂಡಿದ್ದಾರೆ. ಅವರಿಗೆ ಪ್ರತ್ಯೇಕ ಸ್ಥಳಾವಕಾಶ ಮಾಡಿಕೊಟ್ಟು ಪಾದಚಾರಿಗಳಿಗೆ ಅನುಕೂಲ ಮಾಡಿಕೊಡಬೇಕು. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾದರೂ, ಪರಿಹಾರ ಒದಗಿಸುವಲ್ಲಿ ನಿರ್ಲಕ್ಷ್ಯ ತೋರಲಾಗಿದೆ. ಹೈಟೆಕ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಬೇಕು. ಈಗಾಗಲೇ ಇರುವ ಕೆ.ಸಿ. ಜನರಲ್ ಆಸ್ಪತ್ರೆಗೆ ಬೆಂಗಳೂರು ಮತ್ತು ಹೊರ ಜಿಲ್ಲೆಯಿಂದ ಬರುವ ರೋಗಿಗಳು ಹೆಚ್ಚು. ಹೀಗಾಗಿ ಸ್ಥಳೀಯರಿಗೆ ಪ್ರತ್ಯೇಕ ವ್ಯವಸ್ಥೆ ಅಗತ್ಯ.

ಎಂ.ಎಸ್. ದಿನೇಶ್, ಮಲ್ಲೇಶ್ವರ

ಶಾಂತಿನಗರ

ಶಾಂತಿನಗರ ವಿಧಾನಸಭೆ ಕ್ಷೇತ್ರದ ಹಲವು ಪ್ರದೇಶಗಳಲ್ಲಿ ರೌಡಿಗಳ ಉಪಟಳ ಹೆಚ್ಚಾಗಿದ್ದು, ಮದ್ಯ–ಗಾಂಜಾ ಸೇವನೆ ಯಥೇಚ್ಛವಾಗಿದೆ. ಇದಕ್ಕೆ ಕಡಿವಾಣ ಹಾಕಲು ಕಠಿಣ ಕಾನೂನು ಕ್ರಮಕೈಗೊಳ್ಳಬೇಕು. ಸ್ವಚ್ಛತೆಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಜನರು ಬಯಸಿದ್ದಾರೆ.

ರೌಡಿಗಳ ಉಪಟಳ ತಡೆ ಅಗತ್ಯ

ಶಾಂತಿನಗರ ವ್ಯಾಪ್ತಿಯ ವಿನಾಯಕನಗರಕ್ಕೆ ಸರಿಯಾದ ಪ್ರವೇಶ ಮತ್ತು ನಿರ್ಗಮನವಿಲ್ಲ. ಸಂಜೆ ಸಮಯದಲ್ಲಿ ರೌಡಿಗಳು ಆಟೊದಲ್ಲಿ ಕುಳಿತು ಮದ್ಯ ಮತ್ತು ಗಾಂಜಾ ಸೇವಿಸುತ್ತಾರೆ. ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇಂತಹ ಸಮಸ್ಯೆಗಳಿಗೆ ಕಡಿವಾಣ ಹಾಕಬೇಕು. ಪೊಲೀಸ್ ಇಲಾಖೆ ಹೆಚ್ಚು ಗಮನಹರಿಸುವಂತೆ ಭವಿಷ್ಯದ ಶಾಸಕರು ಕಟ್ಟಪ್ಪಣೆ ಮಾಡಬೇಕು. ಕ್ಷೇತ್ರದಲ್ಲಿ ಕೊಳಚೆ ಪ್ರದೇಶಗಳಲ್ಲಿದ್ದು, ಸ್ವಚ್ಛತೆ ಇಲ್ಲ. ಇದರಿಂದ, ಆರೋಗ್ಯದ ಸಮಸ್ಯೆಗಳು ಹೆಚ್ಚಾಗುತ್ತಿದೆ. ಹೀಗಾಗಿ ಸ್ವಚ್ಛತೆಗೆ ಆದ್ಯತೆ ನೀಡಬೇಕು..

ವೇಣು ರೆಡ್ಡಿ, ಶಾಂತಿನಗರ

ಕುಡಿಯುವ ನೀರಿನ ಅಭಾವ ಹೆಚ್ಚಿದೆ

ಶಾಂತಿನಗರ ಸುತ್ತಮುತ್ತ ಕಾವೇರಿ ನೀರು ದಿನ ಬಿಟ್ಟು ದಿನ ಬಿಡುತ್ತಿದ್ದಾರೆ. ಕೆಲವು ಕಡೆ ಮನೆಮನೆಗೂ ನೀರನ್ನು ಎಳೆಯಲು ಮೋಟರ್ ಅಳವಡಿಸಿಕೊಂಡಿರುವುದರಿಂದ ಮುಂದಿನ ಮನೆಗಳಿಗೆ ನೀರು ನಿಧಾನವಾಗಿ ಬರುತ್ತಿದೆ. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಬೇಕು. ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಪೊಲೀಸರು ಬೀಟ್ ನಡೆಸಲು ಸೂಚಿಸಬೇಕು. ಎಲ್ಲ ರಸ್ತೆಗಳು ಸ್ವಚ್ಛವಾಗಿರುವಂತೆ ನೋಡಿಕೊಂಡು, ಕ್ಷೇತ್ರದ ಪ್ರತಿ ಬಡಾವಣೆಯನ್ನೂ ಸುಂದರಗೊಳಿಸಬೇಕು.

ಚೇತನ್, ಶಾಂತಿನಗರ

ನಾಗರಿಕರಲ್ಲಿ ಸುರಕ್ಷತಾ ಭಾವ ವೃದ್ಧಿಸಲಿ

ಶಾಂತಿನಗರದ ಜೆ.ಕೆ. ಪುರದಲ್ಲಿ 30 ವರ್ಷದಿಂದ ಸರ್ಕಾರಿ ಶಾಲೆ ಇದ್ದು, ಅದನ್ನು ಅಭಿವೃದ್ಧಿ ಮಾಡಬೇಕು. ದೊಡ್ಡ ಮೋರಿ ಹೆಚ್ಚು ವಾಸನೆ ಬರುತ್ತಿದ್ದು, ಶಾಶ್ವತ ಪರಿಹಾರ ಕಲ್ಪಿಸಬೇಕು. ವಿನಾಯಕ ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಎಲ್ಲೆಂದರೆ ಅಲ್ಲಿ ಮೂತ್ರ ವಿಸರ್ಜನೆ ಮಾಡಿ ವಾತಾವರಣ ಹಾಳು ಮಾಡುತ್ತಿದ್ದಾರೆ. ಕ್ಷೇತ್ರದಲ್ಲಿ ಸಾರ್ವಜನಿಕ ಶೌಚಾಲಯಗಳು ಬೇಕು. ಉತ್ತಮ ಆಸ್ಪತ್ರೆ ನಿರ್ಮಿಸಬೇಕು. ರಾತ್ರಿ ವೇಳೆ ಕಳ್ಳತನ ಹೆಚ್ಚಾಗುತ್ತಿದ್ದು, ಪೊಲೀಸರ ಗಸ್ತು ಹೆಚ್ಚಿಸಬೇಕು. ನಾಗರಿಕರಲ್ಲಿ ಸುರಕ್ಷತಾ ಭಾವ ವೃದ್ಧಿಸಬೇಕು

ಸೆಂದಿಲ್ ಕುಮಾರ್ ಆರ್, ವಿನಾಯಕ ನಗರ

ಆನೇಕಲ್



ಆನೇಕಲ್ ವಿಧಾನಸಭೆ ಕ್ಷೇತ್ರದ ಒಂದು ವಾರ್ಡ್ ಮಾತ್ರ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಉಳಿದದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ. ಕೈಗಾರಿಕೆ ಪ್ರದೇಶಗಳೂ ಹೆಚ್ಚಿರುವ ಕ್ಷೇತ್ರದಲ್ಲಿ ಮೂಲಸೌಕರ್ಯದ್ದೇ ಕೊರತೆ. ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಸೌಲಭ್ಯವನ್ನು ಜನರು ನಿರೀಕ್ಷಿಸುತ್ತಿದ್ದಾರೆ.

ಶುದ್ಧ ಕುಡಿಯುವ ನೀರು ಕೊಡಿ

ಆನೇಕಲ್ ಪಟ್ಟಣದಲ್ಲಿ ಎಲ್ಲಾ ವಾರ್ಡ್‌ಗೂ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಬೇಕು. ಮನೆಗಳಿಗೆ ನೀರು ಕಲ್ಪಿಸುವ ವ್ಯವಸ್ಥೆಯಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಬೇಕು. ಬಿಬಿಎಂಪಿ ಭಾಗದಲ್ಲಿ ಒಂದಷ್ಟು ಕೆಲಸ ಆಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಮೂಲಸೌಕರ್ಯ ಒದಗಿಸುವ ಕೆಲಸವಾಗಬೇಕು. ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಮೇಳವನ್ನು ಭವಿಷ್ಯದ ಶಾಸಕರು ಆಯೋಜಿಸಬೇಕು. ಅವರಿಗೆ ತರಬೇತಿ ಕೇಂದ್ರಗಳನ್ನೂ ಸ್ಥಾಪಿಸಬೇಕು. ಪರಿಸರ ಕಾಳಜಿ ವಹಿಸಿ ಗಿಡ ಮರಗಳನ್ನು ನೆಡಬೇಕು.

ಭಾಸ್ಕರ್ ಎನ್., ಆನೇಕಲ್

ಗ್ರಾಮಗಳಲ್ಲಿ ಮೂಲಸೌಕರ್ಯ ಬೇಕು

ಆನೇಕಲ್ ಕ್ಷೇತ್ರವು ಸಂಪೂರ್ಣ ಗ್ರಾಮಾಂತರ ಪ್ರದೇಶವಾಗಿದ್ದು, ಮಧ್ಯಮ ವರ್ಗ ಮತ್ತು ಬಡತನ ಕುಟುಂಬಗಳು ಹೆಚ್ಚು ಇವೆ. ಇಂದು ಗ್ರಾಮೀಣ ಪ್ರದೇಶದಲ್ಲಿ ಅತ್ಯವಶ್ಯಕವಾಗಿರುವುದು ಶಿಕ್ಷಣ. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗಲು ಮಾದರಿ ಶಾಲೆಗಳನ್ನು ನಿರ್ಮಿಸಬೇಕಿದೆ. ಹಳ್ಳಿಗಳಲ್ಲಿ ಗ್ರಂಥಾಲಯ ತೆರೆಯಬೇಕು. ಬಡ ಜನರಿಗೆ ಆರೋಗ್ಯಕ್ಕೆ ಆದ್ಯತೆ ನೀಡಬೇಕಾಗಿದೆ. ಇಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಿ ಸಿಬ್ಬಂದಿ ಸಹಿತ ಎಲ್ಲ ರೀತಿಯ ಅತ್ಯಾಧುನಿಕ ಸೌಲಭ್ಯ ಕಲ್ಪಿಸಬೇಕು. ಇಲ್ಲಿಯೇ ಎಲ್ಲ ಚಿಕಿತ್ಸೆ ಲಭ್ಯವಾಗಬೇಕು.

ಮನೋಹರ್, ಹೊಂಪಲಘಟ್ಟ ಗ್ರಾಮ

'ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಿ'

ಆನೇಕಲ್ ಕ್ಷೇತ್ರಕ್ಕೆ ಮಿನಿ ವಿಧಾನಸೌಧ ನಿರ್ಮಾಣ ಆಗಬೇಕು. ಎಲ್ಲಾ ಸರ್ಕಾರಿ ಕಚೇರಿಗಳು ಒಂದೇ ಕಡೆ ಇದ್ದರೆ ಸಾರ್ವಜನಿಕರಿಗೆ ಅಲೆದಾಡುವ ಸ್ಥಿತಿ ಇರುವುದಿಲ್ಲ. ಸರ್ಕಾರಿ ಕಚೇರಿಗಳಲ್ಲಿ ವಯೋವೃದ್ಧರಿಗೆ ಅಂಗವಿಕಲರಿಗೆ ಪಿಂಚಣಿ ಮತ್ತು ಇತರೆ ಸೇವೆಗಳಿಗೆ ಸುಲಭವಾಗಿ ಕೆಲಸಗಳನ್ನು ಮಾಡಿಕೊಡಬೇಕು. ಸರ್ಕಾರದ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪುವಂತೆ ನೋಡಿಕೊಳ್ಳಬೇಕು. ಚಿಕಿತ್ಸೆಗಾಗಿ ಪ್ರತಿಬಾರಿಯೂ ಬೆಂಗಳೂರು ನಗರದ ಕೇಂದ್ರ ಭಾಗಕ್ಕೇ ಹೋಗಬೇಕಿದೆ. ಹೀಗಾಗಿ ಸ್ಥಳೀಯವಾಗಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಬೇಕು.

ಕೃಷ್ಣಮೂರ್ತಿ, ಇಂಡ್ಲವಾಡಿ ಗ್ರಾಮ

ಸೆಲೆಬ್ರಿಟಿ ಮಾತು

'ಹಣ ಮಾಡುವ ರಾಜಕಾರಣಿಗಳಿಂದ ದೂರವಿರಿ'

ಲತಾ ನಟರಾಜ್,
ಸದಸ್ಯೆ, ಬೆಂಗಳೂರು ಪವರ್ ಲಿಫ್ಟಿಂಗ್ ಅಸೋಸಿಯೇಷನ್

ಚುನಾವಣೆಯಲ್ಲಿ ಮತದಾನ ಮಾಡುವುದು ನಮ್ಮೆಲ್ಲರ ಹಕ್ಕು ಹಾಗೂ ಕರ್ತವ್ಯ. ಹಕ್ಕು ಚಲಾಯಿಸಿ ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಉತ್ತಮ ಅಭ್ಯರ್ಥಿಯೊಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕು. ಮತದಾನದಂದು ಮೈಮರೆತು ಪ್ರವಾಸ ಅಥವಾ ನೆಂಟರ ಮನೆಗಳಿಗೆ ತೆರಳಿದರೆ ಅನರ್ಹರೊಬ್ಬರು ಆಯ್ಕೆಯಾಗುವ ಸಾಧ್ಯತೆಯೇ ಹೆಚ್ಚಿರುತ್ತದೆ. ಆದ್ದರಿಂದ, ಅಂದು ಬೆಳಿಗ್ಗೆಯೇ ಮತಗಟ್ಟೆಗೆ ತೆರಳಿ ಹಕ್ಕು ಚಲಾಯಿಸಬೇಕು.

ಮತದಾರರು ಆಮಿಷಕ್ಕೆ ಒಳಗಾಗಬಾರದು. ಆಮಿಷಗಳಿಗೆ ಒಳಗಾದರೆ ಆಯ್ಕೆಯಾದವರು ಕೆಲಸ ಮಾಡದಿದ್ದರೆ ಅವರನ್ನು ಪ್ರಶ್ನಿಸಲು ಸಾಧ್ಯವಾಗುವುದಿಲ್ಲ. ಶಾಸಕರಾಗಿ ಆಯ್ಕೆಯಾದ ಮೇಲೆ ಜನರ ಧ್ವನಿಯಾಗಿ ಕೆಲಸ ಮಾಡಬೇಕು. ಜನರ ಬೇಡಿಕೆ ಈಡೇರಿಸಬೇಕು.

ಕೆಲವರು ಹಣ ಮಾಡಲೆಂದೇ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾರೆ. ಅವರ ಬಗ್ಗೆಯೂ ಎಚ್ಚರಿಕೆ ವಹಿಸಬೇಕು. ಚುನಾವಣೆಯನ್ನು ಹಬ್ಬದಂತೆ ಆಚರಣೆ ಮಾಡಬೇಕು.

ಪ್ರಣಾಳಿಕೆಯಲ್ಲಿ ಪರಿಸರಕ್ಕೆ ಆದ್ಯತೆ ನೀಡಲು ಒತ್ತಾಯ

ಬೆಂಗಳೂರು: 'ಗ್ರೀನ್‌ಪೀಸ್' ಸಂಸ್ಥೆಯು ವಿಧಾನಸಭಾ ಚುನಾವಣೆಯಲ್ಲಿ ಸುಸ್ಥಿರ ನಗರಗಳು, ಕೃಷಿ ಸೇರಿ ಪರಿಸರ ಸಂರಕ್ಷಣೆಯ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡುವ ಪ್ರಣಾಳಿಕೆಯನ್ನು ಗುರುವಾರ ಬಿಡುಗಡೆಗೊಳಿಸಿದೆ.

'ಹವಾಮಾನ ಬಿಕ್ಕಟ್ಟಿನಿಂದಾಗಿ ಸಾಮಾಜಿಕ ಭದ್ರತೆ, ಆಹಾರ ಮತ್ತು ಪೌಷ್ಟಿಕಾಂಶಗಳ ವಿಷಯಗಳಲ್ಲಿ ದೇಶ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಇದನ್ನು ನಿವಾರಿಸಲು ಸಿರಿಧಾನ್ಯಗಳಲ್ಲಿ ಫೈಬರ್, ಖನಿಜಗಳು, ಕ್ಯಾಲ್ಸಿಯಂ ಮತ್ತು ಕಾಂಪ್ಲೆಕ್ಸ್‌ನ ಸಮೃದ್ಧ ಮೂಲವಿದೆ. ಇದು ಕರ್ನಾಟಕ ಮತ್ತು ಭಾರತದ ಪಾಲಿಗೆ ಇದು ದೊಡ್ಡಮಟ್ಟದ ಬದಲಾವಣೆಗೆ ಕಾರಣವಾಗಬಹುದು' ಗ್ರೀನ್‌ಪೀಸ್ ಇಂಡಿಯಾದ ಅಮೃತಾ ಎಸ್.ಎನ್. ಸುದ್ದಿಗೋಷ್ಠಿಯಲ್ಲಿ ಸಲಹೆ ನೀಡಿದರು.

'ಸಿರಿಧಾನ್ಯ ಪೋಷಕಾಂಶ ಭರಿತ ಧಾನ್ಯವಾಗಿದ್ದು, ಅವುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಿಸಬೇಕು. ಮುಕ್ತ ಮಾರುಕಟ್ಟೆಗಳಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಂಡರೆ, ದೇಶದಲ್ಲಿರುವ ಪೋಷಕಾಂಶದ ಕೊರತೆ ಮತ್ತು ಹಸಿವಿನ ಸಮಸ್ಯೆಯನ್ನು ನಿವಾರಿಸಬಹುದು' ಎಂದು ಹೇಳಿದರು.

'ಸಂಚಾರ ದಟ್ಟಣೆ ಕಡಿಮೆ ಮಾಡಲು ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಬಳಕೆ ಮಾಡಿಕೊಳ್ಳಬೇಕು' ಎಂದು ಕೌನ್ಸಿಲ್ ಫಾರ್ ಆಕ್ಟಿವ್ ಮೊಬಿಲಿಟಿಯ ಅಜಯ್ ನಂದಕುಮಾರ್ ಒತ್ತಾಯಿಸಿದರು.

ಚಿತ್ರಾವಳಿ

ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ. ಗೋಪಾಲಯ್ಯ ಅವರು ಪಕ್ಷದ ಬ್ಲಾಕ್ ಘಟಕದ ಅಧ್ಯಕ್ಷರು ಮತ್ತು ಮುಖಂಡರೊಂದಿಗೆ ಸಭೆ ನಡೆಸಿದರು. ಮುಖಂಡರಾದ ನೆ.ಲ.ನರೇಂದ್ರಬಾಬು ಮಹಾಲಕ್ಷ್ಮಿ ಲೇಔಟ್ ಮಂಡಲ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಹೇಮಲತಾ ಗೋಪಾಲಯ್ಯ, ಬಿಜೆಪಿ ಜಿಲ್ಲಾ ಉತ್ತರ ಘಟಕದ ಉಪಾಧ್ಯಕ್ಷ ಜಯರಾಮ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬಸವನಗುಡಿ ವಿಧಾನಸಭಾ ಕ್ಷೇತ್ರದ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಅಭ್ಯರ್ಥಿಯಾಗಿ ಎಲ್. ಜೀವನ್ ಅವರು ನಾಮಪತ್ರ ಸಲ್ಲಿಸಿದರು. ಅವರು ದಿನಪತ್ರಿಕೆ ವಿತರಕರಾಗಿ ಕೆಲಸ ಮಾಡುತ್ತಿದ್ದಾರೆ

ರಾಜಧಾನಿಯಲ್ಲಿ ಕಲಾ ಪ್ರದರ್ಶನ ಕೇಂದ್ರಗಳ ನಿರ್ಮಾಣಕ್ಕೆ ಸಿಗದ ಆದ್ಯತೆ • ಕಲಾ ಸಮೂಹದ ಅಸಮಾಧಾನ

ಪ್ರತಿಭಾ ಪ್ರದರ್ಶನಕ್ಕಿಲ್ಲ ಸುಸಜ್ಜಿತ ರಂಗಮಂದಿರ

• ವರುಣ ಹೆಗಡೆ

ಬೆಂಗಳೂರು: ಐಟಿ–ಬಿಟಿ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಬೆಂಗಳೂರಿನಲ್ಲಿ ಕಲಾ ಪ್ರತಿಭೆ ಪ್ರದರ್ಶನಕ್ಕೆ ಸುಸಜ್ಜಿತ ಸರ್ಕಾರಿ ರಂಗಮಂದಿರವಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿರುವ ಸರ್ಕಾರಗಳು, ರಂಗಮಂದಿರಗಳ ನಿರ್ಮಾಣಕ್ಕೆ ಆದ್ಯತೆ ನೀಡದಿರುವುದು ಕಲಾ ಸಮೂಹದ ಅಸಮಾಧಾನಕ್ಕೆ ಕಾರಣವಾಗಿದೆ.

ನೂರಾರು ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಇಲ್ಲಿ ಅಸ್ತಿತ್ವ ಕಂಡುಕೊಂಡಿವೆ. ರಾಜ್ಯದ ವಿವಿಧೆಡೆಯಿಂದ ಕಲಾವಿದರು ಹಾಗೂ ಅವರ ತಂಡಗಳು ವೇದಿಕೆಯನ್ನರಸಿ ಇಲ್ಲಿಗೆ ಬರುತ್ತಿವೆ. ಆದರೆ, ರವೀಂದ್ರ ಕಲಾಕ್ಷೇತ್ರ ಹೊರತುಪಡಿಸಿದರೆ ಸುಸಜ್ಜಿತ ಸರ್ಕಾರಿ ರಂಗಮಂದಿರ ಇಲ್ಲದಿರುವುದು ಕಲಾವಿದರಿಗೆ ಸಮಸ್ಯೆಯಾಗಿದೆ. ಅದೇ ರೀತಿ, ಬೆರಳೆಣಿಕೆಯಷ್ಟು ಮಾತ್ರ ಕಿರಿದಾದ ಸರ್ಕಾರಿ ಸಭಾಂಗಣಗಳಿದ್ದು, ಇವುಗಳ ಲಭ್ಯತೆಗಾಗಿ ತಿಂಗಳಾನುಗಟ್ಟಲೆ ಕಾಯಬೇಕಾಗಿದೆ. ಇಲ್ಲಿನ ರಾಜಕೀಯ ಮುಖಂಡರು ಈ ಬಗ್ಗೆ ನಿರಾಸಕ್ತಿ ತಾಳುತ್ತಿರುವುದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಆಕ್ರೋಶ ಹೆಚ್ಚಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಆದ್ಯತೆ ನೀಡಲಾಗುತ್ತಿದೆಯಾದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಿ, ಕಾಯಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದವರೆಗೂ ರಂಗಮಂದಿರ ಸಿಗುವ ಖಚಿತತೆ ಇಲ್ಲದಂತಾಗಿದೆ.

ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರ

ಬಹುತೇಕ ದಿನ ಪ್ರದರ್ಶನವಿಲ್ಲ: ಬಿಬಿಎಂಪಿಯು 2015ರಲ್ಲಿ ಸರ್ ಪುಟ್ಟಣ್ಣಚೆಟ್ಟಿ ಪುರಭವನವನ್ನು ನವೀಕರಣ ಮಾಡಿ, ಧ್ವನಿವರ್ಧಕ, ಹವಾನಿಯಂತ್ರಣ ಸೇರಿದಂತೆ ವಿವಿಧ ವ್ಯವಸ್ಥೆಯನ್ನು ಅಳವಡಿಕೆ ಮಾಡಿತ್ತು. ₹ 8 ಸಾವಿರ ಇದ್ದ ಬಾಡಿಗೆ ದರವನ್ನು ₹1.22 ಲಕ್ಷಕ್ಕೆ ಏರಿಕೆ ಮಾಡಿತ್ತು. ಕಲಾವಿದರು ಸಂಘ–ಸಂಸ್ಥೆಗಳಿಂದ ಆಕ್ಷೇಪ ವ್ಯಕ್ತವಾದ ಬಳಿಕ ₹ 75 ಸಾವಿರಕ್ಕೆ ಇಳಿಕೆ ಮಾಡಿತ್ತು. ಆದರೆ, ಇಷ್ಟು ಮೊತ್ತದ ಬಾಡಿಗೆ ಹೊಂದಿಸುವುದು ಸಣ್ಣ ಮತ್ತು ಮಧ್ಯಮ ಗಾತ್ರದ ಸಂಘ–ಸಂಸ್ಥೆ, ರಂಗ ತಂಡಗಳಿಗೆ ಸವಾಲಾಗಿತ್ತು. ಹೀಗಾಗಿ, ವರ್ಷದ ಬಹುತೇಕ ದಿನಗಳು ಪುರಭವನ ಬಾಗಿಲು ಮುಚ್ಚಿಯೇ ಇರುತ್ತಿತ್ತು. ಬಿಎಂಪಿ ಕಳೆದ ವರ್ಷ ಪುರಭವನದ ಬಾಡಿಗೆ ದರವನ್ನು ಪರಿಷ್ಕರಿಸಿ, ಕನ್ನಡ ರಂಗಭೂಮಿಗೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ. ಹವಾನಿಯಂತ್ರಿತ ಸೌಲಭ್ಯಕ್ಕೆ ದಿನದ ಬಾಡಿಗೆಯನ್ನು ₹60 ಸಾವಿರಕ್ಕೆ ಇಳಿಸಿದೆ. ಹವಾನಿಯಂತ್ರಿತ ಸೌಲಭ್ಯ ನಿರಾಕರಿಸಿದರೆ ₹50 ಸಾವಿರ ಪಾವತಿಸಬೇಕು. ಅರ್ಧ ದಿನಕ್ಕೂ ಬಾಡಿಗೆ ನೀಡಲಾಗುತ್ತಿದೆ.

ರಾಜಧಾನಿ ಒಡಲ ಧ್ವನಿ

ಕನ್ನಡ ಭವನದಲ್ಲಿರುವ ನಯನ ಸಭಾಂಗಣವು ಕಿರಿದಾಗಿದ್ದು, ನಾಟ್ಯ, ವಿಚಾರ ಸಂಕಿರಣ, ಸಂಗೀತ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಮಾತ್ರ ಸಹಕಾರಿಯಾಗಿದೆ. ಜೆ.ಸಿ. ರಸ್ತೆಯಲ್ಲಿರುವ ಎಡಿಎ ರಂಗಮಂದಿರ ಅಮೆಚೂರು ಡ್ರಮಾಟಿಕ್ ಅಸೋಸಿಯೇಷನ್ ಕೊಡುಗೆಯಾಗಿದೆ.



ಸರ್ಕಾರಿ ಕಾರ್ಯಕ್ರಮಗಳಿಗೆ ಪುರಭವನ ಬಳಸಿಕೊಂಡು, ರವೀಂದ್ರ ಕಲಾಕ್ಷೇತ್ರವನ್ನು ಪ್ರದರ್ಶನ ಕಲೆಗಳಿಗೆ ನೀಡಬೇಕು. ಎಲ್ಲ ಭಾಗಗಳಲ್ಲಿ ರಂಗಮಂದಿರಗಳನ್ನು ನಿರ್ಮಿಸಬೇಕು.
ಶ್ರೀನಿವಾಸ ಜಿ. ಕಪ್ಪಣ್ಣ, ರಂಗಕರ್ಮಿ

ಸರ್ಕಾರಿ ರಂಗಮಂದಿರಗಳು ನಿರ್ವಹಣೆ ಆಗುತ್ತಿಲ್ಲ. ಖಾಸಗಿ ರಂಗಮಂದಿರಗಳು ಸಾಂಸ್ಕೃತಿಕ ಸಂಘಗಳಿಗೆ ನಿಲುಕುತ್ತಿಲ್ಲ. ಕಲಾವಿದರಿಗೆ ವೇದಿಕೆ ಇಲ್ಲವಾಗಿದೆ.
ವೈ.ಕೆ. ಮುದ್ದುಕೃಷ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ



300 ಆಸನಗಳ ರಂಗಮಂದಿರಗಳು ನಗರದಲ್ಲಿ ನಿರ್ಮಾಣವಾಗಬೇಕು. ಯಲಹಂಕ ಸೇರಿ ಹಲವೆಡೆ ರಂಗ ಮಂದಿರವಿಲ್ಲ. ನಗರದ ವಿವಿಧೆಡೆ 20 ರಂಗಮಂದಿರ ನಿರ್ಮಾಣ ಆಗಬೇಕು.
ಜೆ. ಲೋಕೇಶ್, ರಂಗಕರ್ಮಿ

ಶೇ 95ರಷ್ಟು ರಂಗಮಂದಿರಗಳು ನಿರ್ವಹಣೆ ಇಲ್ಲದೆ ಸೊರಗಿವೆ. ಕಲಾಕ್ಷೇತ್ರ, ರಂಗಶಂಕರ ಸೇರಿ ಐದು ಪ್ರದರ್ಶನಕ್ಕೆ ಯೋಗ್ಯವಾಗಿವೆ. ಬಯಲು ರಂಗಮಂದಿರ ಅಕ್ರಮ ಚಟುವಟಿಕೆ ತಾಣವಾಗಿದೆ.
ಕೆ.ವಿ. ನಾಗರಾಜಮೂರ್ತಿ, ರಂಗಕರ್ಮಿ

ಇಲ್ಲಿ ವಾಹನಗಳ ಸಿಲುಗಡೆಗೆ ಸ್ಥಳವಿಲ್ಲದಿರುವುದು ಸಮಸ್ಯೆಯಾಗಿದೆ. ಕುವೆಂಪು ಕಲಾಕ್ಷೇತ್ರದಲ್ಲಿ ಗ್ರೀನ್ ರೂಮ್‌ಗಳು ವೇದಿಕೆಯ ನೆಲಮಹಡಿಯಲ್ಲಿವೆ. ಇದು ಕಲಾವಿದರಿಗೆ ಕಿರಿಕಿರಿ ಉಂಟು ಮಾಡಲಿದೆ. ಸಮಾಜ ಕಲ್ಯಾಣ ಇಲಾಖೆಯ ಡಾ. ಅಂಬೇಡ್ಕರ್ ಭವನವು ಅತ್ಯಾಧುನಿಕ ಸೌಲಭ್ಯ ಹೊಂದಿದ್ದರೂ ನಿರ್ವಹಣೆ ಕೊರತೆ ಎದುರಿಸುತ್ತಿದೆ.

ಗಾಂಧಿನಗರದ ಗುಬ್ಬಿ ವೀರಣ್ಣ ರಂಗಮಂದಿರ, ರಾಜಾಜಿನಗರದ ರಾಜ್‌ಕುಮಾರ್ ರಂಗಮಂದಿರ ಸೇರಿದಂತೆ ವಿವಿಧ ರಂಗಮಂದಿರಗಳು ಸೂಕ್ತ ನಿರ್ವಹಣೆ ಇಲ್ಲದೆಯೇ ಕಳೆಗುಂದಿವೆ.

ನಿರ್ಮಾಣವಾಗದ ನಾಲ್ಕು ರಂಗಮಂದಿರ

ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೇ ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಿಸುವುದಾಗಿ 2020ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು. ಇದಕ್ಕಾಗಿ ಬಜೆಟ್‌ನಲ್ಲಿ ₹ 60 ಕೋಟಿ ಮೀಸಲಿಡಲಾಗಿತ್ತು. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಎರಡೂವರೆ ಎಕರೆ, ದೇವನಹಳ್ಳಿಯ ಕಸಬಾ ಹೋಬಳಿ, ಕನ್ನಹಳ್ಳಿ ಬಳಿ ಐದು ಎಕರೆ, ಕೆಐಎಡಿಬಿ, ಕೆಎಚ್‌ಬಿಯಲ್ಲಿ ಸಾರ್ವಜನಿಕರಿಗೆ ಮೀಸಲಿಟ್ಟ ಸಿಎ ನಿವೇಶನವನ್ನು ರಂಗಮಂದಿರ ನಿರ್ಮಾಣಕ್ಕೆ ಗುರುತಿಸಿ ವರ್ಷವೇ ಕಳೆದಿದೆ. ಆದರೆ, ಈವರೆಗೂ ಇಲಾಖೆಗೆ ಜಾಗವೇ ಹಸ್ತಾಂತರವಾಗಿಲ್ಲ.

ರಂಗಮಂದಿರಗಳ ಕೊರತೆ ಹಾಗೂ ರಂಗಭೂಮಿಯ ಸಮಸ್ಯೆಗಳನ್ನು ನೀಗಿಸಲು ಕರ್ನಾಟಕ ನಾಟಕ ಅಕಾಡೆಮಿಯು 'ರಂಗ ಮಂದಿರ ಪ್ರಾಧಿಕಾರ' ರಚಿಸುವ ಪ್ರಸ್ತಾವನೆಯನ್ನು ಈ ಹಿಂದೆ ಸಿದ್ಧಪಡಿಸಿತ್ತು. ನಾಡಿನ ರಂಗಕರ್ಮಿಗಳು ಹಾಗೂ ಸಾಂಸ್ಕೃತಿಕ ವಲಯದ ತಜ್ಞರ ಸಲಹೆಗಳನ್ನು ಪಡೆದಿದ್ದ ಅಕಾಡೆಮಿ, ಪ್ರಾಧಿಕಾರ ರಚನೆಗೆ ಸಂಬಂಧಿಸಿದ ರೂಪುರೇಷೆಗಳನ್ನೂ ಸಿದ್ಧಪಡಿಸಿತ್ತು. ರಂಗ ಮಂದಿರದ ನೀಲ ನಕ್ಷೆಯನ್ನೂ ರಚಿಸಿ, 300 ಆಸನಗಳ ಪ್ರತಿ ರಂಗಮಂದಿರಕ್ಕೆ ₹ 1.6 ಕೋಟಿ ವೆಚ್ಚವಾಗಲಿದೆ ಎಂದೂ ಅಂದಾಜಿಸಲಾಗಿತ್ತು. ಆದರೆ, ಈ ಪ್ರಸ್ತಾವ ನನೆಗುದಿಗೆ ಬಿದ್ದಿದೆ.

ಕೈಗೆಟುಕದ ರಂಗಮಂದಿರ

ಸಂಸ್ಕೃತಿ ಇಲಾಖೆ ಹಾಗೂ ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಬಹುತೇಕ ರಂಗ ಮಂದಿರಗಳು ಮೂಲಸೌಕರ್ಯಕ್ಕಾಗಿ ಕಾದು ಕುಳಿತಿವೆ. ಕಿತ್ತು ಹೋಗಿರುವ ನೆಲಹಾಸು, ದೋಷಪೂರಿತ ಧ್ವನಿ–ಬೆಳಕಿನ ವ್ಯವಸ್ಥೆ, ನಿರ್ವಹಣೆ ಇಲ್ಲದ ಶೌಚಾಲಯ, ತಂತ್ರಜ್ಞರ ಕೊರತೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿವೆ. ಕೋವಿಡ್ ಬಳಿಕ ಕೆಲ ಖಾಸಗಿ ರಂಗಮಂದಿರ, ಸಭಾಂಗಣಗಳ ನವೀಕರಣ ನಡೆದಿದ್ದು, ಮುಖ್ಯಸ್ಥರು ಬಾಡಿಗೆ ಹೆಚ್ಚಿಸಿದ್ದಾರೆ. ಡಾ. ಅಂಬೇಡ್ಕರ್ ಭವನ, ಚೌಡಯ್ಯ ಸ್ಮಾರಕ ಭವನ, ಸೇಂಟ್ ಜಾನ್ ಆಡಿಟೋರಿಯಂ, ಕುವೆಂಪು ಕಲಾಕ್ಷೇತ್ರ, ಗುರುನಾನಕ್ ಭವನ, ಎಡಿಎ ಸೇರಿ ವಿವಿಧ ರಂಗಮಂದಿರಗಳು 500ಕ್ಕೂ ಅಧಿಕ ಆಸನಗಳ ಸಾಮರ್ಥ್ಯ ಹೊಂದಿವೆ. ಆದರೆ, ಇಲ್ಲಿ ಬಾಡಿಗೆ ಒಂದು ಲಕ್ಷ ರೂಪಾಯಿವರೆಗೂ ಇದೆ.

ಕನ್ನಡ ಸಾಹಿತ್ಯ ಪರಿಷತ್ತು ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರಕ್ಕೆ ಅರ್ಧ ದಿನಕ್ಕೆ ₹ 10 ಸಾವಿರ, ದಿನಕ್ಕೆ ₹ 20 ಸಾವಿರ ಬಾಡಿಗೆ ನಿಗದಿಪಡಿಸಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರತ್ಯೇಕ ಇರಲಿದೆ. ಈ ಮೊದಲು ಸಭಾಂಗಣಕ್ಕೆ ದಿನವೊಂದಕ್ಕೆ ₹ 5 ಸಾವಿರ, ಅರ್ಧ ದಿನಕ್ಕೆ ₹ 3 ಸಾವಿರ ಬಾಡಿಗೆ ಪಾವತಿಸಬೇಕಾಗಿತ್ತು.

ಬಿಜೆಪಿ ಪರ ಪ್ರಚಾರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ನೋಂದಣಿ ಫಲಕ ಅಳವಡಿಸಿಕೊಂಡು ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದ ಟಾಟಾ ಏಸ್ ವಾಹನವನ್ನು ಚುನಾವಣಾಧಿಕಾರಿಗಳ ತಂಡ ಜಪ್ತಿ ಮಾಡಿದ್ದು, ಈ ಬಗ್ಗೆ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಾಹನ ಪತ್ತೆ ಮಾಡಿರುವ ಜಾಗೃತ ದಳದ ಅಧಿಕಾರಿ ಆರ್. ಸುರೇಶ್ ದೂರು ನೀಡಿದ್ದಾರೆ. ವಾಹನ ಚಾಲಕರಾದ ವಿಶ್ವಾಸ್, ಸುಭಾಷ್, ಆಪರೇಟರ್ ಅರ್ಜುನ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ನಾರ್ತ್ ಪಾರ್ಕ್ ರಸ್ತೆಯಲ್ಲಿ ಟಾಟಾ ಏಸ್ ವಾಹನವನ್ನು (ಕೆಎ 04 ಎಬಿ 4441) ನಿಲ್ಲಿಸಲಾಗಿತ್ತು. ವಾಹನದಲ್ಲಿದ್ದ ಎಲ್‌ಸಿಡಿ ಪರದೆಯಲ್ಲಿ ಬಿಜೆಪಿ ಸರ್ಕಾರದ ಕಾರ್ಯಕ್ರಮಗಳ ಮಾಹಿತಿಯನ್ನು ಪ್ರಸಾರ ಮಾಡಲಾಗುತ್ತಿತ್ತು. ಗಸ್ತಿನಲ್ಲಿದ್ದ ಅಧಿಕಾರಿಗಳು, ಚುನಾವಣೆ ಆಯೋಗದ ಅನುಮತಿ ಇದೆಯಾ? ಎಂಬುದಾಗಿ ಚಾಲಕರನ್ನು ಪ್ರಶ್ನಿಸಿದ್ದರು.'

'ಚುನಾವಣೆ ಪ್ರಚಾರಕ್ಕೆಂದು ವಾಹನಕ್ಕೆ ಪಡೆದಿದ್ದ ಅನುಮತಿ ಪತ್ರವನ್ನು ಚಾಲಕರು ತೋರಿಸಿದ್ದರು. ಆದರೆ, ವಾಹನದ ಬಗ್ಗೆ ಅಧಿಕಾರಿಗಳಿಗೆ ಅನುಮಾನ ಬಂದಿತ್ತು. ಹೀಗಾಗಿ, ಚಾಸೀಸ್ ಹಾಗೂ ಎಂಜಿನ್ ಸಂಖ್ಯೆ ಪರಿಶೀಲಿಸಿದ್ದರು. ಅವಾಗಲೇ ನಕಲಿ ನೋಂದಣಿ ಫಲಕದ ಸಂಗತಿ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಎ 01 ಎಬಿ 5613 ಅಸಲಿ ನೋಂದಣಿ ಸಂಖ್ಯೆ ವಾಹನಕ್ಕೆ ಕೆಎ 04 ಎಬಿ 4441 ಎಂಬ ನಕಲಿ ಫಲಕ ಅಳವಡಿಸಲಾಗಿತ್ತು. ಇದು ಖಾತ್ರಿಯಾಗುತ್ತಿದ್ದಂತೆ ವಾಹನವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಚಾಲಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ಆರ್.ಟಿ. ನಗರ ನಾಗನಹಳ್ಳಿಯ ಎ.ಡಿ. ವೀಲ್ ಮಿಡಿಯಾ ಸಂಸ್ಥೆ ಕಡೆಯಿಂದ ಚಾಲಕರು ಪ್ರಚಾರ ಮಾಡುತ್ತಿದ್ದರು. ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗುವುದು. ನಕಲಿ ನೋಂದಣಿ ಫಲಕದ ಬಗ್ಗೆ ಚುನಾವಣೆ ಆಯೋಗಕ್ಕೂ ಮಾಹಿತಿ ನೀಡಲಾಗಿದೆ' ಎಂದರು.

ಚುನಾವಣಾ ಅಕ್ರಮ: ₹ 5.24 ಕೋಟಿ ಮೌಲ್ಯದ ನಗದು, ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನೇಮಿಸಿರುವ ಜಾಗೃತ ದಳಗಳು ಹಾಗೂ ತನಿಖಾ ಠಾಣೆಗಳಲ್ಲಿ ಶುಕ್ರವಾರ ₹5.24 ಕೋಟಿ ಮೌಲ್ಯದ ನಗದು ಮತ್ತು ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಮೊತ್ತ ಇಲ್ಲಿಯವರೆಗೆ ₹ 149.58 ಕೋಟಿ ತಲುಪಿದೆ.

ಶುಕ್ರವಾರ ₹3.65 ಕೋಟಿ ನಗದು, ₹ 9.97 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹1.40 ಕೋಟಿ ಮೌಲ್ಯದ 94,951 ಲೀಟರ್ ಮದ್ಯ, ₹ 7.63 ಲಕ್ಷ ಮೌಲ್ಯದ 16.7 ಕೆ.ಜಿ. ಮಾದಕವಸ್ತು, ₹1.20 ಲಕ್ಷ ಮೌಲ್ಯದ ಚಿನ್ನಾಭರಣವನ್ನು ವಿವಿಧೆಡೆ ವಶಕ್ಕೆ ಪಡೆಯಲಾಗಿದೆ. ಈವರೆಗೆ1,262 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಸಾಗಣೆ- ₹ 54.20 ಲಕ್ಷ ಜಪ್ತಿ: ದಾಖಲೆ ಇಲ್ಲದೇ ಅಕ್ರಮವಾಗಿ ಸಾಗಿಸುತ್ತಿದ್ದ ₹ 54.20 ಲಕ್ಷ ಹಣವನ್ನು ದಕ್ಷಿಣ ವಿಭಾ ಗದ ಪೊಲೀಸರು ಜಪ್ತಿ ಮಾಡಿದ್ದು, ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.'ಬಸವನಗುಡಿ ಹಾಗೂ ಜೆ.ಪಿ.ನಗರ ಠಾಣೆ ಪೊಲೀಸರು ಪ್ರತ್ಯೇಕ ಪ್ರಕರಣಗಳಲ್ಲಿ ಹಣ ಜಪ್ತಿ ಮಾಡಿದ್ದಾರೆ. ದಾಖಲೆ ನೀಡದ ಕಾರಣ ಹಣ ಜಪ್ತಿ ಮಾಡಿ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಬಿಜೆಪಿಗೆ ಸೋಮಶೇಖರ್ ರಾಜೀನಾಮೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಮಳವಳ್ಳಿ ಕ್ಷೇತ್ರದಿಂದ ಟಿಕೆಟ್ ಸಿಗದಿದೇ ಇದ್ದುದರಿಂದ ಬಿಜೆಪಿ ಮುಖಂಡ ಬಿ.ಸೋಮಶೇಖರ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಟಿಕೆಟ್ ವಿಚಾರವಾಗಿ ಪಕ್ಷ ಕೈಗೊಂಡ ನಿರ್ಧಾರದಿಂದ ಭ್ರಮನಿರಸನ ಉಂಟಾಗಿದೆ. 10 ವರ್ಷಗಳಿಂದ ಪಕ್ಷದಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದೇನೆ. ಇದು ನನ್ನ ಕೊನೆಯ ಚುನಾವಣೆಯಾಗಿದ್ದರಿಂದ ಟಿಕೆಟ್ ನೀಡುವಂತೆ ಮನವಿ ಮಾಡಿಕೊಂಡಿದ್ದೆ. ಆದರೆ, ಪಕ್ಷವು ನನ್ನನ್ನು ಬಳಸಿಕೊಂಡು ಬಿಸಾಕಿದೆ. ಆದ್ದರಿಂದ, ಪಕ್ಷದ ರಾಜ್ಯಾಧ್ಯಕ್ಷರಿಗೆ ರಾಜೀನಾಮೆ ಪತ್ರ ನೀಡಿದ್ದೇನೆ. ಆಪ್ತರೊಂದಿಗೆ ಚರ್ಚಿಸಿ, ಮುಂದಿನ ರಾಜಕೀಯ ನಡೆ ನಿರ್ಧರಿಸುತ್ತೇನೆ' ಎಂದರು.

'ನನ್ನ ಜತೆಗೆ ಕೆಲ ಮುಖಂಡರು ಸಹ ಬಿಜೆಪಿಗೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ.ಕಾಂಗ್ರೆಸ್, ಜೆಡಿಎಸ್ ಪಕ್ಷದವರು ಸಂಪರ್ಕಿಸಿದ್ದಾರೆ. ಸದ್ಯಕ್ಕೆ ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ತಿಳಿಸಿದರು.

ನಾಳೆ ರಾಹುಲ್ ಭೇಟಿ: ಟಿಕೆಟ್ ಘೋಷಣೆ?

ಕೋಲಾರ: ನಗರದ ಹೊರವಲಯ ಟಮಕದಲ್ಲಿ ಏ.16ರಂದು ಬೆಳಿಗ್ಗೆ ನಡೆಯಲಿರುವ ಕಾಂಗ್ರೆಸ್‌ನ 'ಜೈ ಭಾರತ್' ಸಮಾವೇಶದಲ್ಲಿ ಪಾಲ್ಗೊಳ್ಳಲು ರಾಹುಲ್ ಗಾಂಧಿ ಭೇಟಿ ನೀಡುತ್ತಿದ್ದಾರೆ.

ಸಮಾವೇಶದಲ್ಲೇ ಕೋಲಾರ ಕ್ಷೇತ್ರದ ಟಿಕೆಟ್ ಘೋಷಣೆ ಮಾಡಬಹುದು, ಇಲ್ಲವೇ ಅಷ್ಟರೊಳಗೆ ಘೋಷಣೆ ಆಗಬಹುದು ಎನ್ನಲಾಗಿದೆ.

ಬೇಕಿರುವುದು ರಾಮ ಮಂದಿರವಲ್ಲ, 'ರಾಮ ರಾಜ್ಯ'

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

'ಮುಖ್ಯಮಂತ್ರಿ' ಚಂದ್ರು

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ಜನರಿಗೆ ಬೇಕಿರುವುದು ರಾಮಮಂದಿರಗಳಲ್ಲ, ರಾಮ ರಾಜ್ಯ' ಎಂದು 'ಮುಖ್ಯಮಂತ್ರಿ ಚಂದ್ರು' ಪ್ರತಿಪಾದಿಸಿದ್ದಾರೆ. ಆಮ್ ಆದ್ಮಿ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷರಾಗಿರುವ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಸಂಕ್ಷಿಪ್ತ ಸಾರ ಇಲ್ಲಿದೆ.

• ಮೌಲ್ಯಾಧಾರಿತ ರಾಜಕಾರಣ ಮರೆಯಾಗುತ್ತಿರುವಾಗ ಎಎಪಿಗೆ ಭವಿಷ್ಯ ಇದೆಯೇ?

ಖಂಡಿತ ಇದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳಿಗಿಂತ ಎಎಪಿ ಏಕೆ ಮುಖ್ಯ ಎನ್ನುವುದು ದೆಹಲಿ, ಪಂಜಾಬ್‌ಗಳಲ್ಲಿ ಸಾಬೀತಾಗಿದೆ. ಜನರಿಗೆ ಅಗತ್ಯವಿರುವ ನೀರು, ವಿದ್ಯುತ್, ಶಿಕ್ಷಣ, ಆರೋಗ್ಯಕ್ಕೆ ಪಕ್ಷ ಮೊದಲ ಆದ್ಯತೆ ನೀಡಿದೆ. ದೆಹಲಿಯ ಸರ್ಕಾರಿ ಶಾಲೆಗಳು ದೇಶಕ್ಕೆ ಮಾದರಿಯಾಗಿವೆ. ಆರೋಗ್ಯ ಯೋಜನೆಗಳಿಂದ ಬಡವರು ನೆಮ್ಮದಿ ಕಂಡಿದ್ದಾರೆ. ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಪ್ರಯಾಣ ನೀಡಲು ಸಾಧ್ಯವಾಗಿದ್ದು ಭ್ರಷ್ಟಾಚಾರ ರಹಿತ ಆಡಳಿತದಿಂದಾಗಿ. ಶೇ 40–50ರಷ್ಟು ಕಮಿಷನ್ ವ್ಯವಹಾರಕ್ಕೆ ಕಡಿವಾಣ ಹಾಕಿದ್ದರಿಂದ ಬಜೆಟ್‌ನಲ್ಲೇ ಇಂತಹ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸಾಧ್ಯವಾಗಿದೆ.

• ಮೌಲ್ಯಕ್ಕಾಗಿ ಜನರು ಜಾತಿ, ಧರ್ಮ ಮೀರುತ್ತಾರೆಯೇ?

ದೇಶದ ಜನರಿಗೆ ಬೇಕಿರುವುದು ರಾಮ ಮಂದಿರಗಳಲ್ಲ. ನಿತ್ಯವೂ ಎರಡು ಹೊತ್ತು ಊಟ, ನಿಲ್ಲಲು ನೆಲೆ, ಬಟ್ಟೆ, ಉಚಿತ ಶಿಕ್ಷಣ, ಆರೋಗ್ಯ ಸಿಗುವಂತಹ 'ರಾಮರಾಜ್ಯ. ಬಿಜೆಪಿ ನಾಯಕರು ರಾಮ ಮಂದಿರದ ಬಗ್ಗೆ ಮಾತನಾಡುತ್ತಾರೆ. ಇತರೆ ದೇವರು ಅವರಿಗೆ ಏಕೆ ಕಾಣುವುದಿಲ್ಲ? ನಮ್ಮೂರ ಹಟ್ಟಿ ಮಾರಮ್ಮ, ಬುಟ್ಟಿ ಲಕ್ಕಮ್ಮ, ಹನುಮ, ಬೀರ ದೇವರೆಲ್ಲವೇ? ಇಂತಹ ಮಾತುಗಳ ಮೂಲ ಉದ್ದೇಶ ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸುವುದೇ ಆಗಿದೆ. ಇಂತಹ ತಂತ್ರಗಳು ಜನರಿಗೆ ಕ್ರಮೇಣ ಅರ್ಥವಾಗುತ್ತವೆ.



ರಾಜ್ಯದಲ್ಲಿ ಪಕ್ಷಕ್ಕೆ ಬುನಾದಿ ಖಚಿತ

'ರಾಜ್ಯದಲ್ಲಿ ಜಾತಿ ವ್ಯವಸ್ಥೆ, ಭ್ರಷ್ಟಾಚಾರ, ಹಣ, ತೋಳ್ಬಲ ರಾಜಕಾರಣ ವಿಜೃಂಭಿಸುತ್ತಿದೆ. ಮೌಲ್ಯಾಧಾರಿತ ರಾಜಕಾರಣ ಕಾಣದಾಗಿದೆ. ಇಂತಹ ಸ್ಥಿತಿಯಲ್ಲಿ ಎಎಪಿ ಜನರಲ್ಲಿ ಸಣ್ಣ ಭರವಸೆ ಮೂಡಿಸಿದೆ. ಈ ಬಾರಿ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರಲು ಸಾಧ್ಯವಾಗದಿರಬಹುದು. ಆದರೆ, ಪಕ್ಷಕ್ಕೆ ಬುನಾದಿ ದೊರಕುವುದರಲ್ಲಿ ಯಾವ ಅನುಮಾನವೂ ಇಲ್ಲ. ಅದಕ್ಕಾಗಿಯೇ ಚುನಾವಣಾ ಕಣಕ್ಕೆ ಇಳಿಯದೇ ಎಲ್ಲ ಅಭ್ಯರ್ಥಿಗಳ ಪರ ಜನಾಭಿಪ್ರಾಯ ರೂಪಿಸಲು ರಾಜ್ಯ ಪ್ರವಾಸ ಮಾಡುತ್ತಿರುವೆ. ಗುಜರಾತ್‌ನಲ್ಲೂ ಇಂತಹ ಸ್ಥಿತಿಯೇ ಇತ್ತು. ಅಲ್ಲಿ ಪಕ್ಷ ಗೆಲ್ಲದಿದ್ದರೂ ಶೇ 14ರಷ್ಟು ಮತ ಗಳಿಸಿದೆ. ಎಎಪಿಗೆ ಭವಿಷ್ಯವಿದೆ' ಎಂದು 'ಮುಖ್ಯಮಂತ್ರಿ' ಚಂದ್ರು ಆಶಾಭಾವ ವ್ಯಕ್ತಪಡಿಸಿದರು.

• ಉಚಿತ ಕೊಡುಗೆಗಳು ಅಭಿವೃದ್ಧಿಗೆ ತೊಡಕು ಎನ್ನುತ್ತಾರಲ್ಲ?

ಪ್ರಧಾನಿ ನರೇಂದ್ರ ಮೋದಿ ಅವರ ಮಾತುಗಳಲ್ಲೇ ಗೊಂದಲಗಳಿವೆ. ಖಚಿತತೆ ಕಾಣುತ್ತಿಲ್ಲ. ದೇಶದ ಜನರಿಗೆ ಉಚಿತ ಕೊಡುಗೆಗಳನ್ನು ನೀಡಿದರೆ ದೇಶ ಆರ್ಥಿಕವಾಗಿ ದಿವಾಳಿಯಾಗುತ್ತದೆ. ಜನರು ಸೋಮಾರಿ-ಗಳಾಗುತ್ತಾರೆ ಎನ್ನುತ್ತಾರೆ. ಅದೇ ಐದಾರು ಶ್ರೀಮಂತರು ಮಾಡಿದ ₹ 11 ಲಕ್ಷ ಕೋಟಿ ಸಾಲ ಮನ್ನಾ ಮಾಡುತ್ತಾರೆ. ಅಷ್ಟು ದೊಡ್ಡ ಮೊತ್ತ ಮನ್ನಾ ಮಾಡಿದರೆ ದೇಶ ಉದ್ಧಾರವಾ-ಗುತ್ತದೆಯೇ?

• ಆಮ್ ಆದ್ಮಿ ಪಕ್ಷದ ನಾಯಕರೂ ಜೈಲು ಸೇರಿದ್ದಾರಲ್ಲ?

ಬಿಜೆಪಿಗೆ ದೇಶದಲ್ಲಿ ಸವಾಲಾಗಿರುವುದೇ ಎಎಪಿ. ಸಿಸೋಡಿಯಾ ಸೇರಿ ಕೆಲ ನಾಯಕರ ವಿರುದ್ಧ ಪಿತೂರಿ ಮಾಡಲಾಗಿದೆ. ದೆಹಲಿ ಉಪ ಮುಖ್ಯಮಂತ್ರಿಯಾಗಿದ್ದ ಸಿಸೋಡಿಯಾ ಅವರ ಮನೆಯಲ್ಲಿ ಸಿಕ್ಕಿದ್ದು ₹ 10,000, ಎಫ್‌ಐಆರ್‌ನಲ್ಲೂ ಅವರ ಹೆಸರು ಇರಲಿಲ್ಲ. ನಮ್ಮಲ್ಲಿ ಬಿಜೆಪಿ ಶಾಸಕರ ಮನೆಯಲ್ಲಿ ₹ 8 ಕೋಟಿ ಸಿಕ್ಕರೂ ಅದೊಂದು ಸಾಮಾನ್ಯ ಸಂಗತಿ ಎನ್ನುತ್ತಾರೆ. ಇದು ಬಿಜೆಪಿಯ ದ್ವಂದ್ವ ನೀತಿ. ಸಂವಿಧಾನಾತ್ಮಕ ಸಂಸ್ಥೆಗಳನ್ನು ದುರು-ಪಯೋಗಪಡಿಸಿಕೊಂಡು ವಿರೋಧ ಪಕ್ಷಗಳ ನಾಯಕರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ.

• ಜನರು ಬದಲಾಗುವ ನಿರೀಕ್ಷೆ ಇದೆಯೇ?

ಒಂದು ವಸ್ತು ಖರೀದಿ ಮಾಡುವಾಗ, ಮಗಳಿಗೆ ಮದುವೆ ಮಾಡುವಾಗ ಎಷ್ಟೊಂದು ವಿಚಾರ ಮಾಡುತ್ತೇವೆ. ಐದು ವರ್ಷ ರಾಜ್ಯ, ದೇಶವನ್ನು ಆಳುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಏಕೆ ಯೋಚಿಸುವುದಿಲ್ಲ? ಜನರು ಹಣ, ಮದ್ಯ, ಆಮಿಷಗಳಿಗೆ ಸಿಲುಕದೇ ಪ್ರಾಮಾಣಿಕ ಅಭ್ಯರ್ಥಿಗಳನ್ನು ಗೆಲ್ಲಿಸಲು ಮುಂದಾಗಬೇಕು. ರಾಜ್ಯದಲ್ಲಿ ಬದಲಾವಣೆ ನಮ್ಮಿಂದಲೇ ಆರಂಭವಾಗಲಿದೆ.

• ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ ರಾವ್ ಪಕ್ಷ ತೊರೆದದ್ದು ಹಿನ್ನಡೆಯೇ?

ಒಂದು ಪಕ್ಷಕ್ಕೆ ಎಲ್ಲರೂ ಮುಖ್ಯ. ಅವರು ನನಗಿಂತ ಮುಂಚೆ ಎಎಪಿ ಸೇರಿದವರು. ಭ್ರಷ್ಟಾಚಾರ ವಿರೋಧಿಸಿದ್ದವರು ಬಿಜೆಪಿ ಸೇರಿದ್ದು ಆಶ್ಚರ್ಯ ತಂದಿದೆ.

ರಾಜಕೀಯ ನಿವೃತ್ತಿಗೆ ಶೆಟ್ಟರ್, ಈಶ್ವರಪ್ಪಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಹಿರಿಯ ಬಿಜೆಪಿ ಮುಖಂಡರಾದ ಜಗದೀಶ ಶೆಟ್ಟರ್ ಹಾಗೂ ಕೆ.ಎಸ್. ಈಶ್ವರಪ್ಪ ಅವರಿಗೆ ಚುನಾವಣಾ ರಾಜಕಾರಣದಿಂದ ನಿವೃತ್ತಿಯಾಗುವಂತೆ ಬಿಜೆಪಿ ಹೈಕಮಾಂಡ್ ಸೂಚನೆ ನೀಡಿದೆ.

ತಮ್ಮ ಮಗ ಕಾಂತೇಶ್ ಅವರಿಗೆ ಪಕ್ಷದ ಟಿಕೆಟ್ ದೊರೆಯುವಂತೆ ದೇವರಲ್ಲಿ ಪ್ರಾರ್ಥಿಸಲು ಬಳ್ಳಾರಿ ನಗರದಲ್ಲಿರುವ ಮನೆ ದೇವರು ಚೌಡೇಶ್ವರಿ ದೇವಾಲಯಕ್ಕೆ ಕುಟುಂಬ ಸಮೇತ ಬಂದಿದ್ದ ಈಶ್ವರಪ್ಪ ಶುಕ್ರವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

'ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ತಮಗೆ ಹಾಗೂ ಜಗದೀಶ ಶೆಟ್ಟರ್ ಅವರಿಗೆ ದೂರವಾಣಿ ಕರೆ ಮಾಡಿ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವಂತೆ ಸೂಚಿಸಿದ್ದಾರೆ. ಬಿ.ಎಲ್. ಸಂತೋಷ್ ಅವರೂ ಮಾತನಾಡಿದ್ದಾರೆ' ಎಂದು ಈಶ್ವರಪ್ಪ ಹೇಳಿದರು.

'ಪಕ್ಷದ ಸೂಚನೆ ಹಿನ್ನೆಲೆಯಲ್ಲಿ ನಾನು ಚುನಾವಣಾ ರಾಜಕಾರಣದಿಂದ ಹಿಂದೆ ಸರಿಯಲು ನಿರ್ಧರಿಸಿದ್ದೇನೆ. ಬಿಜೆಪಿ ನನಗೆ ಎಲ್ಲ ಸ್ಥಾನಮಾನ, ಗೌರವ ಕೊಟ್ಟಿದೆ. ಪಕ್ಷ ವಹಿಸಿದ್ದ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ತೃಪ್ತಿ ಇದೆ. ಈ ಚುನಾವಣೆಯಲ್ಲೂ ಪಕ್ಷ ಕೊಟ್ಟ ಕೆಲಸ ಮಾಡುತ್ತೇನೆ' ಎಂದು ಈಶ್ವರಪ್ಪ ಸ್ಪಷ್ಟಪಡಿಸಿದರು.

ಬೂತ್‌ಮಟ್ಟದ ಕಾರ್ಯಕರ್ತನನ್ನು ಎಂಎಲ್‌ಎ ಮಾಡಿ, ಮಂತ್ರಿ ಮಾಡಿ, ಉಪ ಮುಖ್ಯಮಂತ್ರಿವರೆಗೆ ಎಲ್ಲ ಸ್ಥಾನಮಾನ ನೀಡಿದೆ. ಇದಕ್ಕಿಂತ ಗೌರವ ಬೇಕೇನು?

ಕೆ.ಎಸ್. ಈಶ್ವರಪ್ಪ, ಬಿಜೆಪಿ ಮುಖಂಡ

ಪಕ್ಷಕ್ಕೆ ಬಿಟ್ಟ ನಿರ್ಧಾರ: 'ಶಿವಮೊಗ್ಗ ವಿಧಾನಸಭಾ ಕ್ಷೇತ್ರದಿಂದ ತಮ್ಮ ಮಗನಿಗೆ ಟಿಕೆಟ್ ಕೊಡುವ ವಿಚಾರ ಪಕ್ಷದ ತೀರ್ಮಾನಕ್ಕೆ ಬಿಟ್ಟ ವಿಚಾರ. ಆ ಬಗ್ಗೆ ನನಗೇನೂ ಗೊತ್ತಿಲ್ಲ' ಎಂದು ಈಶ್ವರಪ್ಪ ಹೇಳಿದರು.

ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯದಲ್ಲಿ ಶುಕ್ರವಾರ ಶಾಸಕ ಡಾ.ಜಿ.ಪರಮೇಶ್ವರ ಅವರ ಕಾಲಿಗೆ ನಮಸ್ಕರಿಸಿ ಶಿಕಾರಿಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ.ವಿಜಯೇಂದ್ರ ಆಶೀರ್ವಾದ ಪಡೆದರು

ಪರಮೇಶ್ವರ ಆಶೀರ್ವಾದ ಪಡೆದ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ದೇಗುಲದಲ್ಲಿ ಶುಕ್ರವಾರ ಶಿಕಾರಿಪುರ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಅವರು ಕೊರಟಗೆರೆ ಕಾಂಗ್ರೆಸ್ ಅಭ್ಯರ್ಥಿ ಡಾ.ಜಿ.ಪರಮೇಶ್ವರ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಸಿದ್ದ-ಲಿಂಗೇಶ್ವರ ದೇವರಿಗೆ ಪೂಜೆ ಸಲ್ಲಿಸಲು ಬಂದ ಇಬ್ಬರು ಮುಖಂಡರು ಒಟ್ಟಾಗಿ ನಿಂತು ಪೂಜೆ ಸಲ್ಲಿಸಿದರು. ನಂತರ ದೇವಾಲಯದವರು ನೀಡಿದ ಶಾಲನ್ನು ಪರಮೇಶ್ವರ ಅವರು ವಿಜಯೇಂದ್ರಗೆ ಹೊದಿಸಿ ಹಾರೈಸಿದರು.

ಸವದಿ 'ಕೈ' ಸೇರ್ಪಡೆಯಿಂದ ಜಿಲ್ಲೆಯ ರಾಜಕಾರಣಕ್ಕೆ ಹೊಸ ದಿಕ್ಕು, 5 ಕ್ಷೇತ್ರಗಳ ಮೇಲೆ ಪ್ರಭಾವ

ಬಿಜೆಪಿ ವಿರುದ್ಧ 'ಲಕ್ಷ್ಮಣ ಬಾಣ' ಪ್ರಯೋಗ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆ ಮೂಲಕ ಬೆಳಗಾವಿ ರಾಜಕಾರಣ ಮತ್ತೊಮ್ಮೆ ಮಗ್ಗಲು ಬದಲಿಸಿದೆ. ರಮೇಶ ಜಾರಕಿಹೊಳಿ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ್ದರ 'ಪ್ರತಿಫಲನ' ಎಂಬಂತೆ ಕಾಂಗ್ರೆಸ್ ಈ ದಾಳ ಬಳಸಿದೆ. ಧಾಡಸಿ ವ್ಯಕ್ತಿತ್ವದ ಸವದಿ ಅವರಿಂದ ಯಾವ ಯಾವ ಕ್ಷೇತ್ರದಲ್ಲಿ ಬಿಜೆಪಿಗೆ ಸವಾಲು ಎದುರಾಗಬಹುದು ಎಂಬ ಲೆಕ್ಕಾಚಾರ ಜೋರಾಗಿದೆ.

ಲಕ್ಷ್ಮಣ ಸವದಿ

ಬಿಜೆಪಿ, ಆರ್‌ಎಸ್‌ಎಸ್ ಸಿದ್ಧಾಂತಗಳ ನೆರಳಲ್ಲಿ ಬೆಳೆದವರು ಸವದಿ. ಆದರೂ ಕಾಂಗ್ರೆಸ್, ಜೆಡಿಎಸ್ ನಾಯಕರೊಂದಿಗೆ ಎಲ್ಲಿಯೂ ವೈಷಮ್ಯಕ್ಕೆ ಆಸ್ಪದ ಕೊಟ್ಟವರಲ್ಲ. ವಿರುದ್ಧ ಸಿದ್ಧಾಂತದ ಪಕ್ಷದೊಂದಿಗೆ ಹೊಂದಿಕೊಳ್ಳುತ್ತಾರೆ ಎನ್ನುವುದು ಹಿರಿಯರ ಅಭಿಮತ.

ಅಥಣಿ, ಕಾಗವಾಡ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ಕ್ಷೇತ್ರಗಳಲ್ಲಿ ಗಾಣಿಗ ಸಮುದಾಯದ ಮತದಾರರೇ ನಿರ್ಣಾಯಕ. ಇದರೊಂದಿಗೆ ಎಸ್.ಸಿ ಮೀಸಲು ಕ್ಷೇತ್ರಗಳಾದ ಕುಡಚಿ, ರಾಯಬಾಗದಲ್ಲಿ ಕೂಡ ಸವದಿ ಬೆಂಬಲಿಗರ ದೊಡ್ಡ ದಂಡೇ ಇದೆ.

ಈ ಕ್ಷೇತ್ರಗಳಲ್ಲಿ ಸವದಿ ಕುಟುಂಬಕ್ಕೆ ನಿಷ್ಠರಾದ ಮತದಾರರ ಸಂಖ್ಯೆ ದೊಡ್ಡದು. ಅದರೊಂದಿಗೆ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳೂ ಸೇರಲಿವೆ. ಪಂಚಮಸಾಲಿ, ಮುಸ್ಲಿಂ, ಬಣಜಿಗ, ಗಾಣಿಗ, ರೆಡ್ಡಿ, ಪರಿಶಿಷ್ಟ, ಕುರುಬರಲ್ಲೂ ಸವದಿ ಆಪ್ತರನ್ನು ಹೊಂದಿದ್ದಾರೆ.

'ಮಾಜಿ ಶಾಸಕ ರಾಜು ಕಾಗೆ ಹಾಗೂ ಸವದಿ ಲೋಕಶಕ್ತಿಯಿಂದ ಬಂದವರು. ಸಹಕಾರ ಕ್ಷೇತ್ರದಲ್ಲಿ 'ಸಂಗ್ಯಾ–ಬಾಳ್ಯಾ' ಎಂದೇ ಪ್ರಸಿದ್ದರು. ಇಬ್ಬರೂ ಬಿಜೆಪಿಯಿಂದ ಶಾಸಕರಾದವರು. 'ಆಪರೇಷನ್ ಕಮಲ'ದ ಪರಿಣಾಮ ಇಬ್ಬರೂ ಕಾಂಗ್ರೆಸ್‌ಗೆ ಹೋಗುವಂತಾಗಿದೆ. ಸಂಗ್ಯಾ– ಬಾಳ್ಯಾ ಮತ್ತೆ ಒಂದಾಗಿದ್ದು ನಾಲ್ಕೂ ಕ್ಷೇತ್ರಗಳಲ್ಲಿ ತಳಮಳ ಮೂಡಿಸಿದೆ' ಎಂಬುದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಅವರ ಮಾತು.

'ತಿರುಗುಬಾಣ'ವೂ ಸಿದ್ಧ

ಅಖಂಡ ಅಥಣಿ ತಾಲ್ಲೂಕಿನಲ್ಲಿ ಕಳೆದ 20 ವರ್ಷಗಳಿಂದ ಲಕ್ಷ್ಮಣ ಸವದಿ ವಿರೋಧಿ ರಾಜಕಾರಣ ಮಾಡಿಕೊಂಡು ಬಂದವರೆಲ್ಲ ಈಗ ದಿಗಿಲಾಗಿದ್ದಾರೆ. ಕಾಂಗ್ರೆಸ್ ಟಿಕೆಟ್‌ಗಾಗಿ ಸಿದ್ಧತೆ ನಡೆಸಿದ್ದ ಐವರು ಸವದಿಗೆ 'ತಿರುಗುಬಾಣ' ಆಗುವ ಸಾಧ್ಯತೆ ಹೆಚ್ಚು.

ಗಜಾನನ ಮಂಗಸೂಳಿ (ಬಣಜಿಗ ಸಮಾಜ), ಸದಾಶಿವ ಬುಟಾಳೆ (ಮಾಳಿ), ಬಸವರಾಜ ಬುಟಾಳೆ (ಮಾಳಿ), ಮಾಜಿ ಶಾಸಕ ಶಹಜಹಾನ್ ಡೊಂಗರಗಾಂವ (ಮುಸ್ಲಿಂ), ಧರೆಪ್ಪ ಠಕ್ಕಣ್ಣವರ (ಪಂಚಮಸಾಲಿ) ಈ ಎಲ್ಲರನ್ನೂ ಬಿಜೆಪಿಗೆ ಸೆಳೆದು ಲಕ್ಷ್ಮಣ ಸುತ್ತ ಚಕ್ರವ್ಯೂಹ ರಚಿಸಲು ರಮೇಶ ಜಾರಕಿಹೊಳಿ ಸಿದ್ಧತೆ ನಡೆಸಿದ್ದಾರೆ.

ಸವದಿ ತಂತ್ರಗಳೇನು?

ಬೆಳಗಾವಿ ಉತ್ತರದ ಶಾಸಕ ಅನಿಲ ಬೆನಕೆ ಅವರನ್ನು ಕಾಂಗ್ರೆಸ್‌ಗೆ ಸೆಳೆಯುವುದು, ರಾಮದುರ್ಗದಲ್ಲಿ ಮಹಾದೇವಪ್ಪ ಯಾದವಾಡ, ಬೈಲಹೊಂಗಲದಲ್ಲಿ ಡಾ.ವಿಶ್ವನಾಥ ಪಾಟೀಲ ಹಾಗೂ ಖಾನಾಪುರದಲ್ಲಿ ಉತ್ತಮ ಪಾಟೀಲ ಅವರನ್ನು ಪಕ್ಷೇತರವಾಗಿ ನಿಲ್ಲಿಸಿ ಕಾಂಗ್ರೆಸ್ ಗೆಲುವು ಸುಲಭ ಮಾಡುವುದು, ಮೀಸಲು ಕ್ಷೇತ್ರಗಳಾದ ರಾಯಬಾಗ– ಕುಡಚಿಯಲ್ಲಿ ಕಾಂಗ್ರೆಸ್ ಮತ ಗಟ್ಟಿ-ಗೊಳಿಸುವುದು; ಇನ್ನೂ ಅನೇಕ ಬಾಣಗಳು ಲಕ್ಷ್ಮಣ ಅವರ ಬತ್ತಳಿಕೆಯಲ್ಲಿವೆ ಎನ್ನುತ್ತವೆ ಮೂಲಗಳು.

ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕ್ ಜಿಲ್ಲೆಯಲ್ಲಿ 100 ಶಾಖೆ ಹೊಂದಿದೆ. ಅಪಾರ ಸಂಖ್ಯೆಯ ರೈತರು ಇದರೊಂದಿಗೆ ಬೆಸೆದುಕೊಂಡಿದ್ದಾರೆ. ಡಿಸಿಸಿ ಬ್ಯಾಂಕ್ ಯಾರ ಕೈಯಲ್ಲಿರುವುದೋ ಅವರು ಜಿಲ್ಲೆಯ ರಾಜಕಾರಣದ ಮೇಲೆ ಹಿಡಿತ ಸಾಧಿಸುತ್ತಾರೆ. ಚಿಕ್ಕೋಡಿಯ ಬಿಜೆಪಿ ಅಭ್ಯರ್ಥಿ ಹಾಗೂ ಡಿಸಿಸಿ ಬ್ಯಾಂಕ್ ಹಾಲಿ ಅಧ್ಯಕ್ಷ ರಮೇಶ ಕತ್ತಿ ಅವರ ಕೈಯಿಂದ ಈ ಬ್ಯಾಂಕ್ ಕಿತ್ತುಕೊಳ್ಳುವುದು ಕೂಡ ಚುನಾವಣೋತ್ತರ 'ಟಾಸ್ಕ್' ಎನ್ನಲಾಗುತ್ತಿದೆ.

'ಪೀಡೆ ತೊಲಗಿತು'

ಅಥಣಿ (ಬೆಳಗಾವಿ ಜಿಲ್ಲೆ): 'ಲಕ್ಷ್ಮಣ ಸವದಿ ಸೋತಿದ್ದರೂ ಪಕ್ಷ ಅವನನ್ನು ಉಪಮುಖ್ಯ-ಮಂತ್ರಿ ಮಾಡಿತ್ತು. ನಿಮ್ಮನ್ನು (ಕಾರ್ಯಕರ್ತರನ್ನು) ಬಿಟ್ಟು ಹೋಗಿದ್ದಾನೆ. ಪೀಡೆ ತೊಲಗಿತು' ಎಂದು ಎಂದು ಶಾಸಕ ರಮೇಶ ಜಾರಕಿಹೊಳಿ ಟೀಕಿಸಿದರು.

ಇಲ್ಲಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, 'ನನಗೆ ಮಂತ್ರಿ ಸ್ಥಾನ ತಪ್ಪಿದ ಮೇಲೆ ನಾನು ಕಾಂಗ್ರೆಸ್‌ಗೆ ಹೋಗುತ್ತೇನೆ ಎಂಬ ಭ್ರಮೆ ಸವದಿಯಲ್ಲಿತ್ತು. ಆದರೆ, ನಾನು ಹೋಗಲಿಲ್ಲ. ಮಂತ್ರಿ ಮಾಡಿದರೂ ಅವ ಹೊರಹೋದ. ಒಳ್ಳೆಯದೇ ಆಯಿತು' ಎಂದರು.

'ಡಿಕೆಶಿ ಇವನನ್ನು ವಿಶೇಷ ವಿಮಾನದಲ್ಲಿ ಕರೆದುಕೊಂಡು ಹೋಗಿದ್ದಾನೆ. ಡಿಕೆಶಿ ಬಹಳ ಕುತಂತ್ರಿ. ಇಂಥವರಿಂದ ಬಚಾವಾಗಲು ನೀವು ನನಗೆ ಶಕ್ತಿ ಕೊಡಬೇಕು' ಎಂದರು.

ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ

ಕ್ಷೇತ್ರ	ಅಭ್ಯರ್ಥಿ ಹೆಸರು	ಕ್ಷೇತ್ರ	ಅಭ್ಯರ್ಥಿ ಹೆಸರು
ಕುಡಚಿ (ಎಸ್‌ಸಿ)	ಆನಂದ ಮಾಳಗಿ	ಕನಕಪುರ	ನಾಗರಾಜ
ರಾಯಭಾಗ (ಎಸ್‌ಸಿ)	ಪ್ರದೀಪ್ ಮಾಳಗಿ	ಯಲಹಂಕ	ಎಂ. ಮುನೇಗೌಡ
ಸವದತ್ತಿ–ಯಲ್ಲಮ್ಮ	ಸೌರಭ್ ಆನಂದ್ ಚೋಪ್ರಾ	ಸರ್ವಜ್ಞನಗರ	ಮೊಹಮ್ಮದ್ ಮುಸ್ತಾಫ್
ಅಥಣಿ	ಶಶಿಕಾಂತ ಪಡಸಲಗಿ ಸ್ವಾಮೀಜಿ	ಯಶವಂತಪುರ	ಜವರಾಯಿಗೌಡ
ಹುಬ್ಬಳ್ಳಿ–ಧಾರವಾಡ ಪೂರ್ವ (ಎಸ್‌ಸಿ)	ವೀರಭದ್ರಪ್ಪ ಹಾಲಹರವಿ	ತಿಪಟೂರು	ಶಾಂತಕುಮಾರ್
ಕುಮಟಾ	ಸೂರಜ್ ಸೋನಿ ನಾಯಕ	ಶಿರಾ	ಆರ್. ಉಗ್ರೇಶ್
ಹಳಿಯಾಳ	ಎಸ್.ಎಲ್. ಘೋಟ್ನೇಕರ್	ಹಾನಗಲ್	ಮನೋಹರ ತಹಸಿಲ್ದಾರ್
ಭಟ್ಕಳ	ನಾಗೇಂದ್ರ ನಾಯಕ್	ಸಿಂದಗಿ	ವಿಶಾಲಾಕ್ಷಿ ಶಿವಾನಂದ್
ಶಿರಸಿ–ಸಿದ್ದಾಪುರ	ಉಪೇಂದ್ರ ಪೈ	ಗಂಗಾವತಿ	ಎಚ್.ಆರ್. ಚನ್ನಕೇಶವ
ಯಲ್ಲಾಪುರ	ಡಾ. ನಾಗೇಶ್ ನಾಯಕ್	ಎಚ್.ಡಿ. ಕೋಟೆ (ಎಸ್.ಟಿ)	ಜಯಪ್ರಕಾಶ್ ಸಿ.
ಚಿತ್ತಾಪುರ (ಎಸ್‌ಸಿ)	ಸುಭಾಶ್‌ಚಂದ್ರ ರಾಥೋಡ್	ಜೇವರ್ಗಿ	ದೊಡ್ಡಪ್ಪಗೌಡ ನರಿಬೋಳ
ಕಲಬುರಗಿ ಉತ್ತರ	ನಾಸೀರ್ ಹುಸೇನ್ ಉಸ್ತಾದ್	ಶಹಾಪುರ	ಗುರುಲಿಂಗಪ್ಪ ಗೌಡ (ಗುರು ಪಾಟೀಲ ಶಿರವಾಳ)
ಬಳ್ಳಾರಿ ನಗರ	ಅಲ್ಲಾಭಕ್ಷ ಅಲಿಯಾಸ್ ಮುನ್ನಾ	ಕಾರವಾರ	ಚೈತ್ರಾ ಕೊಠಾರ್ಕರ್
ಹಗರಿಬೊಮ್ಮನಹಳ್ಳಿ (ಎಸ್‌ಸಿ)	ಪರಮೇಶ್ವರಪ್ಪ	ಪುತ್ತೂರು	ದಿವ್ಯಪ್ರಭಾ
ಹರಪನಹಳ್ಳಿ	ಎನ್.ಎಂ. ನೂರ್ ಅಹಮ್ಮದ್	ಕಡೂರು	ವೈ.ಎಸ್.ವಿ. ದತ್ತ
ಸಿರಗುಪ್ಪ (ಎಸ್‌ಟಿ)	ಪರಮೇಶ್ವರ ನಾಯಕ	ಹೊಳೆನರಸೀಪುರ	ಎಚ್.ಡಿ. ರೇವಣ್ಣ
ಕಂಪ್ಲಿ (ಎಸ್‌ಟಿ)	ರಾಜು ನಾಯಕ್	ಬೇಲೂರು	ಕೆ.ಎಸ್.ಲಿಂಗೇಶ್
ಕೊಳ್ಳೇಗಾಲ (ಎಸ್‌ಸಿ)	ಪುಟ್ಟಸ್ವಾಮಿ	ಸಕಲೇಶಪುರ (ಎಸ್‌ಸಿ)	ಎಚ್.ಕೆ. ಕುಮಾರಸ್ವಾಮಿ
ಗುಂಡ್ಲುಪೇಟೆ	ಕಡಬೂರು ಮಂಜುನಾಥ್	ಅರಕಲಗೂಡು	ಎ. ಮಂಜು
ಕಾಪು	ಸಬೀನಾ ಸಮದ್	ಹಾಸನ	ಸ್ವರೂಪ್ ಪ್ರಕಾಶ್
ಕಾರ್ಕಳ	ಶ್ರೀಕಾಂತ್ ಕೊಚ್ಚೂರು	ಶ್ರವಣಬೆಳಗೊಳ	ಸಿ.ಎನ್. ಬಾಲಕೃಷ್ಣ
ಉಡುಪಿ	ದಕ್ಷತ್ ಆರ್. ಶೆಟ್ಟಿ	ಮಹಾಲಕ್ಷ್ಮಿ ಬಡಾವಣೆ	ರಾಜಣ್ಣ
ಬೈಂದೂರು	ಮನ್ಸೂರ್ ಇಬ್ರಾಹಿಂ	ಹಿರಿಯೂರು	ರವೀಂದ್ರಪ್ಪ
ಕುಂದಾಪುರ	ರಮೇಶ್ ಕುಂದಾಪುರ	ಮಾಯಕೊಂಡ (ಎಸ್‌ಸಿ)	ಆನಂದಪ್ಪ
ಮಂಗಳೂರು ದಕ್ಷಿಣ	ಸುಮತಿ ಹೆಗಡೆ	ಸೊರಬ	ಚಂದ್ರೇಗೌಡ

ರೌಡಿಶೀಟರ್ ಮಣಿಕಂಠಗೆ ಟಿಕೆಟ್: ಸಮರ್ಥನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಚಿತ್ತಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ್ ಖರ್ಗೆ ಅವರನ್ನು ಸೋಲಿಸುವುದೇ ಬಿಜೆಪಿಯ ಉದ್ದೇಶ. ಅದಕ್ಕೆ ಮಣಿಕಂಠ ರಾಠೋಡ ಅವರ ಮೇಲೆ ಪ್ರಕರಣಗಳಿದ್ದರೂ ಟಿಕೆಟ್ ನೀಡಲಾಗಿದೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಸಮರ್ಥಿಸಿಕೊಂಡರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರು ಜಿಲ್ಲೆಯಿಂದ ಗಡಿಪಾರು ಆದೇಶ ಪಡೆದ ವ್ಯಕ್ತಿಗೆ ಟಿಕೆಟ್ ನೀಡಿರುವ ಬಗ್ಗೆ ಪ್ರಶ್ನಿಸಿದಾಗ, 'ಮಣಿಕಂಠ ವಿರುದ್ಧ ಕೆಲ ಪ್ರಕರಣಗಳು ಇರುವುದು ಪಕ್ಷದ ಗಮನದಲ್ಲಿದೆ. ಡಿ.ಕೆ. ಶಿವಕುಮಾರ್ ಅವರ ವಿರುದ್ಧವೂ ಹಲವು ಪ್ರಕರಣಗ-ಳಿವೆ. ಆದರೆ, ಅವರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿಲ್ಲವೇ' ಎಂದು ಮರುಪಶ್ನಿಸಿದರು.

'ಪ್ರಕರಣಗಳನ್ನು ಎದುರಿಸುತ್ತಿರುವ ವ್ಯಕ್ತಿಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದೆ' ಎಂದರು.

ಕಾಂಗ್ರೆಸ್ ಸೇರಿದ ಲಕ್ಷ್ಮಣ ಸವದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥಣಿ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡಲಿಲ್ಲ ಎಂದು ಅಸಮಾಧಾನಗೊಂಡಿದ್ದ ಲಕ್ಷ್ಮಣ ಸವದಿ ಶುಕ್ರವಾರ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರಿದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಜತೆ ಬೆಳಗಾವಿಯಿಂದ ವಿಶೇಷ ವಿಮಾನದಲ್ಲಿ ಬಂದ ಅವರು ರಾಜೀನಾಮೆ ನೀಡುವ ಮೊದಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮನೆಗೆ ತೆರಳಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆ ಚರ್ಚಿಸಿದರು. ನಂತರ ಎಲ್ಲರೂ ಸಿದ್ದರಾಮಯ್ಯ ಮನೆಗೆ ತೆರಳಿ ಸಮಾಲೋಚನೆ ನಡೆಸಿದರು. ಸವದಿ ಕಾಂಗ್ರೆಸ್ ಸೇರುವುದಾಗಿ ಶಿವಕುಮಾರ್ ಘೋಷಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿ ಮಾಡಿದ ಸವದಿ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಸೇರಿದರು.

ಲಕ್ಷ್ಮಣ ಸವದಿ ಅವರನ್ನು ಶುಕ್ರವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೂಗುಚ್ಛನೀಡಿ ಸ್ವಾಗತಿಸಿದರು. ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಬಿಜೆಪಿ ತೊರೆದ ಮಾಜಿ ಶಾಸಕ ಶಶಿಕಾಂತ್ ನಾಯಕ್ ಇದ್ದಾರೆ
– ಪ್ರಜಾವಾಣಿ ಚಿತ್ರ

ನಂತರ ಸುದ್ದಿಗಾರರ ಜತೆ ಮಾತನಾಡಿದ ಸವದಿ, 'ಅವಶ್ಯ ಇರುವಲ್ಲಿ ನನ್ನನ್ನು ಬಳಸಿಕೊಳ್ಳಲು ಹೇಳಿದ್ದೇನೆ. ಪಕ್ಷ ಬಯಸಿದರೆ ಮುಖ್ಯಮಂತ್ರಿ ಬೊಮ್ಮಾಯಿ ಸ್ಪರ್ಧಿಸಿರುವ ಶಿಗ್ಗಾವಿ ಸೇರಿದಂತೆ ಎಲ್ಲ 224 ಕ್ಷೇತ್ರಗಳ್ಲೂ ಸ್ಪರ್ಧಿಸಲು ಸಿದ್ಧ' ಎಂದರು.

ಲಕ್ಷ್ಮಣ ಸವದಿ ಕಾಂಗ್ರೆಸ್‌ಗೆ ಸೇರಿದ್ದು ದುಃಖ ತರಿಸಿದೆ. ಅವರಿಗೆ ಕಾಂಗ್ರೆಸ್‌ನಲ್ಲಿ ರಾಜಕೀಯ ಭವಿಷ್ಯ ಇರಬಹುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದ 63 ಕ್ಷೇತ್ರಗಳಲ್ಲಿ ಬಿಜೆಪಿ ನಾಯಕರು ವಲಸೆ ಹೋಗುತ್ತಿದ್ದಾರೆ. ಶೇ 90ರಷ್ಟು ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಬೆಳಗಾವಿಯಲ್ಲಿ ರಾಜ್ಯದ ಗಡಿ ಅಪಾಯದಲ್ಲಿದ್ದು, ಇಂತಹ ಸಮಯದಲ್ಲಿ ಸವದಿ ಅವರ ಬರುವಿಕೆ ಇನ್ನಷ್ಟು ಶಕ್ತಿ ತುಂಬಲಿದೆ. ಪಕ್ಷಕ್ಕಾಗಿ ದಶಕಗಳ ಸಮಯ ದುಡಿದ ನಾಯಕರನ್ನು ಬಿಜೆಪಿ ಮೂಲೆಗುಂಪು ಮಾಡುತ್ತಿದೆ ಎಂದರು.

ಸವದಿ ಜತೆಗೆ, ಮಾಜಿ ಸಚಿವ ಶಶಿಕಾಂತ ನಾಯಕ್, ಮುಖಂಡರಾದ ಶಂಕರ್ ಗೌಡ, ಅಕ್ಕಪ್ಪ ಕಾಂಗ್ರೆಸ್ ಸೇರಿದರು.

ಅಸ್ತಿತ್ವಕ್ಕೆ ಪಕ್ಷಾಂತರ: ಅಧಿಕಾರಕ್ಕೆ ಚಮತ್ಕಾರ

ಒಂದನೇ ಪುಟದಿಂದ...

ಶುಕ್ರವಾರ ಕಾಂಗ್ರೆಸ್, ಜೆಡಿಎಸ್ ಕಚೇರಿಗಳು ಬಿರುಸಿನ ಚಟುವಟಿಕೆಯ ಕೇಂದ್ರಗಳಾಗಿದ್ದವು. ಕಾಂಗ್ರೆಸ್‌ಗೆ ಸವದಿ ಸೇರ್ಪಡೆಯಾದರೆ, ಜೆಡಿಎಸ್‌ಗೆ ಹಲವು ನಾಯಕರು ಸೇರಿದರು. ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ಮುಖಂಡರು ಅತೃಪ್ತರನ್ನು ಶಮನಗೊಳಿಸುವ ಮತ್ತು ಕೊನೆಯ ಕಂತಿನ 12 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಸಂಬಂಧ ತೊಡಕುಗಳನ್ನು ನಿವಾರಿಸುವತ್ತ ಗಮನ ಕೇಂದ್ರೀಕರಿಸಿದ್ದರು.

ಸವದಿಗೆ ಭರ್ಜರಿ ಸ್ವಾಗತ: ಸವದಿ ಅವರು ಬೆಳಿಗ್ಗೆ ಬೆಂಗಳೂರಿಗೆ ವಿಶೇಷ ವಿಮಾನದಲ್ಲಿ ಬಂದರು. ಬಳಿಕ ಅವರು ಡಿ.ಕೆ.ಶಿವಕುಮಾರ್ ಮತ್ತು ರಣದೀಪ್‌ಸಿಂಗ್ ಸುರ್ಜೇವಾಲ ಅವರ ಜತೆಗೂಡಿ ಸಿದ್ದರಾಮಯ್ಯ ಮನೆಗೆ ಹೋಗಿ ಚರ್ಚಿಸಿದರು. ಬಿಜೆಪಿಯ ಎಲ್ಲ ಹುದ್ದೆಗಳಿಗೂ ಮತ್ತು ವಿಧಾನಪರಿಷತ್ ಸದಸ್ಯ ಸ್ಥಾನಕ್ಕೂ ರಾಜೀನಾಮೆ ನೀಡಿದರು. ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದರು.

ಮತ್ತೊಂದು ಕಡೆದ ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ಶಿರಸಿಗೆ ಹೋಗಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಳಿಕ ಅವರು ಬೆಂಗಳೂರಿನಲ್ಲಿ ಜೆಡಿಎಸ್ ಕಚೇರಿಯಲ್ಲಿ ಎಚ್.ಡಿ. ಕುಮಾರ ಸ್ವಾಮಿ, ಸಿ.ಎಂ.ಇಬ್ರಾಹಿಂ ಸಮ್ಮುಖದಲ್ಲಿ ಪಕ್ಷ ಸೇರಿದರು. ಈ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ಹರಿಹಾಯ್ದ ಎಂ.ಪಿ. ಕುಮಾರಸ್ವಾಮಿ, 'ನನ್ನನ್ನ ಹುಚ್ಚು ನಾಯಿ ಓಡಿಸಿದ ಹಾಗೆ ಪಕ್ಷದಿಂದ ಓಡಿಸಿದರು. ಇದಕ್ಕೆಲ್ಲಾ ಸಿ.ಟಿ.ರವಿ ಹಾಗೂ ಪ್ರಾಣೇಶ್ ಕಾರಣ' ಎಂದರು.

'ಪಕ್ಷ ಬಿಟ್ಟವರಿಗೆ ಬಾಗಿಲು ಬಂದ್'

'ಐದಾರು ಮಂದಿ ಪಕ್ಷ ತೊರೆದರೂ ನಷ್ಟವೇನಿಲ್ಲ. ಆದರೆ, ಪಕ್ಷವನ್ನು ತೊರೆದರೆ ಸದ್ಯಕ್ಕೆ ಮತ್ತೆ ಅಂತಹವರಿಗೆ 20 ವರ್ಷ ಪಕ್ಷದ ಬಾಗಿಲು ಬಂದ್ ಆಗಿರುತ್ತದೆ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಹೇಳಿದರು.

'ಚುನಾವಣೆಯಲ್ಲಿ ಸೋತರೂ ಲಕ್ಷ್ಮಣ ಸವದಿ ಅವರನ್ನು ಉಪ ಮುಖ್ಯಮಂತ್ರಿ ನೀಡಿದೆವು. ವಿಧಾನ ಪರಿಷತ್‌ಗೂ ಆಯ್ಕೆ ಮಾಡಿದೆವು. ಪಕ್ಷದ ಉನ್ನತ ಸಮಿತಿಗಳಲ್ಲೂ ಸ್ಥಾನ ನೀಡಿದ್ದೆವು. ಪಕ್ಷ ಬಿಟ್ಟು ಹೋಗುವವರಿಗೆ ಮತ್ತೆ ಪಕ್ಷದ ಬಾಗಿಲು ತೆರೆಯುವ ಪ್ರಶ್ನೆಯೇ ಇಲ್ಲ'

'ಕಾಂಗ್ರೆಸ್ ಸೇರಿದ ಲಕ್ಷ್ಮಣ ಸವದಿ ಅವರಿಗೆ ಮುಂದೆ ಪಶ್ಚಾತಾಪ ಪಡುವ ಸ್ಥಿತಿ ಬರಲಿದೆ. ಬಿಜೆಪಿಯಲ್ಲಿ ಲಕ್ಷಾಂತರ ಕಾರ್ಯಕರ್ತರು ಶಾಸಕ, ಸಂಸದರಾಗದೇ, ಯಾವುದೇ ಸ್ಥಾನಮಾನಗಳನ್ನೂ ಪಡೆಯದೇ ಕೆಲಸ ಮಾಡುತ್ತಿದ್ದಾರೆ. ಟಿಕೆಟ್ ಸಿಗದಿದ್ದಾಗ ಅಸಮಾಧಾನಗೊಳ್ಳುವುದು ಸಹಜ. ಆದರೆ, ಉನ್ನತ ಸ್ಥಾನಗಳನ್ನು ಪಡೆದೂ, ಅಧಿಕಾರ ಅನುಭವಿಸಿಯೂ ಸ್ವಾರ್ಥಕ್ಕಾಗಿ ಪಕ್ಷ ತೊರೆಯುವವರನ್ನು ಜನರು ಮರೆಯುವುದಿಲ್ಲ' ಎಂದೂ ಹೇಳಿದರು.

ಅಲ್ಲದೇ, ವಿಧಾನಪರಿಷತ್‌ನ ಮಾಜಿ ಸದಸ್ಯ ಜಿ. ರಘು ಆಚಾರ್, ಜೇವರ್ಗಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ, ಶಹಾಪುರ ಕ್ಷೇತ್ರದ ಮಾಜಿ ಶಾಸಕ ಗುರುಲಿಂಗಪ್ಪಗೌಡ (ಗುರು ಪಾಟೀಲ ಶಿರವಾಳ) ಸೇರಿದಂತೆ ಹಲವು ಮುಖಂಡರು ಕಾಂಗ್ರೆಸ್ ಮತ್ತು ಬಿಜೆಪಿ ತೊರೆದು ಜೆಡಿಎಸ್ ಸೇರಿದರು. ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಎಲ್ಲರಿಗೂ ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು.

ರಘು ಆಚಾರ್ ಚಿತ್ರದುರ್ಗ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ-ಯಾಗಿದ್ದರು. ದೊಡ್ಡಪ್ಪಗೌಡ ಪಾಟೀಲ ಜೇವರ್ಗಿ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಗುರುಲಿಂಗ-ಪ್ಪಗೌಡ ಬಿಜೆಪಿ ಟಿಕೆಟ್ ಪಡೆಯಲು ಪ್ರಯತ್ನಿಸಿದ್ದರು. ಎಲ್ಲರೂ ಜೆಡಿಎಸ್‌ನಿಂದ ಚುನಾವಣಾ ಕಣಕ್ಕಿಳಿಯುವ ಸಾಧ್ಯತೆ ಇದೆ. ಕಾರವಾರದ ಚೈತ್ರಾ ಕೋಟೆಕಾರ್, ಪಾವಗಡದ ಶ್ರೀರಾಮ, ಹಿರಿಯೂರಿನ ಬಿಜೆಪಿ ಮುಖಂಡ ಎಚ್. ಆರ್. ತಮ್ಮಯ್ಯ ಸೇರಿದಂತೆ ಹಲವರು ವಿವಿಧ ಪಕ್ಷಗಳನ್ನು ತೊರೆದು ಜೆಡಿಎಸ್ ಸೇರಿದರು. ಶಹಾಪುರ ನಗರಸಭೆಯ 10 ಸದಸ್ಯರೂ ಗುರುಲಿಂಗಪ್ಪ ಗೌಡ ಅವರ ಜತೆ ಜೆಡಿಎಸ್ ಜತೆ ಸೇರಿದರು.

ಬೆಳಗಾವಿ ಉತ್ತರ ಶಾಸಕ ಅನಿಲ್ ಬೆನಕೆ ಅವರು ಕಾಂಗ್ರೆಸ್ ಸೇರಲಿದ್ದಾರೆ. ಅರಸಿಕೆರೆಯಲ್ಲಿ ಬಿಜೆಪಿ ಟಿಕೆಟ್ ಕೈತಪ್ಪಿ-ದ್ದರಿಂದ ಜೆಡಿಎಸ್‌ನಿಂದ ಟಿಕೆಟ್ ಪಡೆದು ಸ್ಪರ್ಧಿಸಲು ಎನ್.ಆರ್.ಸಂತೋಷ್, ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಬಂಡೆದ್ದವರಿಗೆ ಜೆಡಿಎಸ್ ಮಣೆ

ಒಂದನೇ ಪುಟದಿಂದ...

ಚಿತ್ತಾಪುರ (ಎಸ್‌ಸಿ) ಮೀಸಲು ಕ್ಷೇತ್ರದಲ್ಲಿ ನ್ಯಾಯಾಧೀಶರ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದಿರುವ ಸುಭಾಶ್‌ಚಂದ್ರ ರಾಥೋಡ್ ಅವರನ್ನು ಕಣಕ್ಕಿಳಿಸಲಾಗುತ್ತಿದೆ. ಕೊಳ್ಳೇಗಾಲ (ಎಸ್‌ಸಿ) ಮೀಸಲು ಕ್ಷೇತ್ರದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಸ್ವಾಮಿ ಅವರಿಗೆ ಟಿಕೆಟ್ ನೀಡಲಾಗಿದೆ.

ಚಿತ್ರದುರ್ಗ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ರಘು ಆಚಾರ್ ಕೂಡ ಶುಕ್ರವಾರ ಜೆಡಿಎಸ್ ಸೇರಿದರು. ಮೂಡಿಗೆರೆ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ಎಂ.ಪಿ. ಕುಮಾರಸ್ವಾಮಿ ಅವರೂ ಜೆಡಿಎಸ್ ಪಕ್ಷಕ್ಕೆ ಜಿಗಿದರು. ಈ ಎರಡೂ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಇನ್ನೂ ಅಂತಿಮಗೊಳಿಸಿಲ್ಲ.

'ಇನ್ನೂ ಹಲವರು ಬರಲಿದ್ದಾರೆ'

'ಇತರ ಪಕ್ಷಗಳ ಇನ್ನೂ ಹಲವು ನಾಯಕರು ಜೆಡಿಎಸ್‌ಗೆ ಬರುತ್ತಾರೆ. ಬೆಳಗಾವಿ ಜಿಲ್ಲೆಯ ಪ್ರಬಲ ನಾಯಕರು ನಮ್ಮ ಪಕ್ಷಕ್ಕೆ ಬರುವವರಿದ್ದಾರೆ' ಎಂದು ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

'ಮುಂದಿನ ಎರಡು ದಿನಗಳಲ್ಲಿ ಇನ್ನೂ ಹಲವರು ನಮ್ಮೊಂದಿಗೆ ಬರುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ ಏಳರಿಂದ ಎಂಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದಕ್ಕೆ ಅನುಕೂಲ ಆಗಲಿದೆ' ಎಂದರು.

ದತ್ತ ಅವರಿಗೂ ಅವಕಾಶ: ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಹೋಗಿ, ಟಿಕೆಟ್ ಕೈತಪ್ಪಿದ ಬಳಿಕ ಪಕ್ಷಕ್ಕೆ ಮರಳಿದ್ದ ಕಡೂರು ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರಿಗೂ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್‌ನಿಂದ ಜೆಡಿಎಸ್ ಸೇರಿದ್ದ ಸಿ.ಎಂ. ಧನಂಜಯ ಅವರಿಗೆ ಈ ಹಿಂದೆ ಕಡೂರು ಕ್ಷೇತ್ರದ ಟಿಕೆಟ್ ಘೋಷಿಸಲಾಗಿತ್ತು.

'ಪಕ್ಷಗಳಿಂದ ಭೋವಿ ಸಮುದಾಯ ಕಡೆಗಣನೆ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಬಿಜೆಪಿ ಮತ್ತು ಕಾಂಗ್ರೆಸ್ ಭೋವಿ ಸಮುದಾಯವನ್ನು ನಿರ್ಲಕ್ಷ್ಯ ಮಾಡಿದ್ದು, ವಿಧಾನಸಭಾ ಚುನಾವಣೆಗೆ ನಿರೀಕ್ಷೆಯಷ್ಟು ಟಿಕೆಟ್ ನೀಡಿಲ್ಲ. ಇದೇ ಧೋರಣೆ ಮುಂದುವರಿದರೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಾಗುವುದು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದರು.

'ಅರವಿಂದ ಲಿಂಬಾವಳಿ ವಿದ್ಯಾರ್ಥಿ ದಿಸೆಯಿಂದ ಬಿಜೆಪಿಗೆ ಶ್ರಮಿಸಿದ್ದಾರೆ. ಪಕ್ಷ ಕಟ್ಟಲು ಶ್ರಮಿಸಿದ ಅವರನ್ನು ಕಡೆಗಣಿಸುತ್ತಿರುವುದು ಖಂಡನೀಯ. ಇದಕ್ಕೆ ಸ್ಪಷ್ಟ ಕಾರಣ ಕೂಡ ನೀಡುತ್ತಿಲ್ಲ. ಕೂಡಲೇ ಅವರಿಗೆ ಟಿಕೆಟ್ ಘೋಷಿಸಬೇಕು' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'ಗೂಳಿಹಟ್ಟಿ ಡಿ.ಶೇಖರ್ ಅವರಿಗೆ ಹೊಸದುರ್ಗ ಕ್ಷೇತ್ರದ ಟಿಕೆಟ್ ಕೈತಪ್ಪಿದೆ. 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಪ್ರಮುಖ ಕಾರಣರಾಗಿದ್ದ ಅವರನ್ನು ನಿರ್ಲಕ್ಷ್ಯ ಮಾಡಿರುವುದು ಸರಿಯಲ್ಲ. ಕಳೆದ ಚುನಾವಣೆಯಲ್ಲಿ ಸಮುದಾಯದ 9 ನಾಯಕರು ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಅವಕಾಶ ಮಾಡಿಕೊಟ್ಟಿತ್ತು. ಈ ಬಾರಿ ಐವರಿಗೆ ಮಾತ್ರ ಟಿಕೆಟ್ ಸಿಕ್ಕಿರುವುದು ಬೇಸರ ಮೂಡಿಸಿದೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ಅಂತೆಯೇ, ಕಳೆದ ಬಾರಿ ಜಯಗಳಿಸಿದ್ದ ಅಖಂಡ ಶ್ರೀನಿವಾಸಮೂರ್ತಿ ಅವರನ್ನೂ ಕಾಂಗ್ರೆಸ್ ಪರಿಗಣಿಸುತ್ತಿಲ್ಲ. ಟಿಕೆಟ್ ಘೋಷಣೆಯಲ್ಲಿ ವಿಳಂಬ ನೀತಿ ಅನುಸರಿಸಿ ರಾಜಕಾರಣದಿಂದ ದೂರ ಇಡುವ ಹುನ್ನಾರ ಮಾಡಿದೆ. 2018ರ ಚುನಾವಣೆಯಲ್ಲಿ 7 ಜನರ ಸ್ಪರ್ಧೆಗೆ ಅವಕಾಶ ನೀಡಿದ್ದ ಕಾಂಗ್ರೆಸ್, ಈ ಬಾರಿ ಇಬ್ಬರಿಗೆ ಟಿಕೆಟ್ ನೀಡಿ ನಿರಾಸೆ ಮೂಡಿಸಿದೆ' ಎಂದು ಅವರು ಹೇಳಿದರು.

'ಈ ನಿರ್ಲಕ್ಷ್ಯದ ಬಗ್ಗೆ ಕೂಡಲೇ ಸಮುದಾಯದ ಸಭೆ ಕರೆದು ಚುನಾವಣೆಯಲ್ಲಿ ಕೈಗೊಳ್ಳುವ ನಿಲುವನ್ನು ಶೀಘ್ರವೇ ಪ್ರಕಟಿಸಲಾಗುವು-ದು' ಎಂದು ಹೇಳಿದರು.

ಟಿಕೆಟ್ ಕೊಡದಿದ್ದರೆ 25 ಕ್ಷೇತ್ರಗಳ ಮೇಲೆ ಪರಿಣಾಮ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಉತ್ತರ ಕರ್ನಾಟಕದ ಹಿರಿಯ ನಾಯಕನಾದ ನನಗೆ ಟಿಕೆಟ್ ನೀಡದಿದ್ದರೆ, ಈ ಭಾಗದ ಸುಮಾರು 25 ಕ್ಷೇತ್ರಗಳ ಫಲಿತಾಂಶಗಳ ಮೇಲೆ ಪರಿಣಾಮ ಬೀರಲಿದೆ' ಎಂದು ಬಿಜೆಪಿ ಶಾಸಕ ಜಗದೀಶ ಶೆಟ್ಟರ್ ಎಚ್ಚರಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿ, 'ನಡ್ಡಾ ಅವರಿಗೆ ಎಲ್ಲವನ್ನೂ ವಿವರಿಸಿದ್ದೇನೆ. ಬಿ.ಎಸ್. ಯಡಿಯೂರಪ್ಪ ಅವರೊಂದಿಗೂ ಮಾತುಕತೆ ನಡೆಸಿದ್ದೇನೆ. ಈ ದುಷ್ಪರಿಣಾಮದ ಕುರಿತು ವರಿಷ್ಠರು ಯೋಚಿಸಬೇಕು' ಎಂದರು.

'ಜೋಶಿ ಅವರು, ನಿಮಗೆ ಟಿಕೆಟ್ ಸಿಗುವ ವಿಶ್ವಾಸ ವ್ಯಕ್ತಪಡಿ-ಸಿದ್ದಾರಲ್ಲ' ಎಂದು ಸುದ್ದಿಗಾರರು ಕೇಳಿದಾಗ, 'ವಿಶ್ವಾಸ ವ್ಯಕ್ತ-ಪಡಿಸುವುದಲ್ಲ, ಫಲಿತಾಂಶ ಬೇಕಲ್ಲವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೂರ್ಯಕಾಂತ ಬಂಡಾಯ: ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೀದರ್: ಬೀದರ್ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಆಕಾಂಕ್ಷಿ-ಯಾಗಿದ್ದ ಮುಖಂಡ ಸೂರ್ಯಕಾಂತ ನಾಗಮಾರಪಳ್ಳಿ ಅವರು ಪಕ್ಷೇತರರಾಗಿ ಏಪ್ರಿಲ್ 17 ಅಥವಾ 20ರಂದು ನಾಮಪತ್ರ ಸಲ್ಲಿಸಲು ನಿರ್ಧರಿಸಿದ್ದಾರೆ.

ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಶುಕ್ರವಾರ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಸೂರ್ಯಕಾಂತ, 'ನನ್ನ ತಂದೆ-ತಾಯಿ ತೀರಿ ಹೋಗಿದ್ದಾರೆ. ಕ್ಷೇತ್ರದ ಜನರೇ ನನ್ನ ತಂದೆ-ತಾಯಿ. ನನಗೂ ಒಂದು ಅವಕಾಶ ಕೊಡಿ. ಯಾವುದೇ ಭೇದ ಭಾವ ಮಾಡದೆ ಸಂಕಷ್ಟದಲ್ಲಿದ್ದವರಿಗೆ ನೆರವಾಗಿದ್ದೇನೆ. ನಾನೇನೂ ಆಸ್ತಿ ಮಾಡಿಲ್ಲ. ಒಳ್ಳೆಯ ಗುಣಗಳೇ ನನ್ನ ಆಸ್ತಿ' ಎಂದರು.

ತಂಟೆಗಷ್ಟೇ ನೆಲ – ಜಲ ಇತ್ಯರ್ಥಕ್ಕೆ ಇಲ್ಲ ಛಲ

• ವೈ.ಗ. ಜಗದೀಶ್

ಸ್ವಾತಂತ್ರ್ಯದ ಬಳಿಕ ಭಾಷೆ ಆಧಾರದ ಮೇಲೆ ಪ್ರಾಂತ್ಯಗಳನ್ನು ವಿಂಗಡಿಸಲಾಯಿತು. ಕನ್ನಡನಾಡಿಗೆ ಚೆಂದದ ಗಡಿರೇಖೆಯೊಂದನ್ನು ಕಟ್ಟಿಕೊಂಡಿದ್ದೇವೆ. ಒಕ್ಕೂಟ ವ್ಯವಸ್ಥೆಯೊಳಗೆ ಇದನ್ನು ಶಾಸನಾತ್ಮಕವಾಗಿಯೇ ಒಪ್ಪಿಕೊಂಡೂ ಬಂದಿದ್ದೇವೆ. ಹಾಗಿದ್ದರೂ ನೆಲ–ಜಲದ ವಿಷಯ ಬಂದಾಗ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಗೋವಾ ಮತ್ತು ಆಂಧ್ರಪ್ರದೇಶ–ತೆಲಂಗಾಣ ತಕರಾರು ತೆಗೆಯುತ್ತಲೇ ಬಂದಿವೆ. ಇದನ್ನು ಸಮರ್ಥವಾಗಿ ಎದುರಿಸಿ, ನೆಲ–ಜಲದ ಪ್ರಶ್ನೆ ಬಂದಾಗ ಕರ್ನಾಟಕದ ಸ್ವಾಭಿಮಾನ, ಸಾರ್ವಭೌಮತ್ವ ಹಾಗೂ ನ್ಯಾಯಯುತವಾಗಿ ನಮ್ಮದೆಂಬ ಹಕ್ಕು ಪ್ರತಿಪಾದಿಸುವ ವಿಷಯದಲ್ಲಿ ನಮ್ಮ ರಾಜಕೀಯ ಪಕ್ಷಗಳ ನಿಲುವುಗಳು ಅನೇಕ ಬಾರಿ 'ಅನುಕೂಲ ಸಿಂಧು' ಹಾದಿಯನ್ನೇ ಆಯ್ಕೆ ಮಾಡಿಕೊಂಡಿವೆ.

ತಮಿಳುನಾಡು, ಆಂಧ್ರ, ಮಹಾರಾಷ್ಟ್ರದ ರೀತಿಯಲ್ಲಿ ಪ್ರಾದೇಶಿಕ ಪಕ್ಷವೊಂದು ಬಲಿಷ್ಠವಾಗಿ ಇಲ್ಲದೇ ಇರುವುದು ಕನ್ನಡ ನಾಡಿನ ದೌರ್ಭಾಗ್ಯ. ನೆಲ–ಜಲ ವಿವಾದ ಎದ್ದಾಗಲೆಲ್ಲ ಕಾಂಗ್ರೆಸ್–ಬಿಜೆಪಿ ಎಂಬ ಎರಡು ರಾಷ್ಟ್ರೀಯ ಪಕ್ಷಗಳ ಸ್ಥಳೀಯ ನಾಯಕರು ತಮ್ಮ 'ಹೈಕಮಾಂಡ್'ನ ಬಾಲಂಗೋಚಿಗಳಾಗಿ, ವರಿಷ್ಠರ ಆಣತಿಯಂತೆ ನಡೆದಿದ್ದೇ ಹೆಚ್ಚು. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರಗಳು ಅಧಿಕಾರದಲ್ಲಿದ್ದಾಗ, ಕರ್ನಾಟಕದಲ್ಲಿ ಸರ್ಕಾರ ನಡೆಸುವವರ ನುಡಿಯಷ್ಟೇ ಉಗ್ರವಾಗಿರುತ್ತದೆ. ನಡೆ ಯಾರಿಗೂ ಕಾಣಿಸದಷ್ಟು ಸೊರಗಿರುತ್ತದೆ. ಇದು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಅನ್ವಯವಾಗುವ ಮಾತು.

ಕಾಂಗ್ರೆಸ್ ಹೈಕಮಾಂಡ್ ತೀರಾ ಶಕ್ತಿಹೀನ ಸ್ಥಿತಿಯತ್ತ ಸಾಗುತ್ತಿದ್ದಾಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಈ ವಿಷಯದಲ್ಲಿ ತುಸು ಸೆಟೆದು ನಿಂತಿದ್ದರು. ಸಿದ್ದರಾಮಯ್ಯನವರು ನೆಲ–ಜಲದ ಹಿತಕಾಯುವ ನಿಲುವು ಪ್ರಖರವಾಗುವ ಹೊತ್ತಿಗೆ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಹಿಡಿಯಿತು. ಹೀಗಾಗಿ, ಅವರು ಮತ್ತಷ್ಟು ಕಟುವಾದ ನಿಲುವು ತೆಗೆದುಕೊಂಡರು.

ಕರ್ನಾಟಕದ ಅಸ್ಮಿತೆಯನ್ನು ಕಾಪಿಟ್ಟು, ಕೇಂದ್ರ ಸರ್ಕಾರದಲ್ಲಿ ತಮ್ಮ ನ್ಯಾಯಯುತ ಪಾಲು ಕೇಳುವಷ್ಟು ಬಲಿಷ್ಠ ಪ್ರಾದೇಶಿಕ ಪಕ್ಷವಾಗಿ ಬೆಳೆಯುವ ಎಲ್ಲ ಅವಕಾಶಗಳೂ ಜೆಡಿಎಸ್‌ಗೆ ಇತ್ತು. 1994ರಿಂದೀಚೆಗೆ ಯಾವತ್ತೂ ಅಧಿಕಾರ ಹಿಡಿಯುವಷ್ಟು ಬಲ ಸಿಗದೇ ಇರುವುದರಿಂದ 'ಅಧಿಕಾರ ರಾಜಕಾರಣ'ದ ಗುಂಗಿನಲ್ಲೇ ಆ ಪಕ್ಷದ ನಾಯಕರು ಮೈಮರೆತರು. ಆ ಹಾದಿ ತೊರೆದು ಆಂಧ್ರದ ಜಗನ್ ಮೋಹನ್ ರೆಡ್ಡಿ, ತಮಿಳುನಾಡಿನ ಎಂ.ಕೆ. ಸ್ಟಾಲಿನ್ ಮಾದರಿಯನ್ನು ಎಚ್‌.ಡಿ. ಕುಮಾರಸ್ವಾಮಿ ಅನುಸರಿಸಿದ್ದರೆ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುವುದು ಅವರಿಗೆ ಕಷ್ಟವೇನೂ ಆಗುತ್ತಿರಲಿಲ್ಲ. ಹಾಗೆ ನೋಡಿದರೆ, ಮುಖ್ಯಮಂತ್ರಿ ಮತ್ತು ಪ್ರಧಾನಿ ಹುದ್ದೆಗೇರಿದ ಎಚ್‌.ಡಿ. ದೇವೇಗೌಡರು, ತಮ್ಮ ಅಧಿಕಾರ ದಂಡವನ್ನು ಬಳಸಿ ನೀರಿನ ವಿಷಯದಲ್ಲಿ ಕನ್ನಡ ನಾಡಿಗೆ ನ್ಯಾಯ ಕೊಡಿಸುವ ಕೆಲಸ ಮಾಡಿದ್ದಾರೆ. ಕಾವೇರಿ ನೀರಿನ ಪಾಲಿನಲ್ಲಿ ಬೆಂಗಳೂರಿಗೆ ಕುಡಿಯುವ ನೀರು ಕೊಡಿಸಿರುವುದು, ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ತ್ವರಿತ ಕ್ರಮ, ಅದಕ್ಕಾಗಿ ಕೃಷ್ಣಾ ಬಾಂಡ್ ಸೇರಿದಂತೆ ಹಲವು ಯೋಜನೆಗಳು ರೂಪಿಸಿದ ಹೆಗ್ಗಳಿಕೆ ಅವರದ್ದು. ಅವರು ಎರಡೂ ಹುದ್ದೆಗೇರಿದ್ದರಿಂದಾಗಿಯೇ ಇಂತಹದೊಂದು ಕೆಲಸದಲ್ಲಿ ಯಶಸ್ಸು ಸಾಧ್ಯವಾಯಿತು. ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ, ಎಚ್‌.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿಗೆ ಮನಸ್ಸಿದ್ದರೂ ಕೇಂದ್ರದಲ್ಲಿದ್ದ ಸರ್ಕಾರಗಳು ಕೈ ಹಿಡಿದು ಮುನ್ನಡೆಸಲಿಲ್ಲ.



ರಾಷ್ಟ್ರೀಯ ಪಕ್ಷಗಳ ಇಬ್ಬಗೆ ನೀತಿ: ನೆಲ–ಜಲದ ವಿಷಯ ಬಂದಾಗ ರಾಷ್ಟ್ರೀಯ ಪಕ್ಷಗಳ ವರಿಷ್ಠರು 'ಹಿತಾಸಕ್ತಿ ರಾಜಕಾರಣ'ಕ್ಕೆ ಹೆಚ್ಚು ಆದ್ಯತೆ ನೀಡಿದ್ದಾರೆ. ಕಾವೇರಿ, ಕೃಷ್ಣಾ, ಮಹದಾಯಿ, ಭದ್ರಾ, ದಕ್ಷಿಣ ಪಿನಾಕಿನಿ ನದಿ ನೀರಿನ ಹಂಚಿಕೆ ಇರಬಹುದು; ನಮ್ಮ ಹಳ್ಳಿಗಳ ಮೇಲೆ ಕಣ್ಣು ಹಾಕಿರುವ ಮಹಾರಾಷ್ಟ್ರದ ತಗಾದೆಯೂ ಇರಬಹುದು. ರಾಷ್ಟ್ರೀಯ ಪಕ್ಷಗಳ ನಾಯಕರು ನಾಡಿಗೆ ಹಿತಕಾರಿಯಾಗುವ ನಿರ್ಧಾರ ತೆಗೆದುಕೊಂಡಿದ್ದು ತೀರಾ ಅಪರೂಪ.

ಗೋವಾದಲ್ಲಿ ಚುನಾವಣೆ ನಡೆಯುತ್ತಿದ್ದಾಗ ಅಂದು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾಗಾಂಧಿ ಅವರು ಕರ್ನಾಟಕಕ್ಕೆ ಮಹದಾಯಿಯಿಂದ ಒಂದು ಹನಿ ನೀರು ಕೊಡುವುದಿಲ್ಲ ಎಂದಿದ್ದರು. ಆಗ, ಇಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಅದೇ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು, ಗೋವಾದಲ್ಲಿ ಬಿಜೆಪಿ ಇದ್ದಾಗ ಕಾಂಗ್ರೆಸ್ ನಾಯಕರ ನಿಲುವು ಬದಲಾಯಿತು.

ಕಾವೇರಿ ನೀರಿನ ಹಂಚಿಕೆಯ ಬಗ್ಗೆಯೂ ಇದೇ ನಿಲುವನ್ನು ಯುಪಿಎ ಪ್ರದರ್ಶಿಸಿತ್ತು. ಮೈತ್ರಿಕೂಟದ ಅಂಗಪಕ್ಷವಾಗಿ ಡಿಎಂಕೆ ಇದ್ದಾಗ, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೆ ಒಂದು ನಿಲುವು–ಕಾಂಗ್ರೆಸ್ ಇದ್ದರೆ ಮತ್ತೊಂದು ಧೋರಣೆಯನ್ನು ಕಾಂಗ್ರೆಸ್ ಅನುಸರಿಸಿತ್ತು.

2014ರಿಂದೀಚೆಗೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂತು. ತಮಿಳುನಾಡಿನ ಎಐಎಡಿಎಂಕೆ, ಬಿಜೆಪಿ ಬೆಂಬಲಕ್ಕೆ ನಿಂತಿತ್ತು. ಆಗ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದುದರಿಂದ ಕಾವೇರಿ ವಿಷಯದಲ್ಲಿ ರಾಜ್ಯಕ್ಕೆ ನ್ಯಾಯ ಸಿಗಲಿಲ್ಲ. ಕರ್ನಾಟಕದಲ್ಲಿ 'ಡಬಲ್ ಎಂಜಿನ್' ಸರ್ಕಾರ ಅಧಿಕಾರಕ್ಕೆ ಬಂದ ಮೇಲೂ ಕೇಂದ್ರದ ಬಿಜೆಪಿ ನಿಲುವು ಬದಲಾಗಲಿಲ್ಲ. ಮೇಕೆದಾಟು ಯೋಜನೆಗೆ ತಮಿಳುನಾಡು ತಕರಾರು ತೆಗೆದಾಗ ಕೇಂದ್ರ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಏಕೆಂದರೆ, ಮೇಕೆದಾಟು ಯೋಜನೆಗಾಗಿ ಆಗ್ರಹಿಸಿ ಕಾಂಗ್ರೆಸ್ ಪಾದಯಾತ್ರೆ ನಡೆಸಿತ್ತು. ಕರ್ನಾಟಕದ ಪರ ತೀರ್ಮಾನ ತೆಗೆದುಕೊಂಡರೆ ಅದರ ಲಾಭ ಕಾಂಗ್ರೆಸ್‌ಗೆ ಆಗುತ್ತದೆಯೋ ಎಂಬ ಭಯವೂ ಬಿಜೆಪಿ ವರಿಷ್ಠರಿಗೆ ಇದ್ದೀತು.

ಇನ್ನು ಮಹದಾಯಿ ವಿಚಾರಕ್ಕೆ ಬಂದರೆ, 2018ರ ವಿಧಾನಸಭೆ ಹಾಗೂ 2019ರ ಲೋಕಸಭೆ ಚುನಾವಣೆ ವೇಳೆ 'ಡಬಲ್ ಎಂಜಿನ್ ಸರ್ಕಾರ ಅಧಿಕಾರಕ್ಕೆ ಬಂದರೆ 24 ಗಂಟೆಯೊಳಗೆ ಯೋಜನೆ ಅನುಷ್ಠಾನ ಮಾಡುತ್ತೇವೆ' ಎಂದು ಬಿಜೆಪಿ ನಾಯಕರು ವಾಗ್ದಾನ ಮಾಡಿದ್ದರು. 24ಗಂಟೆಯಲ್ಲ; 240 ದಿನ ಕಳೆದರೂ ಯೋಜನೆಯಲ್ಲಿ ಮಹತ್ತರ ಪ್ರಗತಿಯಾಗಿಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸುವ ಅವಕಾಶವನ್ನೂ ನ್ಯಾಯಪೀಠ ಕೊಟ್ಟಿತ್ತು. 'ತ್ರಿಬಲ್ ಎಂಜಿನ್' ಸರ್ಕಾರ ಇದ್ದರೂ ಮಹದಾಯಿ ನೀರು ಕರ್ನಾಟಕಕ್ಕೆ ಹರಿಯಲಿಲ್ಲ.

ಬೆಳಗಾವಿ ಸೇರಿದಂತೆ 865 ಹಳ್ಳಿಗಳನ್ನು ತಮ್ಮದೆಂದು ದಾಖಲೆ ಸೃಷ್ಟಿಸಲು ಮಹಾರಾಷ್ಟ್ರ ಸರ್ಕಾರ ಕುತಂತ್ರದ ದಾರಿಯನ್ನು ಹಿಡಿದಿದೆ. ಇದರ ವಿರುದ್ಧ ಬಸವರಾಜ ಬೊಮ್ಮಾಯಿ ದೊಡ್ಡದಾಗಿ ಧ್ವನಿಯನ್ನೇನೋ ಎತ್ತಿದ್ದಾರೆ. ತಮ್ಮ ಮೂಗಿನ ನೇರಕ್ಕೆ ನಡೆಯುವಂತಹ ಏಕನಾಥ ಶಿಂದೆ ಮುಖ್ಯಮಂತ್ರಿಯಾಗಿದ್ದರೂ ಅವರನ್ನು ಗದರಿಸುವಂತೆ ಅಮಿತ್ ಶಾ ಮೇಲೆ ಒತ್ತಡ ಹೇರಲು, ಬೊಮ್ಮಾಯಿಗೆ ಹೋಗಲಿ; ಕೇಂದ್ರದಲ್ಲಿ ತಮ್ಮದೇ ಪ್ರಭಾವ ಹೊಂದಿರುವ ಸಚಿವ ಪ್ರಲ್ಹಾದ ಜೋಶಿಗೂ ಆಗಲಿಲ್ಲ.

ಗಟ್ಟಿಧ್ವನಿಯಲ್ಲಿ ರಾಜ್ಯದ ಪಾಲು ಕೇಳುತ್ತಿರುವುದು ಜೆಡಿಎಸ್ ಮಾತ್ರ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದೇ ಇರುವುದರಿಂದಾಗಿ, ಕಾಂಗ್ರೆಸ್ ನಾಯಕರು ಅಬ್ಬರಿಸುತ್ತಿದ್ದಾರೆ. ಈ ಅಬ್ಬರ ತೋರುಗಾಣಿಕೆಗೆ ಸೀಮಿತವಾಗದೇ, ನಾಡಿನ ಪರವಾಗಿ ಮುನ್ನುಗ್ಗಿ ನ್ಯಾಯಕೊಡಿಸುವ, ಅನ್ಯಾಯವಾದಾಗ ಅದಕ್ಕೆ ತಕ್ಕ ಪ್ರತಿರೋಧ ತೋರುವ ಕೆಲಸ ಆಗಬೇಕಿದೆ. ಜನರಿಂದ ಆಯ್ಕೆ ಬಯಸಿರುವ ಅಭ್ಯರ್ಥಿಗಳು ಈ ಪ್ರತಿಜ್ಞೆಯನ್ನಾದರೂ ಚುನಾವಣೆ ಹೊತ್ತಿಗೆ ಮಾಡಲಿ.

ನೆಲ–ಜಲ: ಬಿಜೆಪಿ ಬದ್ಧತೆ ಪ್ರಶ್ನಾತೀತ

ರಾಜ್ಯದ ನೆಲ, ಜಲ, ಭಾಷೆ, ಸಂಸ್ಕೃತಿಯ ವಿಷಯದಲ್ಲಿ ಬಿಜೆಪಿ ಬದ್ಧತೆ ಪ್ರಶ್ನಾತೀತ. ದಶಕಗಳಿಂದ ನನೆಗುದಿಗೆ ಬಿದಿದ್ದ ಕಳಸಾ ಹಾಗೂ ಬಂಡೂರಿ ತಿರುವು ಯೋಜನೆಯ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗದ ಒಪ್ಪಿಗೆ ಪಡೆಯುವಲ್ಲಿ ಯಶಸ್ವಿಯಾಗಿದ್ದೇವೆ. ಮಹಾರಾಷ್ಟ್ರ ಗಡಿತಕರಾರಿಗೆ ಸೂಕ್ತ ತಿರುಗೇಟು ನೀಡಲಾಗಿದೆ. ರಾಜ್ಯದ ಹಿತಾಸಕ್ತಿ ಕಾಪಾಡಿದ್ದೇವೆ.

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ.

ರಾಜ್ಯದ ಹಿತಾಸಕ್ತಿಗೆ ಜೆಡಿಎಸ್ ಸದಾ ಮುಂದು



ಕಾವೇರಿ ನೀರು ಹಂಚಿಕೆಗೆ ನ್ಯಾಯಾಧಿಕರಣ ರಚಿಸುವಂತೆ ತಮಿಳುನಾಡು ಸರ್ಕಾರ ಪಟ್ಟು ಎಚ್‌.ಡಿ. ದೇವೇಗೌಡರು ಅದನ್ನು ತಡೆದಿದ್ದರು. ರಾಜ್ಯದ ನೆಲ, ಜಲದ ವಿಚಾರದಲ್ಲಿ ಜೆಡಿಎಸ್ ಗಟ್ಟಿಧ್ವನಿ ಎತ್ತುತ್ತಾ ಬಂದಿದೆ. ರಾಷ್ಟ್ರೀಯ ಪಕ್ಷಗಳು ಹಿಂದೇಟು ಹಾಕುತ್ತಿದ್ದಾಗ ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಪರಿಣಾಮಕಾರಿ ಹೋರಾಟಗಳನ್ನು ಮಾಡಿದೆ. ಹಿಂದಿ ಭಾಷೆ ಏರಿಕೆ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿದೆ.

ಎಂ.ಶ್ರೀಕಾಂತ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಜೆಡಿಎಸ್.

ಪ್ರಾದೇಶಿಕ ಭಾವನೆಗಳಿಗೆ ಕಾಂಗ್ರೆಸ್ ಮನ್ನಣೆ

ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷವಾದರೂ, ಪ್ರಾದೇಶಿಕ ಭಾವನೆಗಳಿಗೆ ಮನ್ನಣೆ ನೀಡಿದೆ. ರಾಜ್ಯದ ನೆಲ, ಜಲ ವಿಚಾರದಲ್ಲಿ ಇತರೆ ಎಲ್ಲ ಪಕ್ಷಗಳಿಗಿಂತ ಹೆಚ್ಚಿನ ಬದ್ಧತೆ ತೋರಿರುವುದು ಕಾಂಗ್ರೆಸ್. ಮೇಕೆದಾಟು ಯೋಜನೆಗಾಗಿ ದೊಡ್ಡಮಟ್ಟದಲ್ಲಿ ಪಾದಯಾತ್ರೆ ನಡೆಸಿದೆ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿಸಲು ಪಕ್ಷದ ಪ್ರಯತ್ನಗಳೇ ಕಾರಣ.

ಎಲ್.ಹನುಮಂತಯ್ಯ, ಕಾಂಗ್ರೆಸ್ ಸಂಸದ.

ಎಲ್ಲ ಪಕ್ಷಗಳದೂ ಗಟ್ಟಿ ಧ್ವನಿಯೇ

ರಾಜ್ಯದಲ್ಲಿ ಯಾವ ಪಕ್ಷ ಅಧಿಕಾರದಲ್ಲಿದ್ದರೂ ಕನ್ನಡದ ನೆಲ, ಜಲ, ಭಾಷೆಯ ವಿಚಾರದಲ್ಲಿ ಗಟ್ಟಿ ಧ್ವನಿಯನ್ನೇ ಎತ್ತಿವೆ. ಅಧಿಕಾರದಲ್ಲಿರುವ ಪಕ್ಷವು ಸರ್ವಪಕ್ಷಗಳ ಸಭೆ ಕರೆದು, ಚರ್ಚಿಸಿ, ಒಮ್ಮತದ ನಿರ್ಧಾರ ತೆಗೆದುಕೊಂಡಿವೆ. ರಾಜ್ಯದ ಕಾನೂನು ಪಡೆ ಕನ್ನಡದ ನೆಲ, ಜಲದ ವಿಚಾರದಲ್ಲಿ ಅವಿರತವಾಗಿ ಶ್ರಮಿಸಿದೆ.

ಉದಯ ಹೊಳ್ಳ, ಮಾಜಿ ಅಡ್ವೋಕೇಟ್ ಜನರಲ್.

ಜಲ ವಿವಾದ ಏನಿದೆ ಸ್ಥಿತಿಗತಿ?

ಜಲದುರ್ಗ ಕೋಟೆಯ ಪಕ್ಕಕ್ಕೆ ಹರಿಯುತ್ತಿರುವ ಕೃಷ್ಣಾ ನದಿ

ನಿಂತಲ್ಲೇ ನಿಂತ ಮೇಕೆದಾಟು

- ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣಕ್ಕಾಗಿ ಕರ್ನಾಟಕ ಸರ್ಕಾರದಿಂದ ಕೇಂದ್ರ ಜಲ ಆಯೋಗ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೂ ಡಿಪಿಆರ್ ಸಲ್ಲಿಕೆ. 4 ವರ್ಷಗಳಲ್ಲಿ ಒಮ್ಮೆಯೂ ಚರ್ಚೆ ಮಾಡದ ಪ್ರಾಧಿಕಾರ. ಎನ್‌ಜಿಟಿ ಚೆನ್ನೈ ಪೀಠದಿಂದ 2021ರಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲು. ಮೇಕೆದಾಟು ಸ್ಥಳ ಪರಿಶೀಲನೆಗಾಗಿ ಸಮಿತಿ ರಚನೆ.
- ಪ್ರಕರಣದ ದಾಖಲಿಸಿದ ಎನ್‌ಜಿಟಿ ಕ್ರಮ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಕರ್ನಾಟಕ ಮೇಲ್ಮನವಿ. ಎನ್‌ಜಿಟಿಗೆ ಅಧಿಕಾರ ಇಲ್ಲ ಎಂದ ಸುಪ್ರೀಂ ಕೋರ್ಟ್. ತಕರಾರು ಅರ್ಜಿ ಸಲ್ಲಿಸಿದ ತಮಿಳುನಾಡು. ಯೋಜನೆಗೆ 5,200 ಹೆಕ್ಟೇರ್ ಅರಣ್ಯ ಭೂಮಿ ಬಳಕೆ. ಇದಕ್ಕೆ ಕೇಂದ್ರ ಪರಿಸರ ಸಚಿವಾಲಯದಿಂದ ಒಪ್ಪಿಗೆ ಬಾಕಿ.

ಭದ್ರಾ ಮೇಲ್ದಂಡೆ: ಆಂಧ್ರ ತಗಾದೆ

- ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ರಾಷ್ಟ್ರೀಯ ಯೋಜನೆಯ ಮಾನ್ಯತೆ. ಈ ಸಲದ ಬಜೆಟ್‌ನಲ್ಲಿ ₹5,300 ಕೋಟಿ ಅನುದಾನ. ಆಂಧ್ರ ತಗಾದೆ. ಸುಪ್ರೀಂ ಕೋರ್ಟ್‌ಗೆ ಮೊರೆ.

ಮಹದಾಯಿ–ಗೋವಾ ಕಿರಿಕಿರಿ

- ಮಹದಾಯಿ ನದಿ ವಿವಾದ ನ್ಯಾಯಾಧೀಕರಣದಿಂದ 2018ರ ಆಗಸ್ಟ್ 14ರಂದು ಕಳಸಾ– ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ. ಯೋಜನೆಯ ಪೂರ್ವ- ಕಾರ್ಯಸಾಧ್ಯತಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿದ ರಾಜ್ಯ. ಮಹದಾಯಿ ಯೋಜನಾ ಸ್ವರೂಪ ಬದಲಿಸಿ ಕರ್ನಾಟಕದಿಂದ ಪರಿಷ್ಕೃತ ಡಿಪಿಆರ್ 2022ರ ಅಕ್ಟೋಬರ್‌ನಲ್ಲಿ ಸಲ್ಲಿಕೆ. 2022ರ ಡಿಸೆಂಬರ್‌ನಲ್ಲಿ ಪರಿಷ್ಕೃತ ಡಿಪಿಆರ್‌ಗೆ ಜಲ ಆಯೋಗ ಒಪ್ಪಿಗೆ. ತಕರಾರು ತೆಗೆದು ಸುಪ್ರೀಂಕೋರ್ಟ್‌ಗೆ ಗೋವಾ ಸಲ್ಲಿಸಿದ ಅರ್ಜಿ ವಜಾ. ಅರಣ್ಯ ಬಳಕೆ ಪ್ರಸ್ತಾವಕ್ಕೆ ಸಿಗದ ಒಪ್ಪಿಗೆ

ಕೃಷ್ಣಾ–ಗೆಜೆಟ್‌ನಲ್ಲಿ ಪ್ರಕಟವಾಗದ ತೀರ್ಪು

- ಕರ್ನಾಟಕಕ್ಕೆ 173 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ 'ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2' 2013ಲ್ಲಿ ತೀರ್ಪು. ತೀರ್ಪನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತೆ ರಾಜ್ಯದ ಒತ್ತಡ ಹಾಗೂ ಮಹಾರಾಷ್ಟ್ರದಿಂದ 2014ರ ಸುಪ್ರೀಂ ಕೋರ್ಟ್‌ಗೆ ಅರ್ಜಿ. ನೀರಿನ ಹಂಚಿಕೆಗೆ ತೆಲಂಗಾಣ ಆಕ್ಷೇಪ. ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋದ ಆಂಧ್ರ.
- ನ್ಯಾಯಾಧೀಕರಣ ನೀಡಿರುವ ಅಂತಿಮ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿರುವ ಕರ್ನಾಟಕ ಸರ್ಕಾರ. ವಿವಾದದ ವಿಚಾರಣೆಗೆ ಪ್ರತ್ಯೇಕ ನ್ಯಾಯಪೀಠ ರಚಿಸಿರುವ ಸುಪ್ರೀಂ ಕೋರ್ಟ್.

ದಕ್ಷಿಣ ಪಿನಾಕಿನಿಗೂ ತಮಿಳುನಾಡು ಅಡ್ಡಗಾಲು

- ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕದಿಂದ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ. ತಮಿಳುನಾಡು ವಿರೋಧ. ಸುಪ್ರೀಂ ಕೋರ್ಟ್‌ನಲ್ಲಿ 2019ರಲ್ಲಿ ದಾವೆ. ಸಮಸ್ಯೆ ಬಗೆಹರಿಸಲು ಕೇಂದ್ರದಿಂದ 2020ರಲ್ಲಿ ಸಂಧಾನ ಸಮಿತಿ. ವಿವಾದ ಬಗೆಹರಿಸದ ಸಮಿತಿ. 'ದಕ್ಷಿಣ ಪಿನಾಕಿನಿ ಜಲವಿವಾದ ನ್ಯಾಯಮಂಡಳಿ' ರಚಿಸಲು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ.

(ಮಾಹಿತಿ: ಮಂಜುನಾಥ ಹೆಬ್ಬಾರ್)

ಪ್ರಜಾ ಪತ್ರ

ಅಭ್ಯರ್ಥಿಯ ವ್ಯಕ್ತಿತ್ವವೇ ಮುಖ್ಯವಾಗಲಿ

ಮತದಾನ ಮಾಡುವುದು ನಾಗರಿಕರ ಜವಾಬ್ದಾರಿ. ಮತದಾನ ಹಕ್ಕನ್ನು ನಾವೂ ಗೌರವಿಸಬೇಕು. ಯಾವುದೇ ಆಸೆ– ಆಮಿಷಕ್ಕೆ ಬಲಿಯಾಗದೆ ನಿರ್ಭಯವಾಗಿ ಪಾರದರ್ಶಕವಾಗಿ ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ಬಲಪಡಿಸುವ ಕಾರ್ಯದಲ್ಲಿ ಪಾಲ್ಗೊಳ್ಳಬೇಕು. ಅಮೂಲ್ಯವಾದ ಮತವನ್ನು ಮಾರಾಟ ಮಾಡಿಕೊಳ್ಳದೆ ಅದರ ಪಾವಿತ್ರ್ಯತೆ ಕಾಪಾಡಬೇಕು. ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಲು ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಜನರ ಸಂಕಷ್ಟಗಳಿಗೆ ಸ್ಪಂದಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಅಭ್ಯರ್ಥಿಯ ಹಿಂದಿರುವ ಶಕ್ತಿಯನ್ನು ನೋಡದೆ ಅವನ ಪ್ರತಿಭೆಯನ್ನು ವಿಶ್ಲೇಷಿಸಬೇಕು. ದೇಶದ ಒಳಿತನ್ನು ಬಯಸುವ ವ್ಯಕ್ತಿಗಳನ್ನು ಆರಿಸಿ, ನಿಮ್ಮ ಮತದಾನಕ್ಕೆ ಅರ್ಥ ನೀಡಿ.

ದಿವ್ಯಾ, ದಾವಣಗೆರೆ

ತಪ್ಪದೇ ಮತ ಚಲಾಯಿಸೋಣ

ಜಾತಿ, ಅಬ್ಬರದ ಪ್ರಚಾರ, ಆಣೆ ಪ್ರಮಾಣ, ಹಣದ ವ್ಯಾಮೋಹಕ್ಕೆ ಬಲಿಯಾಗದೆ, ನಮ್ಮ ಹಕ್ಕನ್ನು ಪ್ರತಿಯೊಬ್ಬರು ಚಲಾಯಿಸೋಣ. ನಮ್ಮ ಮುಂದಿನ ಭವಿಷ್ಯಕ್ಕೆ ಸದೃಢ ಸರ್ಕಾರ ರಚನೆಗೆ ತಪ್ಪದೇ ಪ್ರತಿಯೊಬ್ಬರು ಮತ ಚಲಾಯಿಸೋಣ. ಜಾತಿ ಧರ್ಮದ ಆಧಾರದ ಮೇಲೆ ಮತ್ತು ಅವೈಜ್ಞಾನಿಕ ಯೋಜನೆಗಳ ಆಸೆ ತೋರಿಸಿ ಮತ ಕೇಳುವ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹಾಳು ಮಾಡುವ ರಾಜಕಾರಣಿಗಳಿಂದ ದೂರ ಉಳಿಯೋಣ.

ಪ್ರಾಮಾಣಿಕ, ನಿಷ್ಪಕ್ಷಪಾತ, ನ್ಯಾಯಯುತ ನಿರ್ಣಯ ತೆಗೆದುಕೊಳ್ಳುವ ವ್ಯಕ್ತಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ರಾಜ್ಯದ ಆರ್ಥಿಕ, ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಮೌಲ್ಯಗಳ ಅಭಿವೃದ್ಧಿಗೆ ದೂರದೃಷ್ಟಿ ಆಲೋಚನೆಯುಳ್ಳ ಮತ್ತು ನೈತಿಕ ಮೌಲ್ಯ ಹೊಂದಿರುವ, ಸುಶಿಕ್ಷಿತ, ಸುಸಂಸ್ಕೃತ ವ್ಯಕ್ತಿಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಚಿಂತನೆ ಮಾಡಲಿ.

ಎಸ್. ನಾಗರಾಜ ನಾಗೂರ, ಬಾಗಲಕೋಟೆ

ರಾಜಕಾರಣಿಗಳ ಧೋರಣೆ ಬದಲಾಗಲಿ

'ಹತ್ತಿದ ಏಣಿ ಒದೆಯಬಾರದು' – ಇದು ಹಿರಿಯರು ತಮ್ಮ ಅನುಭವದಿಂದ ಹೇಳುವ ಕಿವಿಮಾತು. ಹಾಗೆಯೇ ರಾಜಕಾರಣಿಗಳು ತಾವು ಆಯ್ಕೆಯಾಗುವವರೆಗೂ ಕೈ ಹಿಡಿಯುತ್ತಾರೆ ಮತ್ತು ಕಾಲಿಗೆ ಬೀಳುತ್ತಾರೆ. ಗೆದ್ದ ಬಳಿಕ ಹೊಳೆಯನ್ನು ದಾಟಿಸಿದ ಅಂಬಿಗನನ್ನು ಮರೆತಂತೆ ಮತ ಹಾಕಿ ಗೆಲ್ಲಿಸಿದವರನ್ನು ನಿರ್ಲಕ್ಷಿಸುತ್ತಾರೆ. ಯಾವ ರಾಜಕೀಯ ನಾಯಕರು ತಮ್ಮ ಸ್ವಂತ ಹಣದಿಂದ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಿಲ್ಲ. ಬದಲಾಗಿ ಜನರ ತೆರಿಗೆ ಹಣದಲ್ಲಿ ಉದ್ಧಾರವಾಗುತ್ತಿರುವುದು ಎಲ್ಲರ ಕಣ್ಣಿಗೂ ಕಾಣುವಂತಿದೆ. ಇನ್ನಾದರೂ ರಾಜಕಾರಣಿಗಳ ಈ ಧೋರಣೆ ಬದಲಾಗಲಿ.

ಬಸಮ್ಮ ಆರ್., ಹಾವೇರಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮತಕ್ಕಾಗಿ ಪ್ರತಿಜ್ಞೆ

ಮಂಗಳೂರಿನಲ್ಲಿ ಶುಕ್ರವಾರ ಸ್ವೀಪ್ ಕಾರ್ಯಕ್ರಮದ ಭಾಗವಾಗಿ ನಡೆದ 'ಅಪಾರ್ಟ್‌ಮೆಂಟ್ ಅಭಿಯಾನ'ದಲ್ಲಿ ಮೌರಿಷ್ಠ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಮತದಾನ ಮಾಡುವುದಾಗಿ ಪ್ರತಿಜ್ಞೆ ಮಾಡಿದರು

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಸೆಲೆಬ್ರಿಟಿ ಮಾತು



ಮತದಾನದಿಂದ ನಾಡು ಸುಭಿಕ್ಷ

ಗಿಡಮರಗಳು ಸಮೃದ್ಧವಾಗಿದ್ದರೆ ಪ್ರಕೃತಿ ಹೇಗೆ ಸಂಪದ್ಭರಿತವಾಗಿರುವುದೋ ಹಾಗೆಯೇ ಮತದಾನ ಪ್ರಮಾಣ ಹೆಚ್ಚಿದಷ್ಟೂ ಆಡಳಿತ ವ್ಯವಸ್ಥೆ ಗಟ್ಟಿಯಾಗುತ್ತದೆ. ಮರದಷ್ಟೆ ಮತಕ್ಕೂ ಪ್ರಾಮುಖ್ಯವಿದೆ. ಆಮಿಷಕ್ಕೆ ಬಲಿಯಾಗದೆ ಮತ ಚಲಾಯಿಸಿ.

ತುಳಸಿ ಗೌಡ
ಪದ್ಮಶ್ರೀ ಪುರಸ್ಕೃತೆ, ಅಂಕೋಲಾ

ಮಾತಿನೇಟು

ನನ್ನನ್ನ ಹುಚ್ಚು ನಾಯಿ ಓಡಿಸಿದ ಹಾಗೆ ಪಕ್ಷದಿಂದ ಓಡಿಸಿದರು. ಇದಕ್ಕೆಲ್ಲಾ ಸಿ.ಟಿ.ರವಿ ಹಾಗೂ ಪ್ರಾಣೇಶ್ ಕಾರಣ. ಬಿಜೆಪಿಯಲ್ಲಿ ಸಿ.ಟಿ.ರವಿ ಅವರು ನನ್ನನ್ನು ಹೀನಾಯವಾಗಿ ನಡೆಸಿಕೊಂಡರು. ಅವರೇ ಜನ ಕಳಿಸಿ, ಅವರೇ ಜಗಳ ಮಾಡಿಸಿ ನನ್ನ ಮೇಲೆ ಕೆಟ್ಟ ಅಭಿಪ್ರಾಯ ಬರುವ ರೀತಿ ಮಾಡಿದರು. ಅವರು ಪಕ್ಷ ಉಳಿಸುವುದಿಲ್ಲ. ಸಿ.ಟಿ ರವಿ ಬಿಜೆಪಿಗೆ ಮಾರಕ. ಮುಂದಿನ ಬಾರಿ ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ.

ಎಂ.ಪಿ. ಕುಮಾರಸ್ವಾಮಿ
ಬಿಜೆಪಿ ಮಾಜಿ ಶಾಸಕ

ಗಾಳಿ ಮಾತು

ಸೇಡಂ ಟಿಕೆಟ್ ಶಾಸಕರಿಗೋ, ಪತ್ನಿಗೋ, ಸ್ವಾಮೀಜಿಗೊ?

ಕಲಬುರಗಿ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಿರುವ ಬಿಜೆಪಿ, ತನ್ನದೇ ಪಕ್ಷದ ಶಾಸಕರಿರುವ ಸೇಡಂ ಕ್ಷೇತ್ರಕ್ಕೆ ಮಾತ್ರ ಇನ್ನೂ ಹೆಸರು ಅಂತಿಮಗೊಳಿಸಿಲ್ಲ. ಈ ವಿಳಂಬ ತಂತ್ರವು ಪಕ್ಷದ ಕಾರ್ಯಕರ್ತರಿಗೆ ಬೇರೆಯದೇ ಸಂದೇಶ ನೀಡುತ್ತಿದೆಯಂತೆ.

ಪಕ್ಷದ ಪಡಸಾಲೆಯಲ್ಲಿನ ಗುಸುಗುಸು ಪ್ರಕಾರ, ಹಾಲಿ ಶಾಸಕ, ಕೆಕೆಆರ್‌ಟಿಸಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಪಾಟೀಲ ತೇಲ್ಕೂರ ಅವರ ಬದಲು ಅವರ ಪತ್ನಿ ಸಂತೋಷಿ ರಾಣಿ ಅವರಿಗೆ ಟಿಕೆಟ್ ನೀಡಲಾಗುತ್ತಿದೆ ಎನ್ನುವ ಮಾತು ಜೋರಾಗಿ ಕೇಳಿಸುತ್ತಿದೆ.

ಶಾಸಕರು ಕ್ಷೇತ್ರದಲ್ಲಿ ಇಲ್ಲದಿರುವಾಗ ಸಂತೋಷಿ ರಾಣಿ ಅವರೇ ಸಾರ್ವಜನಿಕರು, ಪಕ್ಷದ ಕಾರ್ಯಕರ್ತರ ಕೆಲಸ ಮಾಡಿಕೊಡುತ್ತಾರೆ ಎಂಬ ಮಾತಿದೆ. ಅಲ್ಲದೇ, ಜಿಲ್ಲೆಯಲ್ಲಿ ಮಹಿಳೆಯೊಬ್ಬರಿಗೆ ಟಿಕೆಟ್ ನೀಡಿದಂತಾಗುತ್ತದೆ ಎಂಬುದು ಬಿಜೆಪಿ ಲೆಕ್ಕಾಚಾರ ಎನ್ನಲಾಗುತ್ತಿದೆ.

ಸೇಡಂನವರೇ ಆದ ಪಕ್ಷದ ಹಿರಿಯ ನಾಯಕರೊಬ್ಬರು ಅಲ್ಲಿನ ಸ್ವಾಮೀಜಿಯೊಬ್ಬರಿಗೆ ಟಿಕೆಟ್ ಕೊಡಿಸುತ್ತಿದ್ದಾರೆ ಎಂಬ ಸುದ್ದಿಯೂ ಹರಿದಾಡುತ್ತಿದೆ.

ಬಿಜೆಪಿಯ ಮೊದಲ ಹಾಗೂ ಎರಡನೇ ಪಟ್ಟಿಯಲ್ಲೂ ಟಿಕೆಟ್ ಘೋಷಣೆ ಆಗದಿರುವುದು ಶಾಸಕ ತೇಲ್ಕೂರ ಜೊತೆಗೆ ಪಕ್ಷದ ಕಾರ್ಯಕರ್ತರನ್ನೂ ಗೊಂದಲಕ್ಕೆ ತಳ್ಳಿದೆಯಂತೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕ್ಷೇತ್ರದ ಮಳಖೇಡಕ್ಕೆ ಕರೆಸಿದ್ದ ತೇಲ್ಕೂರ ಬಂಜಾರ ಸಮುದಾಯದ ಜನರಿಗೆ ಹಕ್ಕುಪತ್ರ ವಿತರಿಸುವ ಬೃಹತ್ ಕಾರ್ಯಕ್ರಮ ಆಯೋಜಿಸಿದ್ದರು. ಅದಾದ ಬಳಿಕ 800ಕ್ಕೂ ಅಧಿಕ ಬಸ್‌ಗಳ ಲೋಕಾರ್ಪಣೆ ಸೇರಿ ₹ 1 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಲು ಸಚಿವ ಗೋವಿಂದ ಕಾರಜೋಳ ಅವರನ್ನು ಕರೆಸಿದ್ದರು. ಇಷ್ಟೆಲ್ಲ ಮಾಡಿದ ಮೇಲೆ ಟಿಕೆಟ್ ತಮಗೇ ಸಿಗಲಿದೆ ಎಂಬ ನಂಬಿಕೆಯಲ್ಲಿದ್ದಾರೆ ತೇಲ್ಕೂರ. ಆದರೆ, ಪಕ್ಷದ ವಿಳಂಬ ನೀತಿಯು ಬೇರೇನನ್ನೋ ಧ್ವನಿಸುತ್ತಿದೆ ಎಂಬ ಮಾತು ಜಿಲ್ಲೆಯಲ್ಲಿ ಹರಡಿದೆ.

ಕ್ಷೇತ್ರದ ಕೂಗು

- **ಕ್ಷೇತ್ರ: ವರುಣ**
- **ಶಾಸಕ: ಡಾ.ಯತೀಂದ್ರ ಸಿದ್ದರಾಮಯ್ಯ** (ಕಾಂಗ್ರೆಸ್)

ಮೈಸೂರು, ನಂಜನಗೂಡು ಹಾಗೂ ತಿ.ನರಸೀಪುರ ತಾಲ್ಲೂಕುಗಳ ಭಾಗಶಃ ಪ್ರದೇಶಗಳನ್ನು ಒಳಗೊಂಡಿರುವ ವಿಶಾಲ ಕ್ಷೇತ್ರ. ಪ್ರತ್ಯೇಕ ತಾಲ್ಲೂಕು ಕೇಂದ್ರ ಬೇಕು. ವರುಣ ತಾಲ್ಲೂಕು ಕೇಂದ್ರವಾದರೆ ಅನುಕೂಲವಾಗುತ್ತದೆ. ತಿ.ನರಸೀಪುರ ಕಸಬಾ ಹೋಬಳಿಯಲ್ಲಿ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಈವರೆಗೂ ಇಲ್ಲ. ಇಮ್ಮಾವು ಬಳಿ ಕೈಗಾರಿಕಾ ಪ್ರದೇಶವಿದ್ದರೂ ಕೈಗಾರಿಕೆಗಳು ಬಂದಿಲ್ಲ. ಬಂದರೆ, ಉದ್ಯೋಗ ಅವಕಾಶಗಳು ದೊರೆಯಲಿವೆ. ಇಮ್ಮಾವಿನಲ್ಲಿ ಚಲನಚಿತ್ರ ನಗರಿ ನಿರ್ಮಾಣವೂ ನನೆಗುದಿಗೆ ಬಿದ್ದಿದೆ.

- **ಕ್ಷೇತ್ರ: ನರಸಿಂಹರಾಜ**
- **ಶಾಸಕ: ತನ್ವೀರ್ ಸೇಠ್** (ಕಾಂಗ್ರೆಸ್)

ಮೂಲಸೌಲಭ್ಯಗಳ ವಿಷಯದಲ್ಲಿ ಬಹಳ ಹಿಂದುಳಿದಿದೆ. ಸರ್ಕಾರಿ ಪದವಿ ಕಾಲೇಜು, ಸುಸಜ್ಜಿತ ಆಸ್ಪತ್ರೆ ಇಲ್ಲ. ಕೈಗಾರಿಕೆಗಳಿಗೆ ಆದ್ಯತೆ ಸಿಕ್ಕಿಲ್ಲ. ಸಮರ್ಪಕ ಒಳಚರಂಡಿ ವ್ಯವಸ್ಥೆಯೂ ಇಲ್ಲ. ಕೊಳೆಗೇರಿಗಳು ಸಾಕಷ್ಟಿವೆ. ದೇವನೂರು, ಕ್ಯಾತಮಾರನಹಳ್ಳಿ ಕೆರೆಗಳ ಸಂರಕ್ಷಣೆಗೆ ಆದ್ಯತೆ ದೊರೆಯಬೇಕಿದೆ. ಆಶ್ರಯ ಮನೆಗಳ ಹಂಚಿಕೆ ಕಾರ್ಯ ನಡೆಯಬೇಕಿದೆ. ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗುವುದನ್ನು ತಪ್ಪಿಸಲು ವ್ಯವಸ್ಥೆ ಮಾಡಬೇಕು. ಕ್ರೀಡಾಂಗಣ ನಿರ್ಮಿಸಬೇಕೆಂಬ ಕೂಗಿದೆ.

- **ಕ್ಷೇತ್ರ: ಕೃಷ್ಣರಾಜ**
- **ಶಾಸಕ: ಎಸ್.ಎ.ರಾಮದಾಸ್** (ಬಿಜೆಪಿ)

ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸದ ಸಂಗ್ರಹ ವಿಪರೀತವಾಗಿದೆ. ಇದರಿಂದ ಜೆ.ಪಿ.ನಗರ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳಲ್ಲಿ ದುರ್ವಾಸನೆಯಿಂದ ಜನ ಬೇಸತ್ತಿದ್ದಾರೆ. ಈ ಸಮಸ್ಯೆಗೆ ಎರಡು ದಶಕಗಳಿಂದಲೂ ಪರಿಹಾರ ಸಿಕ್ಕಿಲ್ಲ. ವೈಜ್ಞಾನಿಕವಾಗಿ ತ್ಯಾಜ್ಯ ನಿರ್ವಹಣೆ ಮಾಡುವ ಕೆಲಸವಾಗಿಲ್ಲ. ಆಶ್ರಯ ಮನೆಗಳ ಹಂಚಿಕೆಗೆ ಆದ್ಯತೆ ನೀಡಬೇಕಿದೆ. ಒಳಚರಂಡಿ ನಿರ್ಮಾಣವಾಗಬೇಕು. ಅಲ್ಲಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಬಡವರಿಗೆ ಸೂರು ಸಿಕ್ಕಿಲ್ಲ. ಉದ್ಯೋಗ ಸೃಷ್ಟಿಗೆ ಆದ್ಯತೆ ಕೊಡಬೇಕಿದೆ. ಖಾಸಗಿ ಬಡಾವಣೆಗಳಲ್ಲಿ ಮೂಲಸೌಲಭ್ಯ ಕೊರತೆ ಇದೆ.

- **ಕ್ಷೇತ್ರ: ಚಾಮುಂಡೇಶ್ವರಿ**
- **ಶಾಸಕ: ಜಿ.ಟಿ.ದೇವೇಗೌಡ** (ಜೆಡಿಎಸ್)

ಸಮರ್ಪಕ ರಸ್ತೆ, ಚರಂಡಿ, ಕುಡಿಯುವ ನೀರು ಮೊದಲಾದ ಮೂಲಸೌಲಭ್ಯಗಳೂ ದೊರೆಯಬೇಕಿದೆ. ಹಳೇ ಉಂಡುವಾಡಿ ನೀರಿನ ಯೋಜನೆ ಪೂರ್ಣವಾದರೆ ಒಂದಷ್ಟು ಅನುಕೂಲವಾಗಲಿದೆ. ನಗರಕ್ಕೆ ಹೊಂದಿಕೊಂಡಿದ್ದರೂ ನಿರೀಕ್ಷಿತ ಅಭಿವೃದ್ಧಿ ಕಂಡಿಲ್ಲ. ಹೊರವಲಯದ ಬಡಾವಣೆಗಳಲ್ಲಿ ಮೂಲಸೌಲಭ್ಯಗಳಿಲ್ಲದೆ ಜನ ಪರದಾಡುತ್ತಿದ್ದಾರೆ. ಕೈಗಾರಿಕಾ ಕ್ಷೇತ್ರಗಳಲ್ಲಿ ಮೂಲಸೌಲಭ್ಯಗಳಿಲ್ಲ. ಹಂಚ್ಯಾ, ಬೋಗಾದಿ, ಕಡಕೊಳ ಹಾಗೂ ಶ್ರೀರಾಂಪುರ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ, ಕೂರ್ಗಳ್ಳಿಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಿದ್ದರೂ ಅಭಿವೃದ್ಧಿ ಕಂಡಿಲ್ಲ. ಹಲವು ಹಳ್ಳಿಗಳಲ್ಲಿ ಸ್ಮಶಾನಗಳಿಲ್ಲ.

- **ಕ್ಷೇತ್ರ: ಚಾಮರಾಜ**
- **ಶಾಸಕ: ಎಲ್.ನಾಗೇಂದ್ರ** (ಬಿಜೆಪಿ)

ಹೃದಯ ಭಾಗದಲ್ಲಿರುವ ಪ್ರದೇಶಗಳಲ್ಲಿ ವಾಹನಗಳ ನಿಲುಗಡೆಗೆ ಸೂಕ್ತ ಜಾಗವಿಲ್ಲದೆ ಪಾರ್ಕಿಂಗ್ ಪ್ರಾಬ್ಲಂ ಉಲ್ಬಣಿಸಿದೆ. ಪುರಭವನದ ಬಳಿ ನಿರ್ಮಾಣಗೊಳ್ಳುತ್ತಿರುವ ಬಹುಮಹಡಿ ಪಾರ್ಕಿಂಗ್ ತಾಣದ ಕಾಮಗಾರಿ ತೆವಳುತ್ತಾ ಸಾಗಿದೆ. ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಆದ್ಯತೆ ದೊರೆತಿಲ್ಲ. ಕೊಳೆಗೇರಿಗಳ ನಿರ್ಮೂಲನೆಗೆ ಆದ್ಯತೆ ಸಿಗಬೇಕಿದೆ. ಅಲ್ಲಿನ ಜನ ಮಳೆಗಾಲದಲ್ಲಿ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ರಸ್ತೆ ಅಭಿವೃದ್ಧಿಯೂ ನಡೆಯಬೇಕಿದೆ. ಪಡುವಾರಹಳ್ಳಿ ಮೊದಲಾದ ಕಡೆಗಳಲ್ಲಿ ಕಾವೇರಿ ನೀರಿನ ಪೂರೈಕೆ ಇಲ್ಲ.

- **ಕ್ಷೇತ್ರ: ಎಚ್‌.ಡಿ.ಕೋಟೆ**
- **ಶಾಸಕ: ಅನಿಲ್ ಚಿಕ್ಕಮಾದು** (ಕಾಂಗ್ರೆಸ್)

ಸರಗೂರು ಪಟ್ಟಣದ ಕಪಿಲಾ ನದಿ ದಡದಲ್ಲಿ ಸೋಪಾನಕಟ್ಟೆ ನಿರ್ಮಾಣ, ಕಪಿಲಾ ನದಿಗೆ ಸರಗೂರಿನಿಂದ ಮಾಗುಡಿಲು ಗ್ರಾಮಕ್ಕೆ ಸಂಪರ್ಕಿಸುವ ಸೇತುವೆ ನಿರ್ಮಾಣಕ್ಕೆ ಇಪ್ಪತ್ತು ವರ್ಷಗಳಿಂದಲೂ ಬೇಡಿಕೆ ಇದೆ. ಸರಗೂರು ತಾಲ್ಲೂಕು ಕೇಂದ್ರವಾಗಿದ್ದರೂ ಮೂರು ಇಲಾಖೆಗಳ ಕಚೇರಿಗಳಷ್ಟೆ ಬಂದಿವೆ.

ಮೈಸೂರು– ಮಾನಂದವಾಡಿ ರಸ್ತೆ ಸುಧಾರಿಸಬೇಕಿದೆ. ಸಮರ್ಪಕ ನಿರ್ವಹಣೆ ಇಲ್ಲದೇ ಜನ ತೊಂದರೆ ಅನುಭವಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಮೂಲಸೌಲಭ್ಯಗಳ ಕೊರತೆ ಇದೆ. ಹಾಡಿ ಜನರ ಸಮಸ್ಯೆಗಳು ಬಗೆಹರಿದಿಲ್ಲ. ಅವರಿಗೆ ದಾಖಲೆಗಳು ಸಿಕ್ಕಿಲ್ಲ. ಮಾನವ–ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ಸಿಕ್ಕಿಲ್ಲ. ಎಚ್‌.ಡಿ.ಕೋಟೆ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿದ್ದು, ಸುಧಾರಣೆಗೆ ವಿಶೇಷ ಪ್ಯಾಕೇಜ್ ಅಗತ್ಯವಿದೆ. ಅತಿವೃಷ್ಟಿ ಸಂತ್ರಸ್ತರಲ್ಲಿ ಹಲವರಿಗೆ ಪರಿಹಾರ ಸಿಕ್ಕಿಲ್ಲ.

ಸುಭಾಷಿತ

ಧರ್ಮ ಇರುವುದು ಮನುಷ್ಯನಿಗಾಗಿಯೇ ವಿನಾ ಮನುಷ್ಯ ಇರುವುದು ಧರ್ಮಕ್ಕಾಗಿ ಅಲ್ಲ.

–ಡಾ. ಬಿ.ಆರ್.ಅಂಬೇಡ್ಕರ್

ಸಹಕಾರ ಬ್ಯಾಂಕ್‌ಗಳಲ್ಲಿ ಅಕ್ರಮ ತಡೆಗೆ ನಿರ್ದಾಕ್ಷಿಣ್ಯ ಕ್ರಮ ಅಗತ್ಯ

ರಾಜ್ಯದ ಹಲವು ಸಹಕಾರ ಬ್ಯಾಂಕ್‌ಗಳು ಗ್ರಾಹಕರ ಗುರುತು ದೃಢಪಡಿಸುವ (ಕೆವೈಸಿ) ದಾಖಲೆಗಳಿಲ್ಲದೆ ಚೆಕ್ ಡಿಸ್ಕೌಂಟ್ ಮೂಲಕ ₹ 1,000 ಕೋಟಿಗೂ ಹೆಚ್ಚಿನ ಮೊತ್ತವನ್ನು ಸಂಶಯಾಸ್ಪದ ರೀತಿಯಲ್ಲಿ ಪಾವತಿಸಿರುವುದನ್ನು ಆದಾಯ ತೆರಿಗೆ (ಐ.ಟಿ) ಅಧಿಕಾರಿಗಳು ಪತ್ತೆಹಚ್ಚಿದ್ದಾರೆ. ವಿಧಾನಸಭಾ ಚುನಾವಣೆಗೆ ನೀತಿಸಂಹಿತೆ ಜಾರಿಯಾದ ಬೆನ್ನಲ್ಲೇ ಐ.ಟಿ. ಅಧಿಕಾರಿಗಳು ಸಹಕಾರ ಬ್ಯಾಂಕ್‌ಗಳ ಮೇಲೆ ದಾಳಿ ಮಾಡಿ ಶೋಧ ನಡೆಸಿದ್ದರು. ಅಲ್ಲಿ ವಶಕ್ಕೆ ಪಡೆದ ದಾಖಲೆಗಳನ್ನು ಪರಿಶೀಲಿಸಿದಾಗ ರಾಜ್ಯದ ಹಲವು ಸಹಕಾರ ಬ್ಯಾಂಕ್‌ಗಳು ಇಂತಹ ಭಾರಿ ಅಕ್ರಮದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ಸಂಶಯಾಸ್ಪದ ಮತ್ತು ಅಸ್ತಿತ್ವದಲ್ಲೇ ಇಲ್ಲದ ವ್ಯಕ್ತಿಗಳು, ಉದ್ದಿಮೆಗಳ ಹೆಸರಿನಲ್ಲಿ ನೇರ ಪಾವತಿಯ (ಬೇರರ್) ಚೆಕ್‌ಗಳನ್ನು 'ಡಿಸ್ಕೌಂಟ್' ಮಾಡಲಾಗಿದೆ. ಆ ಹಣವನ್ನು ಸಹಕಾರ ಬ್ಯಾಂಕ್‌ಗಳಲ್ಲಿ ಇರುವ ಸಹಕಾರ ಸೊಸೈಟಿಗಳ ಖಾತೆಗೆ ವರ್ಗಾಯಿಸಿ, ಅಲ್ಲಿಂದ ರಿಯಲ್ ಎಸ್ಟೇಟ್ ಉದ್ಯಮಿಗಳು, ಗುತ್ತಿಗೆದಾರರ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ. ಕೆವೈಸಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಇಂತಹ ವಹಿವಾಟುಗಳನ್ನು ನಡೆಸಲಾಗಿದೆ. ಸಹಕಾರ ಬ್ಯಾಂಕ್‌ಗಳ ಆಡಳಿತ ಮಂಡಳಿಗಳ ಸದಸ್ಯರೇ ನೇರವಾಗಿ ಇಂತಹ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಹೇಳಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೃಹತ್ ಮೊತ್ತದ ಸಾಲ ಮಂಜೂರು ಮಾಡಿರುವ ಪ್ರಕರಣಗಳೂ ಪತ್ತೆಯಾಗಿವೆ.



ಆದಾಯವನ್ನು ಮುಚ್ಚಿಟ್ಟು, ತೆರಿಗೆ ವಂಚಿಸುವುದಕ್ಕಾಗಿ ಕೆವೈಸಿ ಮಾರ್ಗಸೂಚಿಗಳನ್ನು ಪಾಲಿಸದೇ ಹಣದ ವಹಿವಾಟು ನಡೆಸಲಾಗಿದೆ ಎಂಬ ಅಭಿಪ್ರಾಯವನ್ನು ಸಿಬಿಡಿಟಿ ವ್ಯಕ್ತಪಡಿಸಿದೆ. ದೇಶದ ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳು ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ವಹಿವಾಟು ಬಹುತೇಕ ಕಂಪ್ಯೂಟರೀಕರಣಗೊಂಡಿದೆ. ಆ ಬ್ಯಾಂಕ್‌ಗಳಲ್ಲಿ ಕೆವೈಸಿ ಮಾರ್ಗಸೂಚಿಯನ್ನು ಪಾಲಿಸದೇ ದೊಡ್ಡ ಮೊತ್ತದ ಹಣ ವರ್ಗಾವಣೆ, ನಗದೀಕರಣ ಸಾಧ್ಯವಿಲ್ಲ. ಬ್ಯಾಂಕ್‌ಗಳಲ್ಲಿ ಮಾರ್ಗಸೂಚಿ ಹಾಗೂ ನಿಯಮಗಳ ಪಾಲನೆ ಬಿಗಿಯಾದ ಬಳಿಕ ತೆರಿಗೆ ವಂಚನೆ ಮತ್ತು ಹಣದ ಮೂಲವನ್ನು ಮುಚ್ಚಿಡುವುದಕ್ಕಾಗಿ ಕೆಲವರು ಸಹಕಾರ ಬ್ಯಾಂಕ್‌ಗಳು ಹಾಗೂ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕೆಲವು ರಾಜಕಾರಣಿಗಳು, ಉದ್ಯಮಿಗಳು, ಗುತ್ತಿಗೆದಾರರು ಸೇರಿದಂತೆ ಪ್ರಭಾವಿ ವ್ಯಕ್ತಿಗಳು ಅಕ್ರಮ ಹಣವನ್ನು ಸಕ್ರಮಗೊಳಿಸುವುದಕ್ಕಾಗಿಯೇ ತಮ್ಮದೇ ಸಹಕಾರ ಬ್ಯಾಂಕ್ ಹಾಗೂ ಸಂಸ್ಥೆಗಳನ್ನು ಹೊಂದಿರುವುದು ಗುಟ್ಟಿನ ಸಂಗತಿಯೇನೂ ಅಲ್ಲ. ಕಪ್ಪುಹಣದ ಪರಿವರ್ತನೆಯ ದಂಧೆಗೆ ಸಹಕಾರ ಸಂಸ್ಥೆಗಳ ದುರ್ಬಳಕೆ ಹೆಚ್ಚುತ್ತಿದೆ ಎಂಬುದು ಐ.ಟಿ. ಅಧಿಕಾರಿಗಳು ರಾಜ್ಯದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ದೃಢಪಟ್ಟಿದೆ. ಕೆವೈಸಿ ಮಾರ್ಗಸೂಚಿಗಳು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ದೇಶನಗಳು ಹಾಗೂ ಹಣದ ಅಕ್ರಮ ವಹಿವಾಟು ನಿಯಂತ್ರಣ (ಪಿಎಂಎಲ್) ಕಾಯ್ದೆಯನ್ನು ಸಹಕಾರ ಬ್ಯಾಂಕ್‌ಗಳು ಗಾಳಿಗೆ ತೂರಿವೆ ಎಂಬುದನ್ನು ಈ ಪ್ರಕರಣ ಜಾಹೀರುಗೊಳಿಸಿದೆ.

> ಹಣದ ಅಕ್ರಮ ವರ್ಗಾವಣೆಗೆ ಅವಕಾಶ ಕಲ್ಪಿಸಿ, ದೇಶದ ಆರ್ಥಿಕ ವ್ಯವಸ್ಥೆಯನ್ನೇ ಅಸ್ಥಿರಗೊಳಿಸುವಂತಹ ಕೃತ್ಯಕ್ಕೆ ಸಹಕಾರ ನೀಡುತ್ತಿರುವ ಸಹಕಾರ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

ಸಹಕಾರ ಕಾಯ್ದೆ ಹಾಗೂ ಆರ್‌ಬಿಐ ಕಾಲಕಾಲಕ್ಕೆ ನೀಡುವ ನಿರ್ದೇಶನಗಳ ಅನುಸಾರ ಸಹಕಾರ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತವೆ. ಹಣದ ಅಕ್ರಮ ವಹಿವಾಟು ತಡೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಅನುಸರಿಸುವ ಎಲ್ಲ ಕ್ರಮಗಳನ್ನು ಸಹಕಾರ ಬ್ಯಾಂಕ್‌ಗಳೂ ಪಾಲಿಸಬೇಕು. ನಿರ್ದಿಷ್ಟ ಮಿತಿಗಿಂತ ಹೆಚ್ಚಿನ ಮೊತ್ತದ ವಹಿವಾಟು ನಡೆಸುವ ಗ್ರಾಹಕರಿಂದ ಕೆವೈಸಿ ದಾಖಲೆಗಳನ್ನು ಪಡೆಯುವುದು ಕಡ್ಡಾಯ. ಸಂಶಯಾಸ್ಪದ ವಹಿವಾಟುಗಳು ಕಂಡುಬಂದಲ್ಲಿ ಕೇಂದ್ರ ಸರ್ಕಾರದ ಹಣಕಾಸು ಗುಪ್ತಚರ ಘಟಕಕ್ಕೆ ಮಾಹಿತಿ ನೀಡುವುದು ಕಡ್ಡಾಯ. ಇಂತಹ ಪ್ರಕರಣಗಳ ಕುರಿತು ಸಹಕಾರ ಬ್ಯಾಂಕ್‌ಗಳು ಆರ್‌ಬಿಐ, ಆದಾಯ ತೆರಿಗೆ ಇಲಾಖೆ ಸೇರಿದಂತೆ ಸಕ್ಷಮ ಪ್ರಾಧಿಕಾರಗಳ ಜತೆಗೂ ಮಾಹಿತಿ ಹಂಚಿಕೊಳ್ಳಬೇಕು. ರಾಜ್ಯದ ಸಹಕಾರ ಇಲಾಖೆಯು ಸಹಕಾರ ಬ್ಯಾಂಕ್ ಹಾಗೂ ಸಂಸ್ಥೆಗಳ ಮೇಲೆ ಆಡಳಿತಾತ್ಮಕ ನಿಯಂತ್ರಣ ಹೊಂದಿದೆ. ಈಗ ಕೇಂದ್ರದಲ್ಲೂ ಸಹಕಾರ ಸಚಿವಾಲಯ ಅಸ್ತಿತ್ವಕ್ಕೆ ಬಂದಿದ್ದು, ಇನ್ನೊಂದು ಸ್ತರದ ಆಡಳಿತಾತ್ಮಕ ನಿಯಂತ್ರಣ ವ್ಯವಸ್ಥೆ ಸೃಷ್ಟಿಯಾಗಿದೆ. ಆರ್‌ಬಿಐ ಅನುಮೋದಿತ ಲೆಕ್ಕಪರಿಶೋಧಕರು ಹಾಗೂ ರಾಜ್ಯ ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯ ಅಧಿಕಾರಿಗಳು ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆ ನಡೆಸುತ್ತಾರೆ. ಎರಡು ವರ್ಷಗಳಿಗೊಮ್ಮೆ ಆರ್‌ಬಿಐ ಪರಿಶೀಲನೆ ನಡೆಸುತ್ತದೆ. ಇಷ್ಟಾಗಿಯೂ ಕಪ್ಪುಹಣದ ಪರಿವರ್ತನೆ, ತೆರಿಗೆ ವಂಚನೆ, ನಕಲಿ ದಾಖಲೆಗಳನ್ನು ಬಳಸಿ ಭಾರಿ ಮೊತ್ತದ ಸಾಲ ನೀಡುತ್ತಿರುವ ಪ್ರಕರಣಗಳು ಪತ್ತೆಯಾಗುತ್ತಿರುವುದು ನಿಯಂತ್ರಣ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿ. ಸಹಕಾರ ಇಲಾಖೆ, ಆರ್‌ಬಿಐ, ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಸೇರಿದಂತೆ ಎಲ್ಲ ಸಕ್ಷಮ ಪ್ರಾಧಿಕಾರಗಳೂ ಈ ವೈಫಲ್ಯದ ಹೊಣೆ ಹೊರಬೇಕು. ಸಂಪೂರ್ಣ ತಂತ್ರಜ್ಞಾನ ಬಳಕೆಯ ಮೂಲಕ ಸಹಕಾರ ಸಂಸ್ಥೆಗಳ ವಹಿವಾಟನ್ನು ಪಾರದರ್ಶಕಗೊಳಿಸಬೇಕು. ಸಂಶಯಾಸ್ಪದ ಮತ್ತು ಹಣದ ಅಕ್ರಮ ವರ್ಗಾವಣೆಗೆ ಅವಕಾಶ ಕಲ್ಪಿಸಿ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಅಸ್ಥಿರಗೊಳಿಸುವಂತಹ ಕೃತ್ಯಕ್ಕೆ ಸಹಕಾರ ನೀಡುತ್ತಿರುವ ಸಹಕಾರ ಸಂಸ್ಥೆಗಳು ಹಾಗೂ ಅವುಗಳ ಆಡಳಿತ ಮಂಡಳಿ ಸದಸ್ಯರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ವಿಧಾನಸಭಾ ಚುನಾವಣೆಗೆ ದಿನಗಣನೆ ಆರಂಭವಾಗಿರುವ ಹೊತ್ತಿನಲ್ಲೇ ನೂರಾರು ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವುದಕ್ಕೆ ಚುನಾವಣಾ ಅಕ್ರಮಗಳ ನಂಟು ಇದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಸಬೇಕಿದೆ.

ದಿನದ ಟ್ವೀಟ್

ಅಪರೂಪ... ಅಪವಾದ

ರಾಜಕಾರಣಿಯ ಮಗ ರಾಜಕಾರಣಿ, ಸಿನಿಮಾ ನಟನ ಮಗ ಸಿನಿಮಾ ನಟನಾಗುವ ಕಾಲದಲ್ಲಿ ಸಾಹಿತಿಗಳ ಮಕ್ಕಳು ಸಾಹಿತಿಗಳಾಗಿದ್ದು ಅಪರೂಪ. ಕನ್ನಡದಲ್ಲಿ ಓದಿ, ಬರೆದು ಹೆಸರಾಗಿದ್ದ ಬಹುತೇಕ ಸಾಹಿತಿಗಳ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಕನ್ನಡ ಸಾಹಿತ್ಯದಿಂದ ದೂರವಾದರು ಅನ್ನಿಸುತ್ತೆ. ಅಪವಾದಗಳು ಅಲ್ಲೊಂದು ಇಲ್ಲೊಂದು ಇರಬಹುದು. ಏನಂತೀರಿ?

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಜೆಡಿಎಸ್ ಪಕ್ಷ ಕಿಂಗ್‌ಮೇಕರ್ ಆಗುವ ಭ್ರಮೆಯಲ್ಲಿದೆ. ಸಮ್ಮಿಶ್ರ ಸರ್ಕಾರ ಬಂದರೆ ತಮ್ಮ ಬೇಳೆ ಬೇಯಿಸಿಕೊಳ್ಳಬಹುದು ಎಂದು ಅವರು ಕಾಯುತ್ತಿದ್ದಾರೆ. ಅದು ಎಂದಿಗೂ ಸಾಧ್ಯವಿಲ್ಲ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

25 ವರ್ಷಗಳ ಹಿಂದೆ
ಬುಧವಾರ, 15-4-1998

• ಅಣ್ವಸ್ತ್ರ ನೀತಿ ಪುನರ್ ಪರಿಶೀಲನೆ: ಫರ್ನಾಂಡಿಸ್

ನವದೆಹಲಿ, ಏ. 14– ಪಾಕಿಸ್ತಾನ ಇತ್ತೀಚೆಗೆ 'ಘೋರಿ' ಕ್ಷಿಪಣಿ ಪ್ರಯೋಗ ಮಾಡಿರುವ ಹಿನ್ನೆಲೆಯಲ್ಲಿ ಭಾರತ ತನ್ನ ಅಣ್ವಸ್ತ್ರ ನೀತಿಯನ್ನು ಪುನರ್ ಪರಿಶೀಲಿಸುವ ಸಾಧ್ಯತೆ ಇದೆ ಎಂದು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಹೇಳಿದ್ದಾರೆ.

ಕ್ಷಿಪಣಿಗಳಿಗೆ ಪ್ರತಿರೋಧ ಉಂಟು ಮಾಡುವ ಸಾಮರ್ಥ್ಯ ಭಾರತಕ್ಕೆ ಇಲ್ಲ. 'ಘೋರಿ' ಕ್ಷಿಪಣಿಯ ಮೂಲಕ ಪಾಕ್ ಒಡ್ಡಬಹುದಾದ ಯಾವುದೇ ಸವಾಲನ್ನು ಎದುರಿಸಲು ಭಾರತ ಸಿದ್ಧವಿದೆ ಎಂದ ಅವರು ಸಾಗರ ದಾರಿಯ 350 ಕಿ.ಮೀ. ದೂರ ಸಂಚರಿಸುವ ಪೃಥ್ವಿ ಕ್ಷಿಪಣಿ ನಿರ್ಮಾಣವನ್ನು ಖಚಿತಪಡಿಸಿದರು.

• ಬಿಜೆಪಿ ನೂತನ ಅಧ್ಯಕ್ಷರಾಗಿ ಕುಶಭಾವು ಠಾಕ್ರೆ ಆಯ್ಕೆ

ನವದೆಹಲಿ, ಏ. 14– ಎಪ್ಪತ್ತಾರು ವರ್ಷದ ಕುಶಭಾವು ಠಾಕ್ರೆ ಅವರು ಭಾರತೀಯ ಜನತಾ ಪಕ್ಷದ ನೂತನ ಅಧ್ಯಕ್ಷರಾಗಿ ಇಂದು ಅವಿರೋಧವಾಗಿ ಆಯ್ಕೆಗೊಂಡರು.

ನಾಮಪತ್ರ ಹಿಂತೆಗೆದುಕೊಳ್ಳಲು ಇಂದು ಕೊನೆಯ ದಿನವಾಗಿತ್ತು. ಠಾಕ್ರೆ ಅವರದಲ್ಲದೇ ಬೇರಾವ ನಾಮಪತ್ರ ಬಂದಿಲ್ಲವಾದ ಕಾರಣ ಅವರು ಪಕ್ಷದ ಅಧ್ಯಕ್ಷರಾಗಿ ಮುಂದಿನ 2 ವರ್ಷಗಳ ಅವಧಿವರೆಗೆ ಆಯ್ಕೆಯಾದರೆಂದು ಜನಾ ಕೃಷ್ಣಮೂರ್ತಿ ಪ್ರಕಟಿಸಿದರು.

50 ವರ್ಷಗಳ ಹಿಂದೆ
ಭಾನುವಾರ, 15-4-1973

• ಆಹಾರಧಾನ್ಯ ಸಗಟು ವ್ಯಾಪಾರ ವಹಿಸಿಕೊಳ್ಳುವ ಸರ್ಕಾರದ ನಿರ್ಧಾರ ಅಚಲ: ಡಾ. ಶರ್ಮ

ನವದೆಹಲಿ, ಏ. 14– ದೇಶದಲ್ಲಿ ಆಹಾರ-ಧಾನ್ಯಗಳ ಸಗಟು ವ್ಯಾಪಾರ ವಹಿಸಿಕೊಳ್ಳುವ ಕಾಂಗ್ರೆಸ್ ಪಕ್ಷದ ನಿರ್ಧಾರ ಅಚಲವಾದುದು ಎಂದೂ ಯಾವ ಕಾರಣದಿಂದಲೂ ಆ ನಿರ್ಧಾರವನ್ನು ಬದಲಾಯಿಸುವುದಿಲ್ಲ ಎಂದೂ ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರ ದಯಾಳ ಶರ್ಮ ಅವರು ಇಲ್ಲಿ ತಿಳಿಸಿದರು.

• ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಪ್ರತ್ಯೇಕ ಡೈರೆಕ್ಟೊರೇಟ್ ಸ್ಥಾಪನೆ?

ಬೆಂಗಳೂರು, ಏ. 14– ಪ್ರಾಥಮಿಕ ಶಿಕ್ಷಣದ ಪುರೋಭಿವೃದ್ಧಿಯನ್ನು ಗಮನಿಸಿ ಅದನ್ನು ಸುವ್ಯವಸ್ಥಿತಗೊಳಿಸಲು ಸರ್ಕಾರ ಯೋಚಿಸಿದೆ. ಶಿಕ್ಷಣ ಬಾಬಿನ ಬೇಡಿಕೆ ಕುರಿತ ಚರ್ಚೆಗೆ ವಿಧಾನಸಭೆಯಲ್ಲಿ ಉತ್ತರ ನೀಡಿದ ಶಿಕ್ಷಣ ಸಚಿವ ಎ.ಆರ್.ಬದರಿನಾರಾಯಣ, ಪ್ರತ್ಯೇಕ ಡೈರೆಕ್ಟೊರೇಟ್ ಅಸ್ತಿತ್ವಕ್ಕೆ ತರಲು ತಾವು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಮತದಾರರ ಆರ್ಥಿಕ ಸ್ಥಿತಿಯು ಅವರ ಮತದಾನದ ಆಯ್ಕೆಯನ್ನು ಸೂಚಿಸುತ್ತದೆಯೇ?

ಮುಂದಾಗುವುದನ್ನು ಹೇಳುವ ಹಿನ್ನೋಟ!

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕರ್ನಾಟಕದ ಮತದಾರರು ವಿಧಾನಸಭೆಗೆ ಹೊಸದಾಗಿ ಸದಸ್ಯರನ್ನು ಇನ್ನು ಕೆಲವೇ ದಿನಗಳಲ್ಲಿ ಚುನಾಯಿಸಲಿದ್ದಾರೆ. ಈ ಹೊತ್ತಿನಲ್ಲಿ ರಾಜ್ಯದ ಹಿಂದಿನ ಮೂರು ವಿಧಾನಸಭಾ ಚುನಾವಣೆಗಳ ಮತ ಚಲಾವಣೆ ಬಗೆಯನ್ನು ಗಮನಿಸುವುದು ಒಂದಿಷ್ಟು ಒಳನೋಟಗಳನ್ನು ಒದಗಿಸಬಹುದು. ರಾಜ್ಯದಲ್ಲಿ ಮತದಾನ ಹೇಗೆ ನಡೆಯುತ್ತದೆ ಎಂಬ ಬಗ್ಗೆ ಸಿಎಸ್‌ಡಿಎಸ್-ಲೋಕನೀತಿ ಸಮೀಕ್ಷೆಯು ಮುಖ್ಯ ಸಾಕ್ಷ್ಯಗಳನ್ನು ಒದಗಿಸುತ್ತದೆ. ಈ ಬರಹವು ಎರಡು ಪ್ರಮುಖ ವರ್ಗಗಳ ಮತದಾನದ ಬಗೆಯ ಮೇಲೆ ಗಮನಹರಿಸಿದೆ.

ಮೊದಲನೆಯದು, ಮೊದಲ ಬಾರಿಗೆ ಮತದಾನ ಮಾಡುವವರು ಮತ ಚಲಾವಣೆಯ ಬಗೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತರುತ್ತಾರೆಯೇ ಎಂಬುದು. ಎರಡನೆಯದು, ಮತ ಚಲಾವಣೆಯ ವೇಳೆ ಯಾರ ಆಯ್ಕೆ ಯಾವುದು ಎಂಬುದನ್ನು ತೀರ್ಮಾನಿಸುವಲ್ಲಿ ಆರ್ಥಿಕ ಸ್ಥಾನಮಾನವು ಎಷ್ಟು ಮುಖ್ಯವಾದ ಪಾತ್ರ ವಹಿಸುತ್ತದೆ ಎನ್ನುವುದು. ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಆಧಾರದಲ್ಲಿ ರಾಜಕೀಯ ಪಕ್ಷಗಳು ಮತ ಯಾಚನೆ ಮಾಡುತ್ತಿರುವ ಕಾರಣ ಇದು ಪ್ರಮುಖ ಪ್ರಶ್ನೆಯಾಗುತ್ತದೆ. ಈ ಎರಡು ವಿಚಾರಗಳ ಬಗ್ಗೆ ನಡೆಸುವ ಅವಲೋಕನವು ಈ ಬಾರಿಯ ಚುನಾವಣೆಯಲ್ಲಿ ಮತದಾನ ಹೇಗೆ ನಡೆಯಬಹುದು ಎಂಬುದಕ್ಕೆ ಸೂಚನೆಗಳನ್ನು ಕೊಡಬಹುದು. ಮತದಾನಕ್ಕೆ ಇನ್ನುಳಿದಿರುವ ದಿನಗಳ ಅವಧಿಯಲ್ಲಿ ರಾಜಕೀಯ ಪಕ್ಷಗಳು ಗಮನಹರಿಸಬೇಕಾದ ಕ್ಷೇತ್ರಗಳು ಯಾವುವು ಎಂಬುದನ್ನೂ ಇದು ತಿಳಿಸಬಹುದು.

ಮೊದಲ ಬಾರಿಗೆ ಮತ ಚಲಾಯಿಸುವವರದ್ದು ಬಹುಮುಖ್ಯ ವರ್ಗ. ಕಡೆಯ ವಿಧಾನಸಭಾ ಚುನಾವಣೆ ನಡೆದ ನಂತರದಲ್ಲಿ ಇವರು ಮತದಾನದ ಹಕ್ಕು ಪಡೆಯಲು ಅರ್ಹವಾಗುವ ವಯಸ್ಸು ದಾಟಿರುವವರು, ತಮ್ಮ ಹಕ್ಕು ಚಲಾಯಿಸಲು ಇದೇ ಮೊದಲ ಬಾರಿಗೆ ಅರ್ಹತೆ ಪಡೆದಿರುವವರು. ಇವರು ಮತಗಟ್ಟೆಗಳ ಕಡೆ ಸಾಗುವ ಸಂದರ್ಭದಲ್ಲಿ ಬಹಳ ಉತ್ಸುಕರಾಗಿರುತ್ತಾರೆ ಎಂದು ಭಾವಿಸಬಹುದು. ಮೊದಲ ಬಾರಿ ಮತ ಚಲಾವಣೆ ಮಾಡುವವರು ಒಂದಿಷ್ಟು ಪರಿಣಾಮ ಉಂಟುಮಾಡುತ್ತಾರೆ ಎಂಬುದನ್ನು ಹಿಂದಿನ ಮೂರು ಚುನಾವಣೆಗಳು ತೋರಿಸಿಕೊಟ್ಟಿವೆ. 2008ರ ಚುನಾವಣೆಯಲ್ಲಿ ಬಿಜೆಪಿ ಬಹುಮತಕ್ಕೆ ಮೂರು ಸ್ಥಾನಗಳ ಕೊರತೆ ಎದುರಿಸಿತು. ಆ ಚುನಾವಣೆಯಲ್ಲಿ ಪಕ್ಷವು ಮೊದಲ ಬಾರಿಗೆ ಮತ ಚಲಾಯಿಸಿದವರಿಂದ ಗಳಿಸಿದ ಮತಗಳ ಪ್ರಮಾಣವು ತಾನು ಗಳಿಸಿದ ಒಟ್ಟು ಸರಾಸರಿ ಮತಗಳಿಗೆ ಹೋಲಿಸಿದರೆ ಹೆಚ್ಚಿತ್ತು.

2013ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಹಿಡಿಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್, ಮೊದಲ ಬಾರಿಯ ಮತದಾರರಿಂದ ಗಳಿಸಿದ ಮತಗಳ ಪ್ರಮಾಣವು ಸರಾಸರಿ ಮತಗಳ ಪ್ರಮಾಣಕ್ಕಿಂತ ಶೇಕಡ 1ರಷ್ಟು ಹೆಚ್ಚಿತ್ತು. 2018ರಲ್ಲಿ ಬಿಜೆಪಿಯು ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಿರುವ ಸ್ಥಾನಗಳಿಗಿಂತ ಒಂಬತ್ತು ಸ್ಥಾನ ಕಡಿಮೆ ಪಡೆಯಿತು. ಆ ಚುನಾವಣೆಯಲ್ಲಿ ಮೊದಲ ಬಾರಿಯ ಮತದಾರರಿಂದ ಬಿಜೆಪಿ ಪಡೆದ ಮತಗಳು, ತನ್ನ ಸರಾಸರಿ ಮತ ಗಳಿಕೆ ಪ್ರಮಾಣಕ್ಕಿಂತ ಶೇ 6ರಷ್ಟು ಕಡಿಮೆ ಆಗಿತ್ತು. ಇದು ಬಿಜೆಪಿ ಪಾಲಿಗೆ ಬಹುಮತ ಸಿಗದಂತೆ ಮಾಡಿತೇ?

2013 ಮತ್ತು 2018ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು ಮೊದಲ ಬಾರಿಯ ಮತದಾರರಿಂದ ಪಡೆದ ಮತಗಳ ಪ್ರಮಾಣವು ತನ್ನ ಸರಾಸರಿ ಮತ ಗಳಿಕೆಗಿಂತ ಶೇ 4ರಷ್ಟು ಹೆಚ್ಚಿತ್ತು ಎಂಬುದು ಕುತೂಹಲದ ಅಂಶ. ಈ ಮಾತು ಸಣ್ಣ ಪಟ್ಟಣಗಳಿಗೆ ಹೆಚ್ಚು ಅನ್ವಯಿಸುತ್ತಿತ್ತು. ಯುವಕರು ಎರಡು ಪ್ರಧಾನ ಪಕ್ಷಗಳ ವಿಚಾರದಲ್ಲಿ ಭ್ರಮನಿರಸನರಾಗಿದ್ದರು ಎಂಬುದನ್ನು ಇದು ತೋರಿಸುತ್ತದೆಯೇ? ಚುನಾವಣೆಯ ಫಲಿತಾಂಶ ಏನಿರುತ್ತದೆ ಎಂಬುದನ್ನು ತೀರ್ಮಾನಿಸುವಲ್ಲಿ ಮೊದಲ ಬಾರಿಯ ಮತದಾರರು ಪ್ರಭಾವಿ ಪಾತ್ರ ವಹಿಸುತ್ತಾರೆ ಎಂದು ಅನಿಸುತ್ತದೆ.

ಮತದಾರರ ಆರ್ಥಿಕ ಸ್ಥಿತಿಯು ಅವರ ಮತದಾನದ ಆಯ್ಕೆಯ ವಿಚಾರವಾಗಿ ಏನನ್ನಾದರೂ ಸೂಚಿಸುತ್ತದೆಯೇ? ಹಿಂದಿನ ಮೂರು ವಿಧಾನಸಭಾ ಚುನಾವಣೆಗಳಿಗೆ ಸಂಬಂಧಿಸಿದ ಸಿಎಸ್‌ಡಿಎಸ್-ಲೋಕನೀತಿ ಅಂಕಿಅಂಶಗಳೂ ಒಂದಿಷ್ಟು ವಿಚಾರಗಳನ್ನು ತಿಳಿಸುತ್ತವೆ. ಸಿಎಸ್‌ಡಿಎಸ್-ಲೋಕನೀತಿ ವಿಶ್ಲೇಷಣೆಯು ಮತದಾರರನ್ನು ಅವರು ಹೊಂದಿರುವ ಪ್ರಮುಖ ಆಸ್ತಿಗಳ ಮಾಲೀಕತ್ವದ ಆಧಾರದಲ್ಲಿ ವರ್ಗೀಕರಿಸಿದೆ; ಅವರ ಘೋಷಿತ ಆದಾಯದ ಆಧಾರದ ಮೇಲೆ ಅಲ್ಲ. ಬಿಜೆಪಿ ಹಾಗೂ ಕಾಂಗ್ರೆಸ್ಸಿಗೆ ಇರುವ ಬೆಂಬಲವನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಗಿದೆ.

ಸಮಾಜದಲ್ಲಿ ಆರ್ಥಿಕವಾಗಿ ಹೆಚ್ಚು ಸ್ಥಿತಿವಂತರಾಗಿರುವವರ ಬೆಂಬಲವು ಬಿಜೆಪಿಗೆ ಹೆಚ್ಚು ಇದೆ ಎಂದು ಮೊದಲಿನಿಂದಲೂ ನಂಬಿಕೊಂಡು ಬರಲಾಗಿದೆ. ಈ ನಂಬಿಕೆಯು 2008ರ ಚುನಾವಣೆಯ ಮಟ್ಟಿಗೆ ನಿಜವೆಂಬಂತೆ ಕಾಣುತ್ತದೆ. ಆ ಚುನಾವಣೆಯಲ್ಲಿ, ಸಮಾಜದ ಬಡ ವರ್ಗಗಳ ಕಡೆ ನೋಟ ಹರಿಸಿದಂತೆಲ್ಲ ಬಿಜೆಪಿಗೆ ಬೆಂಬಲ ಕಡಿಮೆ ಆಗುತ್ತ ಸಾಗಿದ್ದುದು ಗೊತ್ತಾಗುತ್ತದೆ. 2013ರ ಚುನಾವಣೆಯಲ್ಲಿ ಬಿಜೆಪಿ ಹಾಗೂ ಬಿ.ಎಸ್.ಯಡಿಯೂರಪ್ಪ ಅವರ ಕೆಜೆಪಿ (ಕರ್ನಾಟಕ ಜನತಾ ಪಕ್ಷ) ನಡುವೆ ಮತಗಳು ಹಂಚಿಹೋದವು. ಹೆಚ್ಚು ಸ್ಥಿತಿವಂತರ ಮತಗಳು ಬಿಜೆಪಿಗೆ ಸಿಗುವುದು ದೊಡ್ಡಮಟ್ಟಿಗೆ ಕುಸಿಯಿತು. 2018ರ ಚುನಾವಣೆಯಲ್ಲಿ ಬಿಜೆಪಿಯು ಮಧ್ಯಮ ವರ್ಗದವರ ಮತಗಳನ್ನು ದೊಡ್ಡ ಮಟ್ಟದಲ್ಲಿ ಪಡೆಯಿತು. ಹಾಗೆಯೇ, ಆರ್ಥಿಕವಾಗಿ ದುರ್ಬಲರಾಗಿರುವವರು ಹಾಗೂ ಬಡವರ ನಡುವೆ ತನ್ನ ಮತ ಗಳಿಕೆ ಪ್ರಮಾಣವನ್ನು ಹೆಚ್ಚು ಮಾಡಿಕೊಂಡಿತು. ಆದರೆ ಆರ್ಥಿಕವಾಗಿ ಸ್ಥಿತಿವಂತರಾದವರ ಮತಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳದೆ ಇದ್ದುದು ಬಿಜೆಪಿಗೆ ಬಹುಮತ ಪಡೆಯಲು ಸಾಧ್ಯವಾಗದೇ ಇದ್ದುದಕ್ಕೆ ಒಂದು ಕಾರಣವಾಗಿರಬಹುದು.

ಕಾಂಗ್ರೆಸ್ಸಿನ ವಿಚಾರವಾಗಿ ಹೇಳುವುದಾದರೆ, 2008 ಮತ್ತು 2018ರಲ್ಲಿ, ಕಡಿಮೆ ಸ್ಥಿತಿವಂತರಿಂದ ಹೆಚ್ಚು ಸ್ಥಿತಿವಂತರ ಕಡೆ ಸಾಗಿದಂತೆಲ್ಲ ಪಕ್ಷವು ಗಳಿಸಿದ ಮತಗಳ ಪ್ರಮಾಣವು ಕಡಿಮೆ ಆಗುತ್ತ ಬಂದಿದ್ದು ಸ್ಪಷ್ಟವಾಗಿ ಕಾಣುತ್ತದೆ. ಪಕ್ಷವು ಜಯ ಸಾಧಿಸಿದ 2013ರ ವಿಧಾನಸಭಾ ಚುನಾವಣೆಯಲ್ಲಿ, ಎಲ್ಲ ವರ್ಗಗಳಿಗೆ ಸೇರಿದ ಮತದಾರರಿಂದ ಬೆಂಬಲ ಸಿಕ್ಕಿತು. ಹೆಚ್ಚು ಸ್ಥಿತಿವಂತರ ಬೆಂಬಲವು 2013ರಲ್ಲಿ ಕಾಂಗ್ರೆಸ್ಸಿಗೆ ಹೆಚ್ಚು ಸಿಕ್ಕಿತು. ಬಿಜೆಪಿ-ಕೆಜೆಪಿ ಒಡಕಿನಿಂದ ಈ ವರ್ಗಕ್ಕೆ ಆದ ಭ್ರಮನಿರಸನ ಹಾಗೂ ಸ್ಥಿರ ಸರ್ಕಾರ ಬೇಕು ಎಂಬ ಹಂಬಲವು ಈ ವರ್ಗವು ಕಾಂಗ್ರೆಸ್ಸನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಮೋದಿಸಿದ್ದಕ್ಕೆ ಕಾರಣವಾಗಿರಬಹುದು.

ಬಡವರು ಹಾಗೂ ಆರ್ಥಿಕವಾಗಿ ಅಷ್ಟೇನೂ ಪ್ರಬಲವಲ್ಲದ ವರ್ಗಗಳು ಕಾಂಗ್ರೆಸ್ಸಿನ ಪಾಲಿಗೆ ಪ್ರಮುಖ ಬೆಂಬಲಿಗ ವರ್ಗಗಳು. ಬಿಜೆಪಿಯು ಜನಪ್ರಿಯತೆಯನ್ನು ಗಳಿಸಿಕೊಂಡಿರುವುದು ಮಧ್ಯಮ ವರ್ಗದವರು ಹಾಗೂ ಸ್ಥಿತಿವಂತರ ನಡುವೆ. ಈ ಬಾರಿಯ ಚುನಾವಣೆಯಲ್ಲಿ ಯಶಸ್ಸು ಎಷ್ಟರಮಟ್ಟಿಗೆ ಸಿಗುತ್ತದೆ ಎನ್ನುವುದು, ಪಕ್ಷಗಳು ತಮ್ಮ ಸಾಂಪ್ರದಾಯಿಕ ಬೆಂಬಲಿಗ ವರ್ಗದ ಆಚೆಗೆ ಎಷ್ಟು ಮತಗಳನ್ನು ಪಡೆಯುವ ಸಾಮರ್ಥ್ಯ ಹೊಂದಿವೆ ಎಂಬುದನ್ನು ಆಧರಿಸಿ ಇರಲಿದೆ. ಸಾಮರ್ಥ್ಯ ಎಷ್ಟರಮಟ್ಟಿಗೆ ಇರಲಿದೆ ಎಂಬುದರ ಅರ್ಥವು ಕಾಂಗ್ರೆಸ್ಸಿಗೆ, ಮಧ್ಯಮ ವರ್ಗದ ಆಕಾಂಕ್ಷೆಗಳಿಗೆ ಅದು ಹೇಗೆ ಸ್ಪಂದಿಸುತ್ತದೆ ಎಂಬುದಾಗಿರುತ್ತದೆ. ಬಿಜೆಪಿ ಪಾಲಿಗೆ ಈ ಮಾತಿನ ಅರ್ಥವು ಬಡ ವರ್ಗಗಳಿಗೆ ಹತ್ತಿರ ಆಗುವುದಾಗಿರುತ್ತದೆ.



ಚುರುಮುರಿ

ಮ್ಯಾಂಗೊ ಇಎಂಐ!

• ನಾರಾಯಣ ರಾಯಚೂರ್

'ನಮ್ಮ ಫ್ರಿಜ್ ಇಎಂಐ ಅಂತೂ ಮುಗೀತಾ ಬಂತು ರೀ, ಮೆಸೇಜ್ ಬಂದಿದೆ ನೋಡಿ' ಮಡದಿ ಮೊಬೈಲ್ ಮುಂದೆ ಹಿಡಿದಳು-ಮೊದಲ ಲಿಸ್ಟಲ್ಲೇ ಟಿಕೆಟ್ ಸಿಕ್ಕ ಆಕಾಂಕ್ಷಿಯಷ್ಟು ಖುಷಿಯಾಗಿ. 'ಈ ಇಎಂಐ ಕಡೆ ಸ್ವಲ್ಪ ಗಮನ ಹರಿಸ್ರೀಯಾ. ಮ್ಯಾಂಗೋ ಇಎಂಐ ಅಂತ ಹೊಸ ಸ್ಕೀಮ್ ಬಂದಿದೆ!'

'ತಮಾಷೆಗೂ ಒಂದು ಮಿತಿ ಇರ್ಲಿ, 52 ಹೊಸ ಮುಖಗಳಿಗೆ ಟಿಕೆಟ್ ಕೊಟ್ಟು ಬಿಜೆಪಿ ಅಚ್ಚರಿ ಮೂಡಿಸಿರಬಹುದು, ಆದರೆ ಮ್ಯಾಂಗೊ ಖರೀದಿಗೆ ಇಎಂಐ ಅಂದ್ರೆ ನಾನು ನಂಬಲ್ಲ'.

'ಏನ್ಮಾಡತಾರೆ ಹೇಳು? ಮಾವಿನ ಹಣ್ಣಿನ ಬೆಲೆ ಗಗನಕ್ಕೇರಿದೆ. ಇನ್ನೂರು, ಮುನ್ನೂರು ರೂಪಾಯಿ ಇದ್ದ ಮಾವು ಐನೂರು, ಸಾವಿರಕ್ಕೇರಿದರೆ ಬೇವಿಗಿಂತಲೂ ಮಾವು ಕಹಿ ಅನಿಸಲ್ವೇ?! ಅದಕ್ಕೇ ಕಂತುಗಳಲ್ಲಿ ಮಾವು ನೀಡಿ ಬಡವರು, ಮಧ್ಯಮ ವರ್ಗದವರು, ನೌಕರದಾರರು ಮಾವಿನ ರುಚಿ ನೋಡಲಿ ಅಂತ...'

'ಫ್ರಿಜ್‌ಗೇನೋ ಸರಿ, ಫ್ರಿಜ್‌ನಲ್ಲಿ ಇಡೋ ವಸ್ತುಗಳಿಗೂ ಇಎಂಐನಾ?!'

'ಆ... ಇಎಂಐ... ಈಕ್ವೇಟೆಡ್ ಮಂತ್ಲಿ ಇನ್‌ಸ್ಟಾಲ್‌ಮೆಂಟ್'. ಆದರೆ, ಇದು ಈಟ್ ಮ್ಯಾಂಗೊ ಇನ್‌ಸ್ಟಾಲ್ಮೆಂಟಲಿ ಅಂತ!

'ಹೋ, ಇದು ನಿಮ್ಮ ವ್ಯಾಖ್ಯಾನವೋ' ಮಡದಿ ಕುಟುಕಿದಳು. 'ಅಲ್ಲಾರೀ ಯಾಕೋ ಚುನಾವಣಾ ಆಕಾಂಕ್ಷಿಗಳು, ಅಭ್ಯರ್ಥಿಗಳು ಕುಕ್ಕರ್, ಮೊಬೈಲ್‌ಗಳ ಜೊತೆ ಮ್ಯಾಂಗೊ ಆಮಿಷಾನೂ ಒಡ್ಡಿಲ್ಲವಲ್ಲ?'

'ಒಡ್ಡಬಹುದು, ಮಾವು ಎಷ್ಟೇ ಅಂದರೂ ಹಣ್ಣುಗಳ 'ರಾಜ' ಅಲ್ವಾ? ರಾಜಕಾರಣದವರು ರಾಜಕೀಯಕ್ಕೂ ಎಳೆದು ತರಬಹುದು'.

'ಕುಕ್ಕರ್ ಹಂಚಿ, ಅದು ಬ್ಲಾಸ್ಟ್ ಆಗಿ ಪುಣ್ಯಕ್ಕೆ ಯಾವ ಹೆಣಾ ಬೀಳದೆ ಬಚಾವಾದರಂತಲ್ಲ, ಪೇಪರ್‌ನಲ್ಲಿ ಬಂದಿತ್ತು. ಹಾಗೇ... ಸಾವಿರ ರೂಪಾಯಿಯ ಹಣ್ಣಿಗೆ ಎರಡು ಸಾವಿರದ ಸ್ಟಿಕ್ಕರ್ ಅಂಟಿಸಿ, ಹಂಚಿ ಮತ ಕೇಳಬಹುದು'.

'ನೀತಿ ಸಂಹಿತೆ ಜಾರಿ ಆದರೂ ಅನೀತಿ ವ್ಯವಹಾರ ಅನಿಯಮಿತವಾಗಿ ನಡೆದೇ ಇದೆ. ಅದಿರಲಿ, ನಮ್ಮ ಮುದ್ದಿನ ಮಾವಿನ ಹಣ್ಣು ಹೀಗೆ ಮರದಿಂದ ಆಕಾಶಕ್ಕೆ ನೆಗೆಬಾರದಾಗಿತ್ತು'.

'ನಿಧಾನಕ್ಕೆ ಹೇಳಿ, ಫ್ರಿಜ್ಜಲ್ಲಿಡೋ ಕೊತ್ತಂಬರಿ ಸೊಪ್ಪೂ ಕೇಳಿಸ್ಕೊಂಡುಬಿಟ್ಟೀತು'!

ಸಂಗತ

ನೆಪ ಸಾಕು, ಮತ ಹಾಕು

ಮತದಾನ ಹಕ್ಕು ಮಾತ್ರವಲ್ಲ, ಕರ್ತವ್ಯವೂ ಹೌದು

• ಡಾ. ಕೆ.ಎಸ್.ಚೈತ್ರಾ

ಬಿಸಿಲಿನ ಝಳ ಏರುತ್ತಿದೆ, ಚುನಾವಣೆಗೂ ಕಾವೇರುತ್ತಿದೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳೇ ರೂಪಿಸುವ ಸರ್ಕಾರ ನಮ್ಮದು. ಪ್ರಜೆಗಳು ಎಂದರೆ ನಾವು, ಮತ ಚಲಾಯಿಸುವುದು ನಮ್ಮ ಹಕ್ಕು ಮತ್ತು ಕರ್ತವ್ಯ. ಆದರೆ ನಿಜಕ್ಕೂ ಕಳವಳವನ್ನು ಉಂಟುಮಾಡುವ ವಿಷಯವೆಂದರೆ, ನಾಡಿನ ಭವಿಷ್ಯವನ್ನು ರೂಪಿಸಬೇಕಾದ ಯುವಜನರು ಮತ್ತು ನಗರ ಪ್ರದೇಶಗಳಲ್ಲಿರುವ ಮತದಾರರಲ್ಲಿ ಮತದಾನದ ಕಡೆಗಿನ ನಿರಾಸಕ್ತಿ.

ಹಾಗೆ ನೋಡಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅನಕ್ಷರಸ್ಥರು ಸೇರಿದಂತೆ ಜನರು ಮತದಾನವನ್ನು ಗಂಭೀರವಾಗಿ ಪರಿಗಣಿಸಿರುವುದು ಸಂತಸದ ವಿಷಯವೇ ಸರಿ. ಕರ್ನಾಟಕವು 57,300 ಮತಗಟ್ಟೆಗಳನ್ನು ಹೊಂದಿದ್ದು, ಇವುಗಳಲ್ಲಿ ಸುಮಾರು 9,000 ಮತಗಟ್ಟೆಗಳಲ್ಲಿ ಮತದಾನದ ಪ್ರಮಾಣ ಕಡಿಮೆ ಇದೆ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾದ ಕ್ಷೇತ್ರಗಳಲ್ಲಿ ರಾಜ್ಯದ ರಾಜಧಾನಿ ಬೆಂಗಳೂರು ನಗರವೂ ಸೇರಿತ್ತು. ಕಳೆದೊಂದು ದಶಕದಲ್ಲಿ ರಾಜ್ಯದ ಮತದಾನದ ಪ್ರಮಾಣ ಶೇಕಡ 70ಕ್ಕೆ ಏರಿದ್ದರೂ ಬೆಂಗಳೂರಿನಲ್ಲಿ ಶೇಕಡ 50ಕ್ಕೂ ಕಡಿಮೆ! ಮಾತ್ರವಲ್ಲ ಹುಬ್ಬಳ್ಳಿ, ಮೈಸೂರು, ಮಂಗಳೂರಿನಲ್ಲಿಯೂ ಇದೇ ಕಥೆ. ಇದಕ್ಕೆ ಕಾರಣವನ್ನು ಕಂಡುಹಿಡಿಯಲು ಚುನಾವಣಾ ಆಯೋಗದ ನಿರ್ದೇಶನದಂತೆ ಇತ್ತೀಚೆಗೆ ಸರ್ವೆಯನ್ನು ನಡೆಸಲಾಗಿತ್ತು.

ಸುಶಿಕ್ಷಿತರೇ ಹೆಚ್ಚಿರುವ ನಗರ ಪ್ರದೇಶಗಳಲ್ಲಿ ಈ ರೀತಿ ಮತದಾನದ ಪ್ರಮಾಣ ಕಡಿಮೆಯಾಗಲು ಪತ್ತೆಯಾದ ಅನೇಕ ಕಾರಣಗಳು ಆಶ್ಚರ್ಯ ಮೂಡಿಸುತ್ತವೆ. ಉದ್ಯೋಗಿಗಳು, ವರ್ತಕರು, ಅನುಕೂಲಸ್ಥರು ಮತದಾನಕ್ಕೆ ಹಿಂಜರಿಯಲು ಕಾರಣವೆಂದರೆ, ಸರದಿಯಲ್ಲಿ ನಿಂತು ಕಾಯಬೇಕು, ಸಿಕ್ಕಾಪಟ್ಟೆ ಬಿಸಿಲು, ಕಿರಿದಾದ ಜಾಗಗಳಲ್ಲಿ ಮತಗಟ್ಟೆಗಳು, ಕಾರು ಪಾರ್ಕಿಂಗ್‌ಗೆ ಜಾಗವಿಲ್ಲ, ಪ್ರವಾಸದ ಸಮಯ, ಟೈಮ್ ವೇಸ್ಟ್... ಆಶ್ಚರ್ಯವೆಂದರೆ, ಮನೆಯಲ್ಲಿ ಕುಳಿತು ಸರ್ಕಾರದ ಬಗ್ಗೆ ಗಂಟೆಗಟ್ಟಲೆ ಟೀಕಿಸುವವರೂ ಇವರೇ! ಪ್ರಜಾಪ್ರಭುತ್ವದ ನಿರ್ಣಾಯಕ ದಿನದಂದು ಹೊಣೆಗಾರಿಕೆಯಿಂದ ತಪ್ಪಿಸಿಕೊಂಡವರಿಗೆ ನಂತರ ಸರ್ಕಾರದ ಬಗ್ಗೆ ಮಾತನಾಡುವ ಅಧಿಕಾರವೂ ಇರುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಯುವ ಸಮುದಾಯ ಮತ್ತು ಹೊಸ ಮತದಾರರಿಗೆ ಮತದಾನದಲ್ಲಿ ಆಸಕ್ತಿ ಇಲ್ಲವಾಗಲು ಕಾರಣ ವ್ಯವಸ್ಥೆಯ ಬಗ್ಗೆ ನಿರಾಶೆ ಎನ್ನಲಾಗುತ್ತದೆ. ಯಾವ ಪಕ್ಷ ಚುಕ್ಕಾಣಿ ಹಿಡಿದರೂ ಅಷ್ಟೆ, ನನ್ನ ಒಂದು ಮತ ಏನು ಮಾಡೀತು ಎನ್ನುವ ಮನೋಭಾವ ಹೆಚ್ಚಿನವರದ್ದು. ದಿನಕ್ಕೊಂದೊಂದು ಬಗೆಯ ಹೇಳಿಕೆ ನೀಡುವ ರಾಜಕಾರಣಿಗಳನ್ನು ಕಂಡಾಗ, ಕುಸಿದಿರುವ ಮೌಲ್ಯ, ಆದರ್ಶಗಳನ್ನು ನೋಡಿದಾಗ ಹೀಗನಿಸುವುದು ಸಹಜವೇ. ಆದರೆ ಮತವನ್ನು ನೀಡದೇ ಇರುವುದು ಅದಕ್ಕೆ ಪರಿಹಾರವಲ್ಲ. ಕೆರೆಯ ನೀರು ಹೊಲಸಾಗಿದೆ ಎಂದು ಬೈಯ್ಯುತ್ತಾ ಓಡಾಡಿದರೆ ಸಾಲದು. ಬದಲಾಗಿ ನಮ್ಮ ಕೈಲಾದಷ್ಟು ಸ್ವಚ್ಛ ಮಾಡಿ ಇತರರನ್ನು ಹುರಿದುಂಬಿಸಿದರೆ ನೀರು ತಿಳಿಯಾದೀತು ಅಥವಾ ಆಗುವ ಭರವಸೆ ಉಳಿದೀತು.

ಮತದಾನದ ದಿನ ಪ್ರಜಾಪ್ರಭುತ್ವದ ಪ್ರಮುಖ ದಿನ. ಅದನ್ನು ರಜಾ ದಿನವೆಂದು ಪರಿಗಣಿಸಿ ಪ್ರವಾಸ ಹೋಗುವವರೂ ನಗರಗಳಲ್ಲಿ ಹೆಚ್ಚು! ಈ ಹಿಂದೆ ಸೋಮವಾರ ಅಥವಾ ಶುಕ್ರವಾರ ಮತದಾನದ ದಿನವಾಗಿದ್ದಾಗ ಜನರು ಅದನ್ನು ವಾರಾಂತ್ಯದ ರಜೆಗಾಗಿ ಉಪಯೋಗಿಸಿ ಪ್ರವಾಸ ತೆರಳುವುದು ನಗರ ಪ್ರದೇಶಗಳಲ್ಲಿ ಸಾಮಾನ್ಯವಾಗಿತ್ತು. ಹಾಗಾಗಿಯೇ ಈ ಬಾರಿ ಮೇ ಹತ್ತು ಅಂದರೆ ವಾರದ ಮಧ್ಯದ ದಿನ ಬುಧವಾರವನ್ನು ಮತದಾನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ!

ಗರ್ಭಿಣಿಯರು, ಚಿಕ್ಕಮಕ್ಕಳ ತಾಯಂದಿರು, ಅಂಗವಿಕಲರು, ಹಿರಿಯ ನಾಗರಿಕರಿಗೆ ಮತಗಟ್ಟೆಯಲ್ಲಿ ಆದಷ್ಟು ಬೇಗ ಮತ ಚಲಾಯಿಸಲು ಅನುಕೂಲ ಮಾಡಿಕೊಡಲಾಗುತ್ತದೆ. ಅದರೊಂದಿಗೆ ಬಿಸಿಲು ಹೆಚ್ಚಿರುವ ಕಾರಣ ಅನೇಕ ಕಡೆ ಶಾಮಿಯಾನಗಳನ್ನು ಹಾಕುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಈ ಬಾರಿ, ಎಂಬತ್ತು ವರ್ಷ ಮೀರಿದ ಹಿರಿಯರಿಗೆ, ತೀವ್ರ ಅಸ್ವಸ್ಥರಿಗೆ ಮತ್ತು ಅಂಗವಿಕಲರಿಗೆ ಮನೆಯಿಂದಲೇ ಮತ ಚಲಾವಣೆಗೆ ಅವಕಾಶ ಮಾಡಿಕೊಡಲಾಗಿದೆ.

ಹಾಗೆಯೇ, ತಂತ್ರಜ್ಞಾನವನ್ನು ಅನೇಕ ಕ್ಷೇತ್ರಗಳಲ್ಲಿ ಸಮರ್ಥವಾಗಿ ಬಳಸಿಕೊಳ್ಳುತ್ತಿರುವ ನಮ್ಮ ದೇಶದಲ್ಲಿ ಚುನಾವಣಾ ಆಯೋಗವು ಆನ್‌ಲೈನ್ ಮತದಾನದ ಬಗ್ಗೆಯೂ ಯೋಚಿಸಬಹುದು ಎಂಬುದು ಅನೇಕರ ಅಭಿಪ್ರಾಯ. ಸುರಕ್ಷಿತವಾದ ಹೊಸದೊಂದು ಆ್ಯಪ್ ಅನ್ನು ಮತದಾನಕ್ಕಾಗಿಯೇ ಅಭಿವೃದ್ಧಿಪಡಿಸಲು ಸಾಧ್ಯವಾದರೆ ಹಣ, ಶ್ರಮ ಎರಡೂ ಉಳಿತಾಯ. ಪ್ರಪಂಚದಲ್ಲಿ ಯಾವುದೇ ಮೂಲೆಯಲ್ಲಿದ್ದರೂ ಭಾರತೀಯರಾಗಿ ಮತದಾನದ ಹಕ್ಕನ್ನು ಚಲಾಯಿಸಲು ಸಾಧ್ಯವಾಗಬಹುದು. ಕನಿಷ್ಠ ನಗರ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಾದರೆ ಮುಂದಿನ ತೀರ್ಮಾನ ತೆಗೆದುಕೊಳ್ಳಬಹುದು. ಬದಲಾದ ಕಾಲಘಟ್ಟದಲ್ಲಿ ಇದರ ಬಗ್ಗೆಯೂ ಯೋಚಿಸುವುದು ಅನಿವಾರ್ಯ.

ಉತ್ತಮ ಸರ್ಕಾರ ರಚನೆಯಾಗಿ, ಜನಪರ ಕಾರ್ಯಕ್ರಮ ರೂಪುಗೊಳ್ಳಲು, ಆ ಮೂಲಕ ನಮ್ಮ ರಾಷ್ಟ್ರ, ರಾಜ್ಯವು ಸಬಲ, ಸಮರ್ಥವಾಗುವಂತೆ ಮಾಡುವ ಹೊಣೆ ನಮ್ಮೆಲ್ಲರದ್ದು. ಅದರಲ್ಲಿನ ಮೊದಲ ಹೆಜ್ಜೆ ಮತದಾನ. ಭಾರತೀಯ ಪ್ರಜಾಪ್ರಭುತ್ವದ ಭವಿಷ್ಯವಾಗಿರುವ ಯುವ ಮತದಾರರು ಮತ್ತು ಪ್ರಜೆಗಳಾದ ನಾವೆಲ್ಲರೂ ನಮ್ಮ ಹಕ್ಕು ಮತ್ತು ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಲೇಬೇಕು. ಹಾಗಾಗಿ ನೆಪಗಳನ್ನು ನೀಡದೇ, ಪ್ರಲೋಭನೆಗಳಿಗೆ ಒಳಗಾಗದೇ ಮತದಾನ ಮಾಡೋಣ!

ವಾಚಕರ ವಾಣಿ

ಕಾನೂನು ನಿರ್ದಯವಾಗದಿರಲಿ...

ಹೂವಿನಹಡಗಲಿ ಪಟ್ಟಣದ ಹೊರವಲಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಬಳಿ ಬಸ್ ನಿಲುಗಡೆ ಇಲ್ಲದಿದ್ದುದರಿಂದ, ಚಲಿಸುತ್ತಿದ್ದ ಬಸ್‌ನಿಂದಲೇ ಇಳಿಯಲು ಪ್ರಯತ್ನಿಸಿ, ನಿಯಂತ್ರಣ ತಪ್ಪಿ ಬಿದ್ದು ತಲೆಗೆ ಬಲವಾದ ಪೆಟ್ಟು ಮಾಡಿಕೊಂಡ ಆ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ಅಸುನೀಗಿರುವುದು ಮನ ಕಲಕುತ್ತದೆ (ಪ್ರ.ವಾ., ಏ. 14). ನಿತ್ಯ ಆ ಕಾಲೇಜಿಗೆ ಹೋಗಿಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈವರೆಗೂ ಅಲ್ಲಿ ಬಸ್ ನಿಲುಗಡೆಗೆ ಅವಕಾಶ ಕಲ್ಪಿಸದಿರುವುದು ಸಂಬಂಧಿಸಿದ ಅಧಿಕಾರಿಗಳ ಬೇಜವಾಬ್ದಾರಿತನ. ಒಂದು ವೇಳೆ ಎಕ್ಸ್‌ಪ್ರೆಸ್ ಬಸ್ಸುಗಳಿಗೆ ಅಲ್ಲಿ ನಿಲುಗಡೆ ಇಲ್ಲದಿದ್ದರೆ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ, 'ಬೇಡಿಕೆ ನಿಲುಗಡೆ'ಗೆ ಅವಕಾಶ ಕಲ್ಪಿಸಬೇಕಾದುದು ಅವರ ಜವಾಬ್ದಾರಿ.

ನಿರ್ದಯವಾಗಿ ಕಾನೂನಿಗೇ ಅಂಟಿಕೊಂಡಾಗ, ಬರೀ ಕಾನೂನನ್ನು ಪಾಲಿಸಿದಂತಾಗುತ್ತದೆ, ಆದರೆ ಮಾನವೀಯತೆ ಸತ್ತಿರುತ್ತದೆ, ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ.

ಪುಟ್ಟೇಗೌಡ, ಬೆಂಗಳೂರು

ವಿಕೆಟ್–ಟಿಕೆಟ್

ಕ್ರಿಕೆಟ್‌ನಲ್ಲಿ
ಒಳ್ಳೆಯ ಎಸೆತಕ್ಕೆ
ಬೀಳುತ್ತದೆ ವಿಕೆಟ್ಟು
ರಾಜಕೀಯದಲ್ಲಿ?
ಬೀಳುತ್ತದೆ
ಸಿಗದಿದ್ದರೆ ಟಿಕೆಟ್ಟು!

ಮಹಾಂತೇಶ ಮಾಗನೂರ
ಬೆಂಗಳೂರು

ದೋಷ ಪರಿಹಾರದ ದುರಾಲೋಚನೆ

ಕೆಲವು ತಂಬಾಕು ಉತ್ಪನ್ನಗಳ ಮೇಲೆ 'ಶಾಸನ ವಿಧಿಸಿದ ಎಚ್ಚರಿಕೆ' ಎಂಬ ಬರಹ ಬರೆದು ಧೂಮಪಾನ ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬ ಸಂದೇಶ ಕೊಟ್ಟುಬಿಟ್ಟರೆ ನಂತರ ಏನು ಬೇಕಾದರೂ ಮಾರಿಕೊಳ್ಳಬಹುದು ಎನ್ನುವ ದುರಾಲೋಚನೆ ಎಲ್ಲಾ ಕಡೆ ಬಂದುಬಿಟ್ಟಿದೆ. ಅಲ್ಲಿಗೆ ದೋಷ ಪರಿಹಾರ ಆದ ಹಾಗೆ, ಮೈಲಿಗೆ ಕಳೆದುಕೊಂಡು ಮಡಿಯಾದ ಹಾಗೆ ಎನ್ನುವಂತಿದೆ ಸರ್ಕಾರದ ಈ ಧೋರಣೆ. ದೂರದರ್ಶನದಲ್ಲಿ ಸಹ ಯಾವುದಾದರೂ ಧಾರಾವಾಹಿ, ಚಲನಚಿತ್ರಗಳಲ್ಲಿ ಬರುವ ಕುಡಿತ, ಧೂಮಪಾನದ ದೃಶ್ಯಗಳಲ್ಲಿ ಶಾಸನ ವಿಧಿಸಿದ ಎಚ್ಚರಿಕೆ ಕೊಟ್ಟು ಪ್ರಸಾರ ಮಾಡಿದರೆ ಬಂತೇನು ಭಾಗ್ಯ?

ಸರ್ಕಾರ ಒಂದು ಕಡೆ ಮದ್ಯದಂಗಡಿಗಳಿಗೆ ಪರವಾನಗಿ ಕೊಡುವುದು, ಕೆಲವು ಸಾರ್ವಜನಿಕ ಪ್ರದೇಶಗಳಲ್ಲಿ 'ಮದ್ಯಪಾನ ಮೃತ್ಯುವಿಗೆ ಆಹ್ವಾನ' ಎಂದು ಗಾಂಧೀಜಿಯ ಒಂದು ಚಿತ್ರ ಹಾಕಿ ಸಾರ್ವಜನಿಕ ಹಿತಾಸಕ್ತಿಯ ಪ್ರಕಟಣೆ ಹೊರಡಿಸುವುದು ಹಾಸ್ಯಾಸ್ಪದ. ಶಾಲೆ ಕಾಲೇಜುಗಳ ಅಕ್ಕಪಕ್ಕ ಇಂತಿಷ್ಟು ಅಡಿ ದೂರದಲ್ಲಿ ತಂಬಾಕು, ಮದ್ಯ ಮಾರಾಟ ಮಾಡಬಾರದು ಎಂಬ ನಿಯಮವಿದ್ದರೂ ಹತ್ತಿರದಲ್ಲೇ ಮಾರಾಟ ಮಾಡುತ್ತಿರುತ್ತಾರೆ. ಇಂತಹ ನಾಮಕಾವಸ್ತೆ ಹೇಳಿಕೆಗಳು ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ಬಂದರೆ ಚೆನ್ನಾಗಿರುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಗುಣಾತ್ಮಕ ಶಿಕ್ಷಣಕ್ಕೆ ಸಿಗಲಿ ಒತ್ತು

ದ್ವಿತೀಯ ಪಿಯುಸಿ ಮೌಲ್ಯಮಾಪನ ಇತ್ತೀಚೆಗೆ ನಡೆಯಿತು. ರಾಜ್ಯಶಾಸ್ತ್ರ ಪತ್ರಿಕೆಯಲ್ಲಿ ಒಂದು ಪ್ರಶ್ನೆ 'ಜಿಲ್ಲಾಧಿಕಾರಿಗಳ ಕರ್ತವ್ಯದ ಬಗ್ಗೆ ಬರೆಯಿರಿ' ಎಂದು ಇತ್ತು. ಒಬ್ಬ ವಿದ್ಯಾರ್ಥಿಯ ಉತ್ತರ 'ಜಿಲ್ಲಾಧಿಕಾರಿಯು ಬೆಳಿಗ್ಗೆ ಏಳುತ್ತಾರೆ, ವಾಕಿಂಗ್ ಮಾಡುತ್ತಾರೆ. ಹಲ್ಲು ತಿಕ್ಕಿ, ಎರಡಕ್ಕೆ ಹೋಗುತ್ತಾರೆ. ಜಳಕ ಮಾಡಿ, ನಾಷ್ಟಾ ಮುಗಿಸಿ, ಆಫೀಸಿಗೆ ಹೋಗಿ, ಮತ್ತೆ ಮನೆಗೆ ಹೋಗುತ್ತಾರೆ...' (ಕಾಗುಣಿತ ಯಥಾವತ್ ಬರೆದರೆ ಅರ್ಥವಾಗುವುದಿಲ್ಲವೆಂದು ಸರಿಪಡಿಸಲಾಗಿದೆ) ಎಂದು ಬರೆದಿದ್ದರಂತೆ. ಮಕ್ಕಳ ಬರೆಯುವಿಕೆ ಕಡಿಮೆಯಾಗಲೆಂದು ಹೆಚ್ಚಿನಂಶ ಬಹು ಆಯ್ಕೆ ಮಾದರಿ ಪ್ರಶ್ನೆ, ಕೃಪಾಂಕ, ಅನುದಾನ ಬೇಕೆಂದರೆ ಇಂತಿಷ್ಟು ಫಲಿತಾಂಶ ಕಡ್ಡಾಯವೆಂಬ ನಿಯಮ, ನಿರೀಕ್ಷಿತ ಫಲಿತಾಂಶ ಬರದಿದ್ದರೆ ಶಿಕ್ಷಕರ ಮೇಲೆ ಕ್ರಮ ಹೀಗೆ ಶಿಸ್ತುಕ್ರಮದ ಭೀತಿಯನ್ನು ಎದುರಿಸುವ ಬದಲು ಮುಂದಿನ ತರಗತಿಗೆ ಹೊತ್ತು ಹಾಕುವ ಪದ್ಧತಿ ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೂ ಮುಂದುವರಿದರೆ ಇನ್ನು ಯಾವ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸಲಾದೀತು?

ಮುಂದಿನ ದಿನಗಳಲ್ಲಾದರೂ ಫಲಿತಾಂಶ ಆಧಾರಿತ ಗುಣಮಟ್ಟವನ್ನು ಅವಲಂಬಿಸಿ ಶೈಕ್ಷಣಿಕ ಮಟ್ಟವನ್ನು ಸುಧಾರಿಸುವ ಬದಲು, ಗುಣಾತ್ಮಕ ಶಿಕ್ಷಣಕ್ಕೆ ಒತ್ತು ಕೊಟ್ಟು, ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಮಾಡುವ ಕೆಲಸ ಆಗಬೇಕಿದೆ.

ಚನ್ನು ಹಿರೇಮಠ, ರಾಣೆಬೆನ್ನೂರು

ಹೇಳುವುದು ಒಂದು, ಮಾಡುವುದು...?

ಕುಡಚಿ ಶಾಸಕ ಪಿ. ರಾಜೀವ್ ಅವರು ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡ ಕುರಿತ ವರದಿ (ಪ್ರ.ವಾ., ಏ. 11) ನೋಡಿ ಬೇಸರವಾಯಿತು. ಅವರು ಒಬ್ಬ ಜವಾಬ್ದಾರಿಯುತ ಚುನಾಯಿತ ಜನಪ್ರತಿನಿಧಿಯಾಗಿ ಈ ರೀತಿ ನಡೆದುಕೊಂಡಿರುವುದು ಸರಿಯಲ್ಲ. ಈ ಹಿಂದೆ ವಿಧಾನಸಭೆ ಕಲಾಪ ಹಾಗೂ ದೃಶ್ಯಮಾಧ್ಯಮದಲ್ಲಿ ರಾಜೀವ್ ಅವರು ಸಂವಿಧಾನ ಹಾಗೂ ಸಾಮಾಜಿಕ ಕಳಕಳಿಯ ವಿಷಯಗಳ ಬಗ್ಗೆ ಮಾತನಾಡಿ ಜನರ ಮೆಚ್ಚುಗೆ ಪಡೆದಿದ್ದರು. ಆದರೆ ಈಗ ಅವರು ಈ ರೀತಿ ನಡೆದುಕೊಂಡಿರುವುದನ್ನು ನೋಡಿದರೆ, ಹೇಳುವುದು ಒಂದು ಮಾಡುವುದು ಮತ್ತೊಂದು ಎಂಬಂತೆ ಆಗುವುದಿಲ್ಲವೇ?

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಮೊದಲ ಮತದಾನಕ್ಕೊಂದು ದೃಢನಿಶ್ಚಯ

ರಾಜ್ಯದಲ್ಲಿ ಇನ್ನೇನು ತಿಂಗಳ ಒಳಗಾಗಿ ವಿಧಾನಸಭೆ ಚುನಾವಣೆ ನಡೆಯಲಿರುವ ಈ ಸಂದರ್ಭದಲ್ಲಿ, ರಾಜಕಾರಣಿಗಳ ನಡುವೆ ಕೆಸರೆರಚಾಟ ನಡೆದಿದೆ. ಇಂತಹ ಪರಿಸ್ಥಿತಿ ಬದಲಾದರೆ ಮಾತ್ರ ರಾಜ್ಯದ ಹಿರಿಮೆ ಮತ್ತು ಘನತೆ ಹೆಚ್ಚಲು ಸಾಧ್ಯ. ಈ ಮೊದಲು ನೀಡಿರುವ ಭರವಸೆಗಳನ್ನು ಉಳಿಸಿಕೊಳ್ಳುವಲ್ಲಿ ಹಲವು ರಾಜಕಾರಣಿಗಳು ಸೋತಿದ್ದಾರೆ.

ಇದು, ಒಬ್ಬ ಮತದಾರನಾಗಿ ನನ್ನ ಪ್ರಥಮ ಚುನಾವಣೆ ಆಗಿದೆ. ಯಾವುದೇ ಧರ್ಮ, ಜಾತಿ ಅಥವಾ ವರ್ಗವನ್ನು ನೋಡಿ ಮತ ನೀಡದಿರಲು ನಾನು ನಿರ್ಧರಿಸಿದ್ದೇನೆ. ಯಾರು ಜನಪರವಾಗಿ ಕೆಲಸ ಮಾಡುತ್ತಾರೋ ಅವರಿಗೇ ಮತ ನೀಡಬೇಕೆಂಬ ದೃಢನಿಶ್ಚಯ ಮಾಡಿದ್ದೇನೆ.

ಅಣ್ಣಾರಾಯ ಜಿ. ಪಾಟೀಲ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಳಿವಿಗಾಗಿ ಹಿಮನಾಡಿನ ಜನರ ಹೋರಾಟ

ಉತ್ತರ ಭಾರತದ ಎರಡು ಪ್ರಮುಖ ಪ್ರವಾಸಿ ತಾಣಗಳಾದ ಲಡಾಖ್ ಮತ್ತು ಜೋಶಿಮಠ ಅಪಾಯದ ಅಂಚಿನಲ್ಲಿವೆ. ಪ್ರಾಕೃತಿಕವಾಗಿ ಎರಡೂ ತಾಣಗಳು ಅತ್ಯಂತ ಸೂಕ್ಷ್ಮ ಪ್ರದೇಶಗಳಾಗಿವೆ. ಮಾನವನ ಅತಿಯಾದ ಚಟುವಟಿಕೆಗಳಿಂದಾಗಿ ಜೋಶಿಮಠ ದಿನೇದಿನೇ ಕುಸಿಯುತ್ತಿದೆ. ಮತ್ತೊಂದೆಡೆ ಲಡಾಖ್‌ನಲ್ಲಿ ಕೈಗಾರಿಕೆ ಮತ್ತು ಖನಿಜ ಗಣಿಗಾರಿಕೆ ಆರಂಭಕ್ಕೆ ಸರ್ಕಾರದ ಮಟ್ಟದಲ್ಲಿ ಸಿದ್ಧತೆ ನಡೆಯುತ್ತಿದೆ. ಎರಡೂ ಕಡೆ ಈ ಸ್ವರೂಪದ ಅಭಿವೃದ್ಧಿ ಚಟುವಟಿಕೆಗಳಿಂದ ಪರಿಸರಕ್ಕೆ ಹಾನಿಯಾಗುತ್ತಿದೆ. ಅದು ಸ್ಥಳೀಯರ ಬದುಕನ್ನು ಕಿತ್ತುಕೊಳ್ಳುತ್ತದೆ ಎಂಬ ಕೂಗು ಎದ್ದಿದೆ. ಇಂತಹ ಚಟುವಟಿಕೆಗಳ ವಿರುದ್ಧ, ಅಂತಹ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟ ಸರ್ಕಾರದ ನೀತಿಗಳ ವಿರುದ್ಧ ಸ್ಥಳೀಯರು ಹೋರಾಟಕ್ಕೆ ಇಳಿದಿದ್ದಾರೆ. ಈಗಾಗಲೇ ಬಂದೊದಗಿರುವ ಅಪಾಯದಿಂದ ಜೋಶಿಮಠವನ್ನು ಉಳಿಸಿ ಎಂಬ ಹೋರಾಟಕ್ಕೆ ಈ ಗುರುವಾರವಷ್ಟೇ 100 ದಿನ ತುಂಬಿದೆ. ಮುಂದೆ ಬರಲಿರುವ ಅಪಾಯದಿಂದ ಲಡಾಖ್ ಅನ್ನು ಉಳಿಸಿ ಎಂಬ ಹೋರಾಟಕ್ಕೆ 75 ದಿನ ತುಂಬಿದೆ. ಆದರೆ, ಎರಡೂ ಹೋರಾಟಗಳಿಗೆ ಸರ್ಕಾರದಿಂದ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆ ದೊರೆತಿಲ್ಲ. ಎರಡೂ ಕಡೆಯ ಹೋರಾಟಗಾರರು, ಹೋರಾಟವನ್ನು ತೀವ್ರಗೊಳಿಸುತ್ತೇವೆ ಎಂಬ ಎಚ್ಚರಿಕೆ ನೀಡಿದ್ದಾರೆ

ಲಡಾಖ್: ಎಲ್ಲವೂ ಸರಿ ಇಲ್ಲ

• ಜಯಸಿಂಹ ಆರ್.

ಬಾಲಿವುಡ್ ಸಿನಿಮಾ '3 ಈಡಿಯಟ್ಸ್'ನ ಪುನ್ಸುಕ್ ವಾಂಗ್ದು ಪಾತ್ರಕ್ಕೆ ಸ್ಫೂರ್ತಿ ಎನ್ನಲಾದ ಲಡಾಖ್‌ನ ಶಿಕ್ಷಣ ತಜ್ಞ 'ಸೋನಮ್ ವಾಂಗ್ಚುಕ್' ಇದೇ ಜನವರಿಯಲ್ಲಿ 'ಲಡಾಖ್ ಅನ್ನು ರಕ್ಷಿಸಿ' ಎಂದು ಐದು ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಆ ಒಬ್ಬರು ಆರಂಭಿಸಿದ ಉಪವಾಸವು, ನಂತರದ ದಿನಗಳಲ್ಲಿ ಒಂದು ಚಳವಳಿಯ ರೂಪ ಪಡೆಯಿತು. 'ಲಡಾಖ್ ಅನ್ನು ರಕ್ಷಿಸಿ' ಎಂದು ಸೋನಮ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಳುಹಿಸಿದ ವಿಡಿಯೊ ಸಂದೇಶವು, ಈಗ 'ಆಲ್ ಇಸ್ ನಾಟ್ ವೆಲ್' (ಎಲ್ಲವೂ ಸರಿಯಿಲ್ಲ) ಎಂಬ ಚಳವಳಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹುಟ್ಟುಹಾಕಿತ್ತು. ಲಡಾಖ್ ರಕ್ಷಣೆಗೆ ನೀಡಿದ್ದ ಭರವಸೆಗಳನ್ನು ಕೇಂದ್ರ ಸರ್ಕಾರ ಈಡೇರಿಸುತ್ತಿಲ್ಲ ಎಂಬುದು ಚಳವಳಿಯಲ್ಲಿ ಭಾಗಿಯಾಗಿರುವವರ ಆರೋಪ. ಚುನಾಯಿತ ಸರ್ಕಾರ ಇಲ್ಲದೇ ಇರುವುದು ಮತ್ತು ಆಡಳಿತದಲ್ಲಿ ಜನರ ಪ್ರಾತಿನಿಧ್ಯ ಇಲ್ಲದೇ ಇರುವುದರಿಂದ ಜನವಿರೋಧಿ ನೀತಿಗಳು ಅನುಷ್ಠಾನಕ್ಕೆ ಬರುತ್ತಿವೆ ಎಂಬುದು ಇಲ್ಲಿನ ಜನರ ಕಳವಳ.

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭಾಗವಾಗಿ ಲಡಾಕ್ ಇದ್ದಾಗ ಅದಕ್ಕೆ ಸಂವಿಧಾನದ 370ನೇ ವಿಧಿಯ ಅಡಿ ರಕ್ಷಣೆ ಮತ್ತು ವಿಶೇಷ ಸ್ಥಾನವಿತ್ತು. ಅನ್ಯರಾಜ್ಯದವರು ಅಲ್ಲಿ ಭೂಮಿ ಖರೀದಿ, ಉದ್ದಿಮೆ ಆರಂಭಿಸುವುದಕ್ಕೆ ಅವಕಾಶವಿರಲಿಲ್ಲ. ಆದರೆ, 2019ರ ಆಗಸ್ಟ್ 5ರಂದು ಈ ವಿಶೇಷ ಸ್ಥಾನವನ್ನು ರದ್ದುಪಡಿಸಲಾಯಿತು. ಜಮ್ಮು–ಕಾಶ್ಮೀರದ ರಾಜ್ಯ ಸ್ಥಾನವನ್ನು ರದ್ದುಪಡಿಸಲಾಯಿತು. ಲಡಾಖ್ ಅನ್ನು ಒಂದು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಲಾಯಿತು. ಆನಂತರ ಅಗತ್ಯ ಕಾನೂನುಗಳಿಗೆ ಬದಲಾವಣೆ ತಂದು, ಹೊರ ರಾಜ್ಯದವರು ಲಡಾಖ್‌ನಲ್ಲಿ ಬಂಡವಾಳ ಹೂಡಲು ಮತ್ತು ಉದ್ದಿಮೆಗಳನ್ನು ಆರಂಭಿಸಲು ಅವಕಾಶ ಮಾಡಿಕೊಡಲಾಯಿತು. ಹೊರಗಿನವರು ಬಂಡವಾಳ ಹೂಡಿ, ಉದ್ದಿಮೆ ಆರಂಭಿಸುತ್ತಿರುವುದೇ ಈಗ ಲಡಾಖ್ ಜನರ ಮತ್ತು ಸರ್ಕಾರದ ನಡುವಣ ಸಂಘರ್ಷಕ್ಕೆ ಕಾರಣವಾಗಿದೆ. 'ಲಡಾಖ್ ರಕ್ಷಿಸಿ' ಚಳವಳಿಯ ಕೇಂದ್ರಬಿಂದುವೂ ಇದೇ ಆಗಿದೆ.

ಉಪವಾಸ ಸತ್ಯಾಗ್ರಹದಲ್ಲಿ ಸೋನಮ್

ಸೋನಮ್ ತಮ್ಮ ವಿಡಿಯೊ ಸಂದೇಶದಲ್ಲಿ ಇದೇ ವಿಷಯಗಳನ್ನು ಪ್ರಸ್ತಾಪಿಸಿದ್ದರು. 'ಲಡಾಖ್ ಅತ್ಯಂತ ಸೂಕ್ಷ್ಮ ಪರಿಸರ ಪ್ರದೇಶವಾಗಿದೆ. ವಾರ್ಷಿಕ 4 ಇಂಚಿಗಿಂತಲೂ ಕಡಿಮೆ ಮಳೆಯಾಗುವ ಈ ಪ್ರದೇಶದಲ್ಲಿ, ಕುಡಿಯುವ ಮತ್ತು ದಿನಬಳಕೆಯ ನೀರಿಗಾಗಿ ಜನರು ಹಿಮನದಿಗಳನ್ನೇ ಆಶ್ರಯಿಸಿದ್ದಾರೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ದೈನಂದಿನ ಬಳಕೆಗೆ ಐದು ಲೀಟರ್‌ಗಿಂತಲೂ ಕಡಿಮೆ ನೀರನ್ನು ಬಳಸುತ್ತಾನೆ. ನೀರಿನ ಕೊರತೆ ಯಥೇಚ್ಛವಾಗಿರುವ ಇಂತಹ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಆರಂಭಿಸಿದರೆ, ಅವುಗಳಿಗೆ ನೀರನ್ನು ಒದಗಿಸುವುದು ಹೇಗೆ? ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಹೊರಗಿನಿಂದ ಬರುವ ಜನರಿಗೆ ನೀರನ್ನು ಒದಗಿಸುವುದು ಹೇಗೆ' ಎಂದು ಪ್ರಧಾನಿ ಅವರನ್ನು ಸೋನಮ್ ಪ್ರಶ್ನಿಸಿದ್ದರು.

'ಇಲ್ಲಿ ಖನಿಜ ಸಂಪತ್ತು ಯಥೇಚ್ಛವಾಗಿದೆ. ಹೀಗಾಗಿ ಅವುಗಳ ಗಣಿಗಾರಿಕೆ ನಡೆಸಲು ಉದ್ಯಮಿಗಳು ಮತ್ತು ಉದ್ದಿಮೆ ಗುಂಪುಗಳು ಕಾದಿವೆ. ಈವರೆಗೆ ಅಂತಹ ಉದ್ದಿಮೆಗಳು ಇಲ್ಲಿ ಆರಂಭವಾಗಿಲ್ಲವಾದರೂ, ಅವು ಆರಂಭವಾಗುವ ದಿನ ದೂರವಿಲ್ಲ. ಉದ್ಯಮಿಗಳು ಮತ್ತು ಉದ್ದಿಮೆ ಗುಂಪಿನ ಪ್ರಭಾವಕ್ಕೆ ಕೇಂದ್ರಾಡಳಿತದ ತಳಮಟ್ಟದ ಅಧಿಕಾರಿಗಳು ಒಳಗಾದಂತೆ ಕಾಣುತ್ತಿದೆ' ಎಂದು ಅವರು ವಿಡಿಯೊ ಸಂದೇಶದಲ್ಲಿ ಕಳವಳ ವ್ಯಕ್ತಪಡಿಸಿದ್ದರು.

ಈ ಉಪವಾಸ ಸತ್ಯಾಗ್ರಹವೇ ಚಳವಳಿಯು ತೀವ್ರತೆ ಪಡೆಯಲು ಕಾರಣವಾಯಿತು. ಜಗತ್ತಿನ ಅತ್ಯಂತ ಎತ್ತರದ ಮೋಟಾರು ರಸ್ತೆಯಾದ ಕಾರ್ದುಂಗ್‌ಲಾ ಪಾಸ್‌ನಲ್ಲಿ ಉಪವಾಸ ನಡೆಸಲು ಸೋನಮ್ ಸಿದ್ಧತೆ ನಡೆಸಿದ್ದರು. ಆದರೆ ಪೊಲೀಸರು ಅವರನ್ನು ತಡೆದು ತಮ್ಮ ಶಿಕ್ಷಣ ಸಂಸ್ಥೆಯಲ್ಲೇ ಉಪವಾಸ ಸತ್ಯಾಗ್ರಹ ಮಾಡುವಂತೆ ನಿರ್ಬಂಧ ಹೇರಿದರು. ತಮ್ಮ ಹೋರಾಟಕ್ಕೆ ಜತೆಯಾಗುವಂತೆ ಸೋನಮ್ ಟ್ವೀಟ್‌ನಲ್ಲಿ ಕೋರಿದ್ದರು. ಆನಂತರವೇ ಲಡಾಖ್‌ನ ಜನರು ಮೈಕೊರೆಯುವ ಮೈನಸ್ 40 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಉಷ್ಣಾಂಶದಲ್ಲಿ ಬೀದಿ–ಬೀದಿಗಳಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದರು. ಐದನೇ ದಿನದ ಉಪವಾಸದ ವೇಳೆಗೆ ಹೀಗೆ ಚಳವಳಿಗೆ ಜತೆಯಾದವರ ಸಂಖ್ಯೆ ಸಾವಿರವನ್ನು ಮೀರಿತ್ತು. ಲಡಾಖ್ ಮಾತ್ರವಲ್ಲದೆ ದೆಹಲಿ, ಮುಂಬೈ, ಬೆಂಗಳೂರು, ಕೋಲ್ಕತ್ತ ಸೇರಿ ದೇಶದ ಹಲವೆಡೆ ನೂರಾರು ಮಂದಿ ಚಳವಳಿಗೆ ಜತೆಯಾದರು. ಈಗಲೂ ದೇಶದ ಬೇರೆಡೆಯಿಂದ ಲಡಾಖ್‌ಗೆ ಬರುವ ಪ್ರವಾಸಿಗರು ಈ ಹೋರಾಟಕ್ಕೆ ಬೆಂಬಲ ಸೂಚಿಸಿ ಹೋಗುತ್ತಿದ್ದಾರೆ.

ಜೋಶಿಮಠ ಹೋರಾಟಕ್ಕೆ 100 ದಿನ

ಚಾರ್‌ಧಾಮ್ ತೀರ್ಥಕ್ಷೇತ್ರಗಳಲ್ಲಿ ಒಂದಾದ ಬದರೀನಾಥದ ಹೆಬ್ಬಾಗಿಲು ಎಂದೇ ಖ್ಯಾತವಾಗಿರುವ ಜೋಶಿಮಠ ಅಕ್ಷರಶಃ ಪ್ರಪಾತದ ಅಂಚಿಗೆ ಬಂದು ಕುಳಿತಿದೆ. ಧೌಲಿಗಂಗಾ ಮತ್ತು ಅಲಕನಂದಾ ನದಿಗಳ ಸಂಗಮದ ಬಳಿಯ ವಿಷ್ಣುಗಢಕ್ಕೆ ಆಗ್ನೇಯ ದಿಕ್ಕಿನಲ್ಲಿರುವ ಈ ಸಣ್ಣ ಊರು, ಬದರೀನಾಥ ಯಾತ್ರಾರ್ಥಿಗಳಿಗೆ ವಸತಿ ಕಲ್ಪಿಸುವ ಪ್ರಮುಖ ಸ್ಥಳವೂ ಆಗಿದೆ. ಜೋಶಿಮಠದಿಂದ ಸ್ವಲ್ಪ ಎತ್ತರದಲ್ಲಿರುವ ಔಲಿ ಸ್ಕೀಯಿಂಗ್‌ಗೆ ಹೆಸರುವಾಸಿ. ಉತ್ತರಕ್ಕೆ ಧೌಲಿಗಂಗಾ ಮತ್ತು ಪಶ್ಚಿಮಕ್ಕೆ ಅಲಕನಂದಾ ನದಿ ಕಣಿವೆಯ ಇಳಿಜಾರಿನಲ್ಲಿ ಈ ಪಟ್ಟಣ ಇದೆ. ಇಲ್ಲಿ ವಿಪರೀತ ಪ್ರಮಾಣದ ಕಟ್ಟಡಗಳ ನಿರ್ಮಾಣ ಮಾಡಿರುವ ಕಾರಣ, ಅವುಗಳ ಒತ್ತಡ ತಡೆಯಲಾರದೆ ನೆಲ ಕುಸಿಯುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಸರ್ಕಾರ ಕೈಗೊಂಡಿರುವ ಜಲವಿದ್ಯುತ್ ಕಾಮಗಾರಿಯೇ ಜೋಶಿಮಠ ಕುಸಿಯಲು ಕಾರಣ ಎಂಬುದು ಸ್ಥಳೀಯರ ಆರೋಪ.

ಜೋಶಿಮಠದಿಂದ ಈಶಾನ್ಯ ದಿಕ್ಕಿನಲ್ಲಿರುವ ತಪೋವನದಲ್ಲಿ ಧೌಲಿಗಂಗಾ ನದಿಗೆ ಬೃಹತ್ ಅಣೆಕಟ್ಟೆಯನ್ನು ಕೇಂದ್ರ ಸರ್ಕಾರ ನಿರ್ಮಿಸುತ್ತಿದೆ. ಅಲ್ಲಿ ಸಂಗ್ರಹಿಸುವ ನೀರನ್ನು, ಜೋಶಿಮಠದ ಅಡಿಯಲ್ಲಿ ಸಾಗುವ ಸುರಂಗದ ಮೂಲಕ ವಿಷ್ಣುಗಢ ಜಲವಿದ್ಯುತ್ ಘಟಕಕ್ಕೆ ಹರಿಸಲಾಗುವುದು. ಈ ಸುರಂಗ ಕೊರೆಯುವ ಕೆಲಸ ಆರಂಭಿಸಿದ ನಂತರ ಜೋಶಿಮಠ ಕುಸಿಯುತ್ತಿದೆ. 2022ರ ಅಕ್ಟೋಬರ್‌ನಿಂದ 2023ರ ಜನವರಿವರೆಗೆ 500ಕ್ಕೂ ಹೆಚ್ಚು ಮನೆಗಳು ಏಳೆಂಟು ಇಂಚಿನಷ್ಟು ಕೆಳಕ್ಕೆ ಕುಸಿದಿವೆ. ಆ ಮನೆಗಳಲ್ಲಿ ಇದ್ದವರನ್ನು ಮತ್ತು ಕುಸಿಯುವ ಅಪಾಯದ ಪ್ರದೇಶಗಳಲ್ಲಿ ಇದ್ದವರನ್ನು ಉತ್ತರಾಖಂಡ ಸರ್ಕಾರ ತೆರವು ಮಾಡಿದೆ. ಪಟ್ಟಣದ ಹೊರಭಾಗದಲ್ಲಿ ಶಿಬಿರಗಳನ್ನು ತೆರೆದು, ಆ ಜನರಿಗೆ ವಸತಿ ಕಲ್ಪಿಸಲಾಗಿದೆ. ಇದನ್ನು ಬಿಟ್ಟರೆ ಯಾವುದೇ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಜತೆಗೆ ಜೋಶಿಮಠದಲ್ಲಿನ ಪರಿಸ್ಥಿತಿಯನ್ನು ದೇಶದ ಎಂಟು ಅತ್ಯುನ್ನತ ವೈಜ್ಞಾನಿಕ ಸಂಸ್ಥೆಗಳು ಪರಿಶೀಲಿಸಿವೆ. ಅಧ್ಯಯನ ನಡೆಸಿ ಎರಡು ತಿಂಗಳು ಕಳೆದರೂ ಈವರೆಗೆ ಅಧ್ಯಯನ ವರದಿ ಸಲ್ಲಿಕೆಯಾಗಿಲ್ಲ.

ಸರ್ಕಾರದ ಈ ವಿಳಂಬ ನೀತಿಯ ವಿರುದ್ಧ ಜೋಶಿಮಠ ನಿವಾಸಿಗಳು ಜನವರಿ 2ರಿಂದ ಸತ್ಯಾಗ್ರಹ ಆರಂಭಿಸಿದ್ದರು. ಮನೆ ಕಳೆದುಕೊಂಡವರಿಗೆ ಬೇರೆಡೆ ಶಾಶ್ವತ ನೆಲೆ ಕಲ್ಪಿಸಬೇಕು ಮತ್ತು ತಪೋವನ ಅಣೆಕಟ್ಟು ಮತ್ತು ಜಲವಿದ್ಯುತ್ ಯೋಜನೆಯನ್ನು ರದ್ದುಪಡಿಸಬೇಕು ಎಂಬುದು ಈ ಹೋರಾಟಗಾರರ ಎರಡು ಪ್ರಮುಖ ಬೇಡಿಕೆ. 'ಅಣೆಕಟ್ಟೆ ಮತ್ತು ಜಲವಿದ್ಯುತ್ ಯೋಜನೆ (ಎನ್‌ಟಿಪಿಸಿ) ಕಾಮಗಾರಿಯಿಂದ ಯಾವುದೇ ತೊಂದರೆಯಾಗಿಲ್ಲ. ಜನರು ಹೆಚ್ಚು ಕಟ್ಟಡಗಳನ್ನು ನಿರ್ಮಿಸಿದ್ದಕ್ಕೇ ಜೋಶಿಮಠದ ನೆಲ ಕುಸಿಯುತ್ತಿದೆ' ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಹೇಳುತ್ತಿವೆ. ಇದನ್ನು ಖಂಡಿಸಿ ಸ್ಥಳೀಯ ಹೋರಾಟಗಾರರು, ಬದರೀನಾಥದ ರಸ್ತೆಯನ್ನು ಬಂದ್ ಮಾಡುವ ಬೆದರಿಕೆ ಹಾಕಿದ್ದರು. ನಂತರದಲ್ಲಿ ಅದನ್ನು ಕೈಬಿಟ್ಟರು. 'ಜೋಶಿಮಠ ಉಳಿಸಲು ಏಪ್ರಿಲ್ 27ರ ಒಳಗೆ ಒಂದು ನಿರ್ಧಾರಕ್ಕೆ ಬನ್ನಿ. ಇಲ್ಲವೇ ಹೋರಾಟವನ್ನು ತೀವ್ರಗೊಳಿಸುತ್ತೇವೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಜೋಶಿಮಠದ ಬಿರುಕುಬಿಟ್ಟ ಮನೆ ಎದುರು ಕೂತ ಮಹಿಳೆ

ಹೊರಗಿನವರಿಂದ ಹೆಚ್ಚು ಬಂಡವಾಳ

'**ಲಡಾಖ್** ಅನ್ನು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ರಚಿಸಿದ ನಂತರ ಅಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ವೇಗ ದೊರೆತಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಜನವರಿಯಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗೆ ಮಾಹಿತಿ ನೀಡಿತ್ತು. 2019ರ ಆಗಸ್ಟ್ ನಂತರ ಇಲ್ಲಿ ಹೊಸದಾಗಿ 1,006 ಕೈಗಾರಿಕೆಗಳು ಸ್ಥಾಪನೆಯಾಗಿವೆ ಎಂದು ಸರ್ಕಾರವು ಹೇಳಿದೆ. ಆದರೆ, ಇವುಗಳಲ್ಲಿ ಸ್ಥಳೀಯರು ಆರಂಭಿಸಿದ ಕೈಗಾರಿಕೆಗಳು ಎಷ್ಟು ಮತ್ತು ಹೊರರಾಜ್ಯದವರು ಸ್ಥಾಪಿಸಿದ ಕೈಗಾರಿಕೆಗಳು ಎಷ್ಟು ಎಂಬುದರ ಮಾಹಿತಿಯನ್ನು ಸಚಿವಾಲಯವು ನೀಡಿಲ್ಲ. ಜತೆಗೆ, ಎಂತಹ ಕೈಗಾರಿಕೆಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿಯನ್ನೂ ನೀಡಿಲ್ಲ. ಆದರೆ, ರಾಜ್ಯದಲ್ಲಿ ಹೂಡಿಕೆಯಾದ ಬಂಡವಾಳದಲ್ಲಿ ಹೊರರಾಜ್ಯದವರ ಬಂಡವಾಳದ ಪಾಲು ಶೇ 55ಕ್ಕಿಂತಲೂ ಹೆಚ್ಚು ಎಂದು ಸಚಿವಾಲಯದ ದತ್ತಾಂಶಗಳು ಹೇಳುತ್ತವೆ.



ಗಣಿಗಾರಿಕೆಯ ತೂಗುಗತ್ತಿ

'**ಲಡಾಖ್** ಕೇಂದ್ರಾಡಳಿತ ಪ್ರದೇಶದಲ್ಲಿ ಕಲ್ಲು ಮತ್ತು ಖನಿಜ ಗಣಿಗಾರಿಕೆಗೆ ವಿಪುಲ ಅವಕಾಶಗಳಿವೆ'– ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ (ಎಂಎಸ್‌ಎಂಇ) ಅಭಿವೃದ್ಧಿ ಸಂಸ್ಥೆಯು ಸಿದ್ಧಪಡಿಸಿರುವ 'ಲೆಹ್ ಜಿಲ್ಲೆಯಲ್ಲಿನ ಕೈಗಾರಿಕಾ ಸ್ಥಿತಿಗತಿಯ ಕಿರುಚಿತ್ರಣ' ವರದಿಯಲ್ಲಿನ ಉಲ್ಲೇಖವಿದು.

ಲಡಾಖ್ ಕೇಂದ್ರಾಡಳಿತ ಪ್ರದೇಶವಾದ ನಂತರ, ಅಲ್ಲಿನ ಲೆಹ್ ಮತ್ತು ಕಾರ್ಗಿಲ್ ಜಿಲ್ಲೆಗಳಲ್ಲಿ ಹೊರಗಿನಿಂದ ಬಂಡವಾಳ ಹೂಡಿಕೆ ಮಾಡಲು ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ಪ್ರದೇಶಗಳಲ್ಲಿ ಕೈಗಾರಿಕೆ ಅಭಿವೃದ್ಧಿ ಕಾರ್ಯಸಾಧ್ಯತಾ ವರದಿಯನ್ನು ಎಂಎಸ್‌ಎಂಇ ಅಭಿವೃದ್ಧಿ ಸಂಸ್ಥೆ ಸಿದ್ಧಪಡಿಸಿತ್ತು. ಈ ಪ್ರದೇಶದಲ್ಲಿ ಕರಕುಶಲ ವಸ್ತುಗಳು ಮತ್ತು ಜವಳಿಗೆ ಸಂಬಂಧಿಸಿದ ಸಣ್ಣ ಕೈಗಾರಿಕೆಗಳು ಮಾತ್ರ ಇವೆ. ಉಳಿದಂತೆ ಸೇವಾ ವಲಯದ ಅಭಿವೃದ್ಧಿಗೆ ಅವಕಾಶಗಳಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. 'ಇಲ್ಲಿ ಕೈಗಾರಿಕೆ ನಡೆಸಲು ವಿದ್ಯುತ್ ಪೂರೈಕೆಯ ಕೊರತೆ, ಕೌಶಲ ಹೊಂದಿರುವ ಕಾರ್ಮಿಕರ ಕೊರತೆ, ಉತ್ಪನ್ನಗಳಿಗೆ ಸ್ಥಳೀಯ ಮಾರುಕಟ್ಟೆಯ ಕೊರತೆ, ಕಚ್ಚಾ ವಸ್ತುಗಳ ಲಭ್ಯತೆ ಮತ್ತು ಪೂರೈಕೆಯ ಕೊರತೆ ಹಾಗೂ ವಿಪರೀತ ಎನ್ನುವಷ್ಟು ಸಾಗಣೆ ವೆಚ್ಚದ ಹೊರೆಯ ಸಮಸ್ಯೆಗಳಿವೆ' ಎಂದು ವರದಿಯಲ್ಲಿ ಪಟ್ಟಿ ಮಾಡಲಾಗಿತ್ತು.

ಆದರೆ, 'ಲಡಾಖ್ ಪ್ರದೇಶದಲ್ಲಿ ಗ್ರಾನೇಟ್, ಚಿನ್ನ, ಆರ್ಸೆನಿಕ್, ಕೊಬಾಲ್ಟ್, ಜಿಪ್ಸಂ, ಸುಣ್ಣದಕಲ್ಲು, ನಿಕ್ಕಲ್, ಯುರೇನಿಯಂ ಮತ್ತು ಇನ್ನೂ ಅನೇಕ ಸ್ವರೂಪದ ಖನಿಜ ಸಂಪತ್ತು ಹೇರಳವಾಗಿದೆ. ಆದರೆ, ಅವುಗಳನ್ನು ಇನ್ನಷ್ಟೇ ಹೊರತೆಗೆಯಬೇಕಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಖನಿಜ ನಿಕ್ಷೇಪಗಳ ಲಭ್ಯತೆ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಈಗಾಗಲೇ ಸರ್ವೇಕ್ಷಣೆ ಕೆಲಸ ನಡೆಸುತ್ತಿದೆ. ಇಲ್ಲಿ ಗಣಿಗಾರಿಕೆ ಆರಂಭವಾದರೆ, ಲಡಾಖ್‌ನ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಸಂಪೂರ್ಣವಾಗಿ ಧಕ್ಕೆಯಾಗುತ್ತದೆ ಎಂಬುದು ಚಳವಳಿಗಾರರ ಆತಂಕವಾಗಿದೆ.

ಲಡಾಖ್‌ನ ಮೋರಾದಲ್ಲಿ ಡಾಂಬರು ತಯಾರಿಕೆ ಕೈಗಾರಿಕೆ

ಆಧಾರ: ಸೋನಮ್ ವಾಂಗ್ಚುಕ್ ಅವರ ಟ್ವೀಟ್‌ಗಳು ಮತ್ತು ಯುಟ್ಯೂಬ್ ವಿಡಿಯೊ, ಸಂವಿಧಾನದ 244ನೇ ವಿಧಿಯ 6ನೇ ಷೆಡ್ಯೂಲ್, ಆಂತರಿಕ ವ್ಯವಹಾರಗಳ ಸಂಸದೀಯ ಸಮಿತಿ ವರದಿ–2022, ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ ಪತ್ರಿಕಾ ಪ್ರಕಟಣೆ, ಕೇಂದ್ರ ಸರ್ಕಾರದ ಎಂಎಸ್‌ಎಂಇ ಅಭಿವೃದ್ಧಿ ಸಂಸ್ಥೆಯ 'ಲೆಹ್‌ನಲ್ಲಿ ಕೈಗಾರಿಕಾ ಸ್ಥಿತಿಗತಿ' ವರದಿ, ಪಿಟಿಐ, 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್'ನ ಅಧ್ಯಯನ ವರದಿ

'ಆರನೇ ಷೆಡ್ಯೂಲ್‌ಗೆ ಸೇರಿಸಿ'

'**ಸಂವಿಧಾನದ** ಆರನೇ ಷೆಡ್ಯೂಲ್‌ನ ಅಡಿಯಲ್ಲಿ ಲಡಾಖ್ ಅನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸಬೇಕು' ಎಂಬುದು ಲಡಾಖ್ ರಕ್ಷಿಸಿ ಹೋರಾಟದ ಪ್ರಧಾನ ಉದ್ದೇಶ.

ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಲಡಾಖ್‌ಗೂ ವಿಶೇಷ ಸ್ಥಾನವಿತ್ತು. ಇಲ್ಲಿನ ಭೂ ಒಡೆತನದ ಹಕ್ಕುಗಳು ಇಲ್ಲಿನ ಜನರಿಗೆ ಮಾತ್ರ ಇತ್ತು. ಆದರೆ, 370ನೇ ವಿಧಿಯಲ್ಲಿನ ವಿಶೇಷ ಸ್ಥಾನ ತೆಗೆದು, ಕೇಂದ್ರಾಡಳಿತ ಪ್ರದೇಶವಾದ ನಂತರ ಇಲ್ಲಿನ ಜನರಿಗೆ ಈ ಹಿಂದೆ ಇದ್ದ ರಕ್ಷಣೆಗಳು ಇಲ್ಲವಾಗಿವೆ. ಲಡಾಖ್ ಅನ್ನು ಆರನೇ ಷೆಡ್ಯೂಲ್‌ಗೆ ಸೇರಿಸುತ್ತೇವೆ ಎಂದು ಕೇಂದ್ರ ಸರ್ಕಾರ 2019ರಲ್ಲೇ ಹೇಳಿತ್ತು. ಆದರೆ, ಮೂರೂವರೆ ವರ್ಷಗಳ ನಂತರವೂ ಇದು ಅನುಷ್ಠಾನಕ್ಕೆ ಬಂದಿಲ್ಲ. ಸಂವಿಧಾನದ 244ನೇ ವಿಧಿಯ ಅಡಿ 5ನೇ ಅಥವಾ 6ನೇ ಷೆಡ್ಯೂಲ್‌ಗೆ ಒಂದು ಪ್ರದೇಶವನ್ನು ಸೇರಿಸಿದರೆ, ಅದು ಸ್ವಾಯತ್ತ ಪ್ರದೇಶವಾಗುತ್ತದೆ. ಅಂದರೆ, ಅಲ್ಲಿಗೆ ಸಂಬಂಧಿಸಿದ ಕೆಲವಾರು ಕಾನೂನುಗಳನ್ನು ರಚಿಸುವ ಅಧಿಕಾರ ಅಲ್ಲಿನ ಸ್ವಾಯತ್ತ ಜಿಲ್ಲಾ ಮಂಡಳಿಗಳಿಗೆ ದೊರೆಯುತ್ತದೆ. ಜಿಲ್ಲಾ ಮಂಡಳಿಗಳಲ್ಲಿ ಸರ್ಕಾರದಿಂದ ನಾಮನಿರ್ದೇಶಿತರಾದವರ ಪ್ರಾತಿನಿಧ್ಯವೂ ಇರುತ್ತದೆ. ತಮ್ಮ ಜಿಲ್ಲೆಗಳಲ್ಲಿನ ಜಮೀನನ್ನು ಯಾರಿಗೆ ನೀಡಬೇಕು ಮತ್ತು ಯಾರಿಗೆ ನೀಡಬಾರದು ಎಂಬ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರ ಈ ಸ್ವಾಯತ್ತ ಜಿಲ್ಲಾ ಮಂಡಳಿಗಳಿಗೆ ಇರುತ್ತದೆ. ಈಶಾನ್ಯ ಭಾರತದ ರಾಜ್ಯಗಳಾದ ಅಸ್ಸಾಂ, ಅರುಣಾಚಲ ಪ್ರದೇಶದ ಹಲವು ಜಿಲ್ಲೆಗಳಿಗೆ 6ನೇ ಷೆಡ್ಯೂಲ್‌ನಲ್ಲಿ ಸ್ಥಾನ ನೀಡಲಾಗಿದೆ.

ಆದರೆ, 'ಲಡಾಖ್‌ನಲ್ಲಿ ಈಗ ಚುನಾಯಿತ ಸರ್ಕಾರವೂ ಇಲ್ಲ ಮತ್ತು ಸ್ವಾಯತ್ತ ಜಿಲ್ಲೆಗಳ ಅಧಿಕಾರವೂ ಇಲ್ಲ. ಇಲ್ಲಿ ಗಣಿಗಾರಿಕೆ ಮತ್ತು ಕೈಗಾರಿಕೆಗಳ ಸ್ಥಾಪನೆಯನ್ನು ತಡೆಯಲು ನಮ್ಮ ಬಳಿ ಸ್ವಲ್ಪವೂ ಅಧಿಕಾರ ಇಲ್ಲ. ಹೀಗಾಗಿಯೇ ನಮ್ಮ ನೆಲವನ್ನು ರಕ್ಷಿಸಿಕೊಳ್ಳಲೂ ನಮಗೆ ಸಾಧ್ಯವಾಗುತ್ತಿಲ್ಲ' ಎಂಬುದು ಲಡಾಖ್ ರಕ್ಷಿಸಿ ಹೋರಾಟಗಾರರ ಅಳಲು. ಹೀಗಾಗಿಯೇ ಅವರು ಲಡಾಖ್ ಅನ್ನು 6ನೇ ಷೆಡ್ಯೂಲ್‌ಗೆ ಸೇರಿಸಿ ಎಂದು ಆಗ್ರಹಿಸುತ್ತಿದ್ದಾರೆ. ಯಾವುದೇ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮತ್ತು ಬುಡಕಟ್ಟು ಸಮುದಾಯಕ್ಕೆ ಸೇರಿದ ಜನರ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದ್ದರೆ, ಆ ಪ್ರದೇಶವನ್ನು 6ನೇ ಷೆಡ್ಯೂಲ್‌ಗೆ ಸೇರಿಸಲು ಸಂವಿಧಾನದಲ್ಲಿ ಅವಕಾಶವಿದೆ. ಲಡಾಖ್‌ನಲ್ಲಿ ಪರಿಶಿಷ್ಟ ಪಂಗಡ ಮತ್ತು ಬುಡಕಟ್ಟು ಸಮುದಾಯಗಳಿಗೆ ಸೇರಿದ ಜನರ ಪ್ರಮಾಣ ಶೇ 79ರಷ್ಟಿದೆ. ಹೀಗಿದ್ದೂ, ಲಡಾಖ್ ಅನ್ನು 6ನೇ ಷೆಡ್ಯೂಲ್‌ಗೆ ಸೇರಿಸುತ್ತಿಲ್ಲ. ಇಲ್ಲಿ ಕೈಗಾರಿಕೆ ಮತ್ತು ಗಣಿಗಾರಿಕೆ ಆರಂಭಿಸಲು ಅವಕಾಶ ಮಾಡಿಕೊಡಲೆಂದೇ ಸರ್ಕಾರವು ಈ ವಿಚಾರವನ್ನು ಕಡೆಗಣಿಸುತ್ತಿದೆ ಎಂದೂ ಲಡಾಖ್ ರಕ್ಷಿಸಿ ಹೋರಾಟಗಾರರು ಆರೋಪಿಸುತ್ತಿದ್ದಾರೆ.

ಪದಬಂಧ 5289

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕಗ್ಗೊಲೆಯ ಪ್ರಸಂಗವಿದು (4)
3. ಪೀಠಿಕೆಯನ್ನು ಹೀಗೂ ಹೇಳುವರು (4)
5. ಕೆಲಸದವರು ಸಿಡಿಸಿರುವ ರಾಡಿ (3)
7. ದುಃಖ ಈ ರೀತಿ ಬಂದಿದೆ (3)
9. ಸವಿಯಾದುದು ಮರದೊಳಗಿದೆಯಲ್ಲಾ (3)
10. ಬಾಣ ಹಿಡಿದಿರುವ ಶೈವ ಭಕ್ತ (3)
11. ವಾಲಿಯ ಮಗನಿವನು (3)
15. ಕೈಯಲ್ಲಿರುವ ಖಡ್ಗ (4)
16. ಕಾರನ್ನು ಏರಿ ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ

1. ದೇವರಿಗೆ ಸಲ್ಲಿಸುವ ಮುಡಿಪು (3)
2. ಡಬ್ಬುಗಾರನ ಆಡಂಬರ! (2)
3. ವಾರದ ಕೊನೆಗೆ ಬಂದಿರುವ ಅಭ್ಯರ್ಥಿ (5)
4. ಆಯವ್ಯಯಮೊದಲಾದ ವಿಷಯಗಳ ವಿವರಗಳ ಪಟ್ಟಿ (2)
6. ಒಳ್ಳೆಯ ಅವಕಾಶ (5)
8. ಬಿಳಿಯ ಕೂದಲುಳ್ಳವನು (5)
9. ಸಾಯುವ ಸಮಯವಿದು (5)
12. ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13. ಕಂಬಿ ತಿರುಗಿಸುತ್ತಾ ತೋರಿದ ಬಿನ್ನಾಣ (2)
14. ಉತ್ತರದ ಕಡೆಯವವರ ಚಿಕ್ಕಪ್ಪ (2)



5288ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಲಹೆ 3.ಪಂಜರ 6.ರಿವಾಜು 7.ಸಿಬ್ಬಂದಿ 8.ಜಾಳಿಗೆ 10.ಕತೆ 11.ಬಸದಿ 13.ನರ 15.ಬಡವ 16.ವಿದ್ರುಮ 17.ಪಾರ್ಥಿವ 18.ನೆನಪು 19.ಣೆವನ

ಮೇಲಿಂದ ಕೆಳಕ್ಕೆ:
1. ಸಮಜಾಯಿಷಿ 2.ಹರಿಗೆ 3.ಪಂಜು 4.ರಸಿಕತೆ 5.ಮಂದಿರ 9.ಅಂಬರ 10.ಕದಿರು 12.ಹಯವದನ 13.ನಡುಮನೆ 14.ನವಿಲು 15.ಬವಣೆ 17.ಪಾಪು

ಸುಡೊಕು 5675

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5674 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ದಶಮಿ ಗಂ. 20-46 ನಕ್ಷತ್ರ: ಶ್ರವಣ ಗಂ. 07-36 ಯೋಗ: ಸಾಧ್ಯ ಗಂ. 06-32, ಶುಭ ಗಂ. 27-23 ಕರಣ: ವಣಿಜ ಗಂ. 10-01, ಮೇಷ ಮಾಸದ 01 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1. ರಾಹುಕಾಲ : ಬೆಳಿಗ್ಗೆ 09-00 – 10-30 , ಸೂರ್ಯೋದಯ : 06-21 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 23 ರಂಜಾನ್

ದಿನ ವಿಶೇಷ : ಬಹಾಗ್ ಬಿಹು (ಅಸ್ಸಾಂ), ಶಿಲ್ಲಂಬಾ (ಮಣಿಪುರ).

ಅದೃಷ್ಟ ಸಂಖ್ಯೆ : 1, 5

ಮೇಷ: ಎಲ್ಲಾ ವಿಷಯದಲ್ಲೂ ಮುಂದಾಲೋಚನೆ , ವಿವೇಚನೆಯಿಂದ ನಡೆದುಕೊಂಡಲ್ಲಿ ಹೆಚ್ಚಿನ ಏಳಿಗೆ, ಯಶಸ್ಸು ನಿಮ್ಮ ಪಾಲಾಗಲಿದೆ. ಉದ್ಯೋಗದಲ್ಲಿ ಕಂಡು ಬಂದಂತಹ ತಾಂತ್ರಿಕ ಸಮಸ್ಯೆ ನಿವಾರಣೆಯಾಗುವುದು.

ವೃಷಭ: ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ. ದಿನದ ಮಧ್ಯಾಹ್ನದ ಸಮಯದಲ್ಲಿ ಸಂತಸಭರಿತ ಸುದ್ದಿ ತಲುಪುತ್ತದೆ. ದಿನದ ಮೊದಲ ಭಾಗ ಶ್ರಮ ಭರಿತವಾಗಿದ್ದರೂ ನಂತರ ಬಹಳ ವಿರಾಮ ದೊರೆಯುವುದು.

ಮಿಥುನ: ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿಬರುವುದು. ಅಲಂಕಾರಿಕ ವಸ್ತು ಕೊಳ್ಳಲು ಹಣ ಕಳೆಯುವಿರಿ.

ಕರ್ಕಾಟಕ: ಸಂಸಾರ ನಿರ್ವಹಣೆ ವಿಷಯದಲ್ಲಿ ಖಚಿತ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ಹೋಟೇಲ್ ಉದ್ದಿಮೆದಾರರಿಗೆ ಸ್ವಲ್ಪ ಮಟ್ಟಿನ ನಷ್ಟಗಳು ಸಂಭವಿಸಬಹುದು. ಕೆಲಸಗಾರರ ಬೇಡಿಕೆಯಂಥ ಸಮಸ್ಯೆ ಬರಬಹುದು.

ಸಿಂಹ: ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಂತಾಗಲಿದೆ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭವಿದೆ. ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇ ಬೇಕಾದ ಸಮಯ.

ಕನ್ಯಾ: ವೃತ್ತಿರಂಗದಲ್ಲಿ ಬೆಳವಣಿಗೆ ಕಂಡುಬಂದು ಮಹತ್ವದ ಕೆಲಸಗಳು ಕಾರ್ಯರೂಪ ಪಡೆಯುವುವು ಹಾಗೆಯೇ ಕೆಟ್ಟ ಜನರ ದೃಷ್ಟಿ ದೋಷಕ್ಕೂ ಒಳಗಾಗುವಿರಿ. ಕಠಿಣ ಕೆಲಸವೊಂದಕ್ಕೆ ಕೈ ಹಾಕುವ ಮನಸ್ಸಾಗಲಿದೆ.

ತುಲಾ: ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಇತರರಿಗೆ ಅಸೂಯೆಯಾಗದಂತೆ ಕಾರ್ಯ ಸಾಧಿಸಿಕೊಳ್ಳುವ ಉತ್ತಮ ಗುಣ ನಿಮ್ಮಲ್ಲಿರುವುದರಿಂದ ಯಶಸ್ಸನ್ನು ಕಾಣುವಿರಿ.

ವೃಶ್ಚಿಕ: ಅನ್ವೇಷಣೆಯ ಸ್ವಭಾವವು ವೃತ್ತಿಯ ಬದುಕಿನಲ್ಲಿ ಹೊಸ ತಿರುವನ್ನು ತರಲಿದೆ. ಸಮಸ್ಯೆಗಳ ಪರಿಹಾರಕ್ಕೆ ಆಸಕ್ತಿ ನೀಡುವುದು ಉತ್ತಮವಾಗಿ ಕಾಣುತ್ತದೆ. ಹವ್ಯಾಸಿ ಉಪನ್ಯಾಸಕರಿಗೆ ಹೇರಳವಾದ ಅವಕಾಶ ಲಭ್ಯ.

ಧನು: ಶತ್ರುಗಳ ಪ್ರಾಬಲ್ಯ ನ್ನು ಬುದ್ಧಿಮಟ್ಟದಿಂದ ಮಟ್ಟ ಹಾಕುವ ಸಮಯ ಇದಾಗಲಿದೆ. ಮಕ್ಕಳಿಗೆ ನೌಕರಿಯಲ್ಲಿನ ಬಡ್ತಿಯಿಂದಾಗಿ ಹೆಮ್ಮೆ ಪಡುವಿರಿ. ಚಟುವಟಿಕೆಯಿಂದ ಕಳೆಯಲಿದ್ದೀರಿ. ಅಲರ್ಜಿಯಾಗುವ ಸಾಧ್ಯತೆಗಳಿದೆ.

ಮಕರ: ಸೇವಾ ಸಂಸ್ಥೆಯವರಿಗೆ ಅನುಕೂಲವಿರುವುದು. ಹಳೆಯ ಸ್ನೇಹಿತರೊಂದಿಗಿನ ಭೇಟಿ, ಅವರೊಂದಿಗಿನ ಮಾತುಕತೆ, ವ್ಯವಹಾರಗಳ ಬಗ್ಗೆ ಚರ್ಚೆ ಹಾಗೂ ಹಳೆಯ ದಿನದ ನೆನಪುಗಳ ಮೆಲುಕು ಹೊಸ ಉತ್ಸಾಹ ಕೊಡಲಿದೆ.

ಕುಂಭ: ನೀವು ಮಾಡುತ್ತಿರುವ ಯೋಗಾಭ್ಯಾಸ ಹಾಗೂ ವೈದ್ಯರ ಸಲಹೆಯಿಂದ ಆರೋಗ್ಯವು ಉತ್ತಮ ರೀತಿಯಲ್ಲಿ ಸುಧಾರಿಸುವುದು. ದೃಢ ನಿಶ್ಚಯ ಮತ್ತು ಸಾಧಿಸಲೇಬೇಕೆಂಬ ಛಲದ ಮನೋಭಾವ ಯಶಸ್ಸಿಗೆ ಕಾರಣವೆನಿಸಲಿದೆ.

ಮೀನ: ಕಾರ್ಯ ಕ್ಷೇತ್ರದಲ್ಲಿ ವಿವಿಧ ರೀತಿಯ ಅಭಿವೃದ್ಧಿಯಿಂದ ಬಹುಮಟ್ಟಿಗೆ ಮನಸ್ಸು ಸಂತೃಪ್ತಗೊಳ್ಳಲಿದೆ. ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸುಗಳು ನನಸಾಗಲಿದೆ. ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಬಿಜೆಪಿಯ ಪ್ರೀತಂಗೌಡ ರ್‍ಯಾಲಿಯ ಬೆನ್ನಿಗೇ ಟಿಕೆಟ್ ಘೋಷಿಸಿದ ಜೆಡಿಎಸ್ • ಭವಾನಿ ನಿಲುವು ಇಂದು

‘ಸಾಮಾನ್ಯ ಕಾರ್ಯಕರ್ತ’ನಿಗೆ ಹಾಸನ ಟಿಕೆಟ್

ಪ್ರಜಾವಾಣಿ ವಾರ್ತೆ

ಹಾಸನ: ತೀವ್ರ ಕುತೂಹಲ ಕೆರಳಿಸಿದ್ದ ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್ ಗೊಂದಲಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಶಾಸಕ ಎಚ್.ಡಿ.ರೇವಣ್ಣ ಜಂಟಿಯಾಗಿ ಪೂರ್ಣವಿರಾಮ ನೀಡಿದ್ದಾರೆ. ಕುಮಾರಸ್ವಾಮಿ ಆಶಯದಂತೆ ‘ಸಾಮಾನ್ಯ ಕಾರ್ಯಕರ್ತ’ ಎಚ್.ಪಿ. ಸ್ವರೂಪ್‌ಗೆ ಟಿಕೆಟ್ ಘೋಷಿಸಲಾಗಿದೆ.

ಬಿಜೆಪಿ ಶಾಸಕ, ಅಭ್ಯರ್ಥಿ ಪ್ರೀತಂ ಜೆ.ಗೌಡರ ರ್‍ಯಾಲಿಯ ದಿನವೇ, ಜೆಡಿಎಸ್ ಹಾಸನ ಟಿಕೆಟ್ ಘೋಷಿಸಿರುವುದು ಹಲವಾರು ಚರ್ಚೆಗೆ ಕಾರಣವಾಗಿದೆ. ‘ಭವಾನಿ ಸೋಲುತ್ತಾರೆಂಬ ಕಾರಣಕ್ಕೆ ಸ್ವರೂಪ್‌ಗೆ ಟಿಕೆಟ್ ನೀಡಲಾಗಿದೆ’ ಎಂಬ ಮಾತುಗಳಿವೆ.

ಆದರೆ, ಟಿಕೆಟ್ ಬಗ್ಗೆ ಸಾಕಷ್ಟು ನಿರೀಕ್ಷೆ ಇದ್ದ ಎಚ್.ಡಿ.ರೇವಣ್ಣ ಕುಟುಂಬದಿಂದ ಅಸಮಾಧಾನವು ಭುಗಿಲೇಳುವ ಸಾಧ್ಯತೆಗಳು ದಟ್ಟವಾಗಿವೆ. ಹಾಸನದಲ್ಲಿ ಸ್ವರೂಪ್ ಬೆಂಬಲಿಗರು ಸಂಭ್ರಮಾಚರಣೆ ಮಾಡುತ್ತಿದ್ದರೆ, ಅಸಮಾಧಾನಗೊಂಡಿರುವ ಭವಾನಿ ರೇವಣ್ಣ ಮೌನಕ್ಕೆ ಜಾರಿದ್ದಾರೆ.

‘ಭವಾನಿ ಅವರ ಜೊತೆಗೆ ಚರ್ಚಿಸಿಯೇ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಕುಮಾರಸ್ವಾಮಿ ಹೇಳಿದ್ದರೂ ಅದಕ್ಕೆ ಭವಾನಿ ಅವರ ಸಮ್ಮತಿ ಸಿಕ್ಕಿಲ್ಲ ಎನ್ನಲಾಗಿದೆ. ಟಿಕೆಟ್ ಘೋಷಣೆಯ ನಂತರ ಮೌನಕ್ಕೆ ಜಾರಿರುವ ಭವಾನಿ, ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ.

ಹಾಸನದಲ್ಲಿ ಶುಕ್ರವಾರ ಶಾಸಕ ಪ್ರೀತಂ ಗೌಡ ಅವರು ಬೃಹತ್ ರ್‍ಯಾಲಿ ನಡೆಸಿದರು.

> **ಹಾಸನ ಕ್ಷೇತ್ರದ ವಿಚಾರ ಹೆಚ್ಚು ಸುದ್ದಿಯಾಗಿತ್ತು. ರೇವಣ್ಣ ಮತ್ತು ಭವಾನಿ ಅವರ ಜೊತೆ ಖುದ್ದಾಗಿ ಮಾತನಾಡಿದ್ದೇನೆ. ಈಗ ಎಲ್ಲವೂ ಬಗೆಹರಿದಿದೆ**
> **ಎಚ್.ಡಿ.ಕುಮಾರಸ್ವಾಮಿ**, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

> **ಟಿಕೆಟ್ ವಿಚಾರದಲ್ಲಿ ದೇವೇಗೌಡರ ಕುಟುಂಬ ಒಡೆಯಬಹುದು ಎಂದು ಕೆಲವರು ಭಾವಿಸಿದ್ದರು. ಅದು ಸಾಧ್ಯವಿಲ್ಲ. ಸ್ವರೂಪ್ ಅವರೇ ಹಾಸನ ಅಭ್ಯರ್ಥಿ**
> **ಎಚ್.ಡಿ.ರೇವಣ್ಣ**, ಶಾಸಕ

> **ಸ್ವರೂಪ್ ಅವರಿಗೆ ಹಾಸನ ಟಿಕೆಟ್ ಘೋಷಿಸಿದ ಕುರಿತು ಶನಿವಾರ ವಿವರವಾಗಿ ಮಾತನಾಡುತ್ತೇನೆ. ಸದ್ಯಕ್ಕೆ ಏನೂ ಹೇಳುವುದಿಲ್ಲ**
> **ಭವಾನಿ ರೇವಣ್ಣ**, ಟಿಕೆಟ್ ಆಕಾಂಕ್ಷಿ

‘ಭವಾನಿ ಅವರನ್ನು ಕಣಕ್ಕೆ ಇಳಿಸಬೇಕು ಎನ್ನುವ ಚಿಂತನೆ ಎರಡು ವರ್ಷಗಳಿಂದ ನಡೆದಿತ್ತು. ಆದರೆ, ದೇವೇಗೌಡರ ತೀರ್ಮಾನ ಹಾಗೂ ಕುಮಾರಸ್ವಾಮಿ ಅವರ ಇಚ್ಛೆಯಂತೆ ಕ್ಷೇತ್ರದಲ್ಲಿ ಟಿಕೆಟ್ ಘೋಷಿಸಲಾಗಿದೆ’ ಎಂದು ಹೇಳುವ ಮೂಲಕ ಎಚ್.ಡಿ. ರೇವಣ್ಣ ತಮ್ಮ ಆಸೆಯನ್ನು ಮೊದಲ ಬಾರಿಗೆ ಬಹಿರಂಗಪಡಿಸಿದ್ದಾರೆ.

ಸ್ವರೂಪ್ ಹಾದಿ ಸುಲಭವಿಲ್ಲ: ಇತ್ತ ಟಿಕೆಟ್ ಪಡೆದಿರುವ ಸ್ವರೂಪ್, ‘ಎಚ್.ಡಿ.ರೇವಣ್ಣ, ಪ್ರಜ್ವಲ್, ಸೂರಜ್ ಅವರ ಜೊತೆಗೂಡಿ ಚುನಾವಣಾ ಪ್ರಚಾರ ಮಾಡುತ್ತೇನೆ’ ಎಂದು ಹೇಳಿರುವುದೂ ಹಲವು ಅರ್ಥಗಳನ್ನು ಹೊಮ್ಮಿಸಿದೆ.

ಸ್ವರೂಪ್ ಅವರ ತಂದೆ ದಿ.ಎಚ್.ಎಸ್. ಪ್ರಕಾಶ್ ನಾಲ್ಕು ಬಾರಿ ಶಾಸಕರಾಗಿದ್ದರು. ಈ ಗೆಲುವಿನ ಹಿಂದೆ ರೇವಣ್ಣ ಅವರ ಶ್ರಮವನ್ನು ಸ್ವರೂಪ್ ನೋಡಿದ್ದಾರೆ. ಹಾಸನ ಕ್ಷೇತ್ರದಲ್ಲಿ ರೇವಣ್ಣ ಬೆಂಬಲವಿಲ್ಲದೇ ಚುನಾವಣೆ ಮಾಡುವುದು ಸುಲಭವಲ್ಲ ಎನ್ನುವುದೂ ಅವರಿಗೆ ಗೊತ್ತಿರುವುದರಿಂದಲೇ ಹಾಗೆ ಹೇಳಿದ್ದಾರೆ ಎನ್ನಲಾಗಿದೆ.

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಹಾಸನದ ಸ್ವರೂಪ್ ನಿವಾಸದ ಬಳಿ ಬೆಂಬಲಿಗರು ಸಂಭ್ರಮಾಚರಣೆ ಮಾಡಿದರು.

ಶಾಸಕ ಪ್ರೀತಂ ಶಕ್ತಿ ಪ್ರದರ್ಶನ

ಹಾಸನ ವಿಧಾನಸಭಾ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಬಿಜೆಪಿ ಶಾಸಕ ಪ್ರೀತಂ ಜೆ.ಗೌಡ, ನಾಮಪತ್ರ ಸಲ್ಲಿಕೆಗೂ ಮೊದಲೇ ಶುಕ್ರವಾರ ನಗರದಲ್ಲಿ ಸಾವಿರಾರು ಬೆಂಬಲಿಗರೊಂದಿಗೆ ರ್‍ಯಾಲಿ ನಡೆಸಿದರು. ’ಕಳೆದ ಬಾರಿ 63 ಸಾವಿರ ಮತ ಪಡೆದಿದ್ದೆ. ಈ ಬಾರಿ 1 ಲಕ್ಷ ಮತ ಪಡೆಯುತ್ತೇನೆ’ ಎಂಬ ವಿಶ್ವಾಸವನ್ನೂ ಅವರು ವ್ಯಕ್ತಪಡಿಸಿದ್ದಾರೆ.

‘ಅಭ್ಯರ್ಥಿಯಾದರೆ, ನಮ್ಮ ಸ್ಥಿತಿ ಏನು ಎಂಬುದು ರ್‍ಯಾಲಿಯಿಂದಾಗಿ ಅವರ ಅರಿವಿಗೆ ಬಂದಂತಾಗಿದೆ. ಟಿಕೆಟ್ ಸಿಗದಿದ್ದರೆ ಸಾಕು ಎನ್ನುವಂತಾಗಿದೆ’ ಎಂದು ಭವಾನಿ ಹಾಗೂ ಸ್ವರೂಪ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಜೆಡಿಎಸ್ ಪಕ್ಷವೇ ಪ್ರತಿಸ್ಪರ್ಧಿ. ಕಳೆದ ಬಾರಿ ಸೋತ ಕಾಂಗ್ರೆಸ್ ಅಭ್ಯರ್ಥಿ ಯಾವ ಪಕ್ಷದಲ್ಲಿದ್ದಾರೆ ಎಂದೇ ಗೊತ್ತಿಲ್ಲ. ಈ ಬಾರಿ ಅಭ್ಯರ್ಥಿ ಆಗುತ್ತೇನೆ ಎಂದು ಒಬ್ಬರು ಬಂದಿದ್ದಾರೆ. ಅವರಿಗೆ ಠೇವಣಿ ಸಿಗುವುದಿಲ್ಲ’ ಎಂದು ಟೀಕಿಸಿದ್ದಾರೆ.

‘ನಾಮಪತ್ರ ಸಲ್ಲಿಕೆ ದಿನಾಂಕ ಶೀಘ್ರ ನಿಗದಿ ಮಾಡುವೆ. ನವೆಂಬರ್ 14 ನನ್ನ ಜನ್ಮದಿನ. ಇಂದು ಏ.14 ಅಂಬೇಡ್ಕರ್ ಜಯಂತಿ. 14 ನನಗೆ ಅದೃಷ್ಟದ ಸಂಖ್ಯೆ. ಹಾಗಾಗಿ ರ್‍ಯಾಲಿ ನಡೆಸಲಾಗಿದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ನನ್ನ ಹತ್ಯೆಗೂ ಸಂಚು: ಈಶ್ವರಪ್ಪ

ಬಳ್ಳಾರಿ: ‘ಪಿಎಫ್‌ಐ ಸಂಘಟನೆ ನನ್ನ ಹತ್ಯೆಗೂ ಸಂಚು ರೂಪಿಸಿತ್ತು’ ಎಂದು ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ ಹೇಳಿದರು.

ಬಳ್ಳಾರಿ ನಗರದಲ್ಲಿರುವ ಚೌಡೇಶ್ವರಿ ದೇವಾಲಯಕ್ಕೆ ಕುಟುಂಬ ಸಮೇತ ಬಂದಿದ್ದ ಈಶ್ವರಪ್ಪ ಶುಕ್ರವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.



‘ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ನನ್ನ ಕೊಲೆಗೆ ಪಿಎಫ್‌ಐ ಸಂಚು ಹೂಡಿತ್ತು. ಹಿಂಡಲಗಾ ಜೈಲಿನಲ್ಲಿರುವ ಶಾಹಿರ್ ಶೇಖ್ ವಿಚಾರಣೆಯಿಂದ ಇದು ಬಹಿರಂಗವಾಗಿದೆ. ಆರೋಪಿ ನಾಗ್ಪುರ ಪೊಲೀಸರ ಕಸ್ಟಡಿಯಲ್ಲಿದ್ದಾನೆ’ ಎಂದು ಹೇಳಿದರು.

‘ಗೃಹ ಸಚಿವ ಅರಗ ಜ್ಞಾನೇಂದ್ರ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಇದನ್ನು ತಂದಿರುವೆ. ಹಿಂದೆ ಕೂಡ ನನಗೆ ಹಿಂದುತ್ವದ ವಿಚಾರದಲ್ಲಿ ಕೊಲೆ ಬೆದರಿಕೆ ಬಂದಿತ್ತು. ಆಗಿನ ಕಾಂಗ್ರೆಸ್ ಸರ್ಕಾರ ಭದ್ರತೆ ಒದಗಿಸಿತ್ತು. ಇಂಥ ಬೆದರಿಕೆಗಳಿಗೆ ನಾನು ಬಗ್ಗುವುದಿಲ್ಲ’ ಎಂದರು.

ಮತ ಹಾಕಿ ಬಂದರೆ ಹೋಟೆಲ್‌ನಲ್ಲಿ ಶೇ 10 ರಿಯಾಯಿತಿ!

ಮಡಿಕೇರಿ: ಚುನಾವಣೆಯ ದಿನ ಮತ ಚಲಾಯಿಸಿ ಬಂದವರಿಗೆ ಶೇ 10ರಷ್ಟು ರಿಯಾಯಿತಿ ನೀಡಲು ಕೊಡಗು ಜಿಲ್ಲಾ ಹೋಟೆಲ್, ರೆಸಾರ್ಟ್ಸ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ನಿರ್ಧರಿಸಿದೆ. ಈ ನಿರ್ಧಾರದ ಬೆನ್ನಿಗೇ, ರಿಯಾಯಿತಿ ನೀಡಲು ಚಿಂತನೆ ನಡೆಸುತ್ತಿರುವುದಾಗಿ ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ ಕೂಡ ತಿಳಿಸಿದೆ.

ಮತದಾನ ಮಾಡದೇ ಬರುವ ಕರ್ನಾಟಕದವರಿಗೆ ತಂಗಲು ಅವಕಾಶವಿಲ್ಲ. ಆದರೆ, ಮತದಾನ ಮಾಡಿ ಬಂದವರಿಗೆ ಶೇ 10ರಷ್ಟು ರಿಯಾಯಿತಿ ದೊರಕಲಿದೆ. ಅವರಿಗಷ್ಟೇ ಈ ನಿರ್ಬಂಧ, ರಿಯಾಯಿತಿ ಅನ್ವಯಿಸುತ್ತದೆ.

ಕೊಡಗಿನಲ್ಲಿರುವ 300ಕ್ಕೂ ಅಧಿಕ ಹೋಟೆಲ್, ರೆಸಾರ್ಟ್‌ಗಳಲ್ಲಿ ರಿಯಾಯಿತಿ ಸಿಗುತ್ತದೆ. ಹೋಂಸ್ಟೇ ಮಾಲೀಕರು ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ.

ಈಚೆಗೆ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಹೋಟೆಲ್ ಮಾಲೀಕರು ಹಾಗೂ ಹೋಂಸ್ಟೇ ಮಾಲೀಕರಲ್ಲಿ ಈ ಕುರಿತು ಮನವಿ ಮಾಡಿದ್ದರು.

ನಿನ್ನನ್ನೇ ನಂಬಿದ್ದೇನೆ, ಕೈಬಿಡಬೇಡ: ಯಡಿಯೂರಪ್ಪ ಆಪ್ತಗೆ ಸೋಮಣ್ಣ ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: ‘ನಿನ್ನನ್ನೇ ನಂಬಿದ್ದೇನೆ, ದಯವಿಟ್ಟು ಕೈಬಿಡಬೇಡ...’

– ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಆಪ್ತ ಕಾ.ಪು. ಸಿದ್ದಲಿಂಗಸ್ವಾಮಿ ಅವರಿಗೆ ಹೀಗೆ ಮನವಿ ಮಾಡಿದರು.

ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಸಿದ್ದಲಿಂಗಸ್ವಾಮಿ ನಿವಾಸಕ್ಕೆ ಶುಕ್ರವಾರ ತೆರಳಿದ ಅವರು ಅರ್ಧಗಂಟೆಗೂ ಹೆಚ್ಚು ಕಾಲ ಚರ್ಚಿಸಿದರು. ಅಲ್ಲೇ ಉಪಹಾರ ಸೇವಿಸಿದರು.

‘ನಿನ್ನ ಬಗ್ಗೆ ನಾನು ಏನೂ ಅಂದುಕೊಂಡಿಲ್ಲ. ನನ್ನನ್ನು ಬೆಂಬಲಿಸು. ನನ್ನ ಸೈನ್ಯದ ಕಮಾಂಡರ್ ಆಗಿ ಕೆಲಸ ಮಾಡು’ ಎಂದು ಕೋರಿದರು.

ಅವರಿಗೆ ಪ್ರತಿಕ್ರಿಯಿಸಿದ ಸಿದ್ದಲಿಂಗಸ್ವಾಮಿ, ‘ನಮ್ಮ ಮನೆಯಿಂದಲೇ ಪ್ರಚಾರ ಪ್ರಾರಂಭಿಸಬೇಕೆಂದು ಬೆಳಿಗ್ಗೆಯಿಂದಲೇ ನಿಮ್ಮ ಹೆಸರಲ್ಲಿ ಪೂಜೆ ನಡೆಸಿರುವೆ. ನಿಮ್ಮ ರಾಶಿ–ನಕ್ಷತ್ರ ಹೇಳಿ ಪೂಜೆ ಮಾಡಿಸಿದ್ದೇನೆ. ಈ ಬಾರಿ ನೀವು ಗೆಲ್ಲುತ್ತೀರಿ’ ಎಂದರು. ಸೋಮಣ್ಣ ಅವರಿಂದಲೂ ಪೂಜೆ ಮಾಡಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸೋಮಣ್ಣ, ‘ಸಿದ್ದಲಿಂಗಸ್ವಾಮಿ ನನ್ನ ಸಹೋದರನಂತೆ. ಯಾವುದೋ ಜನ್ಮದಲ್ಲಿ ಅಣ್ಣನೋ, ತಮ್ಮನೋ ಆಗಿದ್ದ ಎನಿಸುವಂತಹ ಬಾಂಧವ್ಯವಿದೆ. ಅವರಿಗೆ ಕ್ಷೇತ್ರದಲ್ಲಿ ಕೆಲವು ಜವಾಬ್ದಾರಿಗಳನ್ನು ನೀಡಿದ್ದೇನೆ. ಪ್ರಚಾರಕ್ಕೆ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಬರಲಿದ್ದಾರೆ. ಅಭಿವೃದ್ಧಿಯ ವಿಷಯದಲ್ಲಿ ವರುಣವನ್ನು ಮತ್ತೊಂದು ಗೋವಿಂದರಾಜ ನಗರ ಕ್ಷೇತ್ರ ಮಾಡುವ ಗುರಿ ಇದೆ’ ಎಂದರು. ಸಿದ್ದಲಿಂಗಸ್ವಾಮಿ ನಿವಾಸಕ್ಕೆ ಅವರು ಬರುತ್ತಿದ್ದಂತೆಯೇ ಅಭಿಮಾನಿಗಳು, ‘ಮುಂದಿನ ಮುಖ್ಯಮಂತ್ರಿ ಸೋಮಣ್ಣ’ ಎಂದು ಘೋಷಣೆ ಕೂಗಿದರು. ನಂತರ ಅವರು ಕಾ.ಪು. ಸಿದ್ದಲಿಂಗಸ್ವಾಮಿ ಹಾಗೂ ಸಂಸದ ಪ್ರತಾಪ ಸಿಂಹ ಜೊತೆಗೂಡಿ ಕ್ಷೇತ್ರದಲ್ಲಿ ಪ್ರಚಾರ ಆರಂಭಿಸಿದರು.

ಅಭ್ಯರ್ಥಿ ವಿ. ಸೋಮಣ್ಣ ಅವರು ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ಕಾ.ಪು.ಸಿದ್ದಲಿಂಗಸ್ವಾಮಿ ಅವರನ್ನು ಭೇಟಿಯಾಗಿ ಬೆಂಬಲ ಕೋರಿದರು

ವೈ.ಎ ದಂತಿ, ವಿಶಾಲಾಕ್ಷಿಗೆ ಪ್ರಕಾಶಕರ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ವೈ.ಎ. ದಂತಿ

ವಿಶಾಲಾಕ್ಷಿ ಶರ್ಮ

ಬೆಂಗಳೂರು: ಕರ್ನಾಟಕ ಪ್ರಕಾಶಕರ ಸಂಘ ನೀಡುವ ‘ಎಂ. ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ’ಗೆ ಸಾಗರದ ವೈ.ಎ. ದಂತಿ, ‘ನಂಜನಗೂಡು ತಿರುಮಲಾಂಬ ಪ್ರಶಸ್ತಿ’ಗೆ ವಿಶಾಲಾಕ್ಷಿ ಶರ್ಮ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ವೈ.ಎ. ದಂತಿ ಅವರು 1965ರಲ್ಲಿ ಸಾಗರದಲ್ಲಿ ‘ರವೀಂದ್ರ ಪುಸ್ತಕಾಲಯ’ ಆರಂಭಿಸಿದರು. ಸದಭಿರುಚಿಯ ಪುಸ್ತಕ ಪ್ರಕಟಣೆ, ವಿತರಣೆ, ಮಾರಾಟ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮೂಲಕ ಕನ್ನಡದ ಸಾಂಸ್ಕೃತಿಕ ಚಹರೆಗಳನ್ನು ವಿಸ್ತರಿಸಿದರು. ವಿಶಾಲಾಕ್ಷಿ ಶರ್ಮ ಅವರು ‘ಭೂಮಿ ಬುಕ್ಸ್’ ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ, ವಿಜ್ಞಾನ, ಸಮಾಜಶಾಸ್ತ್ರ, ಕೃಷಿ, ಅಭಿವೃದ್ಧಿ ಮೀಮಾಂಸೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಘದ ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ತಿಳಿಸಿದ್ದಾರೆ.

ಇದೇ 23ರಂದು ಬೆಂಗಳೂರಿನಲ್ಲಿ ವಿಶ್ವ ಪುಸ್ತಕ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದ್ದಾರೆ.

‘ತ್ವರಿತ ನ್ಯಾಯಕ್ಕೆ ತಂತ್ರಜ್ಞಾನ ಅಗತ್ಯ’

ಗುವಾಹಟಿ (ಪಿಟಿಐ): ‘ನ್ಯಾಯಾಂಗ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಈಶಾನ್ಯ ಭಾರತದಂತಹ ಪ್ರದೇಶಗಳ ನಾಗರಿಕರಿಗೆ ತ್ವರಿತವಾಗಿ ನ್ಯಾಯ ಒದಗಿಸಲು ಸಾಧ್ಯವಾಗಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಗುರುವಾರ ಇಲ್ಲಿ ನಡೆದ ಹೈಕೋರ್ಟ್‌ನ ಅಮೃತ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿದ ಅವರು, ‘ಪರ್ಯಾಯ ವಿವಾದ ಪರಿಹಾರ ಕಾರ್ಯ ವ್ಯವಸ್ಥೆಯು ನ್ಯಾಯಾಂಗ ಕ್ಷೇತ್ರದ ಆಧಾರ ಸ್ತಂಭವಾಗಲಿದೆ. ಕಕ್ಷಿದಾರರಿಗೆ ಸುಲಭವಾಗಿ ನ್ಯಾಯಾಂಗ ಸೇವೆ ಒದಗಿಸಲು ಕೃತಕ ಬುದ್ಧಿಮತ್ತೆ ಸೇವೆಯನ್ನೂ ಬಳಸಿಕೊಳ್ಳಬಹುದು’ ಎಂದು ಅಭಿಪ್ರಾಯಪಟ್ಟರು.

ತಂತ್ರಜ್ಞಾನದ ಬಳಕೆಯಿಂದ ಜನರಿಗೆ ತ್ವರಿತವಾಗಿ ಸೇವೆ ಲಭಿಸುತ್ತದೆ ಎಂಬುದಕ್ಕೆ ಪ್ರಧಾನ ಮಂತ್ರಿ ಸ್ವಮಿತ್ವ ಯೋಜನೆಯೇ ನಿದರ್ಶನ. ಸ್ಥಿರಾಸ್ತಿಗಳ ಮಾಲೀಕತ್ವದ ಬಗ್ಗೆ ನಿಖರತೆ ಇಲ್ಲದೆ ಲಕ್ಷಾಂತರ ವಿವಾದಗಳು ನ್ಯಾಯಾಲಯದ ಮೆಟ್ಟಿಲೇರಿವೆ. ಇದು ನ್ಯಾಯಾಂಗ ವ್ಯವಸ್ಥೆಗೂ ಹೊರೆ’ ಎಂದು ಹೇಳಿದರು.

ಧಾರವಾಡ, ಬೆಳಗಾವಿಯಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಧಾರವಾಡ/ಸಾಗರ: ರಾಜ್ಯದಲ್ಲಿ ಶುಕ್ರವಾರ ಧಾರವಾಡ, ಬೆಳಗಾವಿ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ. ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಆಲಿಕಲ್ಲು ಸಹಿತ ಜೋರಾಗಿ ಮಳೆ ಸುರಿಯಿತು.

ಧಾರವಾಡ ತಾಲ್ಲೂಕಿನಾದ್ಯಂತ ಸಾಯಂಕಾಲ ಆರಂಭವಾದ ಮಳೆ ರಾತ್ರಿಯವರೆಗೂ ನಿರಂತರವಾಗಿ ಸುರಿಯುತ್ತಲೇ ಇತ್ತು. ಕಲಘಟಗಿ ತಾಲ್ಲೂಕು ಭಾಗದಲ್ಲೂ ಉತ್ತಮ ಮಳೆಯಾಗಿದೆ. ಗುಡುಗು ಸಹಿತ ಮಳೆಯಾದ್ದರಿಂದ ಆಗಾಗ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳುತ್ತಿತ್ತು.

ಅಳ್ನಾವರ ವ್ಯಾಪ್ತಿಯಲ್ಲಿ ಬಿರುಗಾಳಿ ಸಹಿತ ಮಳೆ ಜೋರಾಗಿ ಸುರಿಯಿತು. ಹೊನ್ನಾಪುರದಲ್ಲಿ ಸರ್ಕಾರಿ ಶಾಲೆ ಮೇಲ್ಚಾವಣಿ ಹಾರಿದೆ. ಆಲಿಕಲ್ಲು ಸುರಿದ ಪರಿಣಾಮ ಮಾವು ಬೆಳೆ ನೆಲ ಕಚ್ಚಿದೆ. ಅರವಟಗಿ, ಕಂಬಾರಗಣವಿ, ಕೋಗಲಗೇರಿ, ಕಾಶೇನಟ್ಟಿ ಬಳಿ ಜೋರಾಗಿ ಮಳೆ ಸುರಿಯಿತು.

ಧಾರವಾಡದ ಅಳ್ನಾವರ ತಾಲ್ಲೂಕಿನ ಹೊನ್ನಾಪುರದ ಸರ್ಕಾರಿ ಶಾಲೆ ಚಾವಣಿ ಗಾಳಿ, ಮಳೆಗೆ ಹಾರಿಬಿದ್ದಿರುವುದು

‘ಬಿಸಿಲ ಝಳಕ್ಕೆ ಹಳದಿ ಬಣ್ಣಕ್ಕೆ ತಿರುಗಿದ್ದ ಕಬ್ಬಿನ ಬೆಳೆಗೆ ಮಳೆ ಬಿದ್ದಿದ್ದು ಸಂಜೀವಿನಿಯಂತಾಗಿದೆ’ ಎಂದು ರೈತರು ಹರ್ಷ ವ್ಯಕ್ತಪಡಿಸಿದರು.

ಬೆಳಗಾವಿ ವರದಿ: ಬೆಳಗಾವಿ ನಗರವೂ ಸೇರಿದಂತೆ ಹಲವೆಡೆ ಗುಡುಗು–ಮಿಂಚು ಸಹಿತ ಮಳೆ ಸುರಿಯಿತು. ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ಮರ ನೆಲಕ್ಕುರುಳಿದ್ದು, ವಿದ್ಯುತ್ ಕಂಬಕ್ಕೆ ಹಾನಿಯಾಗಿದೆ.

ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ.ಹುಬ್ಬಳ್ಳಿಯಲ್ಲಿ ಸಿಡಿಲಿನ ಆರ್ಭಟಕ್ಕೆ ಮೂರು ತೆಂಗಿನ ಮರ ಹೊತ್ತಿ ಉರಿದಿವೆ. ಶಿರಸಿಯ ಕೆಲ ಭಾಗಗಳಲ್ಲಿ ಮಧ್ಯಾಹ್ನ ಮಳೆಯಾಗಿದೆ.

ಸಾಗರ ವರದಿ: ನಗರದಲ್ಲಿ ಶುಕ್ರವಾರ ಗುಡುಗು, ಸಿಡಿಲು ಸಮೇತ ಕೆಲ ಹೊತ್ತು ಮಳೆಯಾಯಿತು. ಸೊರಬ ಸುತ್ತಮುತ್ತ ತುಂತುರು ಮಳೆಯಾಗಿದೆ.

ಬಿಸಿಲ ಝಳ: ತತ್ತರಿಸಿದ ಜನ

ಬೆಂಗಳೂರು: ರಾಜ್ಯದಲ್ಲಿ ಮತ್ತಷ್ಟು ತಾಪಮಾನ ಏರಿಕೆಯಾಗಿದ್ದು, ಬಿಸಿಲ ಝಳವು ಜನರನ್ನು ತತ್ತರಿಸುವಂತೆ ಮಾಡಿದೆ. ವಿಪರೀತ ಬಿಸಿಲು ಜನರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ.

ನಿರೀಕ್ಷಿತ ಪ್ರಮಾಣದಲ್ಲಿ ಬೇಸಿಗೆಯಲ್ಲಿ ಮಳೆಯಾಗದ ಪರಿಣಾಮ ಕರಾವಳಿ, ಮಲೆನಾಡು, ದಕ್ಷಿಣ ಒಳನಾಡು, ಉತ್ತರ ಒಳನಾಡು ಜಿಲ್ಲೆಗಳಲ್ಲಿ ಬಿಸಿಲು ಕೆಂಡದಂತೆ ಸುಡುತ್ತಿದೆ.

ಕಲಬುರಗಿ ಜಿಲ್ಲೆಯಲ್ಲಿ ಶುಕ್ರವಾರ ಗರಿಷ್ಠ ಉಷ್ಣಾಂಶ 41.34 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಮಲೆನಾಡು ವ್ಯಾಪ್ತಿಯಲ್ಲೂ ಈ ಬಾರಿ ನಿರೀಕ್ಷೆಯಂತೆ ಮಳೆಯಾಗಿಲ್ಲ. ಇದರಿಂದ ತಾಪಮಾನ ಮತ್ತಷ್ಟು ಏರಿಕೆ ಕಂಡಿದೆ.

ಬೀದರ್, ದಾವಣಗೆರೆ, ಚಿತ್ರದುರ್ಗ, ಹಾವೇರಿ, ಹುಬ್ಬಳ್ಳಿ–ಧಾರವಾಡ, ಗದಗದಲ್ಲೂ ತಾಪಮಾನ ಏರಿಕೆಯಾಗಿದೆ. ಬಿಸಿಲಿನ ಬೇಗೆಯಿಂದ ವೃದ್ಧರು ಹಾಗೂ ಮಕ್ಕಳು ಬಸವಳಿಯುತ್ತಿದ್ದಾರೆ.

ಮಳೆ ಸಾಧ್ಯತೆ: ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ, ಉತ್ತರ ಒಳನಾಡಿನ ಬೆಳಗಾವಿ, ಬೀದರ, ಹಾವೇರಿ, ಧಾರವಾಡ, ಬಾಗಲಕೋಟೆ, ಕಲಬುರಗಿ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಆದರೆ, ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ. ಜತೆಗೆ, ಬಿಸಿಗಾಳಿಯ ವೇಗವು 30–40 ಕಿ.ಮೀ. ತಲುಪುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಬೆಂಗಳೂರಿನಲ್ಲಿ ನಿರ್ಮಲ ಆಕಾಶ ಇರಲಿದೆ ಎಂದೂ ಐಎಂಡಿ ತಿಳಿಸಿದೆ.

ಡಿಎಂಕೆ ನಾಯಕರ ಬಳಿ ₹1.32 ಲಕ್ಷ ಕೋಟಿ ಸಂಪತ್ತು: ಅಣ್ಣಾಮಲೈ

ಪ್ರಜಾವಾಣಿ ವಾರ್ತೆ

ಚೆನ್ನೈ: ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಡಿಎಂಕೆ ಪಕ್ಷದ ಉನ್ನತ ನಾಯಕರು ಹಾಗೂ ಅವರ ಕುಟುಂಬ ಸದಸ್ಯರು, ಸಂಬಂಧಿಕರು ಸುಮಾರು ₹1.32 ಲಕ್ಷ ಕೋಟಿ ಸಂಪತ್ತನ್ನು ಹೊಂದಿದ್ದಾರೆ ಎಂದು ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಶುಕ್ರವಾರ ಗಂಭೀರ ಆರೋಪ ಮಾಡಿದ್ದಾರೆ.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಡಿಎಂಕೆ ಸರ್ಕಾರದ ವಿರುದ್ಧ ಹಲವು ಗಂಭೀರ ಆರೋಪಗಳನ್ನು ಮಾಡಿ ‘ಡಿಎಂಕೆ ಫೈಲ್ಸ್’ ಭಾಗ -1 ಬಿಡುಗಡೆ ಮಾಡಿದರು. ‘ಡಿಎಂಕೆ ಫೈಲ್ಸ್ ಭಾಗ–1ಕ್ಕೆ ಕೊನೆಗೊಳ್ಳುವುದಿಲ್ಲ. 2024ರ ಚುನಾವಣೆಗೆ ಮುಂಚಿತವಾಗಿ ತಮಿಳುನಾಡು ಆಳಿದ ಎಲ್ಲ ಪಕ್ಷಗಳ ಭ್ರಷ್ಟಾಚಾರವನ್ನು ಐದು ಭಾಗಗಳಲ್ಲಿ ನಾವು ಬಹಿರಂಗಪಡಿಸುತ್ತೇವೆ. ಭ್ರಷ್ಟಾಚಾರದ ವಿಷಯದಲ್ಲಿ ಒಂದು ಪಕ್ಷ ಗುರಿಯಾಗಿಸಲು ಮತ್ತು ಇನ್ನೊಂದನ್ನು ಬಿಡಲು ಸಾಧ್ಯವಿಲ್ಲ. ಭ್ರಷ್ಟಾಚಾರದ ವಿಚಾರದಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಒಂದೇ ಕುಂಚದಲ್ಲಿ ಮೂಡಿದ ಎರಡು ಚಿತ್ರಗಳು ಅಷ್ಟೇ ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಎಂ.ಕೆ. ಸ್ಟಾಲಿನ್ ಮತ್ತು ಅವರ ಕುಟುಂಬ ಸದಸ್ಯರಾದ ಕನಿಮೋಳಿ, ದಯಾನಿಧಿ ಮಾರನ್, ಟಿ.ಆರ್. ಬಾಲು, ಡಿ. ಮುರುಗನ್, ಕೆ. ಪೊನ್ಮುಡಿ ಮತ್ತು ಇ.ವಿ. ವೇಲು ಹಾಗೂ ಅವರ ಸಂಬಂಧಿಕರು ಸೇರಿ ಡಿಎಂಕೆಯ 11 ಮಂದಿ ಉನ್ನತ ನಾಯಕರು ₹1.32 ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿದ್ದಾರೆ’ ಎಂದರು.

ಡಿಎಂಕೆ ಸವಾಲು: ಕೆ.ಅಣ್ಣಾಮಲೈ ಅವರು ಮಾಡಿರುವ ಆರೋಪಗಳು ‘ಜೋಕ್’ಗಳು. ಅವರು ಮಾಡಿರುವ ಆರೋಪಗಳನ್ನು ಹದಿನೈದು ದಿನಗಳಲ್ಲಿ ಪುರಾವೆಗಳೊಂದಿಗೆ ಸಾಬೀತುಪಡಿಸಲಿ ಎಂದು ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಸವಾಲು ಹಾಕಿದ್ದಾರೆ.

ಮೆರವಣಿಗೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವದ ಪ್ರಯುಕ್ತ ಕಲಬುರಗಿಯ ಜಗತ್ ವೃತ್ತದಲ್ಲಿ ಶುಕ್ರವಾರ ಸಂಜೆ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ
–ಪ್ರಜಾವಾಣಿ ಚಿತ್ರ/ತಾಜುದ್ದೀನ ಆಜಾದ್

ಸಂಕ್ಷಿಪ್ತ ಸುದ್ದಿ

ಎನ್‌ಕೌಂಟರ್: ಆರು ವರ್ಷಗಳಲ್ಲಿ 183 ಮಂದಿ ಹತ್ಯೆ

ಲಖನೌ: ಪಾತಕಿ–ಮಾಜಿ ಸಂಸದ ಅತೀಕ್ ಅಹ್ಮದ್ ಪುತ್ರ ಅಸಾದ್ ಮತ್ತು ಆತನ ಸಹಚರ ಗುಲಾಮ್ ಸೇರಿದಂತೆ ಕಳೆದ ಆರು ವರ್ಷಗಳ ಅವಧಿಯಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ 183 ಮಂದಿಯನ್ನು ಉತ್ತರಪ್ರದೇಶ ಪೊಲೀಸರು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ ಎಂದು ವಿಶೇಷ ಡಿಜಿಪಿ ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಅಂಬೇಡ್ಕರ್ ಪ್ರತಿಮೆ ಅನಾವರಣ

ಹೈದರಾಬಾದ್: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ದಿನವಾದ ಶುಕ್ರವಾರ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಹಾಗೂ ಅಂಬೇಡ್ಕರ್ ಮೊಮ್ಮಗ, ಮಾಜಿ ಸಂಸದ ಪ್ರಕಾಶ್ ಅಂಬೇಡ್ಕರ್ ಅವರು ಜಗತ್ತಿನ ಅತಿ ದೊಡ್ಡದಾದ 125 ಅಡಿ ಎತ್ತರದ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು.

ಜುಲೈ 1ರಿಂದ ಅಮರನಾಥ ಯಾತ್ರೆ

ಶ್ರೀನಗರ: ಪ್ರಸಕ್ತ ಸಾಲಿನಡಿ ಅಮರನಾಥ ದೇವಾಲಯಕ್ಕೆ 62 ದಿನಗಳ ತೀರ್ಥಯಾತ್ರೆಯು ಜುಲೈ 1ರಿಂದ ಆರಂಭಗೊಳ್ಳಲಿದ್ದು, ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ ಏಪ್ರಿಲ್ 17ರಿಂದ ಯಾತ್ರಾರ್ಥಿಗಳ ಹೆಸರು ನೋಂದಣಿ ಪ್ರಕ್ರಿಯೆ ಶುರುವಾಗಲಿದೆ.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE
ಸುನೀಲ್ ಪುರಾಣಿಕ್
ಚಿತ್ರನಟ
ಪುರಾಣಿಕ್ ಪಯಣ
ಬೆಳಿಗ್ಗೆ 10 ಕ್ಕೆ
Prajavani.net Prajavani Prajavani

ಅಶೋಕ ಚಂದರಗಿಗೆ ‘ಕರ್ನಾಟಕ ಚೂಡಾಮಣಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ನೀಡುವ ‘ಕರ್ನಾಟಕ ಚೂಡಾಮಣಿ ಪ್ರಶಸ್ತಿ’ಗೆ ಕನ್ನಡ ಪರ ಹೋರಾಟಗಾರ ಅಶೋಕ ಚಂದರಗಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಜುಲೈನಲ್ಲಿ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಪ್ರಭುಸ್ವಾಮಿ ತಿಳಿಸಿದ್ದಾರೆ.

‘ವಿಳಂಬದ ಅನುಕೂಲವನ್ನು ಅಪರಾಧಿ ಪಡೆಯುವಂತಾಗಬಾರದು’

ಕ್ಷಮಾ ಅರ್ಜಿ: ತ್ವರಿತ ನಿರ್ಧಾರಕ್ಕೆ ‘ಸುಪ್ರೀಂ’ ನಿರ್ದೇಶನ

ನವದೆಹಲಿ (ಪಿಟಿಐ): ಮರಣದಂಡನೆಗೆ ಗುರಿಯಾಗಿರುವ ಅಪರಾಧಿಗಳ ಕ್ಷಮಾದಾನ ಅರ್ಜಿಗಳನ್ನು ಆದಷ್ಟು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ಕ್ರಮವಹಿಸಬೇಕು ಎಂದು ಸುಪ್ರೀಂ ಕೋರ್ಟ್, ರಾಜ್ಯ ಸರ್ಕಾರಗಳು ಮತ್ತು ಸಂಬಂಧಿತ ಪ್ರಾಧಿಕಾರಗಳಿಗೆ ನಿರ್ದೇಶಿಸಿದೆ.

ಕ್ಷಮಾದಾನ ಅರ್ಜಿ ಇತ್ಯರ್ಥವಾಗುವುದು ವಿಳಂಬವಾಗುತ್ತಿರುವುದರ ಲಾಭವನ್ನು ಅಪರಾಧಿಗಳು ಪಡೆಯುತ್ತಿದ್ದಾರೆ. ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಮಾನದ ನಂತರವೂ ಕ್ಷಮಾದಾನ ಅರ್ಜಿಗಳ ವಿಲೇವಾರಿ ವಿಳಂಬವಾಗುತ್ತಿದೆ. ಇದರಿಂದ ಮರಣದಂಡನೆ ಶಿಕ್ಷೆ ಉದ್ದೇಶವೇ ಈಡೇರುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠವು ಈ ಕುರಿತು ನಿರ್ದೇಶನ ನೀಡಿತು. ‘ಸಂಬಂಧಿತ ಸರ್ಕಾರಗಳು ತ್ವರಿತ ತೀರ್ಮಾನ ತೆಗೆದುಕೊಳ್ಳಬೇಕು. ಇದರಿಂದ ಅಪರಾಧಿಗಳಿಗೆ ತಮ್ಮ ಹಣೆಬರಹ ತಿಳಿಯಲಿದೆ ಹಾಗೂ ಸಂತ್ರಸ್ತರಿಗೆ ನ್ಯಾಯವೂ ಸಿಗಲಿದೆ’ ಎಂದು ಪೀಠ ಹೇಳಿತು. ಮಹಿಳೆ ಮತ್ತು ಆಕೆಯ ಸಹೋದರಿಗೆ ವಿಧಿಸಲಾಗಿದ್ದ ಮರಣದಂಡನೆಯನ್ನು ಪರಿಷ್ಕರಿಸಿದ್ದ ಬಾಂಬೆ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆಯ ವೇಳೆ ಪೀಠವು ಈ ಕುರಿತ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಕ್ಷಮಾದಾನ ಅರ್ಜಿ ಕುರಿತು ತೀರ್ಮಾನಿಸಲು ರಾಜ್ಯ ಸರ್ಕಾರ/ರಾಜ್ಯಪಾಲರ ಕಚೇರಿಯಲ್ಲಿ ತೀರಾ ವಿಳಂಬವಾಗಿದೆ ಎಂಬುದರ ಆಧಾರದಲ್ಲಿ ಹೈಕೋರ್ಟ್, ಮರಣದಂಡನೆಯನ್ನು ಜೀವಾವಧಿ ಸಜೆಯಾಗಿ ಪರಿವರ್ತಿಸಿತ್ತು. ಈ ಪ್ರಕರಣದಲ್ಲಿ ಕ್ಷಮಾದಾನ ಅರ್ಜಿಯು 7ರಿಂದ 10 ವರ್ಷದವರೆಗೆ ಬಾಕಿ ಉಳಿದಿತ್ತು.

13 ಮಂದಿ ಮಕ್ಕಳನ್ನು ಅಪಹರಿಸಿ, ಈ ಪೈಕಿ ಒಂಬತ್ತು ಮಕ್ಕಳನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ 2001ರಲ್ಲಿ ಕೊಲ್ಹಾಪುರದ ಸ್ಥಳೀಯ ನ್ಯಾಯಾಲಯವು ಅಪರಾಧಿಗಳಿಗೆ ಮರಣದಂಡನೆ ವಿಧಿಸಿತ್ತು. ಈ ಆದೇಶವನ್ನು ಹೈಕೋರ್ಟ್ 2004ರಲ್ಲಿ, ತದನಂತರ ಸುಪ್ರೀಂ ಕೋರ್ಟ್ 2006ರಲ್ಲಿ ಎತ್ತಿಹಿಡಿದಿತ್ತು. ಬಳಿಕ ಕ್ಷಮಾದಾನ ಅರ್ಜಿಯನ್ನು ರಾಜ್ಯಪಾಲರು 2013ರಲ್ಲಿ ಹಾಗೂ ರಾಷ್ಟ್ರಪತಿಗಳು 2014ರಲ್ಲಿ ತಿರಸ್ಕರಿಸಿದ್ದರು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು, ಅಪರಾಧಿಗಳು ಎಸಗಿರುವ ಅಪರಾಧದ ಗಂಭೀರತೆಯ ಹಿನ್ನೆಲೆಯಲ್ಲಿ ಮರಣದಂಡನೆಯನ್ನು, ಹೈಕೋರ್ಟ್ ಯಾವುದೇ ರಿಯಾಯಿತಿ ನೀಡದೇ ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಿರಬಹುದು ಎಂದು ಹೇಳಿದರು.

ಇದನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, ಆದೇಶವನ್ನು ಪರಿಷ್ಕರಿಸಿದ್ದು ಆರೋಪಿಗಳು ಜೀವಾವಧಿ ಸಜೆಯನ್ನು ಅನುಭವಿಸುವಂತೆ ಆದೇಶಿಸಿತು.

‘ತೀರ್ಪು ಬರವಣಿಗೆಯು ಏಕರೂಪವಾಗಿರಲಿ’

‘ಎಲ್ಲ ನ್ಯಾಯಾಲಯಗಳು ಹಾಗೂ ನ್ಯಾಯಮಂಡಳಿಗಳು ನೀಡುವ ತೀರ್ಪುಗಳು ಹಾಗೂ ಆದೇಶಗಳ ಬರವಣಿಗೆ ಶೈಲಿಯು ಏಕರೂಪವಾಗಿರಬೇಕು ಮತ್ತು ಅವುಗಳು ಅನುಕ್ರಮ ಸಂಖ್ಯೆಯನ್ನು ಹೊಂದಿದ ಪ್ಯಾರಾಗಳಿಂದ ಕೂಡಿರಬೇಕು’ ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠವು ಈ ನಿರ್ದೇಶನ ನೀಡಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ ತೀರ್ಪಿಗೆ ಸಂಬಂಧಿಸಿದಂತೆ ಬಿ.ಎಸ್. ಹರಿ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸುತ್ತಿದ್ದಾಗ, ಹೈಕೋರ್ಟ್‌ನ ತೀರ್ಪು ಪ್ಯಾರಾ ಹಾಗೂ ಅನುಕ್ರಮ ಸಂಖ್ಯೆಯಿಂದ ಕೂಡಿರದಿರುವುದನ್ನು ಪೀಠ ಗಮನಿಸಿತು.

ಎಲ್ಲ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳಿಗೆ ಈ ಆದೇಶವನ್ನು ರವಾನೆ ಮಾಡಿ ಎಂದು ಕೋರ್ಟ್ ಹೇಳಿದೆ. ಆಯಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ತಮ್ಮ ಅಧೀನ ನ್ಯಾಯಾಲಯಗಳು ಹಾಗೂ ನ್ಯಾಯಮಂಡಳಿಗಳಿಗೆ ಬರವಣಿಗೆ ಶೈಲಿಯ ಕುರಿತು ನಿರ್ದೇಶನ ನೀಡಬೇಕು ಎಂದೂ ಹೇಳಿದೆ.

ಶಕುಂತಲಾ ಶುಕ್ಲಾ ಮತ್ತು ಉತ್ತರ ಪ್ರದೇಶ ನಡುವಣ ಪ್ರಕರಣ (2021) ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಜಯ್ ಕುಮಾರ್ ಸೂದ್ (2022) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಈ ವೇಳೆ ನ್ಯಾಯಪೀಠವು ಉಲ್ಲೇಖಿಸಿತು.

13 ನಾಗರಿಕರ ಹತ್ಯೆ: 30 ಸೈನಿಕರ ವಿಚಾರಣೆಗೆ ಒಪ್ಪದ ಕೇಂದ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸೇನೆಯ 21ನೇ ಪ್ಯಾರಾ ಸ್ಪೆಷಲ್ ಫೋರ್ಸ್ ಸಿಬ್ಬಂದಿ ನಡೆಸಿದ ಕೃತ್ಯ
- ಪ್ರಮಾದ ಒಪ್ಪಿಕೊಂಡಿದ್ದ ಸೇನೆಯಿಂದ 'ಕೋರ್ಟ್ ಮಾರ್ಷಲ್'
- ಸೇನೆಯು 'ಕೋರ್ಟ್ ಮಾರ್ಷಲ್' ವಿವರ ಬಹಿರಂಗಪಡಿಸಲಿಲ್ಲ

ಗುವಾಹಟಿ: ನಾಗಾಲ್ಯಾಂಡ್‌ನ ಮೋನ್ ಜಿಲ್ಲೆಯ ಟಿರು ಮತ್ತು ಒಟಿಂಗ್ ಗ್ರಾಮಗಳ ಬಳಿ 2021ರ ಡಿಸೆಂಬರ್‌ನಲ್ಲಿ 13 ಮಂದಿ ನಾಗರಿಕರನ್ನು ಗುಂಡಿಟ್ಟು ಹತ್ಯೆ ಮಾಡಿದ ಪ್ರಕರಣದಲ್ಲಿ ಆರೋಪಿಗಳಾಗಿರುವ 30 ಸೈನಿಕರನ್ನು ವಿಚಾರಣೆಗೆ ಒಳಪಡಿಸಲು ಕೇಂದ್ರ ಸರ್ಕಾರ ಅನುಮತಿ ನಿರಾಕರಿಸಿದೆ.

ಅಪರಾಧ ವಿಭಾಗದ ಪೊಲೀಸರು ಮತ್ತು ವಿಶೇಷ ತನಿಖಾ ತಂಡ ಈ ಪ್ರಕರಣದ ತನಿಖೆ ನಡೆಸಿ, ಮೋನ್ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. 2022ರ ಮಾರ್ಚ್ 24ರಂದು ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ರಕ್ಷಣಾ ಸಚಿವಾಲಯದ ಸೇನಾ ವ್ಯವಹಾರಗಳ ಇಲಾಖೆಯ ಅನುಮತಿ ಕೋರಲಾಗಿತ್ತು. ಆದರೆ, ಆರೋಪಿಗಳ ವಿರುದ್ಧ ಕಾನೂನು ಕ್ರಮಕ್ಕೆ ಸೇನಾ ವ್ಯವಹಾರಗಳ ಇಲಾಖೆಯು ಅನುಮತಿ ನಿರಾಕರಿಸಿದೆ ಎಂದು ನಾಗಾಲ್ಯಾಂಡ್ ಸಿಐಡಿ ಐಜಿಪಿ ರೂಪಾ ಎಂ. ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಸೇನಾ ವ್ಯವಹಾರಗಳ ಇಲಾಖೆ ಅನುಮತಿ ನಿರಾಕರಿಸಿರುವುದನ್ನು ಪ್ರಕರಣದ ವಿಚಾರಣೆ ಬಾಕಿ ಇರುವ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಿಗೂ ತಿಳಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಅಪರಾಧ ದಂಡ ಸಂಹಿತೆ ಸೆಕ್ಷನ್ 197(2) ಮತ್ತು ಶಸಸ್ತ್ರ ಪಡೆಗಳ (ವಿಶೇಷ ಅಧಿಕಾರಗಳು) ಕಾಯ್ದೆ (ಎಎಫ್‌ಎಸ್‌ಪಿಎ- ಆಫ್‌ಸ್ಪಾ) ಸೆಕ್ಷನ್ 6ರ ಅಡಿ ಭದ್ರತಾ ಪಡೆ ಸಿಬ್ಬಂದಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಅವರು ತೆಗೆದುಕೊಳ್ಳುವ ಯಾವುದೇ ಕ್ರಮಗಳಿಗಾಗಿ ಭದ್ರತಾ ಪಡೆಗಳ ವಿರುದ್ಧ ಯಾವುದೇ ಕ್ರಮಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಪ್ರಾಸಿಕ್ಯೂಷನ್ ಅನುಮೋದನೆ ಅಗತ್ಯವಿದೆ.

ಏತನ್ಮಧ್ಯೆ, ಆರೋಪಿ ಭದ್ರತಾ ಸಿಬ್ಬಂದಿಯ ಪತ್ನಿಯರು ಈ ಪ್ರಕರಣದ ವಿಚಾರಣೆಗೆ ತಡೆ ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. 2022ರ ಜುಲೈ 19ರಂದು ಸುಪ್ರೀಂ ಕೋರ್ಟ್ ನೀಡಿದ ಮಧ್ಯಂತರ ಆದೇಶದಲ್ಲಿ ಈ ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆ ನಡೆಸದಂತೆ ತಡೆ ನೀಡಿದೆ ಎಂದು ರೂಪಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

> ವಿಚಾರಣೆಗೆ ಅನುಮತಿ ನಿರಾಕರಿಸುವುದು ಸಂತ್ರಸ್ತ ಕುಟುಂಬಗಳಿಗೆ ಮತ್ತು ನ್ಯಾಯಕ್ಕಾಗಿ ಎದುರು ನೋಡುತ್ತಿದ್ದವರಿಗೆ ಹಿನ್ನಡೆ ಆದಂತಾಗಿದೆ
>
> **ಸುಹಾಸ್ ಚಕ್ಮಾ,** ಮಾನವ ಹಕ್ಕುಗಳ ಕಾರ್ಯಕರ್ತ, ನವದೆಹಲಿ

2021ರ ಡಿಸೆಂಬರ್‌ನಲ್ಲಿ ಟಿರು ಗ್ರಾಮದ ಬಳಿ ಇದ್ದ ಕಲ್ಲಿದ್ದಲು ಗಣಿಯಿಂದ ಕೆಲಸ ಮುಗಿಸಿ ಒಟಿಂಗ್ ಗ್ರಾಮಕ್ಕೆ ನಾಗರಿಕರು ವಾಹನದಲ್ಲಿ ವಾಪಸ್ಸಾಗುತ್ತಿದ್ದರು. ಟಿರು ಮತ್ತು ಒಟಿಂಗ್ ಮಧ್ಯೆ ವಾಹನ ಹೋಗುತ್ತಿದ್ದಾಗ ಸೈನಿಕರು ವಾಹನದ ಮೇಲೆ ಗುಂಡು ಹಾರಿಸಿದ್ದರು.

ಇದರಲ್ಲಿ ಆರು ಕೂಲಿ ಕಾರ್ಮಿಕರು ಹತರಾಗಿದ್ದರು. ಇವರ ಶವಗಳನ್ನು ಗ್ರಾಮಕ್ಕೆ ಕೊಂಡೊಯ್ಯುವಾಗ ಭದ್ರತಾ ಸಿಬ್ಬಂದಿ ಮತ್ತು ಗ್ರಾಮಸ್ಥರ ನಡುವೆ ಘರ್ಷಣೆ ನಡೆದು ಮತ್ತೆ ಏಳು ನಾಗರಿಕರನ್ನು ಭದ್ರತಾ ಪಡೆ ಸಿಬ್ಬಂದಿ ಗುಂಡಿಟ್ಟು ಕೊಂದಿದ್ದರು. ಈ ಸಂಬಂಧ ಟಿಝಿಟ್ ಠಾಣೆ ಪೊಲೀಸರು ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿದ್ದರು.

ಲೋಕಸಭಾ ಚುನಾವಣೆ: ಬಿಜೆಪಿ ಸೋಲಿಸಲು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಯತ್ನ

'ವಿವಾದಿತ ವಿಷಯ ಬದಿಗಿಡಲು ಒಪ್ಪಿಗೆ'

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ತಮ್ಮಲ್ಲಿನ ವಿವಾದಾಸ್ಪದ ವಿಷಯಗಳನ್ನು ಬದಿಗಿರಿಸಬೇಕು ಹಾಗೂ ಒಗ್ಗಟ್ಟಿನಿಂದ ಸ್ಪರ್ಧೆ ಮಾಡಬೇಕು ಎಂಬ ಒಮ್ಮತಕ್ಕೆ ವಿರೋಧ ಪಕ್ಷಗಳು ಬಂದಿವೆ.

ವಿರೋಧ ಪಕ್ಷಗಳ ಒಗ್ಗಟ್ಟು ಸಾಧಿಸುವ ನಿಟ್ಟಿನಲ್ಲಿ ಕಳೆದ ಕೆಲ ದಿನಗಳಿಂದ ಪ್ರಯತ್ನಗಳು ನಡೆಯುತ್ತಿರುವ ನಡುವೆಯೇ, ಕೇಂದ್ರದ ಮಾಜಿ ಸಚಿವರೂ ಆಗಿರುವ ವಿರೋಧ ಪಕ್ಷಗಳ ಪಾಳೆಯದ ಹಿರಿಯ ನಾಯಕರೊಬ್ಬರು ಶುಕ್ರವಾರ ಈ ವಿಷಯ ತಿಳಿಸಿದ್ದಾರೆ.

'ಎಲ್ಲ ವಿರೋಧ ಪಕ್ಷಗಳಲ್ಲಿ ಒಮ್ಮತ ಇರುವಂತಹ ವಿಷಯಗಳನ್ನು ಮಾತ್ರ ಜನರ ಬಳಿ ತೆಗೆದುಕೊಂಡು ಹೋಗಬೇಕು ಎಂಬ ಬಗ್ಗೆಯೂ ಪ್ರಮುಖ ವಿರೋಧ ಪಕ್ಷಗಳ ನಾಯಕರು ಒಪ್ಪಿಗೆ ಸೂಚಿಸಿದ್ದಾರೆ' ಎಂದು ತಿಳಿಸಿದ್ದಾರೆ.

'ವಿರೋಧ ಪಕ್ಷಗಳ ಮೈತ್ರಿಕೂಟದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವೊಂದನ್ನು ರೂಪಿಸಬೇಕು ಎಂಬ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು' ಎಂದೂ ಅವರು ತಿಳಿಸಿದ್ದಾರೆ.

'ಮೈತ್ರಿಕೂಟದ ಭಾಗವಾಗುವ ಕುರಿತು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿ ಕೆಲ ವಿಪಕ್ಷಗಳಲ್ಲಿ ಗೊಂದಲ ಇದೆ. ಅಂಥ ಪಕ್ಷಗಳ ನಾಯಕರೊಂದಿಗೆ ಚರ್ಚಿಸಿ, ಮನವೊಲಿಸುವ ಕಾರ್ಯ ಮಾಡಲು ಸಮಿತಿಯೊಂದನ್ನು ರಚಿಸಬೇಕು. ಎನ್‌ಸಿಪಿ ವರಿಷ್ಠ ಶರದ್ ಪವಾರ್, ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ ಸಿಂಗ್, ಸಿಪಿಎಂ ನಾಯಕ ಸೀತಾರಾಂ ಯೆಚೂರಿ, ಎಸ್ಪಿ ಮುಖಂಡ ರಾಮಗೋಪಾಲ್ ಯಾದವ್ ಅವರು ಈ ಸಮಿತಿಯಲ್ಲಿ ಇರಬೇಕು ಎಂಬ ಪ್ರಸ್ತಾವದ ಬಗ್ಗೆ ಚರ್ಚೆ ನಡೆಯಿತು' ಎಂದು ತಿಳಿಸಿದ್ದಾರೆ.

ವಿಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನಗಳಿಗೆ ಒಂದೆಡೆ ಚುರುಕು ಸಿಕ್ಕಿದ್ದರೂ, ಕೆಲ ಪಕ್ಷಗಳು ತಮ್ಮ ಸ್ಪಷ್ಟ ನಿಲುವು ತಿಳಿಸಿಲ್ಲ. ಕೆಲ ವಿಷಯಗಳ ಕುರಿತು ಕಾಂಗ್ರೆಸ್‌ಗಿಂತ ಭಿನ್ನ ನಿಲುವುಗಳನ್ನು ವಿಪಕ್ಷಗಳು ಹೊಂದಿವೆ.

ಕಾಂಗ್ರೆಸ್ ಹಾಗೂ ಇತರ ಸಮಾನ ಮನಸ್ಕ ಪಕ್ಷಗಳಿರುವ ಮೈತ್ರಿಕೂಟದ ಭಾಗವಾಗಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಕುರಿತು ಟಿಎಂಸಿ, ಎಎಪಿ, ಎಸ್‌ಪಿ ಹಾಗೂ ಬಿಆರ್‌ಎಸ್ ಪಕ್ಷಗಳು ಈ ವರೆಗೆ ತಮ್ಮ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಿಲ್ಲ.

ವಿ.ಡಿ.ಸಾವರ್ಕರ್ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಡಿರುವ ಮಾತುಗಳು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಅಸಮಾಧಾನಕ್ಕೆ ಕಾರಣವಾಗಿದೆ. ಅದಾನಿ ಸಮೂಹದ ವಿರುದ್ಧದ ಆರೋಪಗಳನ್ನು ಅಸ್ತ್ರವನ್ನಾಗಿ ಮಾಡಿಕೊಂಡಿರುವ ಕಾಂಗ್ರೆಸ್, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿದೆ. ಆದರೆ, ಎನ್‌ಸಿಪಿ ವರಿಷ್ಠ ಶರದ್ ಪವಾರ್ ಈ ವಿಷಯದಲ್ಲಿ ಭಿನ್ನ ನಿಲುವು ವ್ಯಕ್ತಪಡಿಸಿದ್ದು ಗಮನಾರ್ಹ.

ನಾನು ಪ್ರಧಾನಿ ಹುದ್ದೆ ಅಭ್ಯರ್ಥಿಯಲ್ಲ: ನಿತೀಶ್

ಪಟ್ನಾ(ಪಿಟಿಐ) :'ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಸಲುವಾಗಿ ವಿಪಕ್ಷಗಳ ಒಗ್ಗಟ್ಟು ಸಾಧಿಸಲು ನಾನು ಶ್ರಮಿಸುತ್ತಿದ್ದೇನೆ ಅಷ್ಟೆ. ನಾನು ಪ್ರಧಾನಿ ಹುದ್ದೆಯ ಅಭ್ಯರ್ಥಿಯಲ್ಲ' ಎಂದು ಜೆಡಿಯು ವರಿಷ್ಠ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶುಕ್ರವಾರ ಹೇಳಿದರು.

ಅಂಬೇಡ್ಕರ್ ಜಯಂತಿ ಅಂಗವಾಗಿ ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಂದಿನ ವರ್ಷ ಲೋಕಸಭೆಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಯಾರು ಮತ ಹಾಕುತ್ತಾರೋ, ಅವರು ತಮ್ಮ ಹಾಗೂ ದೇಶದ ನಾಶಕ್ಕೆ ಕಾರಣರಾಗುತ್ತಾರೆ. ಯಾರು ನಮಗೆ ಮತ ಹಾಕುತ್ತಾರೋ ಅವರು ತಮ್ಮ ಒಳಿತಿಗಾಗಿ ಮಾತ್ರವಲ್ಲ ದೇಶ ಹಾಗೂ ರಾಜ್ಯದ ಅಭಿವೃದ್ಧಿಗೆ ಮತ ಹಾಕಿದಂತೆ' ಎಂದರು.

ಕೇಂದ್ರದಲ್ಲಿ ಬಿಆರ್‌ಎಸ್ ಸರ್ಕಾರ ರಚನೆ: ಕೆಸಿಆರ್

ಹೈದರಾಬಾದ್: 'ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆ ನಂತರ ಕೇಂದ್ರದಲ್ಲಿ ಬಿಆರ್‌ಎಸ್ ಪಕ್ಷ ಸರ್ಕಾರ ರಚಿಸುತ್ತದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಶುಕ್ರವಾರ ವಿಶ್ವಾಸ ವ್ಯಕ್ತಪಡಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರ 125 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಿದ ನಂತರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'2024ರಲ್ಲಿ ಲೋಕಸಭೆಗೆ ಚುನಾವಣೆ ನಡೆದ ನಂತರ ನಮ್ಮದೇ ಸರ್ಕಾರ ರಚನೆಯಾಗುತ್ತದೆ ಎಂದು ಹೇಳಲು ಬಯಸುತ್ತೇನೆ. ನಮ್ಮ ಕೆಲ ವಿರೋಧಿಗಳಿಗೆ ಈ ಮಾತುಗಳನ್ನು ಅರಗಿಸಿಕೊಳ್ಳಲು ಕಷ್ಟವಾಗಬಹುದು. ಆದರೆ, ದೀಪ ಬೆಳಗಲು ಒಂದು ಕಿಡಿ ಸಾಕು' ಎಂದರು.

'ಬಿಆರ್‌ಎಸ್ ಪಕ್ಷಕ್ಕೆ ಮಹಾರಾಷ್ಟ್ರದಲ್ಲಿ ವ್ಯಕ್ತವಾಗಿರುವಂತೆ, ಪಶ್ಚಿಮ ಬಂಗಾಳ, ಬಿಹಾರ ಹಾಗೂ ಉತ್ತರ ಪ್ರದೇಶದಲ್ಲಿಯೂ ಭಾರಿ ಬೆಂಬಲ ಸಿಗುವ ನಿರೀಕ್ಷೆ ಇದೆ' ಎಂದು ಹೇಳಿದರು.

17ಕ್ಕೆ ಉದ್ಧವ್ ಠಾಕ್ರೆ–ವೇಣುಗೋಪಾಲ್ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಬರುವ ಸೋಮವಾರ (ಏ.17) ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್‌ಠಾಕ್ರೆ ಅವರನ್ನು ಮುಂಬೈನಲ್ಲಿ ಭೇಟಿ ಮಾಡಲಿದ್ದಾರೆ.

ವಿಪಕ್ಷಗಳನ್ನು ಒಂದೇ ವೇದಿಕೆಯಲ್ಲಿ ತರುವ ನಿಟ್ಟಿನಲ್ಲಿ ಕಾಂಗ್ರೆಸ್ ನಾಯಕರು ಇತರ ಪಕ್ಷಗಳೊಂದಿಗೆ ನಡೆಸಿರುವ ಮಾತುಕತೆಯಲ್ಲಿ ಆಗಿರುವ ಪ್ರಗತಿ ಕುರಿತು ಉದ್ಧವ್ ಅವರಿಗೆ ವೇಣುಗೋಪಾಲ್ ವಿವರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ. ರಾಹುಲ್ ಗಾಂಧಿ ಅವರು ವಿ.ಡಿ.ಸಾವರ್ಕರ್ ಕುರಿತು ಮಾಡಿರುವ ಟೀಕೆಗಳ ಹಿನ್ನೆಲೆಯಲ್ಲಿಯೂ ಈ ಭೇಟಿಗೆ ಮಹತ್ವ ಬಂದಿದೆ ಎಂದು ಹೇಳಲಾಗುತ್ತಿದೆ.

ಸಮಾಗಮ

ಸಂಸತ್ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ವೇಳೆ ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಒಟ್ಟಿಗೆ ಕಾಣಿಸಿಕೊಂಡರು –ಪಿಟಿಐ ಚಿತ್ರ

'ಒಡೆದು ಆಳುವವರೇ ದೇಶ ವಿರೋಧಿಗಳು'

ಅಂಬೇಡ್ಕರ್ ಜಯಂತಿ ಪ್ರಯುಕ್ತ 'ದಿ ಟೆಲಿಗ್ರಾಫ್'ನಲ್ಲಿ ಬರೆದ ಲೇಖನದಲ್ಲಿ ಸೋನಿಯಾ ಆರೋಪ

ನವದೆಹಲಿ (ಪಿಟಿಐ): 'ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಜನರನ್ನು ಒಡೆದು ಆಳುತ್ತಿರುವವರು, ಜನರನ್ನು ಪರಸ್ಪರ ಎತ್ತಿಕಟ್ಟುವಲ್ಲಿ ತೊಡಗಿರುವವರೇ ನಿಜವಾದ 'ದೇಶ ವಿರೋಧಿ'ಗಳು' ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಶುಕ್ರವಾರ ಹೇಳಿದ್ದಾರೆ.

'ಧರ್ಮ, ಭಾಷೆ, ಜಾತಿ ಹಾಗೂ ಲಿಂಗದ ಆಧಾರದ ಮೇಲೆ ಜನರ ನಡುವೆ ಒಡಕು ಮೂಡಿಸಲು ಯತ್ನಿಸಲಾಗುತ್ತಿದೆ. ಆದರೆ, ಜನರು ನೀಡಿರುವ ಅಧಿಕಾರವನ್ನು ಆಡಳಿತ ನಡೆಸಲು ಹಾಗೂ ಕರ್ತವ್ಯ ನಿಭಾಯಿಸಲು ಬಳಕೆ ಮಾಡಿದಾಗ ಮಾತ್ರ ಸಂವಿಧಾನದ ಆಶಯ ಈಡೇರುತ್ತದೆ' ಎಂದು ಅವರು ಎಚ್ಚರಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಇಂಗ್ಲಿಷ್ ನಿಯತಕಾಲಿಕ 'ದಿ ಟೆಲಿಗ್ರಾಫ್'ನಲ್ಲಿ ಲೇಖನ ಬರೆದಿರುವ ಅವರು, 'ಸಂವಿಧಾನದ ಮೇಲೆ ವ್ಯವಸ್ಥಿತವಾಗಿ ನಡೆಯುತ್ತಿರುವ ದಾಳಿಯನ್ನು ತಡೆಯಲು ದೇಶದ ಜನತೆ ಕಾರ್ಯಪ್ರವೃತ್ತರಾಗಬೇಕು' ಎಂದಿದ್ದಾರೆ.

'ದೇಶ ಈಗ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದೆ. ರಾಜಕೀಯ ಪಕ್ಷಗಳಾಗಿ, ಯೂನಿಯನ್‌ಗಳು, ಸಂಘ–ಸಂಸ್ಥೆಗಳು, ನಾಗರಿಕ ಸಂಘಟನೆಗಳಾಗಿ ಅಥವಾ ವೈಯಕ್ತಿಕ ಮಟ್ಟದಲ್ಲಾದರೂ ಸರಿ, ಎಲ್ಲರೂ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಬೇಕು. ಅಂಬೇಡ್ಕರ್ ಅವರ ಜೀವನ ಹಾಗೂ ಅವರ ಹೋರಾಟವೇ ನಮಗೆ ಪಾಠ ಹಾಗೂ ದಾರಿದೀಪ' ಎಂದೂ ಸೋನಿಯಾ ಅವರು ಲೇಖನದಲ್ಲಿ ಪ್ರತಿಪಾದಿಸಿದ್ದಾರೆ.

'ಭಿನ್ನಾಭಿಪ್ರಾಯ ಮತ್ತು ಆರೋಗ್ಯಕರ ಚರ್ಚೆಗಳು ಇರಬೇಕು. ಆದರೆ, ಅಂತಿಮವಾಗಿ ದೇಶದ ಹಿತಕ್ಕಾಗಿ ಎಲ್ಲರೂ ಶ್ರಮಿಸಬೇಕು ಎಂಬುದೇ ನಮಗೆ ಮೊದಲ ಪಾಠವಾಗಬೇಕು. ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ಗಮನಿಸಿದಾಗ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಅಂಬೇಡ್ಕರ್, ಸರ್ದಾರ ವಲ್ಲಭಭಾಯಿ ಪಟೇಲ್ ಹಾಗೂ ಇತರ ನಾಯಕರ ನಡುವೆ ಭಾರಿ ಭಿನ್ನಾಭಿಪ್ರಾಯಗಳಿದ್ದವು ಎಂಬುದು ತಿಳಿಯುತ್ತದೆ' ಎಂದಿದ್ದಾರೆ.

'ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲ ಮಹಾನ್ ವ್ಯಕ್ತಿಗಳು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಏಕೈಕ ಉದ್ದೇಶ ಸಾಧನೆಗಾಗಿ ದುಡಿದರು ಎಂಬುದೂ ತಿಳಿಯುತ್ತದೆ' ಎಂದಿರುವ ಅವರು, 'ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ಅವರ ಕಾರ್ಯನಿರ್ವಹಣೆಯೇ ಇಂಥ ಆದರ್ಶಮಯ ತತ್ವಕ್ಕೆ ನಿದರ್ಶನ' ಎಂದು ಹೇಳಿದ್ದಾರೆ.

ನಾಯಕನ ಆರಾಧನೆ ದೇಶಕ್ಕೆ ಅಪಾಯಕಾರಿ: ಖರ್ಗೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಬಲವಂತವಾಗಿ ಜನರನ್ನು ಬಾಯಿ ಮುಚ್ಚಿಸುವ ಸಂಸ್ಕೃತಿ ಹಾಗೂ ರಾಷ್ಟ್ರ ವಿರೋಧಿ ಪಟ್ಟ ಕಟ್ಟುವ ಮನಃಸ್ಥಿತಿ ಮೇಲುಗೈ ಸಾಧಿಸುತ್ತಿರುವುದು ಭವಿಷ್ಯದಲ್ಲಿ ಭಾರತೀಯ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಶಕ್ಕೆ ಕಾರಣವಾಗಲಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಹಿನ್ನೆಲೆಯಲ್ಲಿ ಸಂದೇಶ ನೀಡಿರುವ ಅವರು, 'ಸಂಸತ್, ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವಿನ ಚರ್ಚೆಗೆ ವೇದಿಕೆಯಾಗಬೇಕು. ಆದರೆ, ಅದನ್ನು ಆಡಳಿತ ಪಕ್ಷವು ಹೋರಾಟದ ಅಖಾಡವಾಗಿ ಪರಿವರ್ತಿಸಿದೆ' ಎಂದು ವಿಷಾದಿಸಿದ್ದಾರೆ.

ಪ್ರಜಾಸತ್ತಾತ್ಮಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಹಾಗೂ ನ್ಯಾಯದ ಅನುಷ್ಠಾನದಲ್ಲಿ ಅಂಬೇಡ್ಕರ್ 'ಚಾಂಪಿಯನ್' ಆಗಿದ್ದಾರೆ. ದೇಶವನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಪಡಿಸುವಲ್ಲಿ ಅವರಿಗಿದ್ದ ಬದ್ಧತೆ ನಮಗೆ ಅನುಕರಣೀಯ. ಜಾತಿ ಪದ್ಧತಿ, ಲಿಂಗ ಅಸಮಾನತೆಯ ನಿರ್ಮೂಲನೆಯಲ್ಲಿ ಅವರ ಶ್ರಮ ಎಲ್ಲರಿಗೂ ಮಾದರಿ ಎಂದು ಸ್ಮರಿಸಿದ್ದಾರೆ.

'ರಾಜಕಾರಣದಲ್ಲಿ ಭಕ್ತಿ ಅಥವಾ ನಾಯಕನ ಆರಾಧನೆಯು ಅಪಾಯಕಾರಿ ಎಂದು ಅಂಬೇಡ್ಕರ್ ಈ ಮೊದಲೇ ಎಚ್ಚರಿಸಿದ್ದಾರೆ. ಆದರೆ, ಪ್ರಸಕ್ತ ದೇಶದ ರಾಜಕೀಯದಲ್ಲಿ ಈ ಮನಃಸ್ಥಿತಿಯೇ ತುಂಬಿದೆ. ಧಾರ್ಮಿಕ ತಳಹದಿಯಲ್ಲಿ ಭಕ್ತಿಯು ಆತ್ಮದ ಮುಕ್ತಿಗೆ ದಾರಿಯಾಗಬೇಕು. ಆದರೆ, 'ಭಕ್ತಿ' ಪ್ರೇರಿತ ರಾಜಕೀಯ ಸಲ್ಲದು. ಒಂದು ವೇಳೆ ಇದು ರಾಜಕಾರಣಕ್ಕೆ ಪ್ರವೇಶಿಸಿದರೆ ಆ ಕ್ಷೇತ್ರ ಅವನತಿ ಹೊಂದಿ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ' ಎಂದು ಅಂಬೇಡ್ಕರ್ ಹೇಳಿಕೆಯನ್ನು ಉಲ್ಲೇಖಿಸಿರುವ ಖರ್ಗೆ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಪ್ರಸ್ತಾಪಿಸದೆ ಟೀಕಿಸಿದ್ದಾರೆ.

ಪ್ರಸ್ತುತ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಬೇಕೇ ಅಥವಾ ಸರ್ವಾಧಿಕಾರಿ ಧೋರಣೆಯನ್ನು ಬೆಂಬಲಿಸಬೇಕೇ ಎಂಬ ಬಗ್ಗೆ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭ ಬಂದಿದೆ ಎಂದಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಂಬೇಡ್ಕರ್ ಅವರಿಗೆ ಗೌರವ ಸೂಚಿಸಿದ್ದು, 'ಅಂಬೇಡ್ಕರ್ ಅವರ ಪ್ರಜಾಸತ್ತಾತ್ಮಕ ಆಶಯಗಳೇ ನಮಗೆ ದಾರಿದೀಪವಾಗಿವೆ, ಅವು ನಮ್ಮ ಶಕ್ತಿಯೂ ಆಗಿವೆ' ಎಂದು ಹೇಳಿದ್ದಾರೆ.

'ಅಂಬೇಡ್ಕರ್ ಮಾತಿನ ಅವಹೇಳನ'

'ಸಂವಿಧಾನ ಕರಡು ರಚನಾ ಸಮಿತಿ ಸಭೆಯಲ್ಲಿ ಕೊನೆಯ ಭಾಷಣ ಮಾಡಿದ ಅಂಬೇಡ್ಕರ್, ಜಾತಿ ಪದ್ಧತಿಯು ಸಮಾಜದಲ್ಲಿನ ಭ್ರಾತೃತ್ವದ ಬೇರುಗಳನ್ನೇ ನಾಶ ಮಾಡುತ್ತದೆ. ಇಂಥ ವ್ಯವಸ್ಥೆಯೇ ದೇಶ ವಿರೋಧಿ ಎಂದು ಹೇಳಿದ್ದರು. ಈಗ ಅಧಿಕಾರದಲ್ಲಿ ಇರುವವರು ಅಂಬೇಡ್ಕರ್ ಅವರ ಈ ಮಾತುಗಳನ್ನು ಅವಹೇಳನ ಮಾಡುತ್ತಿದ್ದಾರೆ' ಎಂದು ಸೋನಿಯಾ ಗಾಂಧಿ ಹೇಳಿದ್ದಾರೆ.

'ಜಾತಿ ಪದ್ಧತಿಯು ನಮ್ಮಲ್ಲಿ ಪ್ರತ್ಯೇಕತೆಗೆ ಕಾರಣವಾಗುತ್ತದೆ. ಮತ್ಸರ ಹುಟ್ಟಿಸುತ್ತದೆ. ಕೊನೆಗೆ ಭಾರತೀಯರನ್ನು ಇದು ವಿಭಜನೆ ಮಾಡುತ್ತದೆ ಎಂದು ಅಂಬೇಡ್ಕರ್ ವಿವರಿಸಿದ್ದರು' ಎಂದು ಲೇಖನದಲ್ಲಿ ಹೇಳಿದ್ದಾರೆ.

'ಭಾರತೀಯರಲ್ಲಿ ಸಹೋದರತ್ವ ಬೆಳೆಸಬೇಕು ಎಂಬುದು ಅಂಬೇಡ್ಕರ್ ಅವರಿಂದ ನಾವು ಕಲಿಯಬೇಕಾದ ಎರಡನೇ ಪಾಠವಾದರೆ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗೆ ಹೋರಾಡಬೇಕು ಎಂಬುದು ಮೂರನೇ ಪಾಠ' ಎಂದು ವಿವರಿಸಿದ್ದಾರೆ.

ನ್ಯಾಯಮೂರ್ತಿ ಹುದ್ದೆಗೆ ನಿವೃತ್ತ ನ್ಯಾಯಾಧೀಶರ ಹೆಸರು

ನವದೆಹಲಿ (ಪಿಟಿಐ): ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ, ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಶಿಫಾರಸು ಮಾಡಿದೆ.

ನಿವೃತ್ತ ನ್ಯಾಯಾಧೀಶ ರೂಪೇಶ ಚಂದ್ರ ವಾರ್ಷ್ಣೇಯ್ ಅವರ ಹೆಸರನ್ನು ಕೊಲಿಜಿಯಂ ಶಿಫಾರಸು ಮಾಡಿದೆ. ರೂಪೇಶಚಂದ್ರ ಅವರು 1987ರ ಸೆ.28ರಂದು ಮಧ್ಯಪ್ರದೇಶ ನ್ಯಾಯಾಂಗ ಸೇವೆಗೆ ಸೇರಿದ್ದರು.

'ವಾರ್ಷ್ಣೇಯ್ ಅವರು ವೈಯಕ್ತಿಕವಾಗಿ ಹಾಗೂ ವೃತ್ತಿ ಜೀವನದಲ್ಲಿ ಒಳ್ಳೆಯ ಚಾರಿತ್ರ್ಯ ಹೊಂದಿದ್ದಾರೆ. ಅವರ ಪ್ರಾಮಾಣಿಕತೆ ಹಾಗೂ ಸಭ್ಯತೆ ಕುರಿತಂತೆ ಯಾವುದೇ ವ್ಯತಿರಿಕ್ತ ಅಭಿಪ್ರಾಯಗಳು ಕಂಡುಬಂದಿಲ್ಲ' ಎಂದು ಹೇಳಿರುವ ಕೊಲಿಜಿಯಂ, ಈ ಸಂಬಂಧ ಗುಪ್ತಚರ ಸಂಸ್ಥೆ (ಐ.ಬಿ) ನೀಡಿರುವ ವರದಿಯನ್ನು ಉಲ್ಲೇಖಿಸಿದೆ. ಈ ಹಿಂದೆ, ಬಹಾರುಲ್ ಇಸ್ಲಾಂ (1980), ಫಾತಿಮಾ ಬೀವಿ (1989) ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸ್ಥಾನದಿಂದ ನಿವೃತ್ತರಾದ ಮೇಲೆ ಅವರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿತ್ತು.

ರಾಮದೇವ್ ಬಂಧನಕ್ಕೆ ತಡೆ

ಜೋಧಪುರ, ರಾಜಸ್ಥಾನ (ಪಿಟಿಐ): ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆರೋಪದ ಪ್ರಕರಣದಲ್ಲಿ ಯೋಗ ಗುರು ರಾಮದೇವ್ ಅವರನ್ನು ಬಂಧಿಸದಂತೆ ರಾಜಸ್ಥಾನ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ವಿಚಾರಣೆಗಾಗಿ ಮೇ 20ರಂದು ತನಿಖಾಧಿಕಾರಿ ಮುಂದೆ ಹಾಜರಾಗುವಂತೆ ರಾಮದೇವ್ ಅವರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ರಾಮದೇವ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಮನೋಜಕುಮಾರ್ ಗರ್ಗ್ ನಡೆಸಿದರು.

ರಾಜಸ್ಥಾನ: ಬಿಕ್ಕಟ್ಟು ಶಮನ ಹೊಣೆ ಕಮಲ್‌ನಾಥ್‌ಗೆ

ನವದೆಹಲಿ (ಪಿಟಿಐ): ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ನಡೆಸಿದ ಉಪವಾಸ ಸತ್ಯಾಗ್ರಹದಿಂದಾಗಿ ಪಕ್ಷದ ರಾಜಸ್ಥಾನ ಘಟಕದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟನ್ನು ಬಗೆಹರಿಸುವ ಹೊಣೆಯನ್ನು ಹಿರಿಯ ನಾಯಕ ಕಮಲ್ ನಾಥ್ ಅವರಿಗೆ ಕಾಂಗ್ರೆಸ್ ವಹಿಸಿದೆ.

ಕಮಲ್‌ನಾಥ್ ಅವರನ್ನು 'ಟ್ರಬಲ್‌ಶೂಟರ್' ಎಂದೇ ಪರಿಗಣಿಸಲಾಗುತ್ತದೆ. ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಪೈಲಟ್ ಅವರನ್ನು ಗುರುವಾರ ಭೇಟಿ ಮಾಡಿ, ಚರ್ಚಿಸಿದ್ದಾರೆ.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ವೇಳೆ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಿರಶನ ನಡೆಸಿದ್ದೆ. ಅಷ್ಟೇ ನನ್ನ ಬೇಡಿಕೆಯಾಗಿತ್ತು. ಅದು ಪಕ್ಷದ ವಿರುದ್ಧ ನಡೆಸಿದ ಸತ್ಯಾಗ್ರಹ ವಲ್ಲ ಎಂಬುದಾಗಿ ಪೈಲಟ್ ಅವರು ಉಭಯ ನಾಯಕರಿಗೆ ಸ್ಪಷ್ಟಪಡಿಸಿದರು' ಎಂದು ಮೂಲಗಳು ಹೇಳಿವೆ.

'ಕಮಲ್ ನಾಥ್ ಹಾಗೂ ಪೈಲಟ್ ಅವರ ನಡುವಿನ ಸೌಹಾರ್ದದ ಸಭೆ ಇದಾಗಿತ್ತು. ಯಾವುದೇ ನಿರ್ದಿಷ್ಟ ಫಲಿತಾಂಶ ಹೊರಹೊಮ್ಮಿಲ್ಲ' ಎಂದು ಇವೇ ಮೂಲಗಳು ಹೇಳಿವೆ.

ವಸುಂಧರರಾಜೆ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಗಳ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಪೈಲಟ್ ಅವರು ಮಂಗಳವಾರ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು.

ಪೈಲಟ್ ಬಣದ ವಾದ: ಭ್ರಷ್ಟಾಚಾರ ವಿಷಯ ಮುಂದಿಟ್ಟುಕೊಂಡು ಸತ್ಯಾಗ್ರಹ ಕೈಗೊಂಡಿದ್ದ ಪೈಲಟ್ ಅವರ ನಡೆಯನ್ನು ಸಮರ್ಥಿಸಿಕೊಳ್ಳುತ್ತಿರುವ ಅವರ ಬೆಂಬಲಿಗರು, ಪೈಲಟ್ ಅವರ ಹೋರಾಟಕ್ಕೆ ಪಕ್ಷ ವಿರೋಧಿ ಹಣೆಪಟ್ಟಿ ಕಟ್ಟಬಾರದು ಎನ್ನುತ್ತಾರೆ.

'ಅದಾನಿ ಸಮೂಹದ ವಿರುದ್ಧದ ಆರೋಪಗಳನ್ನು ಉಲ್ಲೇಖಿಸುತ್ತಿರುವ ಪಕ್ಷವು, ಕರ್ನಾಟಕ ಚುನಾವಣೆಯಲ್ಲಿ ಭ್ರಷ್ಟಾಚಾರ ವಿಷಯವನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಮುಂದಾಗಿದೆ. ಪೈಲಟ್ ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಟ ಕೈಗೊಂಡಿದ್ದಾರೆ' ಎಂದೂ ಅವರು ಹೇಳುತ್ತಾರೆ.

ಕೇಜ್ರಿವಾಲ್‌ಗೆ ಸಿಬಿಐ ಸಮನ್ಸ್

ಪ್ರಜಾವಾಣಿ ವಾರ್ತೆ

ಅರವಿಂದ ಕೇಜ್ರಿವಾಲ್

ನವದೆಹಲಿ: ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಏ.16ರಂದು ಬೆಳಿಗ್ಗೆ 11 ಗಂಟೆಗೆ ಸಿಬಿಐ ಕೇಂದ್ರ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

'ಇದು ಕೇಜ್ರಿವಾಲ್ ವಿರುದ್ಧದ ಪಿತೂರಿ' ಎಂದು ಎಎಪಿ ಟೀಕಿಸಿದೆ. ಇದೇ ಪ್ರಕರಣದಲ್ಲಿ ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಫೆ. 26ರಂದು ಬಂಧಿಸಿದೆ.

'ಈ ಪ್ರಕರಣದಲ್ಲಿ ಲಂಚದ ಹಣ ಕೈಗಳನ್ನು ಬದಲಾಯಿಸಿರುವ ಬಗ್ಗೆ ಕೇಜ್ರಿವಾಲ್ ಅವರಿಗೆ ಮಾಹಿತಿ ಇದೆ ಎಂಬುದಾಗಿ ಆರೋಪಿಯೊಬ್ಬ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ. 'ಆರೋಪಿ ದಿನೇಶ್ ಅರೋರಾ, ಕೇಜ್ರಿವಾಲ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದ್ದರು. ಈ ಭೇಟಿ ನಡೆದ ವೇಳೆ, ಮತ್ತೊಬ್ಬ ಆರೋಪಿ ಇದ್ದರು' ಎಂದು ಹೇಳಿವೆ.

'ಆರೋಪಿ ವಿಜಯ ನಾಯರ್ ಹಾಗೂ ಆತನ ಆಪ್ತ ಸಹಾಯಕರು 'ಫೇಸ್ ಟೈಮ್ ಚಾಟ್' ಆ್ಯಪ್ ಮೂಲಕ ಆಯೋಜಿಸಿದ್ದ ವಿಡಿಯೊ ಚಾಟ್‌ನಲ್ಲಿ ಕೇಜ್ರಿವಾಲ್ ಭಾಗಿಯಾಗಿದ್ದರು' ಎಂದು ಮೂಲಗಳು ಹೇಳಿವೆ.

ಬಿಜೆಪಿ ವಿರುದ್ಧ ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವ ಹಾಗೂ ಆಮ್ ಆದ್ಮಿ ಪಕ್ಷವನ್ನು ವಿರೋಧ ಪಕ್ಷಗಳ ಮೈತ್ರಿಕೂಟದೊಳಗೆ ಸೇರಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಈ ನಡುವೆಯೇ, ಸಿಬಿಐ ಈ ಕ್ರಮ ಕೈಗೊಂಡಿದೆ.

ಕೇಂದ್ರದ ವಿರುದ್ಧ ಎಎಪಿ ವಾಗ್ದಾಳಿ: 'ಕೇಜ್ರಿವಾಲ್ ಅವರು ಅದಾನಿ ಪ್ರಕರಣದ ಬಗ್ಗೆ ಧ್ವನಿ ಎತ್ತಿದ ಕಾರಣ ಸಿಬಿಐ ಸಮನ್ಸ್ ಜಾರಿ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರದ ಭ್ರಷ್ಟಾಚಾರಗಳ ವಿರುದ್ಧದ ಹೋರಾಟವನ್ನು ಇಂಥ ನೋಟಿಸ್‌ಗಳಿಂದ ಹತ್ತಿಕ್ಕಲಾಗದು' ಎಂದು ಎಎಪಿ ತಿರುಗೇಟು ನೀಡಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪಕ್ಷದ ನಾಯಕ ಸಂಜಯ್ ಸಿಂಗ್, 'ಸಿಬಿಐ ಸಮನ್ಸ್ ಕೇಜ್ರಿವಾಲ್ ಅವರನ್ನು ಬಂಧಿಸಲು ಮಾಡಿರುವ ಪಿತೂರಿ' ಎಂದು ಆರೋಪಿಸಿದರು.

'ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಡಿಯಿಂದ ಮುಡಿಯವರೆಗೆ ಭ್ರಷ್ಟವಾಗಿದೆ. 'ಮಹಾ' ಭ್ರಷ್ಟ ಸರ್ಕಾರ ಮತ್ತು 'ಮಹಾ' ಭ್ರಷ್ಟ ಪ್ರಧಾನಿ ವಿರುದ್ಧದ ಹೋರಾಟ ನಿಲ್ಲದು' ಎಂದು ವಾಗ್ದಾಳಿ ನಡೆಸಿದರು. ಏ.16ರಂದು ಕೇಜ್ರಿವಾಲ್ ಸಿಬಿಐ ಕಚೇರಿ ಎದುರು ವಿಚಾರಣೆಗೆ ಹಾಜರಾಗಲಿದ್ದಾರೆ ಎಂದು ತಿಳಿಸಿದರು.

ವಿಪಕ್ಷಗಳಿಂದ ಬೆಂಬಲ: ವಿರೋಧ ಪಕ್ಷಗಳು ಕೇಜ್ರಿವಾಲ್ ಅವರಿಗೆ ಬೆಂಬಲ ನೀಡಿವೆ. ಸಮನ್ಸ್ ನೀಡಿರುವುದನ್ನು ಖಂಡಿಸಿರುವ ಆರ್‌ಜೆಡಿ ಸಂಸದ ಮನೋಜ್ ಕೆ. ಝಾ, 'ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಎಲ್ಲ ಪ್ರತಿಪಕ್ಷಗಳ ನಾಯಕರನ್ನು ಗ್ಯಾಸ್ ಚೇಂಬರ್ ಒಳಗೆ ಹಾಕಿ ಮುಚ್ಚಿಬಿಡಲಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಷ್ಟ್ರ ಸರ್ಕಾರದ ಪ್ರಸ್ತಾವಕ್ಕೆ ರಾಜ್ಯ ಮಹಿಳಾ ಆಯೋಗ ಸ್ವಾಗತ

ವಿಧವೆ ಬದಲಿಗೆ 'ಗಂಗಾ ಭಾಗೀರಥಿ' ಪದ ಬಳಕೆ

ಮುಂಬೈ (ಪಿಟಿಐ): ವಿಧವೆಯರನ್ನು ಸಮಾಜದಲ್ಲಿ ಗೌರವ ಸೂಚಕವಾಗಿ 'ಗಂಗಾ ಭಾಗೀರಥಿ'ಯರು ಎಂದು ಕರೆಯುವ ಸಂಬಂಧ ಪ್ರಸ್ತಾವ ಸಲ್ಲಿಸಲು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಮಹಾರಾಷ್ಟ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಮಂಗಲ್ ಪ್ರಭಾತ್ ಲೋಢ ಅವರ ಕ್ರಮವನ್ನು ಮಹಾರಾಷ್ಟ್ರ ರಾಜ್ಯ ಮಹಿಳಾ ಆಯೋಗ ಸ್ವಾಗತಿಸಿದೆ.

'ವಿಧವೆ' ಎನ್ನುವ ಬದಲು 'ಗಂಗಾ ಭಾಗೀರಥಿ' ಎಂಬ ಪದ ಬಳಸುವುದು ಸೂಕ್ತ. ಈ ಬಗ್ಗೆ ಪ್ರಸ್ತಾವ ಸಲ್ಲಿಸುವಂತೆ ಸಚಿವರು ಸೂಚಿಸಿದ್ದರು. ಇದಕ್ಕೆ ಕಾಂಗ್ರೆಸ್ ಸೇರಿದಂತೆ ಸಾಮಾಜಿಕ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು. ಸಚಿವರು ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿತ್ತು.

ಎನ್‌ಸಿಪಿ ನಾಯಕಿ ಹಾಗೂ ಸಂಸದೆ ಸುಪ್ರಿಯಾ ಸುಳೆ ಕೂಡ ಸರ್ಕಾರದ ನಡೆಯನ್ನು ಖಂಡಿಸಿ, ಪ್ರಸ್ತಾವ ಕೈಬಿಡುವಂತೆ ಒತ್ತಾಯಿಸಿದ್ದರು.

'ಸಮಾಜಕ್ಕೆ ರಾಜಮಾತೆ ಜೀಜಾಬಾಯಿ, ಅಹಿಲ್ಯಾಬಾಯಿ ಹೋಳ್ಕರ್, ಸಾವಿತ್ರಿಬಾಯಿ ಫುಲೆ ಅವರಂತಹ ಧೀಮಂತ ನಾರಿಯರು ಸೇವೆ ಸಲ್ಲಿಸಿದ್ದಾರೆ. ಪದ ಬಳಕೆಯು ಸೂಕ್ಷ್ಮವಾದ ವಿಷಯ. ವಿಧವೆಯರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಸರ್ಕಾರ ಎನ್‌ಜಿಒಗಳು, ಸಂಘ–ಸಂಸ್ಥೆಗಳ ಮುಖ್ಯಸ್ಥರನ್ನು ಒಳಗೊಂಡ ಸಮಿತಿ ರಚಿಸಬೇಕು' ಎಂದು ಸಂಸದೆ ಸಲಹೆ ನೀಡಿದ್ದರು.

ಇದರ ಬೆನ್ನಲ್ಲೇ ಆಯೋಗದ ಅಧ್ಯಕ್ಷೆ ರೂಪಾಲಿ ಚಕಂಕರ್, 'ಸಚಿವರ ನಿರ್ಧಾರ ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ' ಎಂದು ಸರಣಿ ಟ್ವೀಟ್‌ನಲ್ಲಿ ಬಣ್ಣಿಸಿದ್ದಾರೆ.

'ಸಚಿವರ ನಡೆ ಸರಿಯಾಗಿಯೇ ಇದೆ. ವಿಧವೆಯರ ಬಗ್ಗೆ ಗೌರವ ಸೂಚಕ ಪದ ಬಳಕೆ ಬಗ್ಗೆ ಪರಿಶೀಲಿಸುವಂತೆ ಆಯೋಗ ಕೂಡ ಸರ್ಕಾರಕ್ಕೆ ಕೋರಿತ್ತು. 'ಪೂರ್ಣಾಂಗಿ' ಎಂಬ ಪದ ಬಳಸುವಂತೆಯೂ ಶಿಫಾರಸು ಮಾಡಿತ್ತು. ವಿಧವೆ ಎಂದು ಕರೆಯುವುದು ಮಹಿಳೆಗೆ ಸೂಚಿಸುವ ಅಗೌರವವಾಗಿದೆ' ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಂಗವಿಕಲರನ್ನು 'ದಿವ್ಯಾಂಗರು' ಎಂದು ಕರೆದಿದ್ದಾರೆ. ಇದರಿಂದ ಅವರಿಗೆ ಸಾಮಾಜಿಕ ಗೌರವ ಸಿಗುವಂತಾಗಿದೆ. ಅವರ ಬಗ್ಗೆ ಸಮಾಜ ತಳೆದಿದ್ದ ಮನಃಸ್ಥಿತಿಯೂ ಬದಲಾಗಿದೆ. ಹಾಗಾಗಿ, ವಿಧವೆಯನ್ನು 'ಗಂಗಾ ಭಾಗೀರಥಿ' ಎಂದು ಕರೆಯುವ ಬಗ್ಗೆ ಪ್ರಸ್ತಾವ ಸಿದ್ಧಪಡಿಸಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಸಚಿವರು, ಪ್ರತಿಪಕ್ಷಗಳ ವಿರೋಧಕ್ಕೆ ಸಮರ್ಥನೆ ನೀಡಿದ್ದಾರೆ.

SAINIK SCHOOL BIJAPUR - 586 108
(KARNATAKA)
(Joint venture of Ministry of Defence and Govt of Karnataka)

RECRUITMENT OF STAFF ON REGULAR BASIS

1. Applications are invited for the post mentioned below on Regular basis :-

Sl.	Name of Post	No of Post	Age	Qualifications	Pay
(a)	Accountant (Regular) (Reserved for SC Category -General category can also apply)*	01 (One)	Should be between 18 and 50 years as on 01 Jun 2023	i) B.Com. (ii) Adequate knowledge of Double Entry system of accounting (or) should have work as an Accountant for at least 10 years in Government and Private organization and must be fully conversant with maintenance of accounts in double entry system. **Desirable :-** (i) Minimum 2nd Division / Class Commerce Graduate from a recognized university. (ii) Knowledge of double entry system of accounting. (iii) Fully conversant with Tally and modern Accounting Practices preferably in a fully automated accounting environment. (iv) Must be conversant with maintenance of School accounts, ability to handle Bank Reconciliation, Pay Bills, Trial Balance, Balance Sheets, PF Statements, Calculation of Pay Fixation & Pension, TDS and New Pension Scheme etc. (v) Ability to correspond in English & Kannada independently.	Level-6, Rs 35400 -112400 (Pre-revised PB-2, Rs 9300-34800 +GP Rs 4200/-)

***In case of non-availability of suitable candidates from "Reserved Category", the vacancy will be filled from General Category.**

2. **Pay and Perks.** Rent free accommodation, Pay band, Grade pay, Transport Allowance with DA and Medical Allowance as per Sainik Schools Society Rules & Regulations. Subsidized education for two children, LTC, Bonus, New Pension etc as per Sainik Schools Society Rules & Regulations.
3. **Other Conditions.** (i) Employment conditions / Service Rules are in consonance with Sainik Schools Society Rules & Regulations. (ii) Job is transferable within All India liability. (iii) Selected candidate should be ready to take responsibilities usual to a residential school.
4. **How to Apply.** (i) Apply on application form downloaded from School website www.ssbj.in (notification-vacancy link). (ii) Duly filled applications alongwith attested copies of documents and one self addressed envelope with postage stamp of Rs 40/- (for communicating through Speed Post) affixed must reach **Principal Sainik School Bijapur - 586108 (Karnataka).** (iii) **Last date for receipt of Applications in Sainik School Bijapur will be 21 days from the date of publication of the advertisement.** (iv) Applications should be accompanied by one A/C payee Demand Draft of **Rs. 500/-** (non- refundable) in favour of **Principal, Sainik School Bijapur** payable on State Bank of India Sainik School Campus Bijapur Branch (Code 3163). (v) Applications received after the due date or without the supporting documents or prescribed application fee or not in the prescribed format will be rejected without any intimation.
5. The school will not be responsible for any postal delay or missing of envelope and no claim will be entertained in this regard. **Only short listed Candidates will be called for Written Test / Practical Test/ Interview.** No TA/DA for attending the selection test/interview or for joining the post is admissible as per rules of the school.
6. Candidates are to enclose the following documents alongwith the application: -
   (a) Demand Draft for Rs 500/-.
   (b) Affix Passport size photograph at the space provided in the application form.
   (c) Self addressed envelope with stamps worth Rs 40/-.
   (d) Copies of educational and experience certificates.
   (e) In case, the Applicant is SC/ST/OBC category, the Applicant is to attach a copy of Caste / Category Certificate issued by the concerned authority.
7. The school administration reserves the right to cancel the vacancy due to administrative/policy reasons.

Sd/- PRINCIPAL
SAINIK SCHOOL BIJAPUR

ಲಂಡನ್ ಮಾರುಕಟ್ಟೆಯಲ್ಲಿ ದರ ಹೆಚ್ಚಳ ಪರಿಣಾಮ

ರೊಬಸ್ಟಾ ಕಾಫಿ ಬೆಲೆ ₹6 ಸಾವಿರಕ್ಕೆ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಸತತವಾಗಿ ಏರಿಕೆ ಕಾಣುತ್ತಿರುವ ರೊಬಸ್ಟಾ ಕಾಫಿ ದರವು ಹೊಸ ದಾಖಲೆ ಬರೆದಿದೆ. 50 ಕೆ.ಜಿ ತೂಕದ ರೊಬಸ್ಟಾ ಚೆರ್ರಿ ಮೂಟೆಯೊಂದಕ್ಕೆ ₹ 6 ಸಾವಿರ ಧಾರಣೆ ಬಂದಿದ್ದು, ಇದು ಸಾರ್ವಕಾಲಿಕ ಗರಿಷ್ಠ ಬೆಲೆಯಾಗಿದೆ.

ಲಂಡನ್ ಮಾರುಕಟೆಯಲ್ಲಿ ರೊಬಸ್ಟಾ ಕಾಫಿ ಬೀನ್ಸ್ ಟನ್‌ಗೆ 2,411 ಡಾಲರ್ ಆಸುಪಾಸಿನಲ್ಲಿ ಶುಕ್ರವಾರ ಮಾರಾಟವಾಗಿದೆ. ಪರಿಣಾಮ ಸ್ಥಳೀಯ ಕಾಫಿ ಮಾರುಕಟ್ಟೆಯಲ್ಲೂ ಧಾರಣೆ ಮತ್ತು ಬೇಡಿಕೆ ಹೆಚ್ಚಳವಾಗಿದೆ. ಸದ್ಯ 1 ಕೆ.ಜಿ ರೊಬಸ್ಟಾ ಕಾಫಿ ಬೀನ್ಸ್‌ಗೆ ₹ 220 ದರ ಇದೆ.

ಕಳಸ ತಾಲ್ಲೂಕಿನಲ್ಲಿ ಈ ವರ್ಷದ ಕಾಫಿ ಫಸಲು ಶೇ 30ರಷ್ಟು ಕಡಿಮೆ ಇದೆ. ಜನವರಿಯಲ್ಲಿ ಬೆಲೆ ₹5 ಸಾವಿರ ತಲುಪಿದಾಗ ಬಹುತೇಕ ಬೆಳೆಗಾರರು ಕಾಫಿ ಮಾರಿದ್ದಾರೆ. ಸದ್ಯ ಕೆಲವೇ ಬೆಳೆಗಾರರಲ್ಲಿ ಫಸಲು ಉಳಿದಿದ್ದು, ಅವರೂ ಬೆಲೆ ಇನ್ನಷ್ಟು ಏರುವ ನಿರೀಕ್ಷೆಯಲ್ಲಿದ್ದಾರೆ.

ರೊಬಸ್ಟಾ ಕಾಫಿ ಬೆಳೆಯುವ ಇಂಡೊನೇಷ್ಯಾ, ವಿಯಟ್ನಾಂ ಹಾಗೂ ಅರೇಬಿಕಾ ಕಾಫಿ ತಳಿ ಬೆಳೆಯುವ ಬ್ರೆಜಿಲ್‌ನಲ್ಲಿ ಈ ಬಾರಿ ಪ್ರತಿಕೂಲ ಹವಾಮಾನದಿಂದ ಇಳುವರಿ ಕಡಿಮೆಯಾಗಿದೆ. ಹೀಗಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಪೂರೈಕೆ ಕುಗ್ಗಿದ್ದು, ಬೆಲೆ ಸತತವಾಗಿ ಏರುತ್ತಲೇ ಇದೆ ಎನ್ನುತ್ತಾರೆ ಕಾಫಿ ವ್ಯಾಪಾರಿಗಳು.

‘ಸದ್ಯಕ್ಕೆ ಬೆಳೆಗಾರರ ಕೈಯಲ್ಲಿ ಶೇ 10ರಷ್ಟು ಪ್ರಮಾಣದ ಕಾಫಿಯೂ ಉಳಿದಿಲ್ಲ. ಬೆಲೆ ಏರುತ್ತಿದ್ದರೂ, ಅದರ ಲಾಭ ಪಡೆಯಲು ನಮ್ಮಂತಹ ಬೆಳೆಗಾರರಿಗೆ ಆಗುತ್ತಿಲ್ಲ’ ಎಂದು ಸಣ್ಣ ಪ್ರಮಾಣದಲ್ಲಿ ಕಾಫಿ ಬೆಳೆಯುವ ಬೆಳೆಗಾರರು ಬೇಸರ ವ್ಯಕ್ತಪಡಿಸಿದರು.

‘ಗೊದ್ರೇಜ್ ಸೆಲ್ಫಿ’ ಹೇರ್ ಕಲರ್ ಶಾಂಪೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊದ್ರೇಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಕಂಪನಿಯು (ಜಿಪಿಸಿಎಲ್), ದಕ್ಷಿಣ ಭಾರತದ ರಾಜ್ಯಗಳಿಗೆಂದೇ ವಿಶೇಷವಾಗಿ ₹15ಕ್ಕೆ ಹೊಸ ಹೇರ್ ಕಲರ್ ಶಾಂಪೂ ‘ಗೊದ್ರೇಜ್ ಸೆಲ್ಫಿ’ ಬಿಡುಗಡೆ ಮಾಡಿದೆ.

ಹೇರ್ ಕಲರ್ ಪ್ರತಿಯೊಬ್ಬರಿಗೂ ಕೈಗೆಟಕುವಂತೆ ಮತ್ತು ಸುಲಭವಾಗಿ ಬಳಸುವಂತೆ ಮಾಡುವ ಉದ್ದೇಶದಿಂದ ಇದನ್ನು ಬಿಡುಗಡೆ ಮಾಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದ ಹೇರ್ ಕಲರ್ ಶಾಂಪೂ ಮಾರುಕಟ್ಟೆಯು ₹677 ಕೋಟಿ ಮೊತ್ತದ ವಹಿವಾಟು ನಡೆಸುತ್ತಿದೆ. ಈ ವಿಭಾಗವು ದಕ್ಷಿಣ ಭಾರತದಲ್ಲಿ ಹೆಚ್ಚು ಜನಪ್ರಿಯವಾಗಿದ್ದು, ಒಟ್ಟು ವಹಿವಾಟಿನಲ್ಲಿ ಶೇ 50ರಷ್ಟು (₹336 ಕೋಟಿ) ಪಾಲು ಹೊಂದಿದೆ. ಇದಲ್ಲದೆ ಹೇರ್ ಕಲರ್ ಪೌಡರ್ ಮತ್ತು ಮೆಹಂದಿ ಬಳಕೆಯು ₹100 ಕೋಟಿಯಷ್ಟು ಇದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಈ ಉತ್ಪನ್ನ ಸಿದ್ಧಪಡಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಅಡುಗೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಆಮದು ಮಾರ್ಚ್‌ನಲ್ಲಿ ಶೇ 8ರಷ್ಟು ಹೆಚ್ಚಾಗಿ 11.35 ಲಕ್ಷ ಟನ್‌ಗೆ ತಲುಪಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ತಿಳಿಸಿದೆ.

2022ರ ಮಾರ್ಚ್‌ನಲ್ಲಿ 10.51 ಲಕ್ಷ ಟನ್ ಪ್ರಮಾಣದ ಅಡುಗೆ ಎಣ್ಣೆ ಆಮದಾಗಿತ್ತು.

2022ರ ನವೆಂಬರ್‌ನಿಂದ 2023ರ ಮಾರ್ಚ್ ಅವಧಿಯಲ್ಲಿ ಅಡುಗೆ ಎಣ್ಣೆ ಆಮದು 56.42 ಲಕ್ಷ ಟನ್‌ಗಳಿಂದ 69.80 ಲಕ್ಷ ಟನ್‌ಗಳಿಗೆ ಏರಿಕೆ ಆಗಿದೆ ಎಂದು ಮಾಹಿತಿ ನೀಡಿದೆ.

ಅಡುಗೆ ಎಣ್ಣೆ ಮಾರುಕಟ್ಟೆಯು ನವೆಂಬರ್‌ನಿಂದ ಅಕ್ಟೋಬರ್‌ವರೆಗೆ ಇರುತ್ತದೆ. ಅಡುಗೆಯೇತರ ಉದ್ದೇಶಗಳಿಗೆ ಬಳಸುವ ಎಣ್ಣೆಗಳ ಆಮದು 2022–23ರ ಐದು ತಿಂಗಳಿನಲ್ಲಿ 79,828 ಟನ್‌ಗಳಿಗೆ ತಲುಪಿದೆ. 2021–22ರ ಐದು ತಿಂಗಳಿನಲ್ಲಿ 1.52 ಲಕ್ಷ ಟನ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಇಳಿಕೆ ಆಗಿದೆ.

ದೇಶಿ ಸಂಸ್ಕರಣಾ ಕಂಪನಿಗಳ ಹಿತರಕ್ಷಣೆಗಾಗಿ ಕಚ್ಚಾ ತಾಳೆ ಎಣ್ಣೆ ಮತ್ತು ಸಂಸ್ಕರಿಸಿದ ತಾಳೆ ಎಣ್ಣೆಗಳ ಮೇಲಿನ ಸುಂಕ ವ್ಯತ್ಯಾಸವನ್ನು ಹೆಚ್ಚಿಸುವಂತೆ ಸರ್ಕಾರವನ್ನು ಅದು ಒತ್ತಾಯಿಸಿದೆ.

ವಿಮಾ ಕಂಪನಿಗಳಿಗೆ ನೆರವು?

ನವದೆಹಲಿ (ಪಿಟಿಐ): ನಷ್ಟದಲ್ಲಿ ಇರುವ ಸರ್ಕಾರಿ ಸ್ವಾಮ್ಯದ ಮೂರು ಸಾಮಾನ್ಯ ವಿಮಾ ಕಂಪನಿಗಳಿಗೆ ಕೇಂದ್ರ ಹಣಕಾಸು ಸಚಿವಾಲಯವು ಹೆಚ್ಚುವರಿಯಾಗಿ ₹3 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡುವ ಆಲೋಚನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ನ್ಯಾಷನಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಯುನೈಟೆಡ್ ಇಂಡಿಯಾ ಇನ್ಶುರೆನ್ಸ್ ಕಂಪನಿಗಳಿಗೆ ಸಚಿವಾಲಯದಿಂದ ಬಂಡವಾಳ ನೆರವು ಪಡೆಯುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹63,210
ಒಡವೆ ಚಿನ್ನ 1ಗ್ರಾಂ	₹5,815
ಬೆಳ್ಳಿ ಕೆ.ಜಿಗೆ	₹78,600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1700 (1700)
ಸೋಯಾ (ರಿಫೈನ್ಡ್)	₹1030 (1030)
ಸೂರ್ಯಕಾಂತಿ (ರಿಫೈನ್ಡ್)	₹1060(1060)
ಪಾಮೋಲಿನ್	₹947 (942)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹131

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15200
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5640

ಚಿನ್ನ: 10 ಗ್ರಾಂಗೆ ₹480 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿತು. ಚಿನ್ನದ ದರ 10 ಗ್ರಾಂಗೆ ₹480ರಷ್ಟು ಹೆಚ್ಚಾಗಿ ಗರಿಷ್ಠ ಮಟ್ಟವಾದ ₹61,780ಕ್ಕೆ ತಲುಪಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹410ರಷ್ಟು ಹೆಚ್ಚಾಗಿ ₹77,580ಕ್ಕೆ ಏರಿಕೆ ಆಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 2,041 ಡಾಲರ್ ಮತ್ತು ಬೆಳ್ಳಿ ಒಂದು ಔನ್ಸ್‌ಗೆ 25.88 ಡಾಲರ್‌ನಂತೆ ಮಾರಾಟವಾಯಿತು.

‘ಡೇರಿ ಉತ್ಪನ್ನಗಳ ಆಮದು ಇಲ್ಲ’

ನವದೆಹಲಿ (ಪಿಟಿಐ): ಡೇರಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದಿಲ್ಲ. ದೇಶದಲ್ಲಿ ಪೂರೈಕೆ ವ್ಯವಸ್ಥೆಯು ಸುಧಾರಿಸಲಿದೆ ಎಂದು ಮೀನುಗಾರಿಕೆ, ಹೈನುಗಾರಿಕೆ ಮತ್ತು ಡೇರಿ ಸಚಿವ ಪುರುಷೋತ್ತಮ್ ರೂಪಾಲ ಶುಕ್ರವಾರ ಸ್ಪಷ್ಟಪಡಿಸಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದೇಶದಲ್ಲಿ ಡೇರಿ ಉತ್ಪನ್ನಗಳು ಅದರಲ್ಲಿಯೂ ಮುಖ್ಯವಾಗಿ ಬೆಣ್ಣೆ ಮತ್ತು ತುಪ್ಪದ ದಾಸ್ತಾನು ಕಡಿಮೆ ಇದೆ. ಹೀಗಾಗಿ ಅಗತ್ಯ ಬಿದ್ದರೆ ಆಮದು ಮಾಡಿಕೊಳ್ಳಲಾಗುವುದು ಎಂದು ಸಚಿವಾಲಯದ ಹಿರಿಯ ಅಧಿಕಾರಿಗಳು ಕಳೆದವಾರ ಹೇಳಿದ್ದರು. ಈ ಕುರಿತು ಮಾತನಾಡಿದ ಅವರು, ಡೇರಿ ಉತ್ಪನ್ನಗಳ ಕೊರತೆ ಇದೆ ಎನ್ನುವುದರಲ್ಲಿ ಸತ್ಯ ಇಲ್ಲ. ಆಮದು ಮಾಡಿಕೊಳ್ಳುವುದಿಲ್ಲ ಎಂದಿದ್ದಾರೆ.

ತಗ್ಗಿದ ವರಮಾನ; ಅಂತರರಾಷ್ಟ್ರೀಯ ಇಂಧನ ಸಂಸ್ಥೆ ಮಾಹಿತಿ

ರಷ್ಯಾ ತೈಲ ರಫ್ತು 3 ವರ್ಷದ ಗರಿಷ್ಠ

ಪ್ಯಾರಿಸ್ (ಎಎಫ್‌ಪಿ): ಪಾಶ್ಚಿಮಾತ್ಯ ದೇಶಗಳ ನಿರ್ಬಂಧದ ಹೊರತಾಗಿಯೂ ರಷ್ಯಾದ ತೈಲ ರಫ್ತು ಪ್ರಮಾಣವು ಮಾರ್ಚ್‌ನಲ್ಲಿ ಮೂರು ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಆದರೆ, ವರಮಾನವು ಕಳೆದ ವರ್ಷಕ್ಕೆ ಹೋಲಿಸಿದರೆ ಇಳಿಕೆ ಕಂಡಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ) ಶುಕ್ರವಾರ ಹೇಳಿದೆ.

ರಷ್ಯಾದ ತೈಲ ರಫ್ತು ಪ್ರಮಾಣವು ಮಾರ್ಚ್‌ನಲ್ಲಿ ಪ್ರತಿ ದಿನಕ್ಕೆ 6 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಾಗಿ 81 ಲಕ್ಷ ಬ್ಯಾರಲ್‌ಗೆ ಏರಿಕೆ ಆಗಿದೆ. 2020ರ ಏಪ್ರಿಲ್‌ರ ನಂತರದ ಗರಿಷ್ಠ ಪ್ರಮಾಣ ಇದಾಗಿದೆ ಎಂದು ಐಇಎ ತಿಳಿಸಿದೆ. ಹೀಗಿದ್ದರೂ ತೈಲದಿಂದ ಬರುವ ವರಮಾನವು 12.7 ಬಿಲಿಯನ್ ಡಾಲರ್‌ನಷ್ಟು ಇದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 43ರಷ್ಟು ಕಡಿಮೆ ಇದೆ ಎಂದು ಮಾಹಿತಿ ನೀಡಿದೆ.



ರಷ್ಯಾ ದೇಶವು ಉಕ್ರೇನ್ ಮೇಲೆ 2022ರ ಫೆಬ್ರುವರಿಯಲ್ಲಿ ಯುದ್ಧ ಆರಂಭಿಸಿದ ನಂತರ ಪಾಶ್ಚಿಮಾತ್ಯ ದೇಶಗಳು ರಷ್ಯಾದ ಕಚ್ಚಾ ತೈಲದ ಮೇಲೆ ದರ ಮಿತಿ ಹಾಕಿವೆ. ಪ್ರತಿ ಬ್ಯಾರಲ್‌ಗೆ 60 ಡಾಲರ್ ಮಿತಿ ಹಾಕಿವೆ. ಈ ಮಿತಿಗಿಂತ ಹೆಚ್ಚಿನ ಬೆಲೆಗೆ ರಷ್ಯಾ ಕಚ್ಚಾ ತೈಲ ಮಾರಲು ಮುಂದಾದರೆ, ಅದಕ್ಕೆ ವಿಮೆ, ಹಣಕಾಸು ಮತ್ತು ಇತರ ಸೇವೆಗಳನ್ನು ಕೊಡಬಾರದು ಎಂಬ ಷರತ್ತು ಇದೆ.

ತೈಲ ಉತ್ಪನ್ನಗಳ ರಫ್ತು ಪ್ರತಿ ದಿನಕ್ಕೆ 4.5 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಾಗಿ 31 ಲಕ್ಷ ಬ್ಯಾರಲ್‌ಗೆ ಏರಿಕೆ ಆಗಿದೆ. ಐರೋಪ್ಯ ಒಕ್ಕೂಟಕ್ಕೆ ತೈಲ ಉತ್ಪನ್ನಗಳ ರಫ್ತು ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ದುಪ್ಪಟ್ಟಾಗಿದ್ದು ಪ್ರತಿ ದಿನ 3 ಲಕ್ಷ ಬ್ಯಾರಲ್‌ನಷ್ಟು ಆಗಿದೆ. ಹೀಗಿದ್ದರೂ ರಷ್ಯಾ–ಉಕ್ರೇನ್ ಯುದ್ಧ ಆರಂಭ ಆಗುವುದಕ್ಕೂ ಮುಂಚಿನ ರಫ್ತು ಪ್ರಮಾಣಕ್ಕೆ ಹೋಲಿಸಿದರೆ 15 ಲಕ್ಷ ಬ್ಯಾರಲ್ ಕಡಿಮೆ ಇದೆ ಎಂದು ತಿಳಿಸಿದೆ.

ರಷ್ಯಾದ ಮೇಲೆ ನಿರ್ಬಂಧ ಹೇರಲು ಪಾಶ್ಚಿಮಾತ್ಯ ದೇಶಗಳ ಜೊತೆ ಸೇರಲು ನಿರಾಕರಿಸಿರುವ ಟರ್ಕಿಗೆ ಡೀಸೆಲ್ ರಫ್ತು 2018ರ ಬಳಿಕ ಗರಿಷ್ಠ ಮಟ್ಟವನ್ನು ತಲುಪಿದೆ.

ರಷ್ಯಾದ ಕಚ್ಚಾ ತೈಲ ರಫ್ತು ಪ್ರತಿ ದಿನಕ್ಕೆ 1 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಾಗಿ 50 ಲಕ್ಷ ಬ್ಯಾರಲ್‌ಗೆ ತಲುಪಿದೆ. ಮಾರ್ಚ್‌ನಲ್ಲಿ ರಷ್ಯಾದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದ ಕಚ್ಚಾ ತೈಲ ಆಮದಾಗಿದ್ದು, ಈ ಮೂಲಕ ಭಾರತವು ಚೀನಾವನ್ನು ಹಿಂದಿಕ್ಕಿದೆ.

ಮುಂಬೈ ಧಾರಣೆ

ಶೇಂಗಾ

14-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1710 (1710)
ಒಂದು ವಾರದ ಡೆಲಿವರಿ	1705 (1705)
ಸೋಯಾ ಕಚ್ಚಾ	902 (925)
ಪಾಮ್ ವಾರದ ಡೆಲಿವರಿ	945 (940)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60,550 (60,900)

ಬೆಳ್ಳಿ ಕೆ.ಜಿ 76,700 (76,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹ ಏಪ್ರಿಲ್ 7ಕ್ಕೆ ಕೊನೆಗೊಂಡ ವಾರದಲ್ಲಿ ₹51,660 ಕೋಟಿ ಹೆಚ್ಚಾಗಿ ₹47.94 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಅದಕ್ಕೂ ಹಿಂದಿನ ವಾರ ಮೀಸಲು ಸಂಗ್ರಹವು ₹47.39 ಲಕ್ಷ ಕೋಟಿಯಷ್ಟು ಇತ್ತು. 2021ರ ಅಕ್ಟೋಬರ್‌ನಲ್ಲಿ ಮೀಸಲು ಸಂಗ್ರಹವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹52.89 ಲಕ್ಷ ಕೋಟಿಗೆ ತಲುಪಿತ್ತು. ಆದರೆ ಜಾಗತಿಕ ವಿದ್ಯಮಾನಗಳ ಪ್ರತಿಕೂಲ ಪರಿಣಾಮದಿಂದಾಗಿ ರೂಪಾಯಿ ಕುಸಿತ ಕಾಣುವುದನ್ನು ತಡೆಯಲು ಆರ್‌ಬಿಐ ಡಾಲರ್ ಮಾರಾಟ ಮಾಡಲು ಆರಂಭಿಸಿತು. ಇದರಿಂದಾಗಿ ಮೀಸಲು ಸಂಗ್ರಹವು ಗರಿಷ್ಠ ಮಟ್ಟದಿಂದ ಇಳಿಕೆ ಕಾಣಲಾರಂಭಿಸಿತು.

ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವೇ ಗರಿಷ್ಠ ಪ್ರಮಾಣದಲ್ಲಿದೆ. ಏಪ್ರಿಲ್ 7ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ₹38,868 ಕೋಟಿ ಹೆಚ್ಚಾಗಿ ₹42.14 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಆರ್‌ಬಿಐ ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹ ₹12,218 ಕೋಟಿ ಹೆಚ್ಚಾಗಿ ₹3.82 ಲಕ್ಷ ಕೋಟಿಗೆ ತಲುಪಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹106 ಕೋಟಿಯಷ್ಟು ಹೆಚ್ಚಾಗಿ ₹42,394 ಕೋಟಿಗೆ ತಲುಪಿದೆ.

ಟಾಟಾ: ಮೇ 1ರಿಂದ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಮೇ 1 ರಿಂದ ಜಾರಿಗೆ ಬರುವಂತೆ ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ 0.6ರವರೆಗೆ ಹೆಚ್ಚಳ ಮಾಡುವುದಾಗಿ ಶುಕ್ರವಾರ ಹೇಳಿದೆ.

ತಯಾರಿಕಾ ವೆಚ್ಚದಲ್ಲಿ ಆಗುತ್ತಿರುವ ಹೆಚ್ಚಳ ಮತ್ತು ಬಿಎಸ್–6ನ ಎರಡನೆಯ ಹಂತದ ನಿಯಮಗಳ ಪಾಲನೆಗೆ ಆಗುತ್ತಿರುವ ವೆಚ್ಚದ ಬಹುಪಾಲನ್ನು ಕಂಪನಿಯೇ ಹೊರುತ್ತಿದೆ. ಅದರಲ್ಲಿ ಒಂದು ಭಾಗವನ್ನು ಬೆಲೆ ಏರಿಕೆಯ ಮೂಲಕ ಗ್ರಾಹಕರಿಗೆ ವರ್ಗಾಯಿಸಲು ನಿರ್ಧರಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಫೆಬ್ರುವರಿಯಲ್ಲಿ ಬೆಲೆಯನ್ನು ಶೇ 1.2ರವರೆಗೆ ಹೆಚ್ಚಳ ಮಾಡಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೇಡ್ ಇನ್ ಇಂಡಿಯಾ ರೈಲಿನಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ಮೊಜಾಂಬಿಕ್‌ನ ಸಾರಿಗೆ ಮತ್ತು ಸಂವಹನ ಸಚಿವ ಮೇಟಿಯುಸ್ ಮಗಾಲಾ ಅವರಿದ್ದಾರೆ –ಪಿಟಿಐ ಚಿತ್ರ

ಮೊಜಾಂಬಿಕ್: ಮೇಡ್ ಇನ್ ಇಂಡಿಯಾ ರೈಲಿನಲ್ಲಿ ಪ್ರಯಾಣಿಸಿದ ಜೈಶಂಕರ್

ಮಾಪುಟೊ (ಪಿಟಿಐ): ಮೂರು ದಿನಗಳ ಭೇಟಿಗಾಗಿ ಮೊಜಾಂಬಿಕ್‌ಗೆ ಆಗಮಿಸಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ‘ಮೇಡ್ ಇನ್ ಇಂಡಿಯಾ’ ರೈಲಿನಲ್ಲಿ ಪ್ರಯಾಣಿಸಿದ್ದಾರೆ.

ಇದೇ ವೇಳೆ, ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆ ಕುರಿತು ಮೊಜಾಂಬಿಕ್ ಸಾರಿಗೆ ಸಚಿವರೊಂದಿಗೆ ಸಂವಾದ ನಡೆಸಿದರು.

‘ಮೊಜಾಂಬಿಕ್‌ನ ಸಾರಿಗೆ ಮತ್ತು ಸಂವಹನ ಸಚಿವ ಹಾಗೂ ಮೊಜಾಂಬಿಕನ್ ಬಂದರು ಮತ್ತು ರೈಲು ಪ್ರಾಧಿಕಾರದ ಅಧ್ಯಕ್ಷ ಮೇಟಿಯುಸ್ ಮಗಾಲಾ ಅವರೊಂದಿಗೆ ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆ ಕುರಿತು ಚರ್ಚಿಸಲಾಯಿತು. ರೈಲು ಮಾರ್ಗಗಳು, ವಿದ್ಯುತ್ ಚಾಲಿತ ವಾಹನಗಳು ಮತ್ತು ಜಲಮಾರ್ಗಗಳ ಸಂಪರ್ಕವನ್ನು ವಿಸ್ತರಿಸುವ ಕುರಿತು ಚರ್ಚಿಸಲಾಗಿದೆ. ಈ ನಿಟ್ಟಿನಲ್ಲಿ ಭಾರತವು ವಿಶ್ವಾಸಾರ್ಹ ಪಾಲುದಾರ’ ಎಂದು ಜೈಶಂಕರ್ ಅವರು ಗುರುವಾರ ಟ್ವೀಟ್ ಮಾಡಿದ್ದಾರೆ.

ಶ್ರೀಲಂಕಾಕ್ಕೆ ಸಾಲ: ಭಾರತ, ಜಪಾನ್‌ನಿಂದ ‘ಸಾಮಾನ್ಯ ವೇದಿಕೆ’

ನಿರ್ಮಲಾ ಸೀತಾರಾಮನ್

ವಾಷಿಂಗ್ಟನ್ (ಪಿಟಿಐ): ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಶ್ರೀಲಂಕಾಕ್ಕೆ ಸಾಲ ನೀಡುವುದಕ್ಕೆ ಸಂಬಂಧಿಸಿ ಮಾತುಕತೆ ನಡೆಸಲು ಅನುಕೂಲವಾಗುವಂತೆ ಸಾಮಾನ್ಯ ವೇದಿಕೆಯೊಂದನ್ನು ರಚಿಸಿದ್ದಾಗಿ ಭಾರತ, ಜಪಾನ್ ಹಾಗೂ ಫ್ರಾನ್ಸ್ ಘೋಷಿಸಿವೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹಾಗೂ ವಿಶ್ವಬ್ಯಾಂಕ್ ಆಶ್ರಯದಲ್ಲಿ ನಡೆದ ಸಭೆಯ ನಂತರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂರು ದೇಶಗಳ ಪ್ರತಿನಿಧಿಗಳು ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಲಾಯಿತು.

‘ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಶ್ರೀಲಂಕಾದ ಪ್ರಯತ್ನಗಳಿಗೆ ನೆರವು ನೀಡಲು ಭಾರತ ಬದ್ಧವಾಗಿದೆ’ ಎಂದು ನಿರ್ಮಲಾ ಸ್ಪಷ್ಟಪಡಿಸಿದರು.

ಶ್ರೀಲಂಕಾಕ್ಕೆ ಸಾಲ ನೀಡುವ ಕುರಿತು ನಡೆಯುವ ಪ್ರಕ್ರಿಯೆಯಲ್ಲಿ ಎಲ್ಲ ಸಾಲದಾತರನ್ನು ಸಮಾನವಾಗಿ ಕಾಣುವುದು ಹಾಗೂ ಪಾರದರ್ಶಕತೆ ಖಾತರಿಪಡಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು.

‘ಸಾಮಾನ್ಯ ವೇದಿಕೆಗೆ ಚಾಲನೆ ನೀಡಿರುವುದು ಐತಿಹಾಸಿಕ ಕ್ರಮ’ ಎಂದು ಜಪಾನ್ ಹಣಕಾಸು ಸಚಿವ ಸುಜುಕಿ ಶುನಿಚಿ ಹೇಳಿದರು.

ಫ್ರಾನ್ಸ್‌ನ ಖಜಾನೆ ಇಲಾಖೆಯ ಪ್ರಧಾನ ನಿರ್ದೇಶಕ ಇಮ್ಯಾನುಯೆಲ್ ಮೌಲಿನ್ ಇದ್ದರು. ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ವರ್ಚುವಲ್ ವಿಧಾನದ ಮೂಲಕ ಪಾಲ್ಗೊಂಡಿದ್ದರು.

ಆಹ್ವಾನ: ‘ಜಿ–7 ಗುಂಪಿನ ಅಧ್ಯಕ್ಷ ಸ್ಥಾನದಲ್ಲಿರುವ ಜಪಾನ್, ಸಂಘಟನೆಯ ಸದಸ್ಯ ರಾಷ್ಟ್ರಗಳ ಹಣಕಾಸು ಸಚಿವರ ಹಾಗೂ ಕೇಂದ್ರೀಯ ಬ್ಯಾಂಕುಗಳ ಗವರ್ನರ್‌ಗಳ ಸಭೆಗೆ ನನ್ನನ್ನು ಆಹ್ವಾನಿಸಿದ್ದು, ಸಭೆಯಲ್ಲಿ ಪಾಲ್ಗೊಳ್ಳುವ ಆಲೋಚನೆ ಇದೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

‘ಜಿ–7 ಹಾಗೂ ಜಿ–20 ಸದಸ್ಯ ರಾಷ್ಟ್ರಗಳ ನಡುವೆ ಸಮನ್ವಯ ಸಾಧಿಸಲು ಜಪಾನ್ ಮತ್ತು ಭಾರತ ಒಟ್ಟಿಗೆ ಕೆಲಸ ಮಾಡಲಿವೆ’ ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

‘ಉಕ್ರೇನ್ ಯುದ್ಧ: ಶಸ್ತ್ರಾಸ್ತ್ರ ಪೂರೈಕೆಯಿಲ್ಲ’

ಬೀಜಿಂಗ್ (ಎಪಿ): ‘ಉಕ್ರೇನ್- ರಷ್ಯಾ ಯುದ್ಧದಲ್ಲಿ ಉಭಯ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಲು ಚೀನಾ ಬಯಸುವುದಿಲ್ಲ’ ಎಂದು ಚೀನಾ ವಿದೇಶಾಂಗ ಸಚಿವ ಕಿನ್ ಗ್ಯಾಂಗ್ ಶುಕ್ರವಾರ ಸ್ಪಷ್ಟಪಡಿಸಿದ್ದಾರೆ.

ಚೀನಾ, ಸೇನಾ ನೆರವು ನೀಡಬಹುದೆಂಬ ಪಶ್ಚಿಮದ ರಾಷ್ಟ್ರಗಳ ಕಳವಳಕ್ಕೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

‘ಪ್ರಾಣಿಗಳಿಂದ ಕೋವಿಡ್: ಪುರಾವೆಗಳಿಲ್ಲ’

ಲಂಡನ್ (ರಾಯಟರ್ಸ್): ಕೋವಿಡ್–19 ವೈರಸ್ ಪ್ರಾಣಿಗಳಿಂದ ಹರಡುತ್ತದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಚೀನಾದ ಕಾಯಿಲೆ ನಿಯಂತ್ರಣ ಮತ್ತು ನಿರ್ವಹಣೆ ಕೇಂದ್ರದ (ಸಿಡಿಸಿ) ಮಾಜಿ ಮುಖ್ಯಸ್ಥ ಜಾರ್ಜ್ ಗಾವ್ ಶುಕ್ರವಾರ ತಿಳಿಸಿದರು.

‘ಸಾಂಕ್ರಾಮಿಕಕ್ಕೆ ಪೂರ್ವಸಿದ್ಧತೆ’ ವಿಷಯ ಕುರಿತಂತೆ ಲಂಡನ್ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕೆಲವು ಪ್ರಾಣಿಗಳೇ ಸೋಂಕಿಗೆ ಕಾರಣ ಎಂದು ಈಗಲೂ ಜನರು ಯೋಚಿಸುತ್ತಾರೆ. ಆದರೆ ಯಾವ ಪ್ರಾಣಿಯಿಂದ ಸೋಂಕು ಹರಡುತ್ತದೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ’ ಎಂದು ತಿಳಿಸಿದರು.

‘ವೈರಸ್ ಮೂಲ ಯಾವುದು ಎಂಬುದು ಇನ್ನೂ ನಿಗೂಢ.’ ಎಂದು ಹೇಳಿದರು.

ಮಹಿಳಾ ಸಬಲೀಕರಣ: ಭಾರತಕ್ಕೆ ಶ್ಲಾಘನೆ

ವಾಷಿಂಗ್ಟನ್ (ಪಿಟಿಐ): ‘ಮಹಿಳಾ ಸಬಲೀಕರಣ ವಿಷಯದಲ್ಲಿ ಭಾರತ ವಿಶೇಷ ಒತ್ತು ನೀಡಿದೆ. ಸ್ತ್ರೀಯರ ಸಶಸ್ತೀಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಡೆ ಮಾದರಿಯಾದುದು’ ಎಂದು ವಿಶ್ವಬ್ಯಾಂಕ್ ಅಧ್ಯಕ್ಷ ಡೇವಿಡ್ ಮಾಲ್ಪಾಸ್ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ವಿಶ್ವಬ್ಯಾಂಕ್‌ನಿಂದ ಇಲ್ಲಿ ಮಹಿಳೆಯರಲ್ಲಿ ಔದ್ಯೋಗಿಕ ಸಾಮರ್ಥ್ಯ ಹೆಚ್ಚಳ ಹಾಗೂ ನಾಯಕತ್ವ ಗುಣ ರೂಪಿಸುವಲ್ಲಿ ಸ್ತ್ರೀ ಸಬಲೀಕರಣದ ಪಾತ್ರ ಕುರಿತು ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ಅವರು ಮಾತನಾಡಿದರು.

ಇದಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವು ಗಣ್ಯರು ಸಾಕ್ಷಿಯಾದರು. ಈ ವೇಳೆ ಕೇಂದ್ರ ಸರ್ಕಾರ ದೇಶದಲ್ಲಿ ಮಹಿಳೆಯರ ಆರ್ಥಿಕ ಅಭ್ಯುದಯದ ಕ್ರಮಗಳ ಬಗ್ಗೆ ವಿವರಿಸಿದರು.

ಕುತೂಹಲ ಕೆರಳಿಸದ ಶಿವಾಜಿ

ರಮೇಶ್ ಅರವಿಂದ್, ಮೇಘನಾ ಗಾಂವ್ಕರ್, ರಾಧಿಕಾ ನಾರಾಯಣ್, ಸಂಗೀತಾ ಶೃಂಗೇರಿ

ನಾವು ನೋಡಿದ ಸಿನಿಮಾ

ಚಿತ್ರ: ಶಿವಾಜಿ ಸುರತ್ಕಲ್–2

- ನಿರ್ಮಾಣ: ಅಂಜನಾದ್ರಿ ಸಿನಿ ಕ್ರಿಯೇಷನ್
- ನಿರ್ದೇಶನ: ಆಕಾಶ್ ಶ್ರೀವತ್ಸ
- ತಾರಾಗಣ: ರಮೇಶ್ ಅರವಿಂದ್, ರಾಧಿಕಾ ನಾರಾಯಣ್, ಮೇಘನಾ ಗಾಂವ್ಕರ್

ಸಾಮಾನ್ಯವಾಗಿ ಕೊಲೆ ಹಿಂದಿನ ಪತ್ತೇದಾರಿ ಕಥೆಗಳೆಂದರೆ ಪ್ರೇಕ್ಷಕರಿಗೆ ಒಂದು ಬಗೆಯ ಕುತೂಹಲವಿರುತ್ತದೆ. ಸಿನಿಮಾ ಮುಗಿಯುವ ತನಕವೂ ಕುರ್ಚಿ ತುದಿಯಲ್ಲಿ ಕುಳಿತು ಮುಂದೇನಾಗುತ್ತದೆ ಎಂದು ಕಾಯುತ್ತಿರುತ್ತಾರೆ. ಆದರೆ ‘ಶಿವಾಜಿ ಸುರತ್ಕಲ್–2’ರ ವಿರಾಮದ ಹೊತ್ತಿಗೆ ಪ್ರೇಕ್ಷಕ ಕುರ್ಚಿಯ ಹಿಂದಕ್ಕೆ ಒರಗಿ ಆರಾಮದಾಯಕ ಸ್ಥಿತಿಯಲ್ಲಿ ಚಿತ್ರವನ್ನು ಕಣ್ತುಂಬಿಕೊಳ್ಳುತ್ತಿರುತ್ತಾನೆ! ಈಗಾಗಲೇ ಸಾಕಷ್ಟು ಭಾಷೆಗಳಲ್ಲಿ ಹತ್ತಾರು ಸಲ ಬಂದು ಹೋಗಿರುವ ಸರಣಿ ಕೊಲೆಗಳ ಟ್ರ್ಯಾಕ್, ಇಂಥ ಕಥೆಯ ನಡು-ನಡುವೆ ಬಂದು ಹೋಗುವ ಗಂಡ–ಹೆಂಡತಿ ಕಥೆ, ಅಪ್ಪ–ಮಗಳ ಬಾಂಧವ್ಯ, ಹೆಂಡತಿ ಸಾವಿನ ಫ್ಲಾಷ್‌ಬ್ಯಾಕ್, ಅಪ್ಪ–ಮಗನ ಹಿನ್ನೆಲೆ...ಹೀಗೆ ಚಿತ್ರಕಥೆಯಲ್ಲಿ ವಿಪರೀತ ಅಂಶಗಳು ಮಿಶ್ರಣವಾಗಿರುವುದೇ ಇದಕ್ಕೆ ಮುಖ್ಯ ಕಾರಣ.

‘ಶಿವಾಜಿ ಸುರತ್ಕಲ್’ ಪೊಲೀಸ್ ಅಧಿಕಾರಿಯಾಗಿ ನಟ ರಮೇಶ್‌ಗೆ ಒಂದೊಳ್ಳೆ ಯಶಸ್ಸು ನೀಡಿತ್ತು. ಅದರ ಭಾಗ–2 ಕೂಡ ಅದೇ ರೀತಿ ಇರಬಹುದೆಂದು ಬಂದವರಿಗೆ ಸ್ವಲ್ಪ ನಿರಾಸೆ ಉಂಟು ಮಾಡುತ್ತದೆ. ಚಿತ್ರದ ಮೊದಲ ಭಾಗದಲ್ಲಿ ಕೊಲೆಯಾದ ಶಿವಾಜಿಯ ಹೆಂಡತಿ ಮತ್ತೆ ಸುಂದರ ಪ್ರೇತವಾಗಿ ಬರುವುದೇ ಭಾಗ–1 ಮತ್ತು 2ಕ್ಕೆ ಇರುವ ಒಂದು ಕೊಂಡಿ. ಅದರ ಹೊರತಾಗಿ ‘ಸುರತ್ಕಲ್–2’ರಲ್ಲಿ ಹೊಸದೊಂದು ಪ್ರಕರಣದ ಅಧ್ಯಾಯ ಆರಂಭವಾಗುತ್ತದೆ.

ನಟ ರಮೇಶ್ ಇಡೀ ಚಿತ್ರವನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿದ್ದಾರೆ. ಚಿತ್ರದಲ್ಲಿ ಅವರಿಲ್ಲದ ದೃಶ್ಯಗಳಲ್ಲ, ಫ್ರೇಮುಗಳೇ ಕಡಿಮೆ ಎನ್ನಬಹುದಾದಷ್ಟು ಆವರಿಸಿಕೊಂಡಿದ್ದಾರೆ. ಚಿತ್ರದ ಕ್ಲೈಮ್ಯಾಕ್ಸ್‌ವರೆಗೂ ರಮೇಶ್ ದ್ವಿಪಾತ್ರ ಇರಬಹುದು ಎನಿಸುತ್ತದೆ. ಪೊಲೀಸ್ ಅಧಿಕಾರಿಯಾದ ರಮೇಶ್, ಕೊಲೆಗಾರನ ಪಾತ್ರದಲ್ಲಿಯೂ ಬಂದು ಹೋಗುತ್ತಾರೆ. ಈ ಮೂಲಕ ಶಿವಾಜಿಯೇ ಕೊಲೆಗಾರನೂ ಆಗಿರಬಹುದೇ ಎಂಬ ಸಣ್ಣ ಅನುಮಾನವನ್ನು ಪ್ರೇಕ್ಷಕರಲ್ಲಿ ಮೂಡಿಸಲು ನಿರ್ದೇಶಕರು ಯತ್ನಿಸಿದ್ದಾರೆ. ಆದರೆ ಒಂದು ಗಟ್ಟಿಯಾದ ಬರವಣಿಗೆ, ಸರಿಯಾದ ಲಾಜಿಕ್ ಕೊರತೆಯಿಂದ ಈ ಯತ್ನ ಫಲಪ್ರದವಾಗುವುದಿಲ್ಲ.

ಅದಕ್ಕಿಂತ ಹೆಚ್ಚಾಗಿ ಅದೇನೋ ಕಾಯಿಲೆ ಬಂದಿದೆ ಎಂದು ಶಿವಾಜಿ ವರ್ತಿಸುವುದು, ಆಗಾಗ ಮಾತ್ರೆ ಸೇವಿಸುವುದು ಒಂದು ಗಂಭೀರವಾದ ಪೊಲೀಸ್ ಅಧಿಕಾರಿ ಪಾತ್ರಕ್ಕೆ, ಆತನ ಪತ್ತೇದಾರಿಕೆಗೆ ಬಹಳ ಕಿರಿಕಿರಿ ಉಂಟು ಮಾಡುತ್ತದೆ. ನಡೆಯುವ ಕೊಲೆಗಳು ಮತ್ತು ಕೊಲೆಗಾರರ ಹುಡುಕಾಟ ಎರಡೂ ಎಲ್ಲಿಯೂ ರೋಚಕ ಎನ್ನಿಸುವುದಿಲ್ಲ. ಚಿತ್ರಕಥೆ ಕುತೂಹಲ ಮೂಡಿಸುತ್ತಿದೆ ಎನ್ನುವ ಹೊತ್ತಿಗೆ ಶಿವಾಜಿಯ ಸತ್ತುಹೋದ ಹೆಂಡತಿ ಮತ್ತೆ ಪ್ರತ್ಯಕ್ಷವಾಗಿ ಬಿಡುತ್ತಾಳೆ.

ಚಿತ್ರದ ಛಾಯಾಗ್ರಹಣ ಸೊಗಸಾಗಿದೆ. ಮುರುಡೇಶ್ವರ, ಯಲ್ಲಾಪುರದ ಕೆಲ ಫ್ರೇಂಗಳು ಖುಷಿ ನೀಡುತ್ತವೆ. ಶಿವಾಜಿಯ ಮಗಳಾಗಿ ಬಾಲನಟಿ ಆರಾಧ್ಯ ಬಹಳ ಮುದ್ದಾಗಿ ನಟಿಸಿದ್ದಾಳೆ. ಅಪ್ಪ–ಮಗಳ ಬಾಂಧವ್ಯದ ‘ಮಾತಾಡೋ ಗೊಂಬೆ’ ಹಾಡು ಮತ್ತು ಅದಕ್ಕೆ ನಿರ್ದೇಶಕರು ಕಟ್ಟಿಕೊಟ್ಟ ದೃಶ್ಯಗಳು ಬಹಳ ಸೊಗಸಾಗಿವೆ. ಈ ಭಾವುಕತೆ ನಾವೊಂದು ಪತ್ತೇದಾರಿ ಕೊಲೆಯ ಕಥೆ ನೋಡುತ್ತಿದ್ದೇವೆ ಎಂಬುದನ್ನು ಮರೆಸಿಬಿಟ್ಟಿರುತ್ತದೆ.

ಪೊಲೀಸ್ ಪೇದೆಯಾಗಿ ರಘು ರಾಮನಕೊಪ್ಪ ಕೆಲವು ಕಡೆ ಪ್ರೇಕ್ಷಕರನ್ನು ನಗಿಸುತ್ತಾರೆ. ರಾಧಿಕಾ ನಾರಾಯಣ್, ಮೇಘನಾ ಗಾಂವ್ಕರ್ ಸಿಕ್ಕಿರುವ ಅವಕಾಶದಲ್ಲೇ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ. ಜ್ಯೂಡಾ ಸ್ಯಾಂಡಿ ದೃಶ್ಯಗಳನ್ನು ಹಿನ್ನೆಲೆ ಸಂಗೀತದೊಂದಿಗೆ ಒಂದಷ್ಟು ರೋಚಕವಾಗಿಸಲು ಯತ್ನಿಸಿದ್ದಾರೆ. ಆದರೆ ಕಥೆಯೇ ಜಾಳಾಗಿ ಅವರ ಯತ್ನ ವಿಫಲವಾಗಿದೆ.

ವಿನಾಯಕ ಕೆ.ಎಸ್.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

INSTRUMENTATION AND Electrical installation personal, Industrial background, ITI, diploma, BE, willing to travel all India, factory in Nelamangala: 9513505051

General

✓ ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಸುವರ್ಣ ಅವಕಾಶ: ಫಾರಂ ತುಂಬುವ, ಪುಸ್ತಕ ಬರೆಯುವ, ಇತ್ಯಾದಿ ಮನೆಯಿಂದಲೇ ಕೆಲಸದ ಮೂಲಕ ಗಳಿಸಿ,ವಾರಕ್ಕೆ 9000-10000/- ಕೊರಿಯರ್ ಸೌಲಭ್ಯವಿದೆ. 9980525789.

Wanted

ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವವರು ಬೇಕಾಗಿದ್ದಾರೆ. ಸಂಬಳ 23000/ರಿಂದ 26000/. ಬೆಳಗ್ಗೆ10.00 ರಾತ್ರಿ8.00. ಆಫೀಸ್ ಸಹಾಯಕರು ಬೆಳಗ್ಗೆ 9.30ರಿಂದ ರಾತ್ರಿ 9.00ಗಂಟೆ. 14000/. ಸ್ಟೋರ್ ಮ್ಯಾನೇಜರ್ (ಡ್ರೈಕ್ಲೀನಿಂಗ್‌ನಲ್ಲಿ ಅನುಭವವಿರಬೇಕು)ಬೆಳಗ್ಗೆ 9.30ರಿಂದರಾತ್ರಿ9.00. ಸಂಬಳ 18,000/ 30,000/. ಸಂಪರ್ಕಿಸಿ: 9880266007.

ರಿಯಲ್ ಎಸ್ಟೇಟ್ ಬೈಯಿಂಗ್

Sites

Multiple Locations

WANTED 2400/1200 BDA OWNER SITE @ 5500/ SQ FT. FULL RTGS PAYMENT. NO BROKERS. 9980592277

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ.ನಾಗಸಾಧು. ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

CONNECT

ಟೀ ಮಾರಾಟಕ್ಕೆ
ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ 8870601744 / 9487531481
WOODBRIAR GROUP Coimbatore
Producers of Monica, Injipara, Srikundra, Pudhuthottam, Murugan, Venniar, Manalaar, Rockwood, Talliar bulk teas

ಪ್ರವಾಸ

Pilgrimage Tours

ಸುವರ್ಣಯಾತ್ರ. 21/05/23.ಚಾರ್ಧಾಮ್ ಯಾತ್ರ .23/04/23 ಕಾಶಿ ಪ್ರವಾಸ 9/06/23 ನೇಪಾಳ ಪ್ರವಾಸ.19/06/23 ವೈಷ್ಣೋದೇವಿ, ಸಿಮ್ಲಾ, ಮನಾಲಿ.9019462508, 9008381022

20/05/2023 ಮತ್ತು 29/5/2023ರಿಂದ 13ದಿನಗಳ ಹರಿದ್ವಾರ,ಚಾರುಧಾಮ್ ಮಸ್ಸೂರಿ,ನೈಮಿಷಾರಣ್ಯ, ಕಾಶಿ,ಆಗ್ರಾ ಹಾಗೂ 30/6/2023ರಿಂದ 12ದಿನಗಳ ಅಮೃತಸರ್,ಅಮರನಾಥ್ ಕಾಶ್ಮೀರ,ವೈಷ್ಣೋದೇವಿ ಇತ್ಯಾದಿ ಏಷ್ಯನ್ ಟ್ರಾವೆಲ್ ಲೈನ್ಸ್. 8105657052/ 9480182865 (ಷಣ್ಮುಗಾನಂದ).

Travel

★ವಿಮಾನದಲ್ಲಿ ಪ್ರವಾಸ★ 14.05.2023 9/13ದಿನಗಳು ಆಗ್ರಾ,ದೆಹಲಿ,ಕಾಶಿ,ಗಯಾ, ಪ್ರಯಾಗ,.19.06.2023 13ದಿನಗಳು ಕಾಶಿ,ನೇಪಾಳ ಮುಕ್ತಿನಾಥ,ಗಜೇಂದ್ರಮೋಕ್ಷ, ಜನಕಪುರ್ ಪ್ರವಾಸ. ಆರ್.ಗಾಂಧಿ ಟೂರ್ಸ್.(ರಿ).ತ್ಯಾಗರಾಜನಗರ. 9945445809/ 9902433500

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ನಿತೀಶ್, ರಿಂಕು ಸಿಂಗ್ ಹೋರಾಟ ವ್ಯರ್ಥ: ಕೋಲ್ಕತ್ತ ತಂಡಕ್ಕೆ ಸೋಲುಣಿಸಿದ ಹೈದರಾಬಾದ್

ಹ್ಯಾರಿ 'ಚೊಚ್ಚಲ' ಶತಕಕ್ಕೆ ಒಲಿದ ಜಯ



ಸನ್‌ರೈಸರ್ಸ್ ಹೈದರಾಬಾದ್ ತಂಡದ ಹ್ಯಾರಿ ಬ್ರೂಕ್ಸ್ ಶತಕ ಸಂಭ್ರಮ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಹ್ಯಾರಿ ಬ್ರೂಕ್ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮೊಟ್ಟಮೊದಲ ಶತಕ ದಾಖಲಿಸಿದರು. ಅವರ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಗೆಲುವು ಸಾಧಿಸಿತು.

ಈಡನ್ ಗಾರ್ಡನ್‌ನಲ್ಲಿ ಶುಕ್ರವಾರ ನಡೆದ ಹಣಾಹಣಿಯಲ್ಲಿ ಹೈದರಾಬಾದ್ 23 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಸೋಲುಣಿಸಿತು.

ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 228 ರನ್ ಗಳಿಸಿತು. ಅದಕ್ಕುತ್ತರವಾಗಿ ಕೋಲ್ಕತ್ತ ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 205 ರನ್ ದಾಖಲಿಸಿತು.

ದೊಡ್ಡ ಮೊತ್ತ ಬೆನ್ನತ್ತಿದ ಕೋಲ್ಕತ್ತ ತಂಡದ ಆರಂಭ ಉತ್ತಮವಾಗಿರಲಿಲ್ಲ. 20 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್ (ರಹಮಾನುಲ್ಲಾ ಗುರ್ಬಾಜ್, ವೆಂಕಟೇಶ್ ಅಯ್ಯರ್ ಮತ್ತು ಸುನಿಲ್ ನಾರಾಯಣ್) ಪತನಗೊಂಡವು. ನಾರಾಯಣ್ ಜಗದೀಶನ್ (36) ಹಾಗೂ ನಾಯಕ ನಿತೀಶ್ ರಾಣಾ (75) ನಾಲ್ಕನೇ ವಿಕೆಟ್‌ಗೆ 62 ರನ್ ಸೇರಿಸಿ ಗೆಲುವಿನ ಭರವಸೆ ಮೂಡಿಸಿದ್ದರು. ಜಗದೀಶನ್ ಔಟಾದ ಬಳಿಕ ಬಂದ ಆ್ಯಂಡ್ರೆ ರಸೆಲ್ (3) ವಿಫಲರಾದರು. ಶಾರ್ದೂಲ್ ಠಾಕೂರ್ (12) ಅವರಿಗೂ ದೊಡ್ಡ ಮೊತ್ತ ಗಳಿಸಲು ಆಗಲಿಲ್ಲ. ಬಳಿಕ ನಿತೀಶ್ ಹಾಗೂ ರಿಂಕು ಸಿಂಗ್ (58) ಜೋಡಿ 6.2 ಓವರ್‌ಗಳಲ್ಲಿ 69 ರನ್ ಕಲೆಹಾಕಿತು. 17ನೇ ಓವರ್‌ನಲ್ಲಿ ನಿತೀಶ್ ಅವರು ಟಿ.ನಟರಾಜನ್‌ಗೆ ವಿಕೆಟ್ ಒಪ್ಪಿಸಿದರು. ನಂತರ ರಿಂಕು ಹೋರಾಡಿದರೂ ಗೆಲುವು ಲಭಿಸಲಿಲ್ಲ.

ಹ್ಯಾರಿ ಅಬ್ಬರ: ಟಾಸ್ ಗೆದ್ದ ಕೋಲ್ಕತ್ತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇದೇ ಮೊದಲ ಬಾರಿಗೆ ಐಪಿಎಲ್‌ನಲ್ಲಿ ಆಡುತ್ತಿರುವ ಇಂಗ್ಲೆಂಡ್ ದೇಶದ ಹ್ಯಾರಿ (ಅಜೇಯ 100) 12 ಬೌಂಡರಿ ಹಾಗೂ ಮೂರು ಸಿಕ್ಸರ್ ಸಿಡಿಸಿದರು. 55 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು. ಎರಡು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದರು. ಈ ಸಲದ ಹರಾಜಿನಲ್ಲಿ ಅವರು ₹ 13.25 ಕೋಟಿ ಮೌಲ್ಯ ಪಡೆದು ಸನ್‌ರೈಸರ್ಸ್ ಸೇರಿದ್ದರು.

ಹ್ಯಾರಿ 45 ರನ್ ಗಳಿಸಿದ್ದ ಸಂದರ್ಭದಲ್ಲಿ ಸುಯಶ್ ಶರ್ಮಾ ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಕೈಚೆಲ್ಲಿದರು. ಅವರು 61 ರನ್ ಗಳಿಸಿದ್ದ ಸಂದರ್ಭದಲ್ಲಿ ಲಾಕಿ ಫರ್ಗ್ಯುಸನ್ ಓವರ್‌ನಲ್ಲಿ ಔಟ್ ಎಂದು ತಮ್ಮ ವಿರುದ್ಧ ನೀಡಲಾಗಿದ್ದ ತೀರ್ಮಾನವನ್ನು ಯುಡಿಆರ್‌ಎಸ್‌ನಲ್ಲಿ ಪ್ರಶ್ನಿಸಿ ಗೆದ್ದರು. ಹ್ಯಾರಿ ಮತ್ತು ನಾಯಕ ಏಡನ್ ಮರ್ಕರಂ (50; 26ಎ, 4X2, 6X5) ಮೂರನೇ ವಿಕೆಟ್‌ಗೆ 72 ರನ್ ಸೇರಿಸಿದರು. ಸ್ಪಿನ್ನರ್ ವರುಣ್ ಚಕ್ರವರ್ತಿ ಎಸೆತದಲ್ಲಿ ಮರ್ಕರಂ ಔಟಾದರು.

ಇದರ ನಂತರ ಬ್ರೂಕ್ ತಮ್ಮ ಆಟದ ವೇಗವನ್ನು ಮತ್ತಷ್ಟು ಹೆಚ್ಚಿಸಿದರು. ಅವರಿಗೆ ಅಭಿಷೇಕ್ ಶರ್ಮಾ (32; 17ಎ) ಉತ್ತಮ ಜೊತೆ ನೀಡಿದರು.

ರಸೆಲ್‌ಗೆ ಗಾಯ: ಅಭಿಷೇಕ್ ವಿಕೆಟ್ ಪಡೆದ ಸಂಭ್ರಮದಲ್ಲಿದ್ದ ಆ್ಯಂಡ್ರೆ ರಸೆಲ್ ತೊಡೆಯ ಸ್ನಾಯುಸೆಳೆತದಿಂದ ನೋವು ಅನುಭವಿಸಿದರು. ಇದರಿಂದಾಗಿ ಅವರು ತಮ್ಮ ಮೂರನೇ ಓವರ್ ಪೂರೈಸಲಿಲ್ಲ. ಅವರನ್ನು ತಂಡದ ವೈದ್ಯಕೀಯ ಸಿಬ್ಬಂದಿಯು ಪೆವಿಲಿಯನ್‌ಗೆ ಕರೆದೊಯ್ದು ಚಿಕಿತ್ಸೆ ನೀಡಿದರು. ಅವರ ಓವರ್‌ನ ಉಳಿದ ಐದು ಎಸೆತ ಗಳನ್ನು ಶಾರ್ದೂಲ್ ಹಾಕಿದರು. ರಸೆಲ್ ಒಟ್ಟು 3 ವಿಕೆಟ್ ಗಳಿಸಿದರು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 4ಕ್ಕೆ 228 (20 ಓವರ್)
ಬ್ರೂಕ್ ಔಟಾಗದೆ 100 (55 ಎ., 4X12, 6X3)
ಮಯಂಕ್ ಸಿ ವರುಣ್ ಬಿ ರಸೆಲ್ 9 (13 ಎ)
ತ್ರಿಪಾಠಿ ಸಿ ಗುರ್ಬಾಜ್ ಬಿ ರಸೆಲ್ 9 (4 ಎ., 4X2)
ಮರ್ಕರಂ ಸಿ ರಸೆಲ್ ಬಿ ವರುಣ್ 50 (26 ಎ., 4X2, 6X5)
ಅಭಿಷೇಕ್ ಸಿ ಠಾಕೂರ್ ಬಿ ರಸೆಲ್ 32 (17 ಎ., 4X3, 6X2)
ಕ್ಲಾಸೆನ್ ಔಟಾಗದೆ 16 (6 ಎ., 4X2, 6X1))
ಇತರೆ 12 (ನೋಬಾಲ್ 1, ವೈಡ್ 11)
ವಿಕೆಟ್ ಪತನ: 1–46 (ಮಯಂಕ್ ಅಗರವಾಲ್; 4.1), 2–57 (ರಾಹುಲ್ ತ್ರಿಪಾಠಿ; 4.6), 3–129 (ಏಡನ್ ಮರ್ಕರಂ; 12.5), 4–201 (ಅಭಿಷೇಕ್ ಶರ್ಮಾ; 18.1)
ಬೌಲಿಂಗ್: ಉಮೇಶ್ ಯಾದವ್ 3–0–42–0, ಲಾಕಿ ಫರ್ಗ್ಯುಸನ್ 2–0–37–0, ಸುನಿಲ್ ನಾರಾಯಣ 4–0–28–0, ಆ್ಯಂಡ್ರೆ ರಸೆಲ್ 2.1–0–22–3, ವರುಣ್ ಚಕ್ರವರ್ತಿ 4–0–41–1, ಸುಯಶ್ ಶರ್ಮಾ 4–0–44–0, ಶಾರ್ದೂಲ್ ಠಾಕೂರ್ 0.5–0–14–0

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ 205 (20 ಓವರ್‌ಗಳಲ್ಲಿ)
ಗುರ್ಬಾಜ್ ಸಿ ಮಲಿಕ್ ಬಿ ಭುವನೇಶ್ವರ್ 0 (3 ಎ)
ಜಗದೀಶನ್ ಸಿ ಫಿಲಿಪ್ (ಸಬ್) ಬಿ ಮಾರ್ಕಂಡೆ 36 (21 ಎ., 4X5, 6X1)
ವೆಂಕಟೇಶ್ ಸಿ ಮರ್ಕರಂ ಬಿ ಜನ್ಸೆನ್ 10 (11 ಎ., 4X2)
ಸುನಿಲ್ ಸಿ ಮರ್ಕರಂ ಬಿ ಜನ್ಸೆನ್ 0 (1 ಎ)
ನಿತೀಶ್ ಸಿ ಸುಂದರ್ ಬಿ ನಟರಾಜನ್ 75 (41 ಎ., 4X5, 6X6)
ರಸೆಲ್ ಸಿ ಜನ್ಸೆನ್ ಬಿ ಮಾರ್ಕಂಡೆ 3 (6 ಎ)
ರಿಂಕು ಔಟಾಗದೆ 58 (31 ಎ., 4X4, 4X4)
ಶಾರ್ದೂಲ್ ಸಿ ಸುಂದರ್ ಬಿ ಮಲಿಕ್ 12 (7 ಎ., 4X2)
ಉಮೇಶ್ ಔಟಾಗದೆ 1 (1 ಎ)
ಇತರೆ 10 (ಲೆಗ್ ಬೈ 2, ನೋಬಾಲ್ 2, ವೈಡ್ 6)
ವಿಕೆಟ್ ಪತನ: 1–0 (ರಹ್ಮಾನುಲ್ಲಾ ಗುರ್ಬಾಜ್; 0.3), 2–20 (ವೆಂಕಟೇಶ್ ಅಯ್ಯರ್; 3.2). 3–20 (ಸುನಿಲ್ ನಾರಾಯಣ; 3.3), 4–82 (ನಾರಾಯಣ ಜಗದೀಶನ್; 8.2), 5–96 (ಆ್ಯಂಡ್ರೆ ರಸೆಲ್; 10.1), 6–165 (ನಿತೀಶ್ ರಾಣಾ; 16.3), 7–197 (ಶಾರ್ದೂಲ್ ಠಾಕೂರ್; 19.1)
ಬೌಲಿಂಗ್: ಭುವನೇಶ್ವರ್ ಕುಮಾರ್ 4–1–29–1, ಮಾರ್ಕೊ ಜನ್ಸೆನ್ 4–0–37–2, ಟಿ.ನಟರಾಜನ್ 4–0–54–1, ಉಮ್ರಾನ್ ಮಲಿಕ್ 2–0–36–1, ಮಯಂಕ್ ಮಾರ್ಕಂಡೆ 4–0–27–2, ವಾಷಿಂಗ್ಟನ್ ಸುಂದರ್ 2–0–20–0

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 23 ರನ್ ಗೆಲುವು

ಆರ್‌ಸಿಬಿಗೆ ಗೆಲುವಿನ ಛಲ

ಡೆಲ್ಲಿ ವಿರುದ್ಧದ ಪಂದ್ಯ; ಬೌಲಿಂಗ್ ವಿಭಾಗಕ್ಕೆ ಹಸರಂಗ ಬಲ

• ಮಹಮ್ಮದ್ ನೂಮಾನ್

ಮುಖ್ಯಾಂಶಗಳು
- ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ಹಣಾಹಣಿ
- ಡುಪ್ಲೆಸಿ ಪಡೆಗೆ ವಾರ್ನರ್ ಬಳಗದ ಸವಾಲು
- ಆಡಿದ ನಾಲ್ಕೂ ಪಂದ್ಯಗಳನ್ನು ಸೋತಿರುವ ಡೆಲ್ಲಿ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಡೇವಿಡ್ ವಾರ್ನರ್ ಅಭ್ಯಾಸಕ್ಕೆ ಬಂದ ಕ್ಷಣ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

ಬೆಂಗಳೂರು: ಕಳೆದ ಪಂದ್ಯವನ್ನು ಕೊನೆಯ ಎಸೆತದಲ್ಲಿ ಸೋತ ನಿರಾಸೆ ಮರೆಯುವ ಪ್ರಯತ್ನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಐಪಿಎಲ್ ಟೂರ್ನಿಯಲ್ಲಿ ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಹಣಾಹಣಿ ನಡೆಸಲಿದೆ.

ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿ ಟೂರ್ನಿಯಲ್ಲಿ ಭರ್ಜರಿ ಆರಂಭ ಪಡೆದಿದ್ದ ಫಫ್ ಡುಪ್ಲೆಸಿ ಬಳಗ, ಬಳಿಕದ ಎರಡೂ ಪಂದ್ಯಗಳನ್ನು ಸೋತಿದೆ. ಅದರಲ್ಲೂ ಐದು ದಿನಗಳ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರು ಅಂತಿಮ ಎಸೆತದಲ್ಲಿ ಮಣಿದಿತ್ತು.

ಮೊದಲು ಬ್ಯಾಟ್ ಮಾಡಿ 212 ರನ್ ಗಳಿಸಿದ್ದರೂ, ಅದನ್ನು 'ಡಿಫೆಂಡ್' ಮಾಡುವಲ್ಲಿ ಎಡವಿತ್ತು. ಬೌಲರ್‌ಗಳು ಕೊನೆಯ ಓವರ್‌ಗಳಲ್ಲಿ ಹೆಚ್ಚು ರನ್ ಬಿಟ್ಟುಕೊಟ್ಟದ್ದು ಸೋಲಿಗೆ ಕಾರಣವಾಗಿತ್ತು. ಇದೀಗ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗೆಲುವಿನ ಹಾದಿಗೆ ಮರಳಲು ಪ್ರಯತ್ನಿಸಲಿದೆ.

ಮೊಹಮ್ಮದ್ ಸಿರಾಜ್ ಹೊರತುಪಡಿಸಿ, ಇತರ ಬೌಲರ್‌ಗಳು ಇನ್ನೂ ಪರಿಣಾಮಕಾರಿ ಎನಿಸಿಲ್ಲ. ಶ್ರೀಲಂಕಾದ ಲೆಗ್‌ಸ್ಪಿನ್ ಆಲ್‌ರೌಂಡರ್ ವನಿಂದು ಹಸರಂಗ ಅವರು ಆಯ್ಕೆಗೆ ಲಭ್ಯರಿರುವುದು ಬೌಲಿಂಗ್ ವಿಭಾಗಕ್ಕೆ ಬಲ ತುಂಬಿದೆ. ವೇಯ್ನ್ ಪಾರ್ನೆಲ್ ಅಥವಾ ಡೇವಿಡ್ ವಿಲಿ ಅವರಲ್ಲೊಬ್ಬರು ಅಂತಿಮ ಇಲೆವನ್‌ನಲ್ಲಿ ಹಸರಂಗ ಅವರಿಗೆ ದಾರಿಮಾಡಿಕೊಡಬಹುದು.

ಡುಪ್ಲೆಸಿ, ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಪ್ರೇಕ್ಷಕರನ್ನು ಮತ್ತೊಮ್ಮೆ ರಂಜಿಸಲು ಸಜ್ಜಾಗಿದ್ದಾರೆ. 2–3 ವಿಕೆಟ್‌ಗಳು ಬೇಗನೇ ಬಿದ್ದಲ್ಲಿ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಒತ್ತಡ ತಾಳಿಕೊಳ್ಳುವರೇ ಎಂಬುದನ್ನು ನೋಡಬೇಕು.

ಒತ್ತಡದಲ್ಲಿ ಕ್ಯಾಪಿಟಲ್ಸ್: ಆರ್‌ಸಿಬಿಗೆ ಹೋಲಿಸಿದರೆ, ಡೆಲ್ಲಿ ಕ್ಯಾಪಿಟಲ್ಸ್ ತಂಡದವರ ಮೇಲಿನ ಒತ್ತಡ ತುಸು ಹೆಚ್ಚೇ ಇದೆ. ಐಪಿಎಲ್ ಟೂರ್ನಿ ಎರಡನೇ ವಾರಕ್ಕೆ ಕಾಲಿಟ್ಟದೆಯಾದರೂ, ಡೇವಿಡ್ ವಾರ್ನರ್ ಬಳಗಕ್ಕೆ ಗೆಲುವು ದಕ್ಕಿಲ್ಲ. ನಾಲ್ಕು ಪಂದ್ಯಗಳ ಬಳಿಕವೂ ಪಾಯಿಂಟ್ ಖಾತೆ ತೆರೆಯಲು ಸಾಧ್ಯವಾಗದ್ದು ಆಟಗಾರರ ಆತ್ಮವಿಶ್ವಾಸವನ್ನು ಕುಗ್ಗಿಸಿದೆ.

ಆರ್‌ಸಿಬಿ ತಂಡದ ನಾಯಕ ಫಫ್ ಡುಪ್ಲೆಸಿ –ಪ್ರಜಾವಾಣಿ ಚಿತ್ರ

ವಾರ್ನರ್ ಹೆಣೆಯುವ ತಂತ್ರಗಳಿಗೆ ತಕ್ಕ ಫಲ ದೊರೆಯುತ್ತಿಲ್ಲ. ದಿಗ್ಗಜ ಆಟಗಾರರಾದ ರಿಕಿ ಪಾಂಟಿಂಗ್ (ಕೋಚ್) ಮತ್ತು ಸೌರವ್ ಗಂಗೂಲಿ (ನಿರ್ದೇಶಕ) ಅವರು ಡಗ್‌ಔಟ್‌ನಲ್ಲಿ ಕುಳಿತು ನೀಡುತ್ತಿರುವ ಸಲಹೆಗಳಾವುವೂ ಪ್ರಯೋಜನಕ್ಕೆ ಬರುತ್ತಿಲ್ಲ.

ತಂಡದಲ್ಲಿರುವ ಭಾರತದ ಆಟಗಾರರ ಕಳಪೆ ಫಾರ್ಮ್ ಮುಂದುವರಿದಿರುವುದು ಹಿನ್ನಡೆಗೆ ಪ್ರಮುಖ ಕಾರಣ ಎನಿಸಿದೆ. ವಾರ್ನರ್ ಅವರು ಮೂರು ಅರ್ಧಶತಕಗಳ ನೆರವಿನಿಂದ 209 ರನ್ ಕಲೆಹಾಕಿದ್ದರೂ, ಅಬ್ಬರದ ಆಟವಾಡಿಲ್ಲ. 114.83 ಸ್ಟ್ರೈಕ್‌ರೇಟ್ ಮಾತ್ರ ಹೊಂದಿದ್ದಾರೆ.

ಸರ್ಫರಾಜ್ ಖಾನ್ ಬದಲು ಅವಕಾಶ ಪಡೆದಿರುವ ಮನೀಷ್ ಪಾಂಡೆ ಅವರೂ ಲಯ ಕಂಡುಕೊಂಡಿಲ್ಲ. ಮುಂಬೈ ಇಂಡಿಯನ್ಸ್ ವಿರುದ್ಧದ ಕಳೆದ ಪಂದ್ಯದಲ್ಲಿ ಅಕ್ಷರ್ ಪಟೇಲ್ ಬಿರುಸಿನ ಆಟವಾಡಿದ್ದು, ಅಲ್ಪ ಸಮಾಧಾನ ನೀಡಿದೆ. ಮಿಚೆಲ್ ಮಾರ್ಷ್ ಆಯ್ಕೆಗೆ ಲಭ್ಯವಿದ್ದು, ಕಣಕ್ಕಿಳಿಯುವ ಸಾಧ್ಯತೆಯಿದೆ.

ಪಂದ್ಯದ ಮುನ್ನಾದಿನವಾದ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡೆಲ್ಲಿ ತಂಡದ ವೇಗಿ ಎನ್ರಿಚ್ ನಾಕಿಯಾ, 'ಆಟಗಾರರು ಹುಮ್ಮಸ್ಸಿನಲ್ಲಿದ್ದು, ಒತ್ತಡಕ್ಕೆ ಒಳಗಾಗಿಲ್ಲ. ಪುಟಿದೆದ್ದು ನಿಲ್ಲುವ ವಿಶ್ವಾಸವಿದೆ' ಎಂದಿದ್ದಾರೆ.

ಒಟ್ಟಿನಲ್ಲಿ, ಕಿಕ್ಕಿರಿದು ತುಂಬಲಿರುವ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೊಂದು ರೋಚಕ ಹಣಾಹಣಿಯನ್ನು ನಿರೀಕ್ಷಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ರಾಹುಲ್ –ಶಿಖರ್ ಧವನ್ ಮುಖಾಮುಖಿ ಇಂದು

ಆತ್ಮವಿಶ್ವಾಸದಲ್ಲಿ ಲಖನೌ ಸೂಪರ್‌ಜೈಂಟ್ಸ್, ಸೋಲಿನ ಸರಣಿ ಕಳಚಲು ಪಂಜಾಬ್ ಕಿಂಗ್ಸ್ ತವಕ

ಶಿಖರ್ ಧವನ್

ಕೆ.ಎಲ್. ರಾಹುಲ್

ಲಖನೌ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡ ಈಚೆಗಷ್ಟೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗಳಿಸಿದ್ದ ರೋಚಕ ಜಯದಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿದೆ.

ಇದೇ ಹುಮ್ಮಸ್ಸಿನಲ್ಲಿ ಲಖನೌ ಶನಿವಾರ ಶಿಖರ್ ಧವನ್ ನಾಯಕತ್ವದ ಪಂಜಾಬ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ. ಲಖನೌ ಬಳಗವು ಟೂರ್ನಿಯಲ್ಲಿ ಆಡಿರುವ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಜಯಿಸಿದೆ. ಪಂಜಾಬ್ ಎರಡು ಗೆದ್ದು ಎರಡರಲ್ಲಿ ಸೋತಿದೆ. ಪಂಜಾಬ್ ತಂಡದ ಸೋಲುಗಳಿಗೆ ಬ್ಯಾಟರ್‌ಗಳ ವೈಫಲ್ಯ ಕಾರಣವಾಗಿತ್ತು.

ಎಡಗೈ ಬ್ಯಾಟರ್ ಶಿಖರ್ ಮಾತ್ರ (40, ಅಜೇಯ 86 ಹಾಗೂ ಅಜೇಯ 99) ಉತ್ತಮ ಲಯದಲ್ಲಿದ್ದಾರೆ. ವೇಗಿಗಳಾದ ಸ್ಯಾಮ್ ಕರನ್ ಹಾಗೂ ಅರ್ಷದೀಪ್ ಸಿಂಗ್ ಅವರೂ ಉತ್ತಮ ಲಯದಲ್ಲಿದ್ದಾರೆ. ಸ್ಪಿನ್ನರ್‌ಗಳಾದ ಹರಪ್ರೀತ್ ಬ್ರಾರ್ ಹಾಗೂ ರಾಹುಲ್ ಚಾಹರ್ ಕೂಡ ಉತ್ತಮ ಕಾಣಿಕೆ ನೀಡಬಲ್ಲವರು. ಈ ಬೌಲಿಂಗ್ ಪಡೆಯ ಮುಂದೆ ಲಖನೌ ತಂಡದ ಬ್ಯಾಟಿಂಗ್ ಬಲವನ್ನು ನಿಯಂತ್ರಿಸುವ ಕಠಿಣ ಸವಾಲು ಇದೆ.

ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಮಾರ್ಕಸ್ ಸ್ಟೋಯಿನಿಸ್ ಮತ್ತು ನಿಕೊಲಸ್ ಪೂರನ್ ಅವರ ಸಿಡಿಲಬ್ಬರದ ಬ್ಯಾಟಿಂಗ್ ಗಮನ ಸೆಳೆದಿತ್ತು. ಪೂರನ್ 19 ಎಸೆತಗಳಲ್ಲಿ 62 ರನ್‌ಗಳ ಮಿಂಚಿನ ಆಟವಾಡಿದ್ದರು. ಅದರಿಂದಾಗಿ ತಂಡವು 213 ರನ್‌ಗಳ ಬೃಹತ್ ಗುರಿಯನ್ನು ತಲುಪಿತ್ತು.

ಕೈಲ್ ಮೇಯರ್ಸ್ ಹಾಗೂ ಯುವ ಆಟಗಾರ ಆಯುಷ್ ಬಡೋಣಿ ಉತ್ತಮ ಲಯದಲ್ಲಿದ್ದಾರೆ. ತಂಡದ ಸ್ಪಿನ್ನರ್‌ಗಳಾದ ಅಮಿತ್ ಮಿಶ್ರಾ, ರವಿ ಬಿಷ್ಣೋಯಿ ಮತ್ತು ಕೃಣಾಲ್ ಪಾಂಡ್ಯ ಎದುರಾಳಿ ಬ್ಯಾಟಿಂಗ್ ಪಡೆಯನ್ನು ನಿಯಂತ್ರಿಸಬಲ್ಲ ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ. ಜಿಯೊ ಸಿನಿಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	4	3	1	0	6	1.588
ಲಖನೌ	4	3	1	0	6	1.048
ಗುಜರಾತ್	4	3	1	0	6	0.341
ಕೋಲ್ಕತ್ತ	4	2	2	0	4	0.711
ಚೆನ್ನೈ	4	2	2	0	4	0.225
ಪಂಜಾಬ್	4	2	2	0	4	-0.226
ಹೈದರಾಬಾದ್	4	2	2	0	4	-0.822
ಬೆಂಗಳೂರು	3	1	2	0	2	-0.800
ಮುಂಬೈ	3	1	2	0	2	-0.879
ಡೆಲ್ಲಿ	4	0	4	0	0	-1.576

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	233

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	10

ಚೇತರಿಸಿಕೊಳ್ಳುತ್ತಿರುವೆ: ರಿಷಭ್

ರಿಷಭ್ ಪಂತ್ (ಎಡ) ಅವರು ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಿದರು. ಡೆಲ್ಲಿ ತಂಡದ ಆಟಗಾರ ಅಕ್ಷರ್ ಪಟೇಲ್ ಇದ್ದಾರೆ –ಡೆಲ್ಲಿ ಕ್ಯಾಪಿಟಲ್ಸ್ ಟ್ವಿಟರ್ ಚಿತ್ರ

ಬೆಂಗಳೂರು (ಪಿಟಿಐ): 'ಕಾರು ಅಪಘಾತದಲ್ಲಿ ಆಗಿರುವ ಗಾಯಗಳಿಂದ ಶೀಘ್ರವಾಗಿ ಚೇತರಿಸಿಕೊಳ್ಳುತ್ತಿದ್ದೇನೆ' ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ ರಿಷಭ್ ಪಂತ್ ಹೇಳಿದ್ದಾರೆ.

ಇಲ್ಲಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಗೆ ಬಂದಿರುವ ಅವರು ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡೆಲ್ಲಿ ತಂಡದ ಸಹ ಆಟಗಾರರ ಜತೆ ಕಾಣಿಸಿಕೊಂಡರು.

'ಶೀಘ್ರವಾಗಿ ಚೇತರಿಸಿಕೊಳ್ಳುತ್ತಿದ್ದು, ನನ್ನ ಆರೋಗ್ಯ ದಿನದಿಂದ ದಿನಕ್ಕೆ ಉತ್ತಮಗೊಳ್ಳುತ್ತಿದೆ. ಎನ್‌ಸಿಎಗಾಗಿ ಇಲ್ಲಿಗೆ ಬಂದಿದ್ದು, ಡೆಲ್ಲಿ ತಂಡದ ಪಂದ್ಯವೂ ಇಲ್ಲೇ ನಡೆಯಲಿದೆ. ಆದ್ದರಿಂದ ಸಹ ಆಟಗಾರರನ್ನು ಭೇಟಿಯಾದೆ' ಎಂದು ಪಂತ್ ಪ್ರತಿಕ್ರಿಯಿಸಿದರು.

ಆರ್‌ಸಿಬಿ ವಿರುದ್ಧ ಶನಿವಾರ ನಡೆಯುವ ಪಂದ್ಯಕ್ಕೆ ಸಜ್ಜಾಗಲು ಡೆಲ್ಲಿ ತಂಡದ ಆಟಗಾರರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಮಧ್ಯಾಹ್ನ ಅಭ್ಯಾಸ ನಡೆಸಿದರು.

ಪಂತ್ ಅವರು ಸಹ ಆಟಗಾರರ ಜತೆ ಕೆಲ ಸಮಯ ಕಳೆದರು. 'ತಂಡದ ಆಟಗಾರರ ತಾಲೀಮನ್ನು ನೋಡಿದೆ. ಸಂದರ್ಭ ಸಿಕ್ಕಾಗಲೆಲ್ಲಾ ಸಹ ಆಟಗಾರರ ಜತೆಗೆ ಇರಲು ಬಯಸುವೆ. ಕಳೆದ ಕೆಲ ದಿನಗಳಿಂದ ಆಟ ಮತ್ತು ಅಭ್ಯಾಸವನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದೇನೆ' ಎಂದರು.

ಪಂತ್ ಅವರು ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ಸಂಭವಿಸಿದ್ದ ಕಾರು ಅಪಘಾತದಲ್ಲಿ ಗಾಯಗೊಂಡಿದ್ದರು.

ಹಾರ್ದಿಕ್‌ಗೆ ದಂಡ

ಮೊಹಾಲಿ (ಪಿಟಿಐ): ಪಂಜಾಬ್ ಕಿಂಗ್ಸ್ ವಿರುದ್ಧ ಗುರುವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿ ದ್ದಕ್ಕೆ ಗುಜರಾತ್ ಟೈಟನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ. ಮೂರು ಗಂಟೆ 20 ನಿಮಿಷಗಳಲ್ಲಿ ಪಂದ್ಯ ಮುಗಿಯಬೇಕಾಗಿರುತ್ತದೆ. ಆದರೆ ನಿಧಾನಗತಿಯ ಓವರುಗಳಿಂದ ಸಾಕಷ್ಟು ಸಂದರ್ಭಗಳಲ್ಲಿ ಪಂದ್ಯ ನಾಲ್ಕು ಗಂಟೆಗೂ ಹೆಚ್ಚು ಕಾಲ ಬೆಳೆಯುತ್ತಿದೆ.

ಕನಿಷ್ಠ ಓವರುಗಳ ದರಕ್ಕೆ ಬಂಧಿಸಿದಂತೆ ಪಾಂಡ್ಯ ಮೊದಲ ಬಾರಿ ತಪ್ಪೆಸಗಿದ ಕಾರಣ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ ಎಂದು ಐಪಿಎಲ್ ಪ್ರಕಟಣೆ ತಿಳಿಸಿದೆ. ಪಂದ್ಯದಲ್ಲಿ ಗುಜರಾತ್ ಆರು ವಿಕೆಟ್‌ಗಳಿಂದ ಜಯ ಗಳಿಸಿತ್ತು.

'ದೀಪಾವಳಿ ವೇಳೆಗೆ ಡಬ್ಲ್ಯುಪಿಎಲ್'

ಮುಂಬೈ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯನ್ನು ದೀಪಾವಳಿಯ ವೇಳೆಗೆ ದೊಡ್ಡ ಮಟ್ಟದಲ್ಲಿ ಆಯೋಜಿಸುವ ಚಿಂತನೆಯಿದೆ. ತವರು ಮತ್ತು ಹೊರಗಿನ (ಹೋಮ್ ಮತ್ತು ಅವೇ) ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಶುಕ್ರವಾರ ಹೇಳಿದ್ದಾರೆ.

ಡಬ್ಲ್ಯುಪಿಎಲ್ ಚೊಚ್ಚಲ ಆವೃತ್ತಿಯು ಈ ವರ್ಷದ ಮಾರ್ಚ್ 4ರಿಂದ 26ರವರೆಗೆ ಮುಂಬೈನ ಎರಡು ತಾಣಗಳಲ್ಲಿ ನಡೆದಿತ್ತು.

'ದೀಪಾವಳಿಯ ಸಮಯದಲ್ಲಿ ಟೂರ್ನಿಯ ನಡೆಸುವ ಯೋಜನೆಯಿದೆ. ಅಂದರೆ ವರ್ಷಕ್ಕೆ ಎರಡು ಆವೃತ್ತಿಗಳನ್ನು ಆಯೋಜಿಸುವುದಿಲ್ಲ. ಆದರೆ ಬೇರೆ ಬೇರೆ ವೇಳಾಪಟ್ಟಿಯಂತೆ ನಡೆಸುತ್ತೇವೆ' ಎಂದು ಶಾ ಹೇಳಿದ್ದಾರೆ.

ಏಷ್ಯಾಕಪ್ ಟೂರ್ನಿಯ ತಾಣ ಬದಲಿಗೆ ಚಿಂತನೆ: ಏಷ್ಯಾಕಪ್ ಟೂರ್ನಿಯಲ್ಲಿ ಆಡಲು ಭಾರತ ತಂಡವು ಪಾಕಿಸ್ತಾನಕ್ಕೆ ತೆರಳುವುದಿಲ್ಲ ಎಂದು ಶಾ ಈ ಹಿಂದೆ ಸ್ಪಷ್ಟಪಡಿಸಿದ್ದರು.

ಆದರೆ ಟೂರ್ನಿಯ ತಾಣ ಬದಲಿಸಲು ಇನ್ನುಳಿದ ದೇಶಗಳ ತಂಡಗಳ ಸಲಹೆ ಕೇಳಲಾಗುವುದು ಎಂದು ಅವರು ಶುಕ್ರವಾರ ತಿಳಿಸಿದ್ದಾರೆ.

ರಷ್ಯಾ, ಬೆಲಾರೂಸ್ ಅಥ್ಲೀಟ್‌ಗಳು ಸ್ಪರ್ಧಿಸಿದರೆ ನಮ್ಮ ತಂಡಗಳಿಗೆ ನಿರ್ಬಂಧ: ಉಕ್ರೇನ್

ಕೀವ್, ಉಕ್ರೇನ್ (ರಾಯಿಟರ್ಸ್): ರಷ್ಯಾ ಮತ್ತು ಬೆಲಾರೂಸ್ ಅಥ್ಲೀಟ್‌ಗಳನ್ನು ಒಳಗೊಳ್ಳಲಿರುವ ಒಲಿಂಪಿಕ್, ಪ್ಯಾರಾಲಿಂಪಿಕ್ ಹಾಗೂ ಇನ್ನುಳಿದ ಕೂಟಗಳಿಗೆ ನಮ್ಮ ತಂಡಗಳು ಭಾಗವಹಿಸುವುದನ್ನು ನಿರ್ಬಂಧಿಸಲಾಗುವುದು ಎಂದು ಉಕ್ರೇನ್‌ನ ಕ್ರೀಡಾ ಸಚಿವಾಲಯ ಶುಕ್ರವಾರ ತಿಳಿಸಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ರಷ್ಯಾ ಮತ್ತು ಬೆಲಾರೂಸ್ ಅಥ್ಲೀಟ್‌ಗಳಿಗೆ ತಟಸ್ಥ ಧ್ವಜದಡಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿರುವುದು ಉಕ್ರೇನ್‌ನ ಕೋಪಕ್ಕೆ ಕಾರಣವಾಗಿದೆ.

ಆದರೆ ಕ್ರೀಡಾ ಸಚಿವಾಲಯದ ನಿರ್ಧಾರವನ್ನು ಉಕ್ರೇನ್‌ನ ಕೆಲವು ಕ್ರೀಡಾಪಟುಗಳು ಟೀಕಿಸಿದ್ದಾರೆ. 'ಉಕ್ರೇನ್‌ನಲ್ಲಿ ಕ್ರೀಡೆಗಳ ನಾಶಕ್ಕೆ ಇದು ಕಾರಣವಾಗಲಿದೆ' ಎಂದು ಒಲಿಂಪಿಯನ್, ಸ್ಕೆಲೆಟನ್ ರೇಸ್ ಸ್ಪರ್ಧಿ ವ್ಲಾಡಿಸ್ಲಾವ್ ಹೆರಸ್ಕೆವಿಚ್ ಪ್ರತಿಕ್ರಿಯಿಸಿದ್ದಾರೆ.

'ಅಂತರರಾಷ್ಟ್ರೀಯ ಕೂಟಗಳಲ್ಲಿ ನಾವು ಸ್ಪರ್ಧಿಸದಿದ್ದರೆ ರಷ್ಯಾ ಮತ್ತು ಬೆಲಾರಸ್ ಪ್ರತಿನಿಧಿಗಳಿಗೆ ತಮ್ಮ ವಿಚಾರ ಹಾಗೂ ಕಾರ್ಯಸೂಚಿಗಳನ್ನು ಹರಡಲು ಅವಕಾಶ ನೀಡಿದಂತಾಗುತ್ತದೆ' ಎಂದು ವ್ಲಾಡಿಸ್ಲಾವ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ರಷ್ಯಾ ಕಳೆದ ವರ್ಷ ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ಯುದ್ಧ ಸಾರಿತ್ತು. 14 ತಿಂಗಳು ಕಳೆದರೂ ಕದನ ಮುಂದುವರಿದಿದ್ದು, ಸಾವಿರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ.

ಫುಟ್‌ಬಾಲ್: ಕಿಂಗ್ಸ್ ಕಪ್, ಮೆರ್ಡೆಕಾ ಕಪ್‌ನಲ್ಲಿ ಭಾರತ ಕಣಕ್ಕೆ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡ ಜೂನ್‌ನಿಂದ ಈ ವರ್ಷದ ಕೊನೆಯವರೆಗೂ ಹಲವು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪಾಲ್ಗೊಳ್ಳಲಿದೆ ಎಂದು ಎಐಎಫ್‌ಎಫ್ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಶುಕ್ರವಾರ ತಿಳಿಸಿದ್ದಾರೆ.

'ಜೂನ್ ತಿಂಗಳಲ್ಲಿ ಇಂಟರ್ ಕಾಂಟಿನೆಂಟಲ್ ಕಪ್ ಮತ್ತು ಸ್ಯಾಫ್ ಚಾಂಪಿಯನ್‌ಷಿಪ್ ನಡೆಯಲಿದೆ. ಆ ಬಳಿಕ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಕಿಂಗ್ಸ್ ಕಪ್ ಹಾಗೂ ಅಕ್ಟೋಬರ್‌ನಲ್ಲಿ ಮಲೇಷ್ಯಾದಲ್ಲಿ ನಡೆಯಲಿರುವ ಮೆರ್ಡೆಕಾ ಕಪ್ ಟೂರ್ನಿಯಲ್ಲಿ ಭಾಗವಹಿಸಲಿದೆ' ಎಂದು ಹೇಳಿದರು.

2026ರ ಫಿಫಾ ವಿಶ್ವಕಪ್ ಅರ್ಹತಾ ಪಂದ್ಯಗಳು ನವೆಂಬರ್– ಡಿಸೆಂಬರ್ ತಿಂಗಳಲ್ಲಿ ನಡೆಯಲಿದೆ.

ಸುನಿಲ್‌ಗೆ ಪ್ರಶಸ್ತಿ

ಬೆಂಗಳೂರು: ಸುನಿಲ್ ಕೆ ವಸಂತ್ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಈಚೆಗೆ ನಡೆದ ಕ್ಯಾಪ್ಟನ್ಸ್ ಪಟರ್ ಟೂರ್ನಿಯಲ್ಲಿ 39 ಅಂಕಗಳನ್ನು ಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ತಲಾ 37 ಅಂಕ ಗಳಿಸಿದ ಅಮಿತಾಭ್ ಪೊದ್ದಾರ್ ಹಾಗೂ ಸಿ. ಸುಂದರ್ ರನ್ನರ್ಸ್ ಅಪ್ ಆದರು.

ಫಲಿತಾಂಶ: ಪುರುಷರು: ಹ್ಯಾಂಡಿಕ್ಯಾಪ್ 0–9: ಸುನಿಲ್ ಕೆ ವಸಂತ್ –1, ಅಮಿತಾಭ್ ಪೊದ್ದಾರ್ –2. 10 ರಿಂದ 18 : ರೋಹನ್ ಮಿತ್ತಲ್ –1, ಕರಣ್ ಮಲಿಕ್ –2. 19–24: ಎಂ.ಎಸ್. ಬಾಲಸುಬ್ರಣಿಯನ್ –1, ಕೆ.ಎಸ್. ಉಮೇಶ್ ಹಾಗೂ ಅಶ್ವಿನ್ ಸದಾನಂದ –2.

25–36: ಬಿ.ಎಸ್. ಪಾಟೀಲ –1, ವಿಶ್ವನಾಥ್ ರಾವ್ –2.

ಮಹಿಳೆಯರು: ಗ್ರಾಸ್ ಸ್ಕೋರ್: ಲತಾ ಶಿವಣ್ಣ (29 ಅಂಕ)–1, ನೆಟ್‌ಸ್ಕೋರ್: 0–16– ಅನಿತಾ ಶ್ರೀಶರಿಮಲ್ –1

17–24; ರೀನಾರಾಯ್ ಲೆಂಕಾ –1.

ಟೆನಿಸ್: ಜೊಕೊವಿಚ್‌ಗೆ ನಿರಾಸೆ



ಇಟಲಿಯ ಲೊರೆನ್ಜೊ –ಎಎಫ್‌ಪಿ ಚಿತ್ರ

ಮೊನಾಕೊ (ಎಪಿ/ ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ನೊವಾಕ್ ಜೊಕೊವಿಚ್ ಅವರು ಇಲ್ಲಿ ನಡೆಯುತ್ತಿರುವ ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಸೋತು ಹೊರಬಿದ್ದರು.

ಶುಕ್ರವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಜೊಕೊವಿಚ್ 6–4, 5–7, 4–6 ರಲ್ಲಿ ಇಟಲಿಯ ಲೊರೆನ್ಜೊ ಮುಸೆಟ್ಟಿ ಎದುರು ಪರಾಭವಗೊಂಡರು. ಸತತ ಮೂರನೇ ವರ್ಷ ಅವರು ಎಂಟರ ಘಟ್ಟ ತಲುಪಲು ವಿಫಲರಾಗಿದ್ದಾರೆ. ಕಳೆದ ವರ್ಷ ಮೊದಲ ಸುತ್ತಿನಲ್ಲೇ ಮುಗ್ಗರಿಸಿದ್ದರೆ, 2021 ರಲ್ಲಿ ಮೂರನೇ ಸುತ್ತಿನಲ್ಲಿ ಹೊರಬಿದ್ದಿದ್ದರು.

ಈ ಋತುವಿನಲ್ಲಿ ಕ್ಲೇ ಕೋರ್ಟ್‌ನಲ್ಲಿ ತಮ್ಮ ಎರಡನೇ ಪಂದ್ಯವನ್ನಾಡಿದ ಜೊಕೊವಿಚ್, ಮೊದಲ ಸೆಟ್ ಗೆದ್ದು ಉತ್ತಮ ಆರಂಭ ಪಡೆದಿದ್ದರು. ಎರಡನೇ ಸೆಟ್‌ನಲ್ಲಿ ಲಯ ಕಳೆದುಕೊಂಡು ಸೋಲಿನ ಹಾದಿ ಹಿಡಿದರು. ಎರಡನೇ ಸೆಟ್‌ನಲ್ಲಿ ಮುಸೆಟ್ಟಿ ಅವರು ಐದು ಸಲ ಸರ್ಬಿಯದ ಆಟಗಾರನ ಸರ್ವ್ ಬ್ರೇಕ್ ಮಾಡಿ ಮೇಲುಗೈ ಸಾಧಿಸಿದರು.

ಸಿಟ್ಸಿಪಾಸ್ ಕನಸು ಭಗ್ನ: ಇಲ್ಲಿ ಸತತ ಮೂರನೇ ಪ್ರಶಸ್ತಿ ಗೆಲ್ಲಬೇಕೆಂಬ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಅವರ ಕನಸು ಭಗ್ನಗೊಂಡಿತು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ 6–2, 6–4 ರಲ್ಲಿ ಸಿಟ್ಸಿಪಾಸ್ ಅವರನ್ನು ಮಣಿಸಿದರು.

ಬಾರ್ಸಿಲೋನಾ ಮಾಸ್ಟರ್ಸ್‌ಗೆ ನಡಾಲ್ ಇಲ್ಲ: ಸ್ಪೇನ್‌ನ ರಫೆಲ್ ನಡಾಲ್ ಅವರು ಶನಿವಾರ ಆರಂಭವಾಗುವ ಎಟಿಪಿ ಬಾರ್ಸಿಲೋನಾ ಟೂರ್ನಿಯಿಂದ ಹಿಂದೆ ಸರಿದಿದ್ದು, ಫ್ರೆಂಚ್ ಓಪನ್‌ನ ಸಿದ್ಧತೆಯ ಹಾದಿಯಲ್ಲಿ ಹಿನ್ನಡೆ ಉಂಟಾಗಿದೆ.

ಪೂರ್ಣ ಸಾಮರ್ಥ್ಯದೊಂದಿಗೆ ಆಡುವಷ್ಟು ಫಿಟ್‌ನೆಸ್ ಹೊಂದದೇ ಇರುವುದರಿಂದ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. 36 ವರ್ಷದ ನಡಾಲ್, ಮಾಂಟೆಕಾರ್ಲೊ ಟೂರ್ನಿಯಲ್ಲೂ ಪಾಲ್ಗೊಂಡಿಲ್ಲ.

ಉದಕಮಂಡಲ ರೇಸ್

ಟೈಮ್ ಆ್ಯಂಡ್ ಟ್ರೆಂಡ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ 2000 ಗಿನ್ನೀಸ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಆ್ಯಂಡ್ ಟ್ರೆಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ರೂಲ್ ಆಫ್ ಎಂಪರರ್ಸ್ 2, ಮಾರ್ಷಲ್ 5, ಸಂಗವಾಯ್ 3
2ನೇ ರೇಸ್: ಮಲ್ಟಿಕ್ರೌನ್ 3, ಕ್ಲಾಕ್‌ವೈಸ್ 5, ಡಾಮ್ ಫಾಂಟೈನ್ 7
3ನೇ ರೇಸ್: ಹ್ಯಾಪಿನೆಸ್ 4, ಸೆನ್ಸೇಷನ್ಸ್ 7, ನ್ಯಾಶ್‌ವೆಗಾಸ್ 6
4ನೇ ರೇಸ್: ಟೈಮ್ ಆ್ಯಂಡ್ ಟ್ರೆಂಡ್ 8, ನಾಟಿ ಚಾರ್ಮರ್ 4, ಗೋಲ್ಡನ್ ವಾರಿಯರ್ 3
5ನೇ ರೇಸ್: ಸ್ಪೋರ್ಟಿಂಗ್ ಸ್ಪಿರಿಟ್ 2, ರೂಬರ್ಟ್ 4, ಸಾಂತಮರೀನಾ ಸ್ಟಾರ್ 5
6ನೇ ರೇಸ್: ಮಾಸ್ಟರ್ವೀಸ್ 5, ರಾಯಲ್ ಬೆರಾನ್ 4, ಅರೆತಾ 2

ಉತ್ತಮ ಬೆಟ್: ಹ್ಯಾಪಿನೆಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸುಧಾ, ಮಯೂರ ಓದಿರಿ

ರುದ್ರಾಕ್ಷ್, ಅಂಜುಂ ಕೈಸೇರಲಿದೆ ಬಹುಮಾನ ಮೊತ್ತ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳಾದ ರುದ್ರಾಕ್ಷ್ ಪಾಟೀಲ್ ಮತ್ತು ಅಂಜುಂ ಮೌದ್ಗಿಲ್ ಅವರು ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಸಾಧನೆಗಾಗಿ ನಗದು ಬಹುಮಾನವನ್ನು ಪಡೆಯಲಿದ್ದಾರೆ.

ಕಳೆದ ವರ್ಷ ನಡೆದಿದ್ದ ಕೂಟದಲ್ಲಿ ಚಿನ್ನ ಜಯಿಸಿದ್ದ ರುದ್ರಾಕ್ಷ್ ಅವರಿಗೆ ₹ 13.25 ಲಕ್ಷ ಹಾಗೂ ಬೆಳ್ಳಿ ಗೆದ್ದಿದ್ದ ಅಂಜುಮ್ ಅವರಿಗೆ ₹ 6.25 ಲಕ್ಷ ಲಭಿಸಲಿದೆ. ಪ್ರೆಸಿಡೆಂಟ್ಸ್ ಕಪ್‌ನಲ್ಲಿ ಪದಕ ಗೆದ್ದವರಿಗೆ ಬಹುಮಾನ ನೀಡುವುದಾಗಿ ಅಂತರರಾಷ್ಟ್ರೀಯ ಶೂಟಿಂಗ್ ಫೆಡರೇಷನ್‌ನ ಹಿಂದಿನ ಅಧ್ಯಕ್ಷ ವ್ಲಾದಿಮಿರ್ ಲಿಸಿನ್ ಪ್ರಕಟಿಸಿದ್ದರು.

ಇಂಡಿಯನ್ ಗ್ರ್ಯಾನ್‌ಪ್ರಿ 4 ಇಂದು: ಕಣದಲ್ಲಿ ಅಮ್ಲಾನ್

ಚಿನ್ನದ ನಿರೀಕ್ಷೆಯಲ್ಲಿ ವಿಜಯಕುಮಾರಿ



ಅಮ್ಲಾನ್ ಬೊರ್ಗೊಹೈನ್

ಬೆಂಗಳೂರು: ಕರ್ನಾಟಕದ ಜಿ.ಕೆ. ವಿಜಯಕುಮಾರಿ ಹಾಗೂ ಎ.ಟಿ. ದಾನೇಶ್ವರಿ ಅವರು ಇಲ್ಲಿ ಶನಿವಾರ ನಡೆಯಲಿರುವ ಇಂಡಿಯನ್ ಗ್ರ್ಯಾನ್‌ಪ್ರಿ 4 ಅಥ್ಲೆಟಿಕ್ ಕೂಟದಲ್ಲಿ ಸ್ಪರ್ಧಿಸಲಿದ್ದು, ಚಿನ್ನದ ಪದಕದ ನಿರೀಕ್ಷೆಯಲ್ಲಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಸ್ಪರ್ಧೆಯಲ್ಲಿ ದಾನೇಶ್ವರಿ ಅವರು ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ. ತಮಿಳುನಾಡಿನ ಅರ್ಚನಾ ಸುಶೀಂದ್ರನ್ ಕೂಡ ಈ ವಿಭಾಗದಲ್ಲಿ ಪದಕ ಜಯಿಸುವ ನೆಚ್ಚಿನ ಅಥ್ಲೀಟ್ ಎನಿಸಿದ್ದಾರೆ. ವಿಜಯಕುಮಾರಿ ಅವರು 800 ಮೀ. ವಿಭಾಗದಲ್ಲಿ ಸ್ಪರ್ಧಿಸುವರು. ಇದೇ ಕ್ರೀಡಾಂಗಣದಲ್ಲಿ ಸೋಮವಾರ ನಡೆದಿದ್ದ ಗ್ರ್ಯಾನ್‌ಪ್ರಿ 3 ಕೂಟದಲ್ಲಿ ಅವರಿಗೆ ಚಿನ್ನದ ಪದಕ ಒಲಿದಿತ್ತು.

ವಿಭಾಗದ ಸ್ಪ್ರಿಂಟರ್‌ಗಳ ಪೈಕಿ ಅಸ್ಸಾಂನ ಅಮ್ಲಾನ್ ಬೊರ್ಗೊಹೈನ್, ಲಾಂಗ್‌ಜಂಪ್‌ನಲ್ಲಿ ಕೇರಳದ ಮುಹಮ್ಮದ್ ಅನೀಸ್ ಯಾಹ್ಯಾ, ಶಾಟ್‌ಪಟ್‌ನಲ್ಲಿ ಪಂಜಾಬ್‌ನ ತಜಿಂದರ್ ಪಾಲ್ ಸಿಂಗ್ ಸ್ಪರ್ಧೆಯಲ್ಲಿರುವ ಪ್ರಮುಖ ಅಥ್ಲೀಟ್‌ಗಳಾಗಿದ್ದಾರೆ. ಜಾವೆಲಿನ್ ಥ್ರೊ ಪಟುಗಳಾದ ವಿಕಾಸ್ (ಪಂಜಾಬ್), ಕರ್ನಾಟಕದ ಡಿ.ಪಿ. ಮನು, ಶಿವಪಾಲ್ ಸಿಂಗ್, ರೋಹಿತ್ ಯಾದವ್ (ಉತ್ತರ ಪ್ರದೇಶ) 'ಪೋಡಿಯಂ ಫಿನಿಷ್'ಗೆ ಪ್ರಯತ್ನಿಸುವರು.

JOS ALUKKAS
A TRADITION OF FINE JEWELLERY
ಕಮ್ಮನಹಳ್ಳಿಯಲ್ಲಿ ಭವ್ಯವಾದ ಸುವರ್ಣಮಯ ಹೊಸ ಆರಂಭ.
ಜೋಸ್ ಆಲುಕ್ಕಾಸ್ ರವರ ಹೊಚ್ಚ ಹೊಸ ಶೋರೂಮ್‌ನಲ್ಲಿ
ಇಂದಿನಿಂದ ಶುದ್ಧ ಚಿನ್ನ ಮತ್ತು ವಜ್ರದ ಆಭರಣಗಳನ್ನು ಖರೀದಿಸಿ ಧೈರ್ಯವಾಗಿ.
ಅದ್ದೂರಿ ಉದ್ಘಾಟನೆ ಇಂದು ಬೆಳಗ್ಗೆ 10.30 ಕ್ಕೆ
ಸರ್ವರಿಗೂ ಸುಸ್ವಾಗತ!
ಹಳೆಯ ICICI ಬ್ಯಾಂಕ್ ಬಿಲ್ಡಿಂಗ್, ಕಮ್ಮನಹಳ್ಳಿ ಮುಖ್ಯ ರಸ್ತೆ, 3ನೇ ಬ್ಲಾಕ್ HRBR ಲೇಔಟ್,
ಬೆಂಗಳೂರು, ಫೋನ್: 080-22202916, ಮೊಬೈಲ್: 9605788759
ಜೋಸ್ ಆಲುಕ್ಕಾಸ್
JOS ALUKKAS
*Conditions apply
ಉದ್ಘಾಟನಾ ವಿಶೇಷ ಆಫರ್
ರೂ.40,000 ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸಿ ಮತ್ತು
ಚಿನ್ನದ ನಾಣ್ಯವನ್ನು
ಉಚಿತವಾಗಿ ಪಡೆಯಿರಿ
ಆಫರ್ ಏಪ್ರಿಲ್ 19 ರವರೆಗೆ ಮಾನ್ಯವಾಗಿರುತ್ತದೆ
ಶುದ್ಧ ಚಿನ್ನ, ಗುಣಮಟ್ಟದ ವಜ್ರಗಳು, ಪ್ಲಾಟಿನಂ ಮತ್ತು ಬೆಳ್ಳಿಯ ಆಭರಣಗಳ
ಇತ್ತೀಚಿನ ಶ್ರೇಣಿಯ ಸೊಗಸಾದ ಡಿಸೈನ್‌ಗಳು ನಮ್ಮ ಹೊಸ ಶೋರೂಮ್‌ನಲ್ಲಿ ನಿಮಗಾಗಿ ಕಾಯುತ್ತಿವೆ
ವಜ್ರಗಳ ಮೇಲೆ 20% ರಿಯಾಯಿತಿ ಜೋಸ್ ಆಲುಕ್ಕಾಸ್‌ನ ಮದುವೆಯ ವಜ್ರದ ಆಭರಣಗಳ ಆಕರ್ಷಕ ಸಂಗ್ರಹದೊಂದಿಗೆ ಪ್ರಕಾಶಮಾನವಾಗಿ ಹೊಳೆಯಿರಿ
ಸೊಗಸಾದ ಪ್ಲಾಟಿನಂ ಆಭರಣಗಳಿಗೆ 7% ರಿಯಾಯಿತಿ
ಪ್ರತಿ ಖರೀದಿಯೊಂದಿಗೆ ಉಚಿತ ಉಡುಗೊರೆ
ಚಿನ್ನದ ಎಕ್ಸ್‌ಚೇಂಜ್ ನಿಮ್ಮ ಹಳೆಯ ಚಿನ್ನವನ್ನು ಹೊಸ BIS HUID ಹಾಲ್‌ಮಾರ್ಕ್ ಚಿನ್ನದ ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ ಹೆಚ್ಚಿನ ಲಾಭಗಳೊಂದಿಗೆ
100% HUID ಚಿನ್ನದ ಆಭರಣಗಳು
ನಮ್ಮ ಮಾಸಿಕ ಚಿನ್ನದ ಯೋಜನೆಯಲ್ಲಿ ಹೂಡಿಕೆ ಮಾಡಿ ಮತ್ತು ಸ್ಕೀಮ್ ಮುಗಿದ ಮೇಲೆ ವಿಶೇಷ ರಿಯಾಯಿತಿಗಳೊಂದಿಗೆ ಆಭರಣಗಳನ್ನು ಪಡೆಯಿರಿ
Akshaya Tritiya
22nd APRIL 2023
ಅಡ್ವಾನ್ಸ್ ಬುಕಿಂಗ್ ಪ್ರಾರಂಭವಾಗಿದೆ
ಚಿನ್ನದ ದರ ಏರಿಕೆಯಿಂದ ರಕ್ಷಣೆ ಪಡೆಯಲು ಇಂದೇ ಬುಕ್ ಮಾಡಿ ಮತ್ತು
ಉಚಿತ ಚಿನ್ನದ ನಾಣ್ಯಗಳು ಪಡೆಯುವುದನ್ನು ಖಚಿತಪಡಿಸಿಕೊಳ್ಳಿ
(ನಮ್ಮ ಡಿಕನ್ಸನ್ ರೋಡ್, ರಾಜಾಜಿ ನಗರ, ಜಯನಗರ, ಫೋರಂ ಮಾಲ್
ಮತ್ತು ಹೊಸೂರು ಶೋರೂಮ್‌ಗಳಲ್ಲಿಯೂ ಲಭ್ಯವಿದೆ)
Inauguration
M. S. SRINIVAS
ASST. COMMISSIONER OF POLICE (RTD.)
KARNATAKA STATE POLICE
Celebrity Guests
SHIVADHWAJ SHETTY
ACTOR & DIRECTOR
ANUSHA RAI
ACTRESS
Chairman
JOS ALUKKA
Managing Directors, Jos Alukkas Group
VARGHESE ALUKKA
PAUL J. ALUKKA
JOHN ALUKKA
also at: 3rd Block, JAYANAGAR, Bengaluru. Ph: 080-41539802 | DICKENSON ROAD, Bengaluru.
Ph: 080-25552281 | RAJAJINAGAR 1ST BLOCK, Bengaluru. Ph: 080-23192319 |
FORUM MALL, Bengaluru Ph: 080 – 6836 5475, Shop online at www.josalukkasonline.com
ಜೋಸ್ ಆಲುಕ್ಕಾಸ್
KARNATAKA | TAMIL NADU | KERALA | PUDUCHERRY | ANDHRA PRADESH | TELANGANA

ಮನೆ–ಮನ ತಣಿಸುವ ಸಸ್ಯಗಳು

ಹಸಿರು ಉಸಿರು

ಚಂದ್ರಶೇಖರ

ಮನೆಯಂಗಳದಲ್ಲಿ ಕೈತೋಟವಿದ್ದರೆ ಮನೆಯ ಅಂದ ಹೆಚ್ಚುತ್ತದೆ. ಮನೆಯ ಸುತ್ತ ಮರ- ಗಿಡಗಳಿದ್ದರೆ ವಾತಾವರಣ ತಂಪಾಗಿರುತ್ತದೆ. ಮನೆ ಒಳಾಂಗಣದಲ್ಲಿ ಹೂವು- ಅಲಂಕಾರಿಕ ಗಿಡಗಳಿದ್ದರೆ ಮನೆಯೂ ತಂಪಾಗಿ ಅಹ್ಲಾದಕರವಾಗಿರುತ್ತದೆ. ಹಾಗಾದರೆ, ಮನೆಯೊಳಾಂಗಣ ತಂಪಾಗಿಡುವ ಹೂವಿನ ಗಿಡಗಳಾವುವು ? ಅವುಗಳನ್ನು ಬೆಳೆಸುವುದು ಹೇಗೆ ? ಎಲ್ಲಿ ಜೋಡಿಸುವುದು – ತಿಳಿಯೋಣ ಬನ್ನಿ.

ತಂಪು ನೀಡುವ ಫರ್ನ್

'ಗಾಳಿಯ ಸಸ್ಯ' ಎಂದೇ ಕರೆಯುವ ಫರ್ನ್ ಗಿಡ, ಒಂದು ಅಲಂಕಾರಿಕ ಸಸ್ಯವೂ ಹೌದು. ಸಣ್ಣ ಸಣ್ಣ ತೂಗು ಕುಂಡಗಳಲ್ಲಿ, ಕಾಯರ್ ಪಿತ್(ಕೋಕೊಪಿತ್) ತುಂಬಿ, ಈ ಫರ್ನ್ ಸಸ್ಯ ನೆಟ್ಟು ಬೆಳೆಸಬಹುದು. ಸುಲಭವಾಗಿ ಬೆಳೆಯುತ್ತದೆ. ಆಗಾಗ್ಗೆ ನೀರು ಚಿಮುಗಿಸುತ್ತಿದ್ದರೆ ಸಾಕು.

ಈ ಫರ್ನ್ ಸಸ್ಯವಿರುವ ಕುಂಡವನ್ನು ಮನೆಯೊಳಗೆ ಗಾಳಿ ಬೀಸುವ ಜಾಗದಲ್ಲಿ ತೂಗು ಹಾಕಿದರೆ. ಮನೆಯೊಳಗೆ ತಣ್ಣಗಿನ ಗಾಳಿ ಬೀಸುತ್ತದೆ. ಮನೆಯ ಒಳಾಂಗಣವೂ ಚಂದ ಕಾಣುತ್ತದೆ.

ಆರ್ಕಿಡ್ ಸಸ್ಯಗಳು

ತೆಂಗಿನಕಾಯಿಯನ್ನು ಬೇರ್ಪಡಿಸಿದ ಸಿಪ್ಪೆಯನ್ನು ತೆಗೆದುಕೊಳ್ಳಿ. ಅದರ ಒಳಗಡೆ ಸ್ವಲ್ಪ ಇದ್ದಿಲನ್ನು ತುಂಬಿ. ಡೆಂಡ್ರೋಬಿಯಂ ಅಥವಾ ಇನ್ನಾವುದೇ ತಳಿಯ ಆರ್ಕಿಡ್ ಅನ್ನು ತೆಗೆದುಕೊಂಡು ಆರ್ಕೀಡನ್ನು ಇದರೊಳಗೆ ಬೆಳೆಸಬಹುದು. ಅದನ್ನು ಮನೆಯ ಒಳಾಂಗಣದಲ್ಲಿ ಕಿಟಕಿಯ ಬಳಿಯಲ್ಲಿ ತೂಗು ಹಾಕಿದರೆ, ಮನೆಯ ಅಂದವೂ ಹೆಚ್ಚುತ್ತದೆ. ವಾತಾವರಣವೂ ತಂಪಾಗಿರುತ್ತದೆ.

ಹೂ ಪಕಳೆಗಳು

ಅಗಲ ಬಾಯಿಯ ಮಣ್ಣಿನ ಪಾತ್ರೆಯಲ್ಲಿ ಪರಿಮಳ ಸೂಸುವ, ತಿಳಿ ಬಣ್ಣದ ಹೂವಿನ ಪಕಳೆಗಳನ್ನು ಹಾಕಿಡಿ. ಉದಾಹರಣೆಗೆ; ಗುಲಾಬಿ, ಪ್ಲುಮೆರಿಯಾ, ಚೆಂಡು ಹೂವು, ಮಲ್ಲಿಗೆ.. ಇಂಥವು. ಮನೆಯ ಪ್ರವೇಶ ದ್ವಾರದಲ್ಲೋ, ಪಡಸಾಲೆಯಲ್ಲೋ ಅಥವಾ ಎಲ್ಲಿ ಅನುಕೂಲವೋ, ಅಲ್ಲಿ ಈ ಪಾತ್ರೆಯನ್ನು ಇಡಿ. ಇಡೀ ದಿನ ಮನೆ ಒಳಾಂಗಣದಲ್ಲಿ ಪರಿಮಳ ಪಸರಿಸಿರುತ್ತದೆ. ಇದರಿಂದ, ಮನೆ ತಂಪಾಗುವ ಜೊತೆಗೆ, ಮನಸ್ಸಿಗೂ ಹಿತವಾಗಿರುತ್ತದೆ. ಕೆಲವರು ಈ ಹೂ ಪಾತ್ರೆಯನ್ನು ಅಂಗಳದಲ್ಲಿಡುತ್ತಾರೆ. ಇನ್ನೂ ಕೆಲವರು ಎತ್ತರಿಸಿದ ಪೈಪ್ ಗಳ ಮೇಲೂ ಜೋಡಿಸುತ್ತಾರೆ. ಕೆಲವರು ದೀಪದ ಕಂಬದ ಕೆಳಭಾಗದಲ್ಲಿಡುತ್ತಾರೆ.

ಜಲಸಸ್ಯಗಳನ್ನು ಬೆಳೆಸಿ

ಮಣ್ಣಿನ ಮಡಿಕೆಯ ತಳಕ್ಕೆ ಸ್ವಲ್ಪ ಮಣ್ಣು, ನೀರು ಹಾಕಿ, ಅದರೊಳಗೆ ಗೆಡ್ಡೆಗಳನ್ನು ಊರಿ ವಾಟರ್ ಲಿಲ್ಲಿಯಂತಹ ಸಸ್ಯಗಳನ್ನು ಬೆಳೆಸಬಹುದು. ಇವೇ ಜಲ ಸಸ್ಯಗಳು. ವಾಟರ್ ಲೆಟ್ಯೂಸ್ ತರಹ ಜಲ ಸಸ್ಯಗಳನ್ನೂ ಮಣ್ಣಿನ ಮಡಿಕೆಗಳಲ್ಲಿ ಹಾಕಿ ಮನೆ ಒಳಗಡೆ ಇಡಬಹುದು. ಮನೆಯ ಅಂಗಳ ಸ್ವಲ್ಪ ವಿಶಾಲವಾಗಿದ್ದರೆ, ಇಂಥ ಜಲಸಸ್ಯಗಳನ್ನು ಬೆಳೆಸಲು, ಚಂದವಾಗಿ ಜೋಡಿಸಲು ಅನುಕೂಲವಾಗುತ್ತದೆ.

ಚಿತ್ರಗಳು : ಸೌಗಂಧಿಕ ಚಂದ್ರು

ಬಿಸಿಲಿಗೆ ಮೇಕಪ್ ಹೀಗಿರಲಿ

ಬಿಸಿಲ ಧಗೆ ಹೆಚ್ಚುತ್ತಿದೆ. ಬೇಸಿಗೆ ಬಂತೆಂದರೆ ಸೆಕೆಯ ನಡುವೆ ಸಮಾರಂಭಗಳ ಸರಮಾಲೆ ಆರಂಭವಾಗುತ್ತವೆ. ಆರೋಗ್ಯದ ಬಗ್ಗೆ ಕಾಳಜಿ ಮಾಡಿದಷ್ಟೇ ಹಾಕಿಕೊಳ್ಳುವ ಮೇಕಪ್ ಬಗ್ಗೆಯೂ ಎಚ್ಚರ ವಹಿಸಬೇಕು.

ಬೇಸಿಗೆಯಲ್ಲಿ ಅತಿಯಾಗಿ ಬೆವರುವುದರಿಂದ ಥಾಳವಾದ ಮೇಕಪ್‌ನಿಂದ ದೂರವಿರಿ. ಚರ್ಮದ ಆರೈಕೆಗೆ ನೀರಿನ ಸೇವನೆ, ಪೌಷ್ಟಿಕಯುಕ್ತ ಆಹಾರ ಸೇವನೆ ಅಗತ್ಯ. ಜತೆಗೆ ಆದಷ್ಟು ಬಿಸಿಲಿಗೆ ಮೈ ಒಡ್ಡಿಕೊಳ್ಳುವುದನ್ನು ತಪ್ಪಿಸಿ. ಹೊರಗೆ ಹೋಗಲೇಬೇಕು ಎಂದರೆ ಕೆಲವು ಅಗತ್ಯ ಕ್ರಮಗಳನ್ನು ಕೈಗೊಳ್ಳಿ.

ಸನ್‌ಸ್ಕ್ರೀನ್ ಬಳಕೆ ಇರಲಿ: ತುಂಬಾ ಹೊತ್ತು ಬಿಸಿಲಿನಲ್ಲಿ ಇರುವುದರಿಂದ ಚರ್ಮ ಸುಟ್ಟ ಅನುಭವ ಆಗುತ್ತದೆ. ಒಮ್ಮೆ ಸನ್ ಟ್ಯಾನ್ ಆದರೆ, ಅದರಿಂದ ಕೆಲವೊಮ್ಮೆ ಸುಲಭವಾಗಿ ಹೊರಬರಲು ಸಾಧ್ಯವಿಲ್ಲ. ಹಾಗಾಗಿ ಉತ್ತಮ ಸನ್‌ಸ್ಕ್ರೀನ್ ಲೋಷನ್ ಬಳಸುವುದನ್ನು ತಪ್ಪಿಸದಿರಿ. ಎಸ್‌ಪಿಎಫ್ 30 (ಸನ್ ಪ್ರೊಟೆಕ್ಷನ್ ಫ್ಯಾಕ್ಟರ್ 30) ಇದಕ್ಕಿಂತಲೂ ಅಧಿಕವಿರುವ ಸನ್‌ಸ್ಕ್ರೀನ್ ಕ್ರೀಮ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಎಲ್ಲ ಬಗೆಯ ಚರ್ಮಗಳಿಗೂ ಹೊಂದುವಂಥ ಸನ್‌ಸ್ಕ್ರೀನ್ ಕ್ರೀಮ್ ಆಯ್ಕೆ ಮಾಡಿಕೊಳ್ಳಿ.

ಬೇಸಿಗೆ ಆಕ್ಸೆಸರಿಸ್ ಬಳಸಿ: ಶಾಲೆ ರಜೆ ಇರುವುದರಿಂದ ಮಕ್ಕಳ ಜತೆ ಸೇರಿ ಕಾಡು–ಮೇಡು, ಶಿಖರ, ಸಮುದ್ರ ಸುತ್ತಲೂ ಹೋಗುವುದು ಸಾಮಾನ್ಯ. ಇಂಥ ವೇಳೆ ಆದಷ್ಟು ಕಾಟನ್ ಬಟ್ಟೆಗಳ ಜತೆ ತಲೆಗೆ ಹ್ಯಾಟ್ ಧರಿಸುವುದನ್ನು ಮರೆಯಬೇಡಿ. ಅತಿಯಾಗಿ ಬಿಸಲಿಗೆ ಒಡ್ಡಿಕೊಳ್ಳುವುದರಿಂದ ತಲೆಬೇನೆ ಕಾಡಬಹುದು. ಮುಖಕ್ಕೂ, ತಲೆಗೂ ರಕ್ಷಣೆ ನೀಡುವಂಥ ಟೊಪ್ಪಿಗಳನ್ನು ಬಳಸಿ. ಈ ಟೊಪ್ಪಿಗಳ ಫ್ಯಾಬ್ರಿಕ್ ಕಾಟನ್ ಅಥವಾ ಲಿನಿನ್ ಆಗಿರಲಿ.

ಆಗಾಗ ಮುಖ ತೊಳೆಯಿರಿ: ಬಿಸಿಲ ತಾಪಕ್ಕೆ ಸೆಕೆ ಬೊಕ್ಕೆಗಳಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ಆಗಾಗ ನೀರಿನಲ್ಲಿ ಮುಖ ತೊಳೆಯುತ್ತಿರಿ. ಸಾಧ್ಯವಾದರೆ ದಿನಕ್ಕೆ ಎರಡು ಬಾರಿ ಸ್ನಾನ ಮಾಡಿ. ಇದರಿಂದ ಸೆಕೆ ಬೊಕ್ಕೆಯಾಗುವುದನ್ನು ತಪ್ಪಿಸಬಹುದು. ಜತೆಗೆ ದೇಹವನ್ನು ತಂಪಾಗಿಡುವ ಮೂಲಕ ಬೊಕ್ಕೆ ಆಗುವುದನ್ನು ತಪ್ಪಿಸಬಹುದು.

ಮಿತವಾದ ಮೇಕಪ್: ಮೇಕಪ್ ಮಿತವಾಗಿರಲಿ. ವಿಟಮಿನ್ ಸಿ ಅಂಶವಿರುವ ಸಿರಮ್ ಹೆಚ್ಚುಬಳಸಿ. ಇದು ಎಲ್ಲ ಕಾಲಕ್ಕೂ ತ್ವಚೆಯನ್ನು ಕಾಪಿಡಬಲ್ಲದು. ಉತ್ತಮ ಗುಣಮಟ್ಟದ ಕ್ಲೆನ್ಸರ್ ಹಾಗೂ ಮಾಯ್ಚ್‌ರೈಸರ್ ಬಳಸಿ.

ನಾಳೆ 'ಶೂನ್ಯದಿಂದ ಸೂಫಿವರೆಗೆ'

ನೃತ್ಯಗಾರ್ತಿ ಮಧುಲಿತಾ ಮೊಹಪಾತ್ರ ಹಾಗೂ ನೃತ್ಯಾಂತರ ತಂಡವು ಜಂಟಿಯಾಗಿ ಏಪ್ರಿಲ್ 16ರಂದು 'ಶೂನ್ಯದಿಂದ ಸೂಫಿವರೆಗೆ' ನಾಟ್ಯ ಕಾರ್ಯಕ್ರಮ ಪ್ರಸ್ತುತ ಪಡಿಸಲಿದೆ. ಮಧುಲಿತಾ ಅವರು ಒಡಿಸ್ಸಿ ನೃತ್ಯಪ್ರಕಾರದಲ್ಲಿ ಮನ್ನಣೆ ಗಳಿಸಿರುವ ನೃತ್ಯಗಾರ್ತಿಯಾಗಿದ್ದಾರೆ.

ಎರಡು ಬಗೆಯ ನೃತ್ಯ ಪ್ರದರ್ಶನ ನಡೆಯಲಿದ್ದು, ಒಂದು ಪ್ರದರ್ಶನವು ಮಹಾಕಾವ್ಯ ರಾಮಾಯಾಣ ಆಧಾರಿತವಾಗಿದೆ. ಮತ್ತೊಂದು ಉಪನಿಷತ್‌ನ ಆಯ್ದ ಭಾಗಗಳು ಮತ್ತು ಮಿರ್ಜಾ ಗಾಲಿಬ್, ಅಮಿರ್ ಕುಸ್ರೊ , ಅಚ್ಯುತ್ಯಾನಂದ ದಾಸ್ ಅವರ ಕವಿತೆಗಳ ಆಧಾರದ ಮೇಲೆ ರೂಪುಗೊಂಡ ನಾಟ್ಯವಾಗಿದೆ.

ಕಾರ್ಯಕ್ರಮ ನಡೆಯುವ ಸ್ಥಳ: ಜಾಗೃತಿ ಥಿಯೇಟರ್, ರಾಮಗೊಂಡನಹಳ್ಳಿ ವರ್ತೂರು ರಸ್ತೆ, ವೈಟ್‌ಫೀಲ್ಡ್.

ನಾಳೆ ರಂಗಪ್ರವೇಶ

ಶಾಂಭಾವಿ ನೃತ್ಯ ಶಾಲೆಯ ವಿದ್ಯಾರ್ಥಿನಿ, ವೈಜಯಂತಿ ಕಾಶಿ ಅವರ ಶಿಷ್ಯೆ ಸಿ.ಎಚ್ ಅಶ್ವಿನಿ ಅವರ 'ಕೂಚುಪುಡಿ ರಂಗಪ್ರವೇಶ' ಇದೇ 16ರಂದು ನಡೆಯಲಿದೆ. ಕೂಚುಪುಡಿ ಪ್ರಕಾರದ ಹಲವು ಸಾಧ್ಯತೆಗಳನ್ನು ಪ್ರದರ್ಶನವು ತೆರೆದಿಡಲಿದೆ.

ಕಾರ್ಯಕ್ರಮ ನಡೆಯುವ ಸ್ಥಳ; ಎಡಿಎ ರಂಗ ಮಂದಿರ, ಜೆ.ಸಿ.ರಸ್ತೆ. ಸಂಜೆ 6 ರಿಂದ.

ಬಿಸಿಲಿಗೆ ಬಳಲದಿರಿ



ಪ್ರತಿ ಬಾರಿಗಿಂತ ಈ ವರ್ಷದ ಬೇಸಿಗೆ ತುಸು ಹೆಚ್ಚೇ 'ಪ್ರಖರ'ವಾಗಿದೆ. ಇದು ಇನ್ನೂ ಎರಡು ತಿಂಗಳು ಮುಂದುವರಿಯುವ ಲಕ್ಷಣಗಳಿವೆ. ಬಿಸಿಲಿನಿಂದ ರಕ್ಷಣೆಗೆ ಕೆಲವೊಂದು ಕ್ರಮಗಳನ್ನು ಅನುಸರಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.

ಬೇಸಿಗೆಯಲ್ಲಿ ತುಂಬಾ ಬೆವರುತ್ತೇವೆ. ಆ ಬೆವರಿನೊಂದಿಗೆ ದೇಹದಲ್ಲಿನ ನೀರಿನ ಅಂಶ ಹಾಗೂ ಲವಣಾಂಶವೂ ಹೊರಹೋಗುತ್ತದೆ. ಈ ಕಾರಣಕ್ಕೆ ದೇಹ ಬಳಲುತ್ತದೆ. ಬಾಯಾರಿಕೆ ಹೆಚ್ಚಾಗುತ್ತದೆ. ಶರೀರದಲ್ಲಿ ನೀರಿನ ಪ್ರಮಾಣ ಕಡಿಮೆಯಾದಾಗ, ದೇಹದೊಳಗಿನ ಅಂಗಾಗಗಳ ಮೇಲೆ ಒತ್ತಡ ಹೆಚ್ಚುತ್ತದೆ. ಹೀಗಾಗಿ, ಬೇಸಿಗೆ ಕಾಲದಲ್ಲಿ ದೇಹಕ್ಕೆ ನೀರಿನ ಜೊತೆಗೆ ಲವಣಾಂಶ ಯುಕ್ತ ದ್ರವ ಆಹಾರವೂ ಅಗತ್ಯ.

ಹಾಗೆಂದು ಬಳಲಿಕೆ ತಣಿಸಲು ಕೇವಲ ತಂಪು ಪಾನೀಯಗಳನ್ನೇ ಕುಡಿಯಬೇಕಂತೇನಿಲ್ಲ. ನೈಸರ್ಗಿಕ ಪಾನೀಯಗಳನ್ನು ಹೆಚ್ಚಾಗಿ ಸೇವಿಸಬೇಕು. ಹಾಗಾದರೆ, ಬೇಸಿಗೆಯಲ್ಲಿ ಆಹಾರದ ಕ್ರಮಗಳು ಹೇಗಿರಬೇಕು ? ಇಲ್ಲಿದೆ ಟಿಪ್ಸ್.

ದ್ರವ ಆಹಾರಕ್ಕೆ ಒತ್ತು ನೀಡಿ

- ಹೆಚ್ಚು ನೀರು ಕುಡಿಯಬೇಕು. ನೀರಿನ ಜೊತೆಗೆ, ಎಳನೀರು, ಮಜ್ಜಿಗೆ, ನಿಂಬೆ ಹಣ್ಣು, ಬೇಲದಹಣ್ಣು, ಹುಣಸೆ ಹುಳಿಯಿಂದ ಮಾಡುವ ಪಾನಕಗಳನ್ನು ಕುಡಿಯಬಹುದು. ಆದಷ್ಟು ಪಾನಕಗಳಿಗೆ ಸಕ್ಕರೆ ಬದಲಿಗೆ ಬೆಲ್ಲವನ್ನೇ (ಲಭ್ಯವಾದರೆ ಸಾಯವ ಬೆಲ್ಲವನ್ನು) ಬಳಸಿದರೆ ಒಳ್ಳೆಯದು.
- ಸಕ್ಕರೆ ರಹಿತವಾಗಿ ಕಲ್ಲಂಗಡಿ, ಕಿತ್ತಳೆಯ ಜ್ಯೂಸ್(ಸಕ್ಕರೆ ಹಾಕದೇ) ಕುಡಿಯಬಹುದು. ಸಲಾಡ್‌ನಲ್ಲಿ ಹೆಚ್ಚು ಸೌತೆಕಾಯಿ ಸೇರಿಸಿ ತಿನ್ನಿ.
- ಹೆಚ್ಚು ಖಾರವಿರುವ, ಮಸಾಲೆಯುಕ್ತ ಆಹಾರ ಬಳಸುವುದನ್ನು ಕಡಿಮೆ ಮಾಡಿ. ಸೊಪ್ಪು - ತರಕಾರಿಗಳಿರುವ ಆಹಾರ ಬಳಸಿ. ಹೆಚ್ಚಾಗಿ ತಾಜಾ ಹಣ್ಣುಗಳನ್ನೇ ತಿಂದರೂ ಇನ್ನೂ ಒಳ್ಳೆಯದು. ಎಳನೀರು ಸೇವನೆ ಸರ್ವಕಾಲಕ್ಕೂ ಸೂಕ್ತವಾದು.
- ಹೆಸರು ಕಾಳುಗಳನ್ನು ನೀರಿನಲ್ಲಿ ಅರ್ಧ ಗಂಟೆಯಷ್ಟು ನೆನೆಸಿಟ್ಟು ನಂತರ ಮಿಕ್ಸಿಯಲ್ಲಿ ಜ್ಯೂಸ್ ಮಾಡಿಕೊಂಡು ದಿನಕ್ಕೆರಡು ಬಾರಿ ಕುಡಿಯಿರಿ ಇದರಿಂದ ದೇಹ ತಂಪಾಗಿರುತ್ತದೆ
- ಮೊಸರಿನ ಬದಲು ಕಡೆದ ಮಜ್ಜಿಗೆಯನ್ನು ಆಹಾರಕ್ಕೆ ಬಳಸಿ,ಇದರಿಂದ ಜೀರ್ಣಕ್ರಿಯೆ ಚೆನ್ನಾಗಿ ಆಗುತ್ತದೆ.
- ಐದು ವರ್ಷದ ಒಳಗಿನ ಮಕ್ಕಳಿಗೆ ಪ್ರತಿ ಅರ್ಧ ಗಂಟೆಗೊಮ್ಮೆ ಒಂದು ಚಿಟಿಕೆಯಷ್ಟು ಅಯೋಡಿನ್ ಉಪ್ಪು ಮತ್ತು ಕಾಲು ಚಮಚದಷ್ಟು ಬೆಲ್ಲ(ಒಂದು ಲೋಟ ನೀರಿಗೆ) ಬೆರೆಸಿದ ನೀರನ್ನು ಕುಡಿಸುತ್ತಿರಬೇಕು. ಇದರಿಂದ ಮಕ್ಕಳನ್ನು ನಿರ್ಜಲೀಕರಣದಿಂದ(Dehydration) ಕಾಪಾಡಿಕೊಳ್ಳಬಹುದು.

ದಣಿವು ತಣಿಸುವ ಪಾನೀಯಗಳು

ಕೆಲವೊಂದು ಪಾನೀಯಗಳು ಬಾಯಾರಿಕೆ ನೀಗಿಸುವ ಜೊತೆಗೆ, ದೇಹಕ್ಕೆ ಶಕ್ತಿಯನ್ನು ತುಂಬುತ್ತವೆ. ಆರೋಗ್ಯವನ್ನು ಹೆಚ್ಚಿಸುತ್ತವೆ. ಅಂಥ ಪಾನೀಯಗಳ ವಿವರ ಇಲ್ಲಿದೆ.

ಲಾವಂಚದ ಪಾನೀಯ : ಎಂಟರಿಂದ ಹತ್ತು ಲಾವಂಚದ ಬೇರುಗಳನ್ನು ಅರ್ಧ ಲೀಟರ್ ನೀರಿನಲ್ಲಿ ಎರಡು ಗಂಟೆ ನೆನೆಸಿಡಬೇಕು. ನಂತರ ಅದನ್ನು ಶೋಧಿಸಿ, ಅರ್ಧ ಕಪ್ ಬೆಲ್ಲ, ನಿಂಬೆ ರಸ ಮತ್ತು ಏಲಕ್ಕಿ ಪುಡಿ ಹಾಕಬೇಕು. ಇದು ದೇಹಕ್ಕೆ ತಂಪು ನೀಡುವದಲ್ಲದೇ, ರಕ್ತ ಶುದ್ಧಿ ಮಾಡುತ್ತದೆ.

ಕಾಮಕಸ್ತೂರಿ ಪಾನೀಯ: ಅರ್ಧ ಬಟ್ಟಲು ಕಾಮಕಸ್ತೂರಿ ಬೀಜವನ್ನು ರಾತ್ರಿ ಹೊತ್ತು ನೀರಿನಲ್ಲಿ ನೆನೆಸಿ. ಮರುದಿನ ಬೆಳಿಗ್ಗೆ ಆ ಬೀಜಗಳು ಅರಳಿರುತ್ತವೆ. ಅದಕ್ಕೆ ಬೆಲ್ಲ, ನೀರು, ಹಾಲು ಬೆರಸಿ ಕುಡಿಯಬೇಕು. ಇದು, ದೇಹದ ಉಷ್ಣತೆ ಕಡಿಮೆ ಮಾಡುವ ಜೊತೆಗೆ, ಬಾಯಿ ಹುಣ್ಣನ್ನು ವಾಸಿ ಮಾಡುತ್ತದೆ.

ಮುರುಗಲ: ನಾಲ್ಕೈದು ಮುರುಗಲ ಹಣ್ಣಿನ ಬೀಜ ತೆಗೆದು, ಆ ಸಿಪ್ಪೆಯನ್ನು ನೀರಿನಲ್ಲಿ ತೊಳೆಯಬೇಕು. ಸಿಪ್ಪೆಯನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಬೇಕು. ನಂತರ ಶೋಧಿಸಿದ ರಸಕ್ಕೆ, ಎರಡು ಲೋಟ ನೀರು ಮತ್ತು ಬೆಲ್ಲ ಬೆರೆಸಿ. ಈ ಮಿಶ್ರಣಕ್ಕೆ ಮತ್ತಷ್ಟು ನೀರು ಸೇರಿಸಿ, ಪಾನೀಯ ತಯಾರಿಸಿಕೊಳ್ಳಿ. ಇದು ಪಿತ್ತ ನಾಶಕ, ರಕ್ತ ಶುದ್ದಿಯ ಜೊತೆಗೆ, ಬೊಜ್ಜು ಕರಸಗಿಸುತ್ತದೆ.

ಸುಲಭ ಪಾನೀಯ: ನೀರು ಮಜ್ಜಿಗೆಗೆ ಬೆಲ್ಲ ಬೆರೆಸಿ. ಅದಕ್ಕೆ ಸ್ವಲ್ಪ ಉಪ್ಪು, ಪರಿಮಳಕ್ಕಾಗಿ ಏಲಕ್ಕಿ ಪುಡಿ ಬೆರೆಸಿ ಸೇವಿಸಬಹುದು. ಇದು ತಕ್ಷಣ ತಯಾರಾಗುವುದರಿಂದ ಇದನ್ನು 'ದಿಢೀರ್ ಪಾನೀಯ' ಎನ್ನುತ್ತಾರೆ.

ಬಿಸಿಲಿನಿಂದ ರಕ್ಷಿಸಿಕೊಳ್ಳಿ

- ಆದಷ್ಟು ಬೆಳಗಿನ ವೇಳೆಯಲ್ಲಿ ಅಥವಾ ಸಂಜೆಯ ನಂತರವೇ ಹೊರಗಿನ ಕೆಲಸಗಳನ್ನು ಇಟ್ಟುಕೊಳ್ಳಿ.
- ಬಿಸಿಲಿನಲ್ಲೇ ಹೊರಗೆ ಹೋಗಬೇಕಾದ ಅನಿವಾರ್ಯವಿದ್ದರೆ, ಕೊಡೆ ಬಳಸಿ. ಸಾಧ್ಯವಾದರೆ ತಿಳಿ ಬಣ್ಣದ ಛತ್ರಿ ಬಳಸಿ.
- ಹೊರಗೆ ಹೋಗುವಾಗ ಕಡ್ಡಾಯವಾಗಿ ನೀರನ್ನು ತೆಗೆದುಕೊಂಡು ಹೋಗಿ. ಹಿರಿಯರು - ಮಕ್ಕಳು ಜೊತೆಗಿದ್ದರೆ, ನೀರಿನ ಪ್ರಮಾಣ ತುಸು ಹೆಚ್ಚಿರಲಿ.
- ಮನೆಯಲ್ಲಿರಲಿ ಅಥವಾ ಹೊರಗಡೆಯೇ ಇರಲಿ ಹಿರಿಯರು - ಮಕ್ಕಳಿಗೆ ಹೆಚ್ಚಾಗಿ ನೀರು ಕುಡಿಯಲು ತಿಳಿಸಿ. ದೇಹದಲ್ಲಿ ನೀರಿನಂಶ ಕಡಿಮೆಯಾದರೆ ಬಹು ಬೇಗ ದೇಹ ನಿರ್ಜಲೀಕರಣಹೊಳ್ಳುತ್ತದೆ. ಸುಸ್ತಾಗುತ್ತದೆ. ಕೆಲವರಿಗೆ ತಲೆನೋವು ಬಾಧಿಸಬಹುದು
- ಆದಷ್ಟು ಗಾಢ ಬಣ್ಣಗಳ ಬಟ್ಟೆ ಧರಿಸಬೇಡಿ. ತಿಳಿ ಬಣ್ಣಗಳ ಕಾಟನ್ ಬಟ್ಟೆಗಳ ದಿರಿಸನ್ನು ಧರಿಸಿ.
- ನೆತ್ತಿಗೆ ಹರಳೆಣ್ಣೆ ಹಚ್ಚಿಕೊಳ್ಳಿ. ಸ್ವಲ್ಪ ಹೊತ್ತು ಬಿಟ್ಟು ಸ್ನಾನ ಮಾಡಿ. ನೆತ್ತಿ ತಂಪಾಗುತ್ತದೆ. ದೇಹವೂ ಕೂಲ್ ಆಗುತ್ತದೆ. ಬೇಸಿಗೆ ಮುಗಿಯುವವರೆಗೂ ಹರಳೆಣ್ಣೆ ಸ್ನಾನ ಒಳ್ಳೆಯದು.
- ಬಿಗಿಯಾದ ಒಳ ಉಡುಪುಗಳನ್ನು ಧರಿಸಬೇಡಿ. ಬಿಗಿ ಉಡುಪು ರಕ್ತ ಸಂಚಾರಕ್ಕೂ ತೊಂದರೆ ಮಾಡುತ್ತದೆ.

(ಪೂರಕ ಮಾಹಿತಿ: ಡಾ. ವಸುಂಧರಾ ಭೂಪತಿ, ಆಯುರ್ವೇದ ವೈದ್ಯೆ)

ನಾಳೆ ರಂಗಶಂಕರದಲ್ಲಿ 'ನಮ್ಮೊಳಗೊಬ್ಬ ನಾಜೂಕಯ್ಯ'

ರಂಗಭೂಮಿ

ಹಿರಿತೆರೆ ಹಾಗೂ ಕಿರುತೆರೆಯ ಖ್ಯಾತ ನಿರ್ದೇಶಕ ಟಿ.ಎನ್. ಸೀತಾರಾಮ್ ಅವರ ಜನಪ್ರಿಯ ನಾಟಕ 'ನಮ್ಮೊಳಗೊಬ್ಬ ನಾಜೂಕಯ್ಯ' ಇದೇ ಭಾನುವಾರ (ಏಪ್ರಿಲ್ 16)ದಂದು ನಗರದ 'ರಂಗ ಶಂಕರ'ದಲ್ಲಿ ಪ್ರದರ್ಶನಗೊಳ್ಳುತ್ತಿದೆ. ಎರಡು ಪ್ರದರ್ಶನಗಳಿವೆ. ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ. ಹೆಸರಾಂತ ರಂಗ ತಂಡ 'ನಟರಂಗ' ಪ್ರಸ್ತುತಪಡಿಸುತ್ತಿರುವ ನಾಟಕವಿದು.

ನಾಟಕ ನಿರ್ದೇಶನ: ಹವ್ಯಾಸಿ ರಂಗಭೂಮಿಯ ಖ್ಯಾತ ನಿರ್ದೇಶಕ ಆರ್. ನಾಗೇಶ್‌ರವರದ್ದು. ಮರು ನಿರ್ದೇಶನ: ಟಿ.ಎನ್.ಸೀತಾರಾಮ್. ನಟವರ್ಗದಲ್ಲಿ ನಟರಾದ ಟಿ.ಎನ್.ಸೀತಾರಾಮ್, ಗಿರಿಜಾ ಲೋಕೇಶ್, ಎಂ.ಪಿ.ವೆಂಕಟರಾವ್, ಪದ್ಮಜ ಶ್ರೀನಿವಾಸ್ ಮತ್ತಿತರ ಹೆಸರಾಂತ ಕಲಾವಿದರು ಇದ್ದಾರೆ.

ಜನಪ್ರಿಯ ನಾಟಕ

ಕನ್ನಡ ರಂಗಭೂಮಿಯ ಪ್ರಮುಖ ರಂಗ ತಂಡಗಳಲ್ಲಿ ಒಂದಾದ 'ನಟರಂಗ' ಆರಂಭವಾದದ್ದು 1972ರಲ್ಲಿ. ಇದು ಕಾಕನಕೋಟೆ, ತುಘಲಕ್... ಮುಂತಾದ ನಾಟಕಗಳ ಪ್ರದರ್ಶನಗಳನ್ನು ಕೊಟ್ಟ ಸಂಸ್ಥೆ.

ಇದಾದ ನಂತರ 1993ರಲ್ಲಿ ಮೂಡಿಬಂದ ಮತ್ತೊಂದು ಮಹತ್ವದ ನಾಟಕವೇ ಟಿ.ಎನ್. ಸೀತಾರಾಮ್ ಅವರ 'ನಮ್ಮೊಳಗೊಬ್ಬ ನಾಜೂಕಯ್ಯ'.

ಇದು ಸುಮಾರು 30 ವರ್ಷಗಳ ಹಿಂದೆ ಬರೆದಿದ್ದಾರೂ, ಅದು ಇಂದಿಗೂ ಪ್ರಸ್ತುತವಾಗಿದೆ ಎನ್ನುತ್ತಾರೆ ರಂಗಕರ್ಮಿ, ಸಂಘಟಕ ಜಿ. ಕಪ್ಪಣ್ಣ

ಮಧ್ಯಮವರ್ಗದ ಕುಟುಂಬಗಳು ಹೇಗೆ ಒಬ್ಬ ಬಲಾಢ್ಯರ ಕೈಗೆ ಸಿಕ್ಕಿದರೆ ನಲಗುತ್ತವೆ. ಅಸಹಾಯಕವಾಗಿ ನಿಲ್ಲುತ್ತವೆ ಎಂಬುದು 'ನಮ್ಮೊಳಗೊಬ್ಬ ನಾಜೂಕಯ್ಯ' ನಾಟಕದ ವಸ್ತು.

ಒಂದು ಮಧ್ಯಮ ವರ್ಗದ ಕಾರ್ಖಾನೆಯ ಮಾಲಿಕನಾಗಿದ್ದ ಒಬ್ಬ ವ್ಯಕ್ತಿ ಮತ್ತು ಅವನ ಕುಟುಂಬ ಬಲಾಢ್ಯರನ್ನು ಎದುರು ಹಾಕಿಕೊಂಡು ಹೆಣಗಬೇಕಾಗುತ್ತದೆ ಎಂಬುದನ್ನು ಮಾರ್ಮಿಕವಾಗಿ, ತೋರಿಸುವುದು ಮತ್ತು ಅದನ್ನು ವ್ಯಂಗ್ಯದ ನಗುವಿನ ಮೂಲಕ ತೋರಿಸುವುದು ಈ ನಾಟಕದ ಗುರಿ.

